ಗುರುವಾರ, ಜುಲೈ 11, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ




ತಂಪು ತಂಪು... ಝೆಕ್ ಗಣರಾಜ್ಯದ ಪೆರುಗ್ವೆ ಮೃಗಾಲಯದಲ್ಲಿನ ಹಿಮಕರಡಿಯು ಬಿಸಿಲಿನ ಝಳದಿಂದ ತಪ್ಪಿಸಿಕೊಳ್ಳಲು ಮಂಜುಗಡ್ಡೆಯ ಮೇಲೆ ಹೊರಳಾಡಿತು –ಪಿಟಿಐ ಚಿತ್ರ

ಗುರುವಾರ, ಜುಲೈ 11, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 192 | ಪುಟ 20

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ
ಕೆಎಎಸ್ ಪ್ರಿಲಿಮ್ಸ್‌ಗೆ ಪ್ರಶ್ನೋತ್ತರಗಳ ವಿಶೇಷ



ಆಳ-ಅಗಲ
ಪತಂಜಲಿ ಕಂಪನಿಯಲ್ಲಿ ಬಿರುಗಾಳಿ

ನೀಟ್-ಯುಜಿ: 3ನೇ ವಾರದಿಂದ ಕೌನ್ಸೆಲಿಂಗ್ 3A

ಒಂದೇ ಕುಟುಂಬಕ್ಕೆ 98 ಸಾವಿರ ಚ.ಅಡಿ ನಿವೇಶನ 12

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
79,924	24,324	₹74,880 (ಬೆಂಗಳೂರು)	₹94,400 (ಬೆಂಗಳೂರು)	83.52

ವಾಲ್ಮೀಕಿ ನಿಗಮದ ₹94 ಕೋಟಿ ಅಕ್ರಮ ವರ್ಗಾವಣೆ ಹಗರಣ • 20ಕ್ಕೂ ಹೆಚ್ಚು ಸ್ಥಳಗಳಲ್ಲಿ ಶೋಧ

ನಾಗೇಂದ್ರ, ದದ್ದಲ್‌ಗೆ ಇ.ಡಿ ಬಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ಅಕ್ರಮವಾಗಿ ₹94 ಕೋಟಿ ವರ್ಗಾವಣೆ ಮಾಡಿರುವ ಹಗರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಶಾಸಕ ಬಿ. ನಾಗೇಂದ್ರ, ನಿಗಮದ ಅಧ್ಯಕ್ಷರೂ ಆಗಿರುವ ಕಾಂಗ್ರೆಸ್ ಶಾಸಕ ಬಸನಗೌಡ ದದ್ದಲ್ ಮನೆಗಳೂ ಸೇರಿದಂತೆ 20ಕ್ಕೂ ಹೆಚ್ಚು ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಬುಧವಾರ ಶೋಧ ನಡೆಸಿದ್ದಾರೆ.

ವಾಲ್ಮೀಕಿ ಅಭಿವೃದ್ಧಿ ನಿಗಮದ ಪ್ರಧಾನ ಕಚೇರಿ, ನಿಗಮದ ಹಿಂದಿನ ಅಧಿಕಾರಿಗಳ ಮನೆಗಳು, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಮೂವರು ಅಧಿಕಾರಿಗಳ ಮನೆಗಳು, ನಾಗೇಂದ್ರ ಮತ್ತು ಬಸನಗೌಡ ದದ್ದಲ್ ಅವರ ಹಾಲಿ ಹಾಗೂ ಮಾಜಿ ಆಪ್ತ ಸಹಾಯಕರ ಮನೆಗಳ ಮೇಲೆ ಇ.ಡಿ ಅಧಿಕಾರಿಗಳು ದಾಳಿ ಮಾಡಿದ್ದಾರೆ. ಹಗರಣದಲ್ಲಿ ಹಣ ವರ್ಗಾವಣೆಯಲ್ಲಿ ಭಾಗಿಯಾದ ಇತರ ಕೆಲವು ವ್ಯಕ್ತಿಗಳಿಗೆ ಸಂಬಂಧಿಸಿದ ಸ್ಥಳಗಳಲ್ಲೂ ಶೋಧ ನಡೆದಿದೆ. ಕೆಲವೆಡೆ ಶೋಧ ಮುಂದುವರಿದಿದೆ.

ಬೆಂಗಳೂರು, ಬಳ್ಳಾರಿ, ರಾಯಚೂರು, ಹೈದರಾಬಾದ್, ತಮಿಳುನಾಡು, ಮುಂಬೈ ಸೇರಿದಂತೆ ಹಲವೆಡೆ ಬುಧವಾರ ನಸುಕಿನಲ್ಲಿ ಏಕಕಾಲಕ್ಕೆ ದಾಳಿ ಮಾಡಲಾಗಿದೆ. ಬೆಂಗಳೂರಿನ ಡಾಲರ್ಸ್ ಕಾಲೋನಿಯಲ್ಲಿರುವ ನಾಗೇಂದ್ರ ಅವರ ಮನೆ, ಬಿಇಎಲ್ ರಸ್ತೆಯಲ್ಲಿರುವ ಫ್ಲ್ಯಾಟ್, ಯಲಹಂಕ ಸಮೀಪದ ಶ್ರೀನಿವಾಸಪುರದಲ್ಲಿರುವ ಬಸನಗೌಡ ದದ್ದಲ್ ಮನೆ, ಶಾಸಕರ ಭವನದಲ್ಲಿ ಅವರಿಗೆ ಹಂಚಿಕೆ ಮಾಡಲಾಗಿದ್ದ ಕೊಠಡಿ, ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷರ ಕಚೇರಿಯ ಮೇಲೂ ದಾಳಿ ನಡೆದಿದೆ. ರಾಯಚೂರಿನಲ್ಲಿ ಬಸನಗೌಡ ಮನೆ ಸೇರಿದಂತೆ ಎರಡು ಸ್ಥಳಗಳಲ್ಲಿ ಹಾಗೂ ಬಳ್ಳಾರಿಯಲ್ಲಿ ನಾಗೇಂದ್ರ ಮನೆಯಲ್ಲಿ ಶೋಧ ನಡೆಸಲಾಗಿದೆ.

ನಿಗಮದ ಹಿಂದಿನ ವ್ಯವಸ್ಥಾಪಕ ನಿರ್ದೇಶಕ ಜೆ.ಬಿ. ಪದ್ಮನಾಭ್, ಹಿಂದಿನ ಲೆಕ್ಕಾಧಿಕಾರಿ ಪರಶುರಾಮ್ ದುರ್ಗಣ್ಣನವರ ಅವರ ಮನೆಗಳಲ್ಲೂ ಶೋಧ ನಡೆಸಿದ್ದು, ಹಲವು ದಾಖಲೆಗಳನ್ನು ವಶಕ್ಕೆ ಪಡೆಯಲಾಗಿದೆ.

12ನೇ ಪುಟ ನೋಡಿ

ನಾಗೇಂದ್ರ ಪಿ.ಎ ವಶಕ್ಕೆ ಪಡೆದು ವಿಚಾರಣೆ

ಬಿ. ನಾಗೇಂದ್ರ ಅವರ ಆಪ್ತ ಸಹಾಯಕರಾಗಿದ್ದ ಹರೀಶ್ ಕುಮಾರ್ ಎಂಬವರನ್ನು ವಶಕ್ಕೆ ಪಡೆದಿದ್ದ ಜಾರಿ ನಿರ್ದೇಶನಾಲಯದ ಅಧಿಕಾರಿಗಳು, ಶಾಂತಿನಗರದಲ್ಲಿರುವ ಇ.ಡಿ ಕಚೇರಿಗೆ ಕರೆತಂದು ವಿಚಾರಣೆ ನಡೆಸಿದರು.

ತಡರಾತ್ರಿಯವರೆಗೂ ಹರೀಶ್ ವಿಚಾರಣೆ ನಡೆಸಿದ ಅಧಿಕಾರಿಗಳು, ಪುನಃ ಕರೆದಾಗ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ಬಿಟ್ಟು ಕಳುಹಿಸಿದರು.

ಬಳ್ಳಾರಿಯಲ್ಲಿ ನಾಗೇಂದ್ರ ಅವರ ಆಪ್ತ ಸಹಾಯಕ ಚೇತನ್ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿತ್ತು. ಸಚಿವರಾಗಿದ್ದ ಅವಧಿಯಲ್ಲಿ ನಾಗೇಂದ್ರ ಅವರ ನಿಕಟವರ್ತಿಯಾಗಿದ್ದ ವಿಜಯಕುಮಾರ್ ಮತ್ತು ಮಾಧ್ಯಮ ಸಂಯೋಜಕರಾಗಿದ್ದ ನಾಗರಾಜ್ ಎಂಬವರನ್ನೂ ವಿಚಾರಣೆ ನಡೆಸಲಾಗಿದೆ. ಬಸನಗೌಡ ದದ್ದಲ್ ಅವರ ಮಾಜಿ ಆಪ್ತ ಸಹಾಯಕ ಪಂಪಣ್ಣ ಮನೆಯ ಮೇಲೂ ದಾಳಿ ಮಾಡಿದ್ದು, ಅವರ ವಿಚಾರಣೆ ನಡೆಸಲಾಗಿದೆ.

20ಕ್ಕೂ ಹೆಚ್ಚು ಮೊಬೈಲ್ ವಶ

ಕಾರ್ಯಾಚರಣೆ ವೇಳೆ ಇ.ಡಿ ಅಧಿಕಾರಿಗಳು 20ಕ್ಕೂ ಹೆಚ್ಚು ಮೊಬೈಲ್‌ಗಳನ್ನು ವಶಕ್ಕೆ ಪಡೆದಿದ್ದಾರೆ. ಹಗರಣಕ್ಕೆ ಸಂಬಂಧಿಸಿದ ಮಾಹಿತಿ ಮೊಬೈಲ್‌ನಲ್ಲಿರುವುದನ್ನು ಪತ್ತೆಹಚ್ಚಲಾಗಿದೆ ಎಂದು ಮೂಲಗಳು ಹೇಳಿವೆ.

‘ಹೈದರಾಬಾದ್‌ನಲ್ಲಿ ಸಹಕಾರ ಬ್ಯಾಂಕ್‌ನ ಕೆಲವರು ಹಾಗೂ ಮುಂಬೈ ಸೇರಿದಂತೆ ವಿವಿಧೆಡೆ ಹವಾಲಾ ದಂಧೆಯಲ್ಲಿ ತೊಡಗಿರುವವರನ್ನು ಬಳಸಿಕೊಂಡು ಹಣ ವರ್ಗಾವಣೆ ಮಾಡಿರುವುದನ್ನು ಇ.ಡಿ ಪತ್ತೆಹಚ್ಚಿದೆ. ಆ ಕುರಿತು ಹೆಚ್ಚಿನ ಮಾಹಿತಿ ಸಂಗ್ರಹಿಸುವುದಕ್ಕಾಗಿಯೇ ಮೊಬೈಲ್‌ಗಳನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಮೂಲಗಳು ಹೇಳಿವೆ.

ಬ್ಯಾಂಕ್ ವಹಿವಾಟಿಗೆ ಸಂಬಂಧಿಸಿದ ದಾಖಲೆಗಳು, ವಾಲ್ಮೀಕಿ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದ ದಾಖಲೆಗಳನ್ನೂ ತನಿಖಾ ತಂಡ ವಶಕ್ಕೆ ಪಡೆದಿದೆ.

> **ನಿಗಮದ ಲೂಟಿಯಲ್ಲಿ ಇನ್ನೂ ಮೂವರು ಸಚಿವರು ಶಾಮೀಲಾಗಿದ್ದಾರೆ. ಈ ಸಚಿವರು ಹೋಟೆಲ್‌ನಲ್ಲಿ ಸಭೆ ಸೇರಿದ ಬಗ್ಗೆ ನಿಗಮದ ಅಧ್ಯಕ್ಷರೇ ಹೇಳಿದ್ದಾರೆ**
> **ಆರ್.ಅಶೋಕ,** ವಿಧಾನಸಭೆ ವಿರೋಧಪಕ್ಷದ ನಾಯಕ



ಎತ್ತುಗಳ ಗಮ್ಮತ್ತು... ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯಲ್ಲಿ ಬುಧವಾರ ಆಯೋಜಿಸಿದ್ದ ಎತ್ತುಗಳ ಓಟದ ಸ್ಪರ್ಧೆಯ ರೋಮಾಂಚನಕಾರಿ ನೋಟ –ಪಿಟಿಐ ಚಿತ್ರ

ಜೀವನಾಂಶ ದತ್ತಿಯಲ್ಲ, ವಿಚ್ಛೇದನ ಪಡೆದವರ ಹಕ್ಕು

ವಿಚ್ಛೇದಿತ ಮುಸ್ಲಿಂ ಮಹಿಳೆಯರೂ ಜೀವನಾಂಶಕ್ಕೆ ಅರ್ಹರು: ‘ಸುಪ್ರೀಂ’

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ‘ವಿಚ್ಛೇದನ ಪಡೆದ ಮುಸ್ಲಿಂ ಮಹಿಳೆಯರೂ ಅಪರಾಧ ದಂಡ ಸಂಹಿತೆಯ (ಸಿಆರ್‌ಪಿಸಿ) ಸೆಕ್ಷನ್ 125ರ ಅನ್ವಯ ಪತಿಯಿಂದ ಜೀವನಾಂಶ ಪಡೆಯಲು ಹಕ್ಕುದಾರರಾಗಿದ್ದಾರೆ’ ಎಂದು ಸುಪ್ರೀಂ ಕೋರ್ಟ್ ಬುಧವಾರ ಮಹತ್ವದ ತೀರ್ಪು ನೀಡಿದೆ.

‘ಮುಸ್ಲಿಂ ಮಹಿಳೆಯರ (ವಿಚ್ಛೇದನ ವೇಳೆ ಹಕ್ಕುಗಳ ರಕ್ಷಣೆ) ಕಾಯ್ದೆ 1986’ ಈ ನೆಲದ ಜಾತ್ಯತೀತ ಕಾನೂನುಗಳ ಕೆಳಗೆಯೇ ಬರುತ್ತದೆ. ಅಲ್ಲದೆ, ಜೀವನಾಂಶ ಎಂಬುದು ದತ್ತಿಯಲ್ಲ, ಅದು ಎಲ್ಲ ವಿವಾಹಿತ ಮಹಿಳೆಯರ ಹಕ್ಕು’ ಎಂದು ಪೀಠವು ಅಭಿಪ್ರಾಯಪಟ್ಟಿತು.

ಜೀವನಾಂಶ ಕುರಿತು ಮುಸ್ಲಿಂ ಮಹಿಳೆಯರಿಗಾಗುವ ತಾರತಮ್ಯವು ಲಿಂಗ ಸಮಾನತೆ ನ್ಯಾಯಕ್ಕೆ ವಿರುದ್ಧವಾದುದು. ಎಲ್ಲ ಧರ್ಮಕ್ಕೆ ಸೇರಿದ ವಿವಾಹಿತೆಯರಿಗೆ ‘ಧಾರ್ಮಿಕ ತಟಸ್ಥ’ ನಿಯಮ ಅನ್ವಯವಾಗಲಿದೆ ಎಂದು ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಮತ್ತು ಅಗಸ್ಟೀನಾ ಜಾರ್ಜ್ ಮಾಸಿಹ್ ಅವರಿದ್ದ ಪೀಠವು ಆದೇಶಿಸಿತು.

‘ಈ ಹಿಂದಿನ ಸಿಆರ್‌ಪಿಸಿ ಕಾಯ್ದೆಯ ಸೆಕ್ಷನ್ 125 ಎಲ್ಲ ಮಹಿಳೆಯರಿಗೆ ಅನ್ವಯವಾಗಲಿದೆ ಎಂಬ ಪ್ರಮುಖ ಅಂಶದೊಂದಿಗೆ ಈ ಸಂಬಂಧ ಸಲ್ಲಿಕೆಯಾಗಿದ್ದ ಕ್ರಿಮಿನಲ್ ಮೇಲ್ಮನವಿಗಳನ್ನು ವಜಾ ಮಾಡುತ್ತಿದ್ದೇವೆ’ ಎಂದು ತೀರ್ಪು ಪ್ರಕಟಿಸಿದ ನ್ಯಾಯಮೂರ್ತಿ ಬಿ.ವಿ.ನಾಗರತ್ನ ಅವರು ಹೇಳಿದರು.

14ನೇ ಪುಟ ನೋಡಿ

ಸಂವಿಧಾನಕ್ಕಿದ್ದ ಭೀತಿ ತಪ್ಪಿತು –ಬಿಜೆಪಿ

ನವದೆಹಲಿ (ಪಿಟಿಐ): ‘ರಾಜೀವ್ ಗಾಂಧಿ ನೇತೃತ್ವದ ಕಾಂಗ್ರೆಸ್ ಸರ್ಕಾರ ರೂಪಿಸಿದ್ದ ಕಾಯ್ದೆಯಿಂದ ಸಂವಿಧಾನಕ್ಕೆ ಎದುರಾಗಿದ್ದ ಭೀತಿ ಸುಪ್ರೀಂ ಕೋರ್ಟ್‌ನ ಈ ತೀರ್ಪಿನಿಂದ ಅಂತ್ಯವಾಗಿದೆ’ ಎಂದು ಬಿಜೆಪಿ ಪ್ರತಿಕ್ರಿಯಿಸಿದೆ.

‘ಮುಸ್ಲಿಂ ವಿಚ್ಛೇದಿತ ಮಹಿಳೆಯರೂ ಪತಿಯಿಂದ ಜೀವನಾಂಶ ಪಡೆಯಲು ಹಕ್ಕುದಾರರು ಎಂಬ ಸುಪ್ರೀಂ ಕೋರ್ಟ್‌ನ ತೀರ್ಪು ಸ್ವಾಗತಾರ್ಹ’ ಎಂದು ಬಿಜೆಪಿ ಪ್ರತಿಕ್ರಿಯಿಸಿದೆ.

14ನೇ ಪುಟ ನೋಡಿ

> **ಧರ್ಮವನ್ನು ಹೊರತುಪಡಿಸಿ ಎಲ್ಲ ಮಹಿಳೆಯರಿಗೆ ನ್ಯಾಯ, ಲಿಂಗ ಸಮಾನತೆ ಒದಗಿಸುವಲ್ಲಿ ಸುಪ್ರೀಂ ಕೋರ್ಟ್‌ನ ಈ ತೀರ್ಪು ಗಮನಾರ್ಹ**
> **ರೇಖಾ ಶರ್ಮಾ,** ಮುಖ್ಯಸ್ಥೆ, ರಾಷ್ಟ್ರೀಯ ಮಹಿಳಾ ಆಯೋಗ

‘ಗೃಹಿಣಿಯರಿಗೆ ಆರ್ಥಿಕ ಭದ್ರತೆ ಅಗತ್ಯ’ 14

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಡೆಂಗಿ: ಸ್ವಪ್ರೇರಿತ ಪಿಐಎಲ್



ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಡೆಂಗಿ ಜ್ವರ ಪ್ರಕರಣಗಳ ಹೆಚ್ಚಳವನ್ನು ಗಂಭೀರವಾಗಿ ಪರಿಗಣಿಸಿರುವ ಹೈಕೋರ್ಟ್ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ದಾಖಲಿಸಿಕೊಂಡಿದೆ.

ಬುಧವಾರ ಬೆಳಗಿನ ಕಲಾಪ ಆರಂಭವಾಗುತ್ತಿದ್ದಂತೆಯೇ ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠವು ಮುಕ್ತ ಕಲಾಪದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿತು.

‘ಡೆಂಗಿ ಜ್ವರ ಹೆಚ್ಚಳಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ವೈದ್ಯಕೀಯ ತುರ್ತು ಪರಿಸ್ಥಿತಿ ಘೋಷಿಸುವ ಅಗತ್ಯವಿದೆ ಎಂದು ‘ಡೆಕ್ಕನ್ ಹೆರಾಲ್ಡ್’ ದಿನಪತ್ರಿಕೆಯ ಮಂಗಳವಾರದ (ಜುಲೈ 9) ಸಂಚಿಕೆಯಲ್ಲಿ ರಾಯಚೂರು ನಿವಾಸಿ ಎಚ್.ಕೆ. ವಿಜಯಕುಮಾರ್ ಅವರು ವಾಚಕರ ವಾಣಿಗೆ ಬರೆದ ಪತ್ರವನ್ನು ಆಧರಿಸಿ ಈ ಸ್ವಯಂಪ್ರೇರಿತ ಪಿಐಎಲ್ ದಾಖಲಿಸಲು ಆದೇಶಿಸಲಾಗುತ್ತಿದೆ’ ಎಂದು ಮುಖ್ಯ ನ್ಯಾಯಮೂರ್ತಿ ಹೇಳಿದರು.

ರಾಜ್ಯದ ಮುಖ್ಯ ಕಾರ್ಯದರ್ಶಿ ಹಾಗೂ ಆರೋಗ್ಯ ಇಲಾಖೆಯ ಕಾರ್ಯದರ್ಶಿಗೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿದರು.

ಎಲ್ಲ ಸರ್ಕಾರದಲ್ಲೂ ವರ್ಗ ದಂಧೆ: ರಾಯರಡ್ಡಿ

ಪ್ರಜಾವಾಣಿ ವಾರ್ತೆ


ರಾಯರಡ್ಡಿ

ಕೊಪ್ಪಳ: ‘ಅಧಿಕಾರಿಗಳ ವರ್ಗಾವಣೆ ಎಂಬುದು ಎಲ್ಲ ಸರ್ಕಾರಗಳಲ್ಲಿಯೂ ದಂಧೆಯೇ ಆಗಿದೆ’ ಎಂದು ಮುಖ್ಯಮಂತ್ರಿ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿ, ‘ಅಧಿಕಾರಿಗಳು ತಮ್ಮ ವರ್ಗಾವಣೆಗೆ ಶಾಸಕರು, ಸಚಿವರ ಮೊರೆ ಹೋಗುತ್ತಿದ್ದು, ಯಾವುದೇ ಸರ್ಕಾರ ಇದ್ದರೂ ನಡೆಯುತ್ತಿರುತ್ತದೆ’ ಎಂದರು.


‘ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೇರಿದಂತೆ ಅಧಿಕಾರಿಗಳ ವರ್ಗಾವಣೆಯೂ ದಂಧೆಯಾಗಿದೆ. ಹಿಂದಿನ ಸರ್ಕಾರದಲ್ಲಿಯೂ ಇದೇ ಸಮಸ್ಯೆ ಇತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ವರ್ಗಾವಣೆ ದಂಧೆಗೆ ಕಡಿವಾಣ ಹಾಕಲು ಕ್ರಮ ವಹಿಸುವುದಾಗಿ ಹೇಳಿದ್ದಾರೆ’ ಎಂದರು.

ಕೊಪ್ಪಳ ಎಸ್.ಪಿ. ಆಗಿದ್ದ ಯಶೋಧಾ ವಂಟಗೋಡಿ ಅವರನ್ನು ಕರ್ನಾಟಕ ಲೋಕಾಯುಕ್ತದ ಎಸ್.ಪಿ. ಆಗಿ ಇತ್ತೀಚೆಗೆ ವರ್ಗಾವಣೆ ಮಾಡಲಾಗಿದ್ದು, ಇದನ್ನು ರದ್ದುಪಡಿಸುವಂತೆ ರಾಯರಡ್ಡಿ ಮುಖ್ಯಮಂತ್ರಿ ಬಳಿ ಮನವಿ ಮಾಡಿದ್ದರು. ಈ ಕುರಿತು ಪ್ರತಿಕ್ರಿಯಿಸಿದ ರಾಯರಡ್ಡಿ, ‘ಶಾಸಕರ ಕೋರಿಕೆಯಂತೆ ಸಿ.ಎಂ. ಬಳಿ ಮನವಿ ಮಾಡಿದ್ದೆ. ಎಸ್.ಪಿ.ಯಾಗಿ ಯಾರೇ ಬಂದರೂ ನನಗೇನೂ ಸಮಸ್ಯೆಯಿಲ್ಲ’ ಎಂದರು.

ವಿದೇಶಿ ಚಾಕೊಲೇಟ್ ಅಕ್ರಮ ಮಾರಾಟ

ನಕಲಿ ಸ್ಟಿಕ್ಕರ್ ಅಂಟಿಸಿ ವ್ಯಾಪಾರ • ಸಿಸಿಬಿ ಪೊಲೀಸರಿಂದ ₹1 ಕೋಟಿ ಮೌಲ್ಯದ ಪಾನೀಯ, ಬಿಸ್ಕತ್ ಇತರೆ ವಸ್ತು ಜಪ್ತಿ

ಪ್ರಜಾವಾಣಿ ವಾರ್ತೆ



ನರೇಂದ್ರ ಸಿಂಗ್

ಮುಖ್ಯಾಂಶಗಳು

- ನಿಯಮಾನುಸಾರ ತಯಾರಿಸದ ಚಾಕೊಲೇಟ್
- ಸುಂಕ ಪಾವತಿಸಿರುವುದಕ್ಕೆ ಪತ್ತೆಯಾಗದ ದಾಖಲೆ

ಅಪರಾಧ ಸುದ್ದಿ

ಬೆಂಗಳೂರು: ವಿದೇಶಿ ಚಾಕೊಲೇಟ್, ಬಿಸ್ಕತ್ ಹಾಗೂ ಪಾನೀಯವನ್ನು ಅಕ್ರಮವಾಗಿ ಆಮದು ಮಾಡಿಕೊಂಡು ಭಾರತೀಯ ಆಹಾರ ಸುರಕ್ಷತೆ ಹಾಗೂ ಗುಣಮಟ್ಟ ಪ್ರಾಧಿಕಾರದ (ಎಫ್‌ಎಸ್‌ಎಸ್‌ಎಐ) ನಕಲಿ ಸ್ಟಿಕ್ಕರ್ ಅಂಟಿಸಿ ದುಬಾರಿ ಬೆಲೆಗೆ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಸಿಸಿಬಿ (ಆರ್ಥಿಕ ಅಪರಾಧ ದಳ) ಪೊಲೀಸರು ಬುಧವಾರ ಬಂಧಿಸಿದ್ದಾರೆ.

ರಾಜಸ್ಥಾನದ ನರೇಂದ್ರ ಸಿಂಗ್(45) ಬಂಧಿತ ಆರೋಪಿ.

'ಆರೋಪಿಯಿಂದ ವಿವಿಧ ವಿದೇಶಿ ಕಂಪನಿಗಳ ₹1ಕೋಟಿ ಮೌಲ್ಯದ ಚಾಕೊಲೇಟ್ ಹಾಗೂ ಇತರೆ ಪದಾರ್ಥಗಳನ್ನು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ವಿದೇಶದಿಂದ ಚಾಕೊಲೇಟ್ ಆಮದು ಮಾಡಿಕೊಂಡು ಸುಧಾಮ ನಗರದ ಗೋದಾಮು ಒಂದರಲ್ಲಿ ಆರೋಪಿ ದಾಸ್ತಾನು ಮಾಡಿಕೊಂಡಿದ್ದರು. ನಗರದ ಹಲವಾರು ಸೂಪರ್ ಮಾರುಕಟ್ಟೆ ಹಾಗೂ ಮಾಲ್‌ಗಳಿಗೆ ವಿದೇಶಿ ಚಾಕೊಲೇಟ್, ಬಿಸ್ಕತ್ ಹಾಗೂ ಪಾನೀಯವನ್ನು ಪೂರೈಸಿ, ಹಣ ಸಂಪಾದನೆ ಮಾಡುತ್ತಿದ್ದರು. ಗೋದಾಮಿನ ಮೇಲೆ ದಾಳಿ ನಡೆಸಿದಾಗ ಅಕ್ರಮ ನಡೆಸುತ್ತಿರುವುದು ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

'ಚಾಕೊಲೇಟ್‌ಗಳನ್ನು ಎಫ್‌ಎಸ್ ಎಸ್‌ಎಐನ ನಿಯಮಾನುಸಾರ ತಯಾರಿಸಿರಲಿಲ್ಲ. ಸ್ಥಳಕ್ಕೆ ಭೇಟಿ ನೀಡಿದ್ದ ಆಹಾರ ಇಲಾಖೆಯ ಉಪ ನಿರ್ದೇಶಕರು, ಆರೋಪಿ ನಕಲಿ ಸ್ಟಿಕ್ಕರ್ ಅಂಟಿಸಿ ಮಾರಾಟ ಮಾಡುತ್ತಿರುವುದನ್ನು ದೃಢ-ಪಡಿಸಿದ್ದಾರೆ. ಆರೋಪಿ ವಿದೇಶದಿಂದ ಚಾಕೊಲೇಟ್ ಅನ್ನು ಭಾರತಕ್ಕೆ ಆಮದು ಹಾಗೂ ಸುಂಕ ಪಾವತಿ ಮಾಡಿರುವುದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳು ಇಲ್ಲ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

'ಆರೋಪಿಯು ಹಡಗಿನ ಮೂಲಕ ಮುಂಬೈನ ಬಂದರಿಗೆ ಪದಾರ್ಥಗಳನ್ನು ತರಿಸಿಕೊಂಡು, ಅಲ್ಲಿಂದ ವಾಹನಗಳ ಮೂಲಕ ನಗರಕ್ಕೆ ತರಿಸಿಕೊಳ್ಳುತ್ತಿದ್ದರು. ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿ ಆರೋಪಿಯನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

ಪ್ರತ್ಯೇಕ ಕಳವು ಪ್ರಕರಣ: ನಾಲ್ವರ ಸೆರೆ

ಬೆಂಗಳೂರು: ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ದೇವಸ್ಥಾನ ಹಾಗೂ ಈಜುಕೊಳದ ಬಳಿ ಚಿನ್ನಾಭರಣ ಕಳವು ಮಾಡಿದ್ದ ನಾಲ್ವರು ಆರೋಪಿಗಳನ್ನು ತಲಘಟ್ಟಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಈಜುಕೊಳದ ವಸ್ತ್ರ ಬದಲಾಯಿಸುವ ಕೊಠಡಿಯ ಲಾಕರ್ ನಲ್ಲಿಟ್ಟಿದ್ದ ಚಿನ್ನಾಭರಣ ದೋಚಿದ್ದ ಈಜು ತರಬೇತುದಾರೆ ಹಾಗೂ ಕಳವು ಮಾಲು ಸ್ವೀಕರಿಸಿದ್ದ ಆರೋಪಿಯನ್ನು ತಲಘಟ್ಟಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಲಘಟ್ಟಪುರ ನಿವಾಸಿ ಮಮತಾ(35) ಮತ್ತು ಕಳವು ಮಾಲು ಸ್ವೀಕರಿಸಿದ ಸ್ವಾಮಿ(45) ಬಂಧಿತರು.

ಆರೋಪಿಗಳಿಂದ ₹ 3 ಲಕ್ಷ ಮೌಲ್ಯದ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ. ಆರೋಪಿಗಳು ಕೆಂಬತ್ತಹಳ್ಳಿಯಲ್ಲಿರುವ ಸ್ವಿಮ್ ಸ್ಕ್ವೇರ್‌ನಲ್ಲಿ ಚಿನ್ನಾಭರಣ ಕಳವು ಮಾಡಿದ್ದರು ಎಂದು ಪೊಲೀಸರು ಹೇಳಿದರು.

ಈಜು ಕಲಿಯಲು ಬಂದಿದ್ದ ಮಹಿಳೆಯೊಬ್ಬರು ವಸ್ತ್ರ ಬದಲಾಯಿಸುವ ಕೊಠಡಿಯಲ್ಲಿದ್ದ ಲಾಕರ್‌ನಲ್ಲಿ ಚಿನ್ನಾಭರಣ ಇಟ್ಟಿದ್ದರು. ಅದನ್ನು ಗಮನಿಸಿದ್ದ ಮಮತಾ ಚಿನ್ನಾಭರಣ ಕಳವು ಮಾಡಿ, ಪತಿಯ ಸ್ನೇಹಿತ ಸ್ವಾಮಿಗೆ ಕೊಟ್ಟು ಮಾರಾಟಕ್ಕೆ ಸೂಚಿಸಿದ್ದರು ಎಂದು ಪೊಲೀಸರು ಹೇಳಿದರು.

ದೇವಸ್ಥಾನದಲ್ಲಿ ಕಳವು ಇಬ್ಬರ ಬಂಧನ: ಇನ್ನೊಂದು ಪ್ರಕರಣದಲ್ಲಿ ಮಾರುತಿನಗರದ ಕಬ್ಬಾಳಮ್ಮ ದೇವಿಯ ದೇವಸ್ಥಾನದಲ್ಲಿ ಬೆಳ್ಳಿಯ ವಸ್ತುಗಳು ಹಾಗೂ ಇತರೆ ವಸ್ತುಗಳನ್ನು ಕಳವು ಮಾಡಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ.

ಯಾರಬ್‌ನಗರ ನಿವಾಸಿಗಳಾದ ತೌಸಿಫ್(30) ಮತ್ತು ಜಮೀರ್(28) ಬಂಧಿತರು. ಆರೋಪಿಗಳಿಂದ ₹3 ಲಕ್ಷ ಮೌಲ್ಯದ ದೇವಸ್ಥಾನದ ಪೂಜಾ ಸಾಮಗ್ರಿಗಳು ಹಾಗೂ ಐದು ಬೈಕ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಕೊಟ್ಟ ಹಣ ಮರಳಿ ಕೇಳಿದ ಚಾಲಕನ ಹತ್ಯೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟ್ಯಾಕ್ಸಿ ನಿಲ್ದಾಣದಲ್ಲಿ ಮಂಗಳವಾರ ತಡರಾತ್ರಿ ಕೆಎಸ್‌ಟಿಡಿಸಿ ಟ್ಯಾಕ್ಸಿ ಚಾಲಕನನ್ನು ಮತ್ತೊಬ್ಬ ಟ್ಯಾಕ್ಸಿ ಚಾಲಕ ಕೊಲೆ ಮಾಡಿದ್ದಾನೆ.

ಮೃತನನ್ನು ಬೆಂಗಳೂರಿನ ಬಿಳೇಕಹಳ್ಳಿಯ ಎನ್.ಎಸ್. ಪಾಳ್ಯದ ನಿವಾಸಿ ಲೋಕೇಶ್ (36) ಎಂದು ಗುರುತಿಸಲಾಗಿದೆ. ಬೆಂಗಳೂರು ಜೆ.ಪಿ. ನಗರ 2ನೇ ಹಂತದ ಸಾರಕ್ಕಿ ಅಗ್ರಹಾರದ ಕೆಎಸ್‌ಟಿಡಿಸಿ ಟ್ಯಾಕ್ಸಿ ಚಾಲಕ ಮುತ್ತುರಾಜು ಅಲಿಯಾಸ್ ಕಿರಣ್ ಕೊಲೆ ಆರೋಪಿ. ಇಬ್ಬರೂ ಸ್ನೇಹಿತರಾಗಿದ್ದು, ಹಣಕಾಸಿನ ವಿಚಾರಕ್ಕೆ ಕೊಲೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ನೇಹಿತ ಲೋಕೇಶ್ ಅವರಿಂದ ಮುತ್ತುರಾಜ್ ಹಣ ಪಡೆದಿದ್ದರು ಎನ್ನಲಾಗಿದೆ. ಮಂಗಳವಾರ ರಾತ್ರಿ ಟ್ಯಾಕ್ಸಿಯಲ್ಲಿ ಕುಳಿತು ಸಾಲ ಮರುಪಾವತಿ ಕುರಿತು ಮಾತನಾಡುತ್ತಿದ್ದರು. ಈ ವೇಳೆ ಮಾತು ವಿಕೋಪಕ್ಕೆ ತಿರುಗಿ ಮುತ್ತುರಾಜ್ ತಮ್ಮ ಕೈಯಲ್ಲಿದ್ದ ಚಾಕುವಿನಿಂದ ಲೋಕೇಶ್ ಎದೆಯ ಭಾಗಕ್ಕೆ ಜೋರಾಗಿ ಚುಚ್ಚಿದ್ದಾರೆ. ರಕ್ತಸ್ರಾವದಿಂದ ಲೋಕೇಶ್ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿ ಮುತ್ತುರಾಜ್‌ನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ವಿಮಾನ ನಿಲ್ದಾಣ ಠಾಣೆಯಲ್ಲಿ ದೂರು ದಾಖಲಾಗಿದೆ.

ಲೈಂಗಿಕ ದೌರ್ಜನ್ಯ: ಅಪರಾಧಿಗೆ ಶಿಕ್ಷೆ

ಬೆಂಗಳೂರು: ಮಗುವಿನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಅಪರಾಧಿಗೆ 1ನೇ ತ್ವರಿತ ನ್ಯಾಯಾಲಯ 20 ವರ್ಷ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿದೆ.

ಲಗ್ಗೆರೆಯ ಚೇತನ್ ಶಿಕ್ಷೆಗೆ ಒಳಗಾದ ಅಪರಾಧಿ. ಮೂರು ವರ್ಷದ ಮಗುವಿನ ಮೇಲೆ ಚೇತನ್ ಲೈಂಗಿಕ ದೌರ್ಜನ್ಯ ಎಸಗಿದ್ದ. ಮಗುವಿನ ತಂದೆ ನೀಡಿದ್ದ ದೂರು ಆಧರಿಸಿ ಅಪರಾಧಿಯನ್ನು 2022ರ ಜುಲೈ 7ರಂದು ಬಂಧಿಸಲಾಗಿತ್ತು. ಪ್ರಕರಣದಲ್ಲಿ 15 ಮಂದಿ ಸಾಕ್ಷಿದಾರರನ್ನು ವಿಚಾರಣೆ ನಡೆಸಿದ್ದ ಪೊಲೀಸರು, ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ಪ್ರಕರಣದಲ್ಲಿ ವಾದ-ಪ್ರತಿವಾದ ಆಲಿಸಿದ ನ್ಯಾಯಾಧೀಶೆ ಕೆ.ಎನ್.ರೂಪಾ ಅವರು ಶಿಕ್ಷೆ ನೀಡಿ ಆದೇಶಿಸಿದ್ದಾರೆ. ಸರ್ಕಾರಿ ವಕೀಲರಾಗಿ ಪಿ.ಕೃಷ್ಣವೇಣಿ ಅವರು ವಾದ ಮಂಡಿಸಿದ್ದರು.

ಸುದ್ದಿ 2 ನಿಮಿಷ

ಡೆಂಗಿ: 293 ಪ್ರಕರಣ ದೃಢ

ಬೆಂಗಳೂರು: ರಾಜ್ಯದಲ್ಲಿ ಬುಧವಾರ 293 ಡೆಂಗಿ ಪ್ರಕರಣಗಳು ದೃಢಪಟ್ಟಿವೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.

ಡೆಂಗಿ ಪತ್ತೆ ಸಂಬಂಧ 24 ಗಂಟೆಗಳ ಅವಧಿಯಲ್ಲಿ 1,874 ಪರೀಕ್ಷೆಗಳನ್ನು ನಡೆಸಲಾಗಿತ್ತು.



ಹೊಸದಾಗಿ ಡೆಂಗಿ ಪೀಡಿತರಾದ-ವರಲ್ಲಿ ಒಂದು ವರ್ಷದೊಳಗಿನ ಎರಡು ಶಿಶುಗಳು, 18 ವರ್ಷದೊಳಗಿನ 101 ಮತ್ತು 18 ವರ್ಷ ದಾಟಿದ 193 ಮಂದಿ ಸೇರಿದ್ದಾರೆ.

ಸದ್ಯ ರಾಜ್ಯದ ವಿವಿಧ ಆಸ್ಪತ್ರೆಗಳಲ್ಲಿ 358 ಡೆಂಗಿ ರೋಗಿಗಳು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾ-ರೆ. ಈ ವರ್ಷ ವರದಿಯಾದ ಒಟ್ಟು ಡೆಂಗಿ ಪ್ರಕರಣಗಳ ಸಂಖ್ಯೆ 7,840ಕ್ಕೆ ಏರಿಕೆಯಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಹೊಸದಾಗಿ 118 ಪ್ರಕರಣಗಳು ದೃಢಪಟ್ಟಿವೆ. ಒಟ್ಟು ಪ್ರಕರಣಗಳ ಸಂಖ್ಯೆ 2,292ಕ್ಕೆ ತಲುಪಿದೆ. ಡೆಂಗಿ ಪೀಡಿತರಲ್ಲಿ ಸದ್ಯ 135 ಮಂದಿ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಇಲ್ಲಿವರೆಗೆ ಏಳು ಮಂದಿ ಮೃತಪಟ್ಟಿದ್ದಾರೆ.

ಮೆಟ್ರೊ ನೀಲಿ ಮಾರ್ಗ: ಸೀಮೆನ್ಸ್‌ಗೆ ವಿದ್ಯುದ್ದೀಕರಣ ಕಾಮಗಾರಿ

ಬೆಂಗಳೂರು: 'ನಮ್ಮ ಮೆಟ್ರೊ' ಎರಡನೇ ಹಂತದಲ್ಲಿ ನಿರ್ಮಾಣಗೊ-ಳ್ಳುತ್ತಿರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ– ಸೆಂಟ್ರಲ್ ಸಿಲ್ಕ್ ಬೋರ್ಡ್‌ವರೆಗಿನ ನೀಲಿ ಮಾರ್ಗದಲ್ಲಿ ವಿದ್ಯುದ್ದೀಕರಣ ತಂತ್ರಜ್ಞಾನ ಅಳವಡಿಸುವ ಕಾಮಗಾರಿಗೆ ಆದೇಶವನ್ನು ಸೀಮೆನ್ಸ್ ನೇತೃತ್ವದ ಕಂಪನಿಗಳ ಸಮೂಹ ಪಡೆದಿದೆ.

ನೀಲಿ ಮಾರ್ಗದಲ್ಲಿ ದೇವನಹಳ್ಳಿಯಲ್ಲಿರುವ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಕೆ.ಆರ್. ಪುರ ಹಾಗೂ ಕೆ.ಆರ್.ಪುರದಿಂದ ಕೇಂದ್ರ ರೇಷ್ಮೆ ಮಂಡಳಿವರೆಗೆ ಎರಡು ಹಂತದಲ್ಲಿ ಒಟ್ಟು 58 ಕಿ.ಮೀ. ಕಾಮಗಾರಿ ನಡೆಯುತ್ತಿದೆ. 30 ನಿಲ್ದಾಣಗಳಿರುವ ಈ ಮಾರ್ಗದಲ್ಲಿ ವಿದ್ಯು-ದ್ದೀಕರಣಕ್ಕೆ ₹ 766 ಕೋಟಿ ವೆಚ್ಚವಾಗಲಿದೆ. ಅದರಲ್ಲಿ ₹ 558 ಕೋಟಿಯ ಕಾಮಗಾರಿಯನ್ನು ಸೀಮೆನ್ಸ್ ಸಮೂಹ ನಡೆಸಲಿದೆ.

ಸೀಮೆನ್ಸ್ ಲಿಮಿಟೆಡ್ ಸೂಪರ್‌ವೈಸರಿ ಕಂಟ್ರೋಲ್ ಆ್ಯಂಡ್ ಡೇಟಾ ಅಕ್ವಿಸಿಷನ್ (ಎಸ್‌ಸಿಎಡಿಎ) ವ್ಯವಸ್ಥೆಗಳನ್ನು ಒಳಗೊಂಡ ರೈಲು ವಿದ್ಯುದ್ದೀಕ-ರಣ ತಂತ್ರಜ್ಞಾನಗಳ ಜೊತೆಗೆ ಡಿಜಿಟಲ್ ಪರಿಹಾರಗಳನ್ನು ವಿನ್ಯಾಸಗೊಳಿಸಿ ಅಳವಡಿಸುತ್ತದೆ ಎಂದು ಸೀಮೆನ್ಸ್ ಲಿಮಿಟೆಡ್‌ನ ಮೊಬಿಲಿಟಿ ಬಿಸಿನೆಸ್ ಮುಖ್ಯಸ್ಥ ಗುಂಜನ್ ವಖಾರಿಯಾ ತಿಳಿಸಿದ್ದಾರೆ.




ಸಂಕಷ್ಟ ಪರಿಹಾರ

ನಗರದ ಕೆ.ಆರ್. ಮಾರುಕಟ್ಟೆಯಲ್ಲಿ ಅಪಾಯ ತಂದೊಡ್ಡುವಂತೆ ವಿದ್ಯುತ್ ಕಂಬವೊಂದರಲ್ಲಿ ಕೇಬಲ್‌ಗಳು ನೇತಾಡುತ್ತಿದ್ದು, ಮಳೆಯಿಂದ ರಕ್ಷಣೆ ಪಡೆಯಲು ವ್ಯಾಪಾರಿಯೊಬ್ಬರು ಅದೇ ಕಂಬಕ್ಕೆ ಸೋಮವಾರ ತಾಡಪಾಲು ಕಟ್ಟಿದ್ದರು. ಈ ಕುರಿತು 'ಪ್ರಜಾವಾಣಿ'ಯ ಬುಧವಾರದ ಸಂಚಿಕೆಯಲ್ಲಿ ಚಿತ್ರ ಶೀರ್ಷಿಕೆ ಪ್ರಕಟಿಸಲಾಗಿತ್ತು. ಬೆಸ್ಕಾಂ ಸಿಬ್ಬಂದಿ ವರದಿಗೆ ಸ್ಪಂದಿಸಿದ್ದು, ಕಂಬದಲ್ಲಿ ನೇತಾಡುತ್ತಿದ್ದ ಕೇಬಲ್‌ಗಳನ್ನ ತೆರವುಗೊಳಿಸಿದ್ದಾರೆ.
–ಪ್ರಜಾವಾಣಿ ಚಿತ್ರ

ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಮಾಹಿತಿ

'ಹೊಯ್ಸಳ ಟ್ರ್ಯಾಕಿಂಗ್'ಗೆ ಉತ್ತಮ ಸ್ಪಂದನೆ

ಪ್ರಜಾವಾಣಿ ವಾರ್ತೆ



ಬಿ.ದಯಾನಂದ

ಬೆಂಗಳೂರು: ನಗರದಲ್ಲಿ ಜಾರಿಗೆ ತಂದಿರುವ 'ಹೊಯ್ಸಳ ಟ್ರ್ಯಾಕಿಂಗ್' ವ್ಯವಸ್ಥೆ ಹಾಗೂ 'ಅಪದ್ಬಾಂಧವ'ಕ್ಕೆ ಉತ್ತಮ ಸ್ಪಂದನೆ ಲಭಿಸುತ್ತಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

'ಈ ಮೊದಲು ಸಾರ್ವಜನಿಕರು 112ಕ್ಕೆ ಕರೆ ಮಾಡಿದಾಗ, ಹೊಯ್ಸಳ ಗಸ್ತು ವಾಹನ ಸಂಖ್ಯೆ ಹಾಗೂ ಸಿಎಫ್‌ಎಸ್ ಸಂಖ್ಯೆಯ ಸಂದೇಶ ಮಾತ್ರ ರವಾನೆ ಆಗುತ್ತಿತ್ತು. ಈಗ ಅದನ್ನು ಮೇಲ್ದರ್ಜೆಗೇರಿಸಲಾಗಿದೆ. ಕರೆ ಮಾಡಿದ ಸಾರ್ವಜನಿಕರಿಗೆ ಹೊಯ್ಸಳದ ಲೈವ್ ಲೊಕೇಶನ್ ಲಿಂಕ್ ರವಾನೆ ಆಗಲಿದೆ. ಅಲ್ಲದೇ ಹೊಯ್ಸಳ ವಾಹನ ಸಂಚರಿಸುವ ಮಾರ್ಗ, ಅದು ಎಷ್ಟು ದೂರದಲ್ಲಿದೆ, ಸ್ಥಳಕ್ಕೆ ಬರಲು ಎಷ್ಟು ಸಮಯ ಬೇಕಾಗುತ್ತದೆ ಎಂಬುದೂ ಗೊತ್ತಾಗಲಿದೆ. ಓಲಾ, ಊಬರ್ ಅಥವಾ ಫುಡ್ ಡೆಲಿವರಿ ಆ್ಯಪ್‌ಗಳ ಮಾದರಿಯಲ್ಲಿ ವಾಹನವನ್ನು ಪತ್ತೆ ಹಚ್ಚಬಹುದಾಗಿದೆ' ಎಂದು ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಕೆಎಸ್‌ಪಿ ಆ್ಯಪ್‌ನಲ್ಲಿ 'ಅಪತ್ಬಾಂಧವ': ನಗರದಲ್ಲಿರುವ ಸುರಕ್ಷಿತ ತಾಣಗಳನ್ನು ಮತ್ತಷ್ಟು ಅಭಿವೃದ್ಧಿ ಪಡಿಸಿದ್ದು, ಇದೀಗ ರಾಜ್ಯ ಪೊಲೀಸ್ ಇಲಾಖೆಯ ಕೆಎಸ್‌ಪಿ ಆ್ಯಪ್‌ನಲ್ಲೇ 'ಸೇಫ್ ಕನೆಕ್ಟ್' ಎಂಬುದಾಗಿ ಪರಿಚಯಿಸಲಾಗಿದೆ ಎಂದು ಅವರು ತಿಳಿಸಿದರು.

50 ಕಡೆ ಸುರಕ್ಷಿತ ತಾಣ: 'ಸೇಫ್ ಸಿಟಿ' ಯೋಜನೆ ಅಡಿ ನಗರದ 50 ಸ್ಥಳಗಳಲ್ಲಿ ಸುರಕ್ಷಿತ ತಾಣಗಳನ್ನು ನಿರ್ಮಿಸಲಾಗಿದ್ದು ಮುಂದಿನ ದಿನಗಳಲ್ಲಿ ಅವುಗಳ ಸಂಖ್ಯೆಯನ್ನು ಹೆಚ್ಚಿಸಲಾಗುವುದು ಎಂದರು.

ಜೂನ್ ತಿಂಗಳಲ್ಲಿ ನಗರದಲ್ಲಿ ವಿಶೇಷ ಕಾರ್ಯಾಚರಣೆ ನಡೆಸಲಾಗಿತ್ತು. ನೆರೆ ರಾಜ್ಯಗಳಿಂದ ವಿದೇಶಿ ಪ್ರಜೆಗಳು ಡ್ರಗ್ಸ್ ತಂದು ನಗರದ ಗ್ರಾಹಕರಿಗೆ ಪೂರೈ-ಸುತ್ತಿದ್ದರು. ಅಲ್ಲದೇ ಸ್ಥಳೀಯವಾಗಿ ಡ್ರಗ್ಸ್ ಮಾರಾಟ ಮಾಡುತ್ತಿದ್ದ 42 ಮಂದಿಯನ್ನು ಬಂಧಿಸಲಾಗಿದೆ ಎಂದರು.

ಜೂನ್‌ನಲ್ಲಿ ಮಟ್ಕಾ, ಜೂಜಾಟ, ಕ್ರಿಕೆಟ್ ಬೆಟ್ಟಿಂಗ್ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ. ಅಲ್ಲದೆ, ಸಂಚಾರ ನಿಯಮ ಉಲ್ಲಂಘನೆ, ಅನಧಿಕೃತ ಬಡ್ಡಿ ವ್ಯವಹಾರ ಸೇರಿದಂತೆ ವಿವಿಧ ಆರೋಪಗಳ ಅಡಿ ನಗರದ ಹಲವು ಠಾಣೆಗಳಲ್ಲಿ ದಾಖಲಾಗಿದ್ದ 179 ಪ್ರಕರಣಗಳಲ್ಲಿ 324 ಮಂದಿಯನ್ನು ಬಂಧಿಸಲಾಗಿದೆ ಎಂದು ಮಾಹಿತಿ ನೀಡಿದರು.

ನಗರದ ವಿವಿಧ ಠಾಣೆಗಳಲ್ಲಿ ದಾಖಲಾಗಿದ್ದ ಹಳೆಯ ಪ್ರಕರಣಗಳಲ್ಲಿ ಆರೋಪಿಗಳನ್ನು ಬಂಧಿಸಿ ಕೋರ್ಟ್‌ಗೆ ಹಾಜರು ಪಡಿಸಲಾಗಿದೆ ಎಂದು ಮಾಹಿತಿ ನೀಡಿದರು.

ಒಂದು ತಿಂಗಳಲ್ಲಿ 45 ಮಂದಿ ಸೆರೆ

ಮಾದಕ ವಸ್ತುಗಳ ಮಾರಾಟ ದಂಧೆ ವಿರುದ್ಧ ವಿಶೇಷ ಕಾರ್ಯಾಚರಣೆ ಮುಂದುವರಿಸಿರುವ ನಗರ ಪೊಲೀಸರು, ತಿಂಗಳ ಅವಧಿಯಲ್ಲಿ ಮೂವರು ವಿದೇಶಿ ಪ್ರಜೆಗಳೂ ಸೇರಿದಂತೆ 45 ಆರೋಪಿಗಳನ್ನು ಬಂಧಿಸಿದ್ದಾರೆ. ಬಂಧಿತರಿಂದ 117 ಕೆ.ಜಿ ಗಾಂಜಾ, 11 ಕೆ.ಜಿ ಅಫೀಮು, 400 ಗ್ರಾಂ ಹಶೀಶ್ ಆಯಿಲ್, 50 ಗ್ರಾಂ. ಕೊಕೇನ್, 236 ಗ್ರಾಂ. ಎಂಡಿಎಂಎ ಜಪ್ತಿ ಮಾಡಿಕೊಳ್ಳ-ಲಾಗಿದೆ ಎಂದು ದಯಾನಂದ ತಿಳಿಸಿದರು.

ನಗರದಲ್ಲಿ ಇಂದು

ರಕ್ತದಾನ ಶಿಬಿರ: ಆಯೋಜನೆ: ಶಿಲ್ಪಾ ಫೌಂಡೇಷನ್, ಲಯನ್ಸ್ ಕ್ಲಬ್, ಸ್ಥಳ: ಪ್ರೈಮ್ ಕೋ ಸ್ಪೆಕ್ಟ್ರಮ್, ಪ್ರೈಮ್ ಕೋ ಟವರ್ಸ್, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 10

ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ಘಟಕದ ಉದ್ಘಾಟನೆ: ರಾಜನಾಯಕ್, ಅತಿಥಿಗಳು: ನಾ. ಶ್ರೀಧರ್, ಕೆ.ಜಿ. ಕುಮಾರ್, ಅಧ್ಯಕ್ಷತೆ: ಲಕ್ಷ್ಮಿ ಶ್ರೀನಿವಾಸ್, ಸ್ಥಳ: ಶಾರದ ವಿದ್ಯಾಮಂದಿರ, ತೆಂಗಿನ ತೋಟದ ರಸ್ತೆ, ಟಿ. ದಾಸರಹಳ್ಳಿ, ಬೆಳಿಗ್ಗೆ 10.30

ಪ್ರೈಡ್ ಆಫ್ ನೇಷನ್ ಅವಾರ್ಡ್–2024: ಉದ್ಘಾಟನೆ: ಥಾವರಚಂದ್ ಗೆಹಲೋತ್, ಅತಿಥಿಗಳು: ಬಸವರಾಜ ಹೊರಟ್ಟಿ, ಜಗದೀಶ್ ಶೆಟ್ಟರ್, ಡಾ.ಸಿ. ಎನ್. ಮಂಜುನಾಥ್, ಸ್ಥಳ: ಹೋಟೆಲ್ ಲಲಿತ್ ಅಶೋಕ್, ಬೆಳಿಗ್ಗೆ 10.30

'ಶ್ರೀನಿವಾಸ ಕಲ್ಯಾಣ' ಪ್ರವಚನ ಮಾಲಿಕೆ-6: ವೇಣುಗೋಪಾಲಾಚಾರ್ಯ ಅಗ್ನಿಹೋತ್ರಿ, ಆಯೋಜನೆ ಮತ್ತು ಸ್ಥಳ: ಅಭಯ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ, 7ನೇ ಮುಖ್ಯರಸ್ತೆ, 3ನೇ ಬ್ಲಾಕ್, ತ್ಯಾಗರಾಜನಗರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ)ಕಳುಹಿಸಿ.

nagaradalli_indu@prajavani.co.in

961 ಹುದ್ದೆ ಭರ್ತಿಗೆ ಪ್ರಸ್ತಾವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ವೃಂದಗಳ 961 ಹುದ್ದೆಗಳ ಭರ್ತಿಗೆ ಆರ್ಥಿಕ ಇಲಾಖೆಯ ಅನುಮೋದನೆ ಪಡೆದು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಇಲಾಖೆ ಮೂಲಗಳು ತಿಳಿಸಿವೆ.

ಕಲ್ಯಾಣ ಕರ್ನಾಟಕ ಭಾಗದ 34 ಕೃಷಿ ಅಧಿಕಾರಿ, 223 ಸಹಾಯಕ ಕೃಷಿ ಅಧಿಕಾರಿ, 17 ದ್ವಿತೀಯ ದರ್ಜೆ ಸಹಾಯಕರು, 17 ಬೆರಳಚ್ಚುಗಾರರು ಹಾಗೂ ಉಳಿಕ ವೃಂದದಲ್ಲಿ 84 ಕೃಷಿ ಅಧಿಕಾರಿ 586 ಸಹಾಯಕ ಕೃಷಿ ಅಧಿಕಾರಿಗಳು ಸೇರಿ ಒಟ್ಟು 961 ಹುದ್ದೆಗಳ ನೇಮಕಾತಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ತೆರಿಗೆ ಪಾವತಿಸದ 33 ವಾಹನ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರಕ್ಕೆ ತೆರಿಗೆ ಪಾವತಿ ಮಾಡದೇ ಸಂಚರಿಸುತ್ತಿದ್ದ ಹೊರ ರಾಜ್ಯಗಳ 33 ವಾಹನಗಳನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಬುಧವಾರ ವಶಪಡಿಸಿಕೊಂಡಿದ್ದಾರೆ. 242 ಪ್ರಕರಣಗಳನ್ನು ದಾಖಲಿಸಲಾಗಿದೆ.

ಹೆಚ್ಚುವರಿ ಸಾರಿಗೆ ಆಯುಕ್ತ ಸಿ ಮಲ್ಲಿಕಾರ್ಜುನ್ ನೇತೃತ್ವದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿ ಎಲ್. ದೀಪಕ್ ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಒಳಗೊಂಡ 10 ತಂಡಗಳು ಕಾರ್ಯಾಚರಣೆ ನಡೆಸಿದವು. ಅಧಿಕಾರಿಗಳು ಒಟ್ಟು 1,452 ವಾಹನಗಳನ್ನು ತಪಾಸಣೆ ನಡೆಸಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಲಂಚ: ಕಾರ್ಮಿಕ ಅಧಿಕಾರಿ ಬಂಧನ

ಪ್ರಜಾವಾಣಿ ವಾರ್ತೆ



ಶಮ್ಮಿ

ಬೆಂಗಳೂರು: ಕಂಪನಿಯೊಂದಕ್ಕೆ ನೀಡಿದ್ದ ನೋಟಿಸ್ ಅನ್ನು ಮುಕ್ತಾಯಗೊಳಿಸಲು ₹ 5000 ಲಂಚ ಪಡೆಯುತ್ತಿದ್ದ ಕಾರ್ಮಿಕ ಇಲಾಖೆಯ ಬಾಗಲಗುಂಟೆ ವೃತ್ತ ಕಚೇರಿಯ ಹಿರಿಯ ಕಾರ್ಮಿಕ ಅಧಿಕಾರಿ ಶಮ್ಮಿ ಅವರನ್ನು ಲೋಕಾಯುಕ್ತ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ನಗರದ ಟಿ.ದಾಸರಹಳ್ಳಿಯಲ್ಲಿರುವ ಅದಿತ್ ಪೆಸಿಲಿಟೀಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಎಂಬ ಭದ್ರತಾ ಏಜೆನ್ಸಿಯ ವಿರುದ್ಧ, ಕಾರ್ಮಿಕ ಕಾನೂನು ಉಲ್ಲಂಘನೆ ಆರೋಪದಲ್ಲಿ ನೋಟಿಸ್ ಜಾರಿ ಮಾಡಲಾಗಿತ್ತು. ಆರೋಪಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಸಂಸ್ಥೆಯು ಇಲಾಖೆಗೆ ಸಲ್ಲಿಸಿತ್ತು. ಆದರೆ ನೋಟಿಸ್ ಅನ್ನು ಮುಕ್ತಾಯಗೊಳಿಸಲು ₹5,000 ಲಂಚ ನೀಡುವಂತೆ ಅಧಿಕಾರಿ ಬೇಡಿಕೆ ಇಟ್ಟಿದ್ದರು. ಈ ಸಂಬಂಧ ಕಂಪನಿಯ ಮೇಲ್ವಿಚಾರಕ ಭಾನುಪ್ರಕಾಶ್ ಅವರು ಲೋಕಾಯುಕ್ತದ ಬೆಂಗಳೂರು ನಗರ ಪೊಲೀಸ್ ಘಟಕ–2ಕ್ಕೆ ದೂರು ನೀಡಿದ್ದರು.

ಬಾಗಲಗುಂಟೆಯಲ್ಲಿರುವ ಕಾರ್ಮಿಕ ವೃತ್ತ ಕಚೇರಿ–45ರಲ್ಲಿ ಲಂಚದ ಹಣ ತಲುಪಿಸುವಂತೆ ಆರೋಪಿ ಸೂಚಿಸಿದ್ದರು. ಅದರಂತೆ ಬುಧವಾರ ಸಂಜೆ 4ರ ವೇಳೆ ಕಚೇರಿಗೆ ಹೋದ ಭಾನುಪ್ರಕಾಶ್ ಲಂಚದ ಹಣ ತಲುಪಿಸಿದರು. ತಕ್ಷಣ ದಾಳಿಮಾಡಿದ ಲೋಕಾಯುಕ್ತ ಪೊಲೀಸ್ ವಿಭಾಗದ ಇನ್‌ಸ್ಪೆಕ್ಟರ್ ದದಾವಲಿ ನೇತೃತ್ವದ ತಂಡ ಶಮ್ಮಿ ಅವರನ್ನು ಬಂಧಿಸಿದೆ. ಅವರ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಲೋಕಾಯುಕ್ತ ಪೊಲೀಸ್ ವಿಭಾಗದ ಬೆಂಗಳೂರು ನಗರ ಘಟಕ–2ರ ಎಸ್‌ಪಿ ಕೋನ ವಂಶಿಕೃಷ್ಣ ಮಾರ್ಗದರ್ಶನದಲ್ಲಿ ಈ ಕಾರ್ಯಾಚರಣೆ ನಡೆದಿದೆ.

ವಪೆ ಹರಿದು ಉಸಿರಾಡಲು ಕಷ್ಟ ಪಡುತ್ತಿದ್ದ ಮರಿ

ಶಸ್ತ್ರಚಿಕಿತ್ಸೆ: ಚಿರತೆ ಚೇತರಿಕೆ

ಪ್ರಜಾವಾಣಿ ವಾರ್ತೆ

ಆನೇಕಲ್: ಹೊಟ್ಟೆ ಭಾಗ ಮತ್ತು ಶ್ವಾಸ ಕೋಶವನ್ನು ಬೇರ್ಪಡಿಸುವ ವಪೆ (ತಿಳುವಾದ ಹಾಳೆಯಂತ ಪದರು) ಹರಿದು ಉಸಿರಾಡಲು ಕಷ್ಟಪಡುತ್ತಿದ್ದ ಬನ್ನೇರುಘಟ್ಟ ಜೈವಿಕ ಉದ್ಯಾನದ ಚಿರತೆಗೆ ಮಾರ್ಚ್‌ನಲ್ಲಿ ಪಶುವೈದ್ಯರ ತಂಡ ನಡೆಸಿದ್ದ ಅಪರೂಪದ ಶಸ್ತ್ರಚಿಕಿತ್ಸೆ ಯಶಸ್ವಿಯಾಗಿದ್ದು ಈಗ ಚಿರತೆ ಚೇತರಿಸಿ-ಕೊಳ್ಳುತ್ತಿದೆ.

ಅಪರೂಪದ ಶಸ್ತ್ರಚಿಕಿತ್ಸೆಯ ಬಳಿಕ ಚಿರತೆಯನ್ನು ಆರೇಳು ತಿಂಗಳ ಕಾಲ ಜೋಪಾನ ಮಾಡಲಾಗಿದೆ. ಚಿರತೆ ಆರೋಗ್ಯವಾಗಿದ್ದು ಇದೀಗ ಲವಲವಿಕೆಯಿಂದ ಓಡಾಡುತ್ತಿದೆ. ಇದು ಉದ್ಯಾನದ ವೈದ್ಯರು ಮತ್ತು ಸಿಬ್ಬಂದಿಯಲ್ಲಿ ಸಂತಸ ತಂದಿದೆ.

ಡಯಾಫ್ರಾಗ್ನಾಮ್ಯಾಟಿಕ್ ಹರ್ನಿಯಾ (ಹೈಟಲ್ ಹರ್ನಿಯಾ ಟೈಪ್ 1) ಸಮಸ್ಯೆಯಿಂದ ನರಳುತ್ತಿದ್ದ ಚಿರತೆಯ ಹೊಟ್ಟೆ ಶ್ವಾಸಕೋಶದ ಮೇಲೆ ಬರುತ್ತಿತ್ತು.



ಶಸ್ತ್ರಚಿಕಿತ್ಸೆಗೂ ಮುನ್ನ ಚಿರತೆ

ಇದರಿಂದಾಗಿ ಉಸಿರಾಟದ ಸಮಸ್ಯೆ ಉಂಟಾಗುತ್ತಿತ್ತು. ಓಡಾಡಲೂ ಪರದಾಡುತ್ತಿದ್ದ ಚಿರತೆ ತಿಂದ ಆಹಾರವನ್ನೂ ವಾಂತಿ ಮಾಡಿಕೊಳ್ಳುತ್ತಿತ್ತು.

ಇದರಿಂದ ಚಿರತೆಯ ತೂಕ 13 ಕೆ.ಜಿ.ಗೆ ಇಳಿದಿತ್ತು. ಸಾವು-ಬದುಕಿನ ನಡುವೆ ಹೋರಾಟ ಮಾಡುತ್ತಿದ್ದ ಚಿರತೆಯ ಕುರಿತು ಬನ್ನೇರುಘಟ್ಟದ ವೈದ್ಯರ ತಂಡವು ಮೇಲಧಿಕಾರಿಗಳಿಗೆ ಮಾಹಿತಿ ನೀಡಿದ್ದರು.

ಶಸ್ತ್ರಚಿಕಿತ್ಸೆಗೆ ಒಪ್ಪಿಗೆ ದೊರೆತ ಬಳಿಕ ಉದ್ಯಾನದ ಪಶು ವೈದ್ಯರ ತಂಡ ಮಾರ್ಚ್ 27ರಂದು ಅಪರೂಪದ ಶಸ್ತ್ರಚಿಕಿತ್ಸೆ ನಡೆಸಿತ್ತು. ಈ ಶಸ್ತ್ರಚಿಕಿತ್ಸೆ ಏಷ್ಯಾದಲ್ಲಿಯೇ ಮೊದಲು ಎಂದು ಚಿಕಿತ್ಸಕರ ತಂಡ ಹೇಳಿದೆ.

ಬನ್ನೇರುಘಟ್ಟ ಜೈವಿಕ ಉದ್ಯಾನದ ಪಶು ವೈದ್ಯರಾದ ಡಾ.ಕಿರಣ್ ಕುಮಾರ್, ಡಾ.ಆನಂದ್, ಡಾ.ಮಂಜುನಾಥ್ ಅವರ ತಂಡವು ನುರಿತ ಪ್ರಾಣಿಪಾಲಕರ ಜೊತೆಗೂಡಿ ಶಸ್ತ್ರಚಿಕಿತ್ಸೆ ನಡೆಸಿತ್ತು.

'ಚಿರತೆ ಪ್ರಸ್ತುತ ಸುಮಾರು 40 ಕೆ.ಜಿ. ತೂಕವಿದ್ದು, ಆರೋಗ್ಯವಾಗಿದೆ. ಇಂತಹ ಶಸ್ತ್ರಚಿಕಿತ್ಸೆಯಿಂದ ಚಿರತೆಗಳು ಬದುಕುಳಿದ ಪ್ರಕರಣಗಳಿಲ್ಲ. ವೈದ್ಯಕೀಯ ದಾಖಲೆಗಳ ಪ್ರಕಾರ ಏಷ್ಯಾದಲ್ಲಿ ಈ ರೀತಿಯ ಶಸ್ತ್ರಚಿಕಿತ್ಸೆ ಇದೇ ಮೊದಲು' ಎಂದು ಡಾ.ಕಿರಣ್ ಕುಮಾರ್ ತಿಳಿಸಿದರು.

ಗದ್ದೆಯಲ್ಲಿ ಸಿಕ್ಕಿದ್ದ ಮೂರು ಕಾಲುಗಳ ಮರಿ!

ಮಂಡ್ಯ ಜಿಲ್ಲೆಯ ಗದ್ದೆಯೊಂದರಲ್ಲಿ ಸಿಕ್ಕಿದ್ದ ನಾಲ್ಕು ತಿಂಗಳ ಚಿರತೆ ಮರಿಯನ್ನು ಮೈಸೂರು ಮೃಗಾಲಯದವರು ಸಂರಕ್ಷಿಸಿದ್ದರು. 2023ರ ಡಿ. 6ರಂದು ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ನೀಡಿದ್ದರು. ಚಿರತೆಗೆ ಮುಂಭಾಗದ ಬಲಗಾಲು ಇರಲಿಲ್ಲ. ಮೂರು ಕಾಲುಗಳಿಂದಾಗಿ ಚಿರತೆ ಓಡಾಡಲೂ ಪರದಾಡುತ್ತಿತ್ತು.



ಸಿ.ವಿ. ರಾಮನ್‌ನಗರ ವಿಧಾನಸಭೆ ಕ್ಷೇತ್ರದ ಮಲ್ಲೇಶಪಾಳ್ಯದಲ್ಲಿ ಬುಧವಾರ ನಡೆದ ಮತದಾರರು ಮತ್ತು ಬಿಜೆಪಿ ಕಾರ್ಯಕರ್ತರ ಅಭಿನಂದನಾ ಸಮಾರಂಭಕ್ಕೆ ಶಾಸಕ ಎಸ್. ರಘು ಅವರು ಸಸಿ ನೆಡುವುದರ ಮೂಲಕ ಚಾಲನೆ ನೀಡಿದರು.

ಹೋಟೆಲ್‌ಗಳ ಸಂಘದ ಅಧ್ಯಕ್ಷರಾಗಿ ಸುಬ್ರಹ್ಮಣ್ಯ ಆಯ್ಕೆ

ಬೆಂಗಳೂರು: ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘಕ್ಕೆ 2024–27ನೇ ಸಾಲಿನ ಅವಧಿಗೆ ಅಧ್ಯಕ್ಷರಾಗಿ ಸುಬ್ರಹ್ಮಣ್ಯ ಹೊಳ್ಳ ಎಚ್.ಎಸ್., ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕೆ.ಆರ್. ರಸ್ತೆಯಲ್ಲಿ ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದಲ್ಲಿ ಬುಧವಾರ ನಡೆದ ಚುನಾವಣೆಯಲ್ಲಿ ಪಿ.ಸಿ. ರಾವ್ (ಗೌರವ ಅಧ್ಯಕ್ಷ), ಶಾಕೀರ್ ಹಕ್ (ಉಪಾಧ್ಯಕ್ಷ), ಶಂಕರ್ ಕುಂದರ್ ಎ. (ಉಪಾಧ್ಯಕ್ಷ), ವೀರೇಂದ್ರ ಎನ್. ಕಾಮತ್ (ಗೌರವ ಕಾರ್ಯದರ್ಶಿ), ಸುಧಾಕರ್ ಶೆಟ್ಟಿ ಜಿ. (ಖಜಾಂಚಿ), ರಾಕೇಶ್ ಅಲ್ಸೆ, ಧನಂಜಯ ಬಿ.ಎಂ., ಕೃಷ್ಣರಾಜ್ ಎಸ್.ಪಿ., ಶೇಖರ್ ನಾಯ್ಡು ಅವರು ಜಂಟಿ ಕಾರ್ಯದರ್ಶಿಗಳಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಹೆಜ್ಜಾಲ–ಕೆಂಗೇರಿ ನಡುವಣ ಲೆವೆಲ್ ಕ್ರಾಸಿಂಗ್–15ರಲ್ಲಿ ಸುರಕ್ಷತಾ ಕಾಮಗಾರಿ: ಪ್ರಯಾಣಿಕರ ಪರದಾಟ

ಬೆಂಗಳೂರು–ಮೈಸೂರು ರೈಲು ಸಂಚಾರ 2 ತಾಸು ವಿಳಂಬ

ಪ್ರಜಾವಾಣಿ ವಾರ್ತೆ

ರಾಮನಗರ: ತಾಲ್ಲೂಕಿನ ಹೆಜ್ಜಾಲ – ಕೆಂಗೇರಿ ನಡುವಣ ಲೆವೆಲ್ ಕ್ರಾಸಿಂಗ್–15ರಲ್ಲಿ ಎಂಜಿನಿಯರಿಂಗ್ ಮತ್ತು ಸುರಕ್ಷತಾ ಕಾಮಗಾರಿ ಕಾರಣದಿಂದಾಗಿ ಬೆಂಗಳೂರು ಮತ್ತು ಮೈಸೂರು ಮಾರ್ಗದ ಏಳೆಂಟು ರೈಲುಗಳು ಬುಧವಾರ ಬೆಳಿಗ್ಗೆ ಸುಮಾರು ಎರಡು ತಾಸು ವಿಳಂಬವಾಗಿ ಸಂಚರಿಸಿದವು.

ಸಮೀಪದ ನಿಲ್ದಾಣಗಳಲ್ಲೇ ಬೀಡು ಬಿಟ್ಟ ರೈಲುಗಳಿಂದಾಗಿ ಪ್ರಯಾಣಿಕರು ಸರಿಯಾದ ಸಮಯಕ್ಕೆ ತಲುಪಲಾಗದೆ ಪರದಾಡಬೇಕಾಯಿತು. ತಮ್ಮ ಕೆಲಸಗಳಿಗೆ ಹೋಗಲು ತಡವಾಗಿದ್ದರಿಂದ ಹಲವರು ಬಸ್ ಸೇರಿದಂತೆ ಇತರ ವಾಹನಗಳನ್ನು ಆಶ್ರಯಿಸಬೇಕಾಯಿತು.

ಬೆಳಿಗ್ಗೆ 7.30ರಿಂದ 9.30 ಗಂಟೆವರೆಗೆ ಈ ಮಾರ್ಗದ ರೈಲುಗಳ ಸಂಚಾರದಲ್ಲಿ ವ್ಯತ್ಯಯವಾಯಿತು. ರೈಲುಗಳು ಚನ್ನಪಟ್ಟಣ, ರಾಮನಗರ ಹಾಗೂ ಬಿಡದಿ ನಿಲ್ದಾಣದಲ್ಲೇ ನಿಂತವು. ಇನ್ನೇನು ರೈಲು ಹೊರಡಲಿದೆ ಎಂದುಕೊಂಡ ಪ್ರಯಾಣಿಕರು ಕಾದು ಹೈರಾಣಾದರು.

'ಹೆಜ್ಜಾಲ–ಕೆಂಗೇರಿ ನಡುವಣ ಲೆವೆಲ್ ಕ್ರಾಸಿಂಗ್–15ರಲ್ಲಿ ಮಂಗಳವಾರ ರಾತ್ರಿಯಿಂದಲೇ ಪವರ್ ಬ್ಲಾಕ್ ಮತ್ತು ಲೈನ್ ಬ್ಲಾಕ್ ಕೆಲಸ ಆರಂಭಿಸಲಾಗಿತ್ತು. ಸಿಮೆಂಟ್ ಬ್ಲಾಕ್‌ಗಳ ಅಳವಡಿಕೆ ಸೇರಿ ಕೆಲ ಕೆಲಸಗಳು ಬೆಳಿಗ್ಗೆ 7ರ ಹೊತ್ತಿಗೆ ಮುಗಿಯಬೇಕಿತ್ತು. ಆದರೆ, ಅನಿವಾರ್ಯ ಕಾರಣಗಳಿಂದ ಕೆಲಸ ವಿಳಂಬವಾಯಿತು. ಹಾಗಾಗಿ, ಬೆಂಗಳೂರು ಮತ್ತು ಮೈಸೂರಿಗೆ ತೆರಳಬೇಕಿದ್ದ ಏಳೆಂಟು ರೈಲುಗಳ ಸಂಚಾರ ವಿಳಂಬವಾಯಿತು' ಎಂದು ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಕಾಮಗಾರಿ ಅವಧಿಯಲ್ಲಿ ಬೆಂಗಳೂರು ಮತ್ತು ಮೈಸೂರು ಮಾರ್ಗದ ರೈಲುಗಳ ಸಂಚಾರವನ್ನು ಸ್ಥಗಿತಗೊಳಿಸಲಾಗಿತ್ತು. ಆದರೆ, ಕಾಮಗಾರಿ ವಿಳಂಬವಾಗಿದ್ದರಿಂದ ಬೆಳಿಗ್ಗೆ ಸಂಚರಿಸುವ ರೈಲುಗಳಿಗೆ ತೊಂದರೆಯಾಯಿತು. ಕಾಮಗಾರಿ ಮುಗಿಯುವವರೆಗೆ ರೈಲುಗಳು ನಿಲ್ದಾಣದಲ್ಲೇ ಬೀಡು ಬಿಟ್ಟಿದ್ದವು. ಸುಮಾರು 9.30ರ ಸುಮಾರಿಗೆ ಕೆಲಸ ಮುಗಿದ ಬಳಿಕ ರೈಲುಗಳ ಸಂಚಾರಕ್ಕೆ ಅನುವು ಮಾಡಿಕೊಡಲಾಯಿತು' ಎಂದರು.



ರೈಲ್ವೆ ಅಂಡರ್‌ಪಾಸ್ ಕಾಮಗಾರಿಯಿಂದಾಗಿ ಬೆಂಗಳೂರಿಗೆ ತೆರಳಬೇಕಿದ್ದ ರೈಲು ರಾಮನಗರ ರೈಲು ನಿಲ್ದಾಣದಲ್ಲೇ ಎರಡು ತಾಸು ಬೀಡು ಬಿಟ್ಟಿತ್ತು

13ರಿಂದ ‘ಸಂವಿಧಾನ ಓದು–ಭಾಷಣ’ ಶಿಬಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂವಿಧಾನ ಓದು ಅಭಿಯಾನ ಕರ್ನಾಟಕವು ಇದೇ 13 ಹಾಗೂ 14ರಂದು ನಗರದ ಸೇಂಟ್ ಮಾರ್ಕ್ಸ್ ರಸ್ತೆಯಲ್ಲಿರುವ ಆಶೀರ್ವಾದ ಕೇಂದ್ರದಲ್ಲಿ ‘ಸಂವಿಧಾನ ಓದು-ಭಾಷಣ’ ತರಬೇತಿ ಶಿಬಿರ ಹಮ್ಮಿಕೊಂಡಿದೆ.

ಈ ಶಿಬಿರವನ್ನು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗ ಮೋಹನದಾಸ್ ಉದ್ಘಾಟಿಸಲಿದ್ದಾರೆ. ಎರಡು ದಿನಗಳ ಶಿಬಿರದಲ್ಲಿ ತೀರ್ಪುಗಾರರಾಗಿ ರಾಜಪ್ಪ ದಳವಾಯಿ, ಜಿ.ಎನ್. ಮೋಹನ್, ಎಚ್.ಎಲ್ ಪುಷ್ಪಾ, ವಿಶುಕುಮಾರ್, ಶಿವಪ್ಪ ಅರಿವು, ಆರಾಧ್ಯ, ವೆಂಕಟೇಶ್‌ಗೌಡ ಮತ್ತು ಕೆ. ಷರೀಫಾ ಪಾಲ್ಗೊಳ್ಳಲಿದ್ದಾರೆ.

ಆರಂಭದಿಂದಲೂ ‘ಸಂವಿಧಾನ ಓದು’ ಅಭಿಯಾನದಲ್ಲಿ ಪಾಲ್ಗೊಂಡಿದ್ದ ಆಯ್ದ ನೂರು ಜನ ಶಿಬಿರದಲ್ಲಿ ಭಾಗವಹಿಸಲಿದ್ದಾರೆ. ಮುಂದಿನ ದಿನಗಳಲ್ಲಿ ತರಬೇತಿಗೊಂಡ ನೂರು ಜನರು ‘ಸಂವಿಧಾನ ಓದು ಅಭಿಯಾನ’ದ ಉಪನ್ಯಾಸಕರು ಮತ್ತು ಸಂಘಟಕರಾಗಿ ರಾಜ್ಯದಾದ್ಯಂತ ಸಂವಿಧಾನ ಸಾಕ್ಷರತೆಗಾಗಿ ತೊಡಗಿಸಿಕೊಳ್ಳಲಿದ್ದಾರೆ. ‘ಸಂವಿಧಾನ ಓದು ಅಭಿಯಾನ-ಕರ್ನಾಟಕ’ದಿಂದ 10 ಲಕ್ಷ ‘ಸಂವಿಧಾನ ಓದು’ ಪರಿಷ್ಕೃತ ಕೃತಿಯನ್ನು ಜನಸಾಮಾನ್ಯರಿಗೆ ತಲುಪಿಸುವ ಗುರಿಯನ್ನು ಹೊಂದಲಾಗಿದೆ ಎಂದು ಸಂವಿಧಾನ ಓದು ಅಭಿಯಾನ-ಕರ್ನಾಟಕದ ಬಿ. ರಾಜಶೇಖರಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಗಲೂರು ಗ್ರಾ.ಪಂ. ಅಧ್ಯಕ್ಷರ ಪದಚ್ಯುತಿ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಬಾಗಲೂರು ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿದ್ದ ರೀತಿ ಮುನೇಗೌಡ ಅವರ ವಿರುದ್ಧ ಪಂಚಾಯಿತಿ ಸದಸ್ಯರು ಮಂಡಿಸಿದ್ದ ಅವಿಶ್ವಾಸ ನಿರ್ಣಯ ಅಂಗೀಕಾರಗೊಂಡಿದೆ.

ಅಧ್ಯಕ್ಷೆ ಪದಚ್ಯುತಿಯಿಂದ ಆ ಸ್ಥಾನ ತೆರವಾಗಿದೆ. ಉಪಾಧ್ಯಕ್ಷೆ ಪದ್ಮಾವತಿ ಎ. ವೆಂಕಟರಾಜು ಅವರು ಪ್ರಭಾರ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ್ದಾರೆ.

ಸಿಗ್ನಲ್ ಫ್ರೀ ರೋಟರಿಗೆ 'ತಡೆಗೋಡೆ'

ರಾಜರಾಜೇಶ್ವರಿನಗರ ಆರ್ಚ್ ಜಂಕ್ಷನ್‌ನಲ್ಲಿ ಸಂಚಾರ ಮುಕ್ತ ಕಾಮಗಾರಿ ಸ್ಥಗಿತ • ವಾಹನ ದಟ್ಟಣೆ –ಸಂಚಾರಕ್ಕೆ ಅಡ್ಡಿ

• ಆರ್. ಮಂಜುನಾಥ್

ಬೆಂಗಳೂರು: ಮೈಸೂರು ರಸ್ತೆಯಲ್ಲಿ ಮುಕ್ತ ಸಂಚಾರ, ರಾಜರಾಜೇಶ್ವರಿನಗರ, ನಾಯಂಡಹಳ್ಳಿ, ಜ್ಞಾನಭಾರತಿ ಕಡೆಗೆ ಸಿಗ್ನಲ್ ರಹಿತ ಸಂಚಾರ ಒದಗಿಸಲು ಎರಡು ವರ್ಷದ ಹಿಂದೆ ಆರಂಭವಾದ 'ಸಿಗ್ನಲ್ ಫ್ರೀ ರೋಟರಿ' ಕಾಮಗಾರಿ ಸ್ಥಗಿತಗೊಂಡು ವರ್ಷ ಕಳೆದಿದೆ.

ಬಿಬಿಎಂಪಿ ಕಾಮಗಾರಿ ಮುಗಿಸೋದು ಯಾವಾಗ ರೀ?

ಮೇಲ್ಸೇತುವೆಗಾಗಿ ನಿರ್ಮಿಸಲಾಗಿರುವ ನಾಲ್ಕೈದು ಪಿಲ್ಲರ್‌ಗಳು ತುಕ್ಕು ಹಿಡಿಯುತ್ತಿದ್ದು, ಕಂಬಿಗಳೇ ಹೆಚ್ಚು ಉಳಿದುಕೊಂಡಿರುವ ಒಂದು ಪಿಲ್ಲರ್‌ಗೆ ಹೊಂದಿಕೊಂಡಂತೆ ಭೂಮಾಲೀಕರು ಇತ್ತೀಚೆಗೆ ತಡೆಗೋಡೆಯನ್ನೂ ಕಟ್ಟಿದ್ದಾರೆ. ಗೇಟ್ ಅಳವಡಿಸಿ, ವಾಹನಗಳು ಓಡಾಡಲು ಮೈಸೂರು ರಸ್ತೆಯ ಚರಂಡಿ ಮೇಲೆ ಸಿಮೆಂಟ್ ಹಾಕಿದ್ದಾರೆ. ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳದಿರುವುದರಿಂದ ಹೀಗಾಗಿದ್ದು, ಬಿಬಿಎಂಪಿ ಅಥವಾ ಗುತ್ತಿಗೆದಾರರು ಯಾವುದೇ ಕ್ರಮ ಕೈಗೊಂಡಿಲ್ಲ.

ನಾಯಂಡಹಳ್ಳಿಯಿಂದ ಕೆಂಗೇರಿ ಹಾಗೂ ರಾಜರಾಜೇಶ್ವರಿನಗರದ ಕಡೆಗೆ, ರಾಜರಾಜೇಶ್ವರಿನಗರದಿಂದ ನಾಯಂಡಹಳ್ಳಿ ಹಾಗೂ ಜ್ಞಾನಭಾರತಿ ಕಡೆಗೆ ಸಿಗ್ನಲ್ ರಹಿತ ಮೇಲ್ಸೇತುವೆಯನ್ನು ನಿರ್ಮಿಸಲು 2021ರಲ್ಲಿ ಯೋಜನೆ ರೂಪಿಸಿ, 2022ರಲ್ಲಿ ಕಾಮಗಾರಿಯನ್ನೂ ಆರಂಭಿಸಲಾಯಿತು. ಆರಂಭದಲ್ಲಿ ಅತಿ ಕ್ಷಿಪ್ರವಾಗಿ ನಡೆದ ಕಾಮಗಾರಿ, ವಿಧಾನಸಭೆ ಚುನಾವಣೆಯಾದ ಮೇಲೆ ನಿಂತುಹೋಗಿದೆ.

ಮೇಲ್ಸೇತುವೆ ಕಾಮಗಾರಿ ನಡೆದಿರುವ ಸ್ಥಳ ಇದೀಗ ಪಾಳುಬಿದ್ದಂತಾಗಿದ್ದು, ಮಣ್ಣು ಅಗೆಯುವ ಯಂತ್ರವೊಂದು ಅಲ್ಲೇ ನಿಂತು ತುಕ್ಕುಹಿಡಿಯುತ್ತಿದೆ. ಕಾಮಗಾರಿ ನಡೆದ ಸ್ಥಳದಲ್ಲಿ ಗಾಳಿ–ಮಳೆಗೆ ಮರದ ಕೊಂಬೆಗಳು ಬಿದ್ದಿವೆ.

'ಮೈಸೂರು ರಸ್ತೆಗೆ ಹೊಂದಿಕೊಂಡಂತೆ ಭೂಸ್ವಾಧೀನವಾಗಬೇಕಿದೆ. ಆದರೆ, ವೃಷಭಾವತಿ ಕಣಿವೆ ಮೇಲೆ ನಿರ್ಮಾಣವಾಗಬೇಕಿರುವ ಮೇಲ್ಸೇತುವೆಯ ಕಾಮಗಾರಿಯೂ ನಡೆಯದಿರುವುದು ಗುತ್ತಿಗೆದಾರರ ನಿರ್ಲಕ್ಷ್ಯಕ್ಕೆ ಕಾರಣ' ಎಂಬುದು ಬಿಬಿಎಂಪಿ ಅಧಿಕಾರಿಗಳು ಹಾಗೂ ಸ್ಥಳೀಯ ನಿವಾಸಿಗಳ ದೂರು.

'ವಿಧಾನಸಭೆ ಚುನಾವಣೆಯ ನಂತರ ರಾಜಕೀಯ ಜಂಜಾಟದಿಂದ ಈ ಮೇಲ್ಸೇತುವೆ ಕಾಮಗಾರಿಗೆ ಹಿನ್ನಡೆಯಾಗಿದೆ. ಒಂದು ವರ್ಷದಿಂದ ಕಾಮಗಾರಿ ಸ್ಥಗಿತಗೊಂಡಿದ್ದರೂ ರಾಜಕೀಯ ಇಚ್ಛಾಶಕ್ತಿ ಇಲ್ಲದ್ದರಿಂದ ಕೇಳುವವರೇ ಇಲ್ಲದಂತಾಗಿದೆ' ಎಂದು ಸ್ಥಳೀಯರಾದ ಪ್ರಸಾದ್, ಗೋಪಾಲ್, ರಾಮಸಿಂಗ್ ದೂರಿದರು.




ರಾಜರಾಜೇಶ್ವರಿನಗರ ಆರ್ಚ್ ಬಳಿ ಮೈಸೂರು ರಸ್ತೆಯ ಬದಿ ನಿರ್ಮಿಸುತ್ತಿದ್ದ ಪಿಲ್ಲರ್ ತುಕ್ಕು ಹಿಡಿದಿದ್ದು, ಅದಕ್ಕೆ ಹೊಂದಿಕೊಂಡಂತೆ ಭೂಮಾಲೀಕರು ಗೋಡೆ ಕಟ್ಟಿದ್ದಾರೆ(ಎಡಚಿತ್ರ) ಮೇಲ್ಸೇತುವೆ ಕಾಮಗಾರಿಯೂ ಸ್ಥಗಿತಗೊಂಡಿದ್ದು, ವರ್ಷದಿಂದ ಯಂತ್ರವೂ ತುಕ್ಕುಹಿಡಿಯುತ್ತಿದೆ(ಬಲಚಿತ್ರ) –ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ.

'ಗುತ್ತಿಗೆದಾರರಿಗೆ ₹10 ಲಕ್ಷ ದಂಡ'

'ಗುತ್ತಿಗೆದಾರರಿಗೆ ಈವರೆಗಿನ ಕಾಮಗಾರಿಯ ಹಣ ಬಿಡುಗಡೆ ಮಾಡಿದ್ದೇವೆ. ಆದರೆ, ಭೂಸ್ವಾಧೀನದ ಕಾರಣ ಮುಂದಿಟ್ಟು ಎಂದು ಸ್ಥಗಿತಗೊಳಿಸಿದ್ದಾರೆ. ಕೆಲಸ ಕೂಡಲೇ ಪ್ರಾರಂಭಿಸಲು ಸೂಚಿಸಲಾಗಿದೆ. ಈಗಾಗಿರುವ ವಿಳಂಬಕ್ಕೆ ಗುತ್ತಿಗೆದಾರರಿಗೆ ₹10 ಲಕ್ಷ ದಂಡವನ್ನೂ ಹಾಕಲಾಗಿದೆ' ಎಂದು ಬಿಬಿಎಂಪಿ ರಸ್ತೆ ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್ ತಿಳಿಸಿದರು.

₹80 ಕೋಟಿ
'ರಾಜರಾಜೇಶ್ವರಿನಗರ 'ಸಿಗ್ನಲ್ ಫ್ರೀ ರೋಟರಿ'ಗೆ ಒಟ್ಟು ವೆಚ್ಚ

1 ಜುಲೈ 2022
ಕಾಮಗಾರಿಗೆ ಕಾರ್ಯಾದೇಶ ನೀಡಿದ ದಿನ

24 ತಿಂಗಳು
ಕಾಮಗಾರಿ ಮುಗಿಸಲು ನೀಡಲಾಗಿದ್ದ ಗಡುವು

₹21.22 ಕೋಟಿ
ಗುತ್ತಿಗೆದಾರರಿಗೆ ಹಣ ಬಿಡುಗಡೆ

ಗುತ್ತಿಗೆದಾರರು: ಕೆಬಿಆರ್ ಇನ್‌ಫ್ರಾಟೆಕ್, ಸಹಕಾರನಗರ

ಎಲ್ಲ ಸಮಯವೂ ದಟ್ಟಣೆ!

'ರಾಜರಾಜೇಶ್ವರಿನಗರ ಆರ್ಚ್ ಬಳಿ ಪ್ರತಿನಿತ್ಯವೂ, ಎಲ್ಲ ಸಮಯದಲ್ಲೂ ವಾಹನ ದಟ್ಟಣೆಯೇ ಇರುತ್ತದೆ. ಮೇಲ್ಸೇತುವೆ ಕಾಮಗಾರಿ ಆರಂಭವಾದಾಗ ಶೀಘ್ರ ಮುಗಿಯುವ ಲಕ್ಷಣಗಳು ಕಂಡುಬಂದವು. ಆರ್ಚ್ ಒಳಗೆ ಮೇಲ್ಸೇತುವೆ ಹೋಗುವ ಬಗ್ಗೆ ಅಸಮಾಧಾನವಿದ್ದರೂ, ವಾಹನ ಸಂಚಾರ ಸುಗಮವಾಗುತ್ತದೆ ಎಂಬ ಸಮಾಧಾನವಿತ್ತು. ಮೇಲ್ಸೇತುವೆ ಕಾಮಗಾರಿ ನಿಂತು ಒಂದು ವರ್ಷವಾಗಿದೆ. ದಟ್ಟಣೆ ಅಧಿಕವಾಗಿದೆ. ಅಧಿಕಾರಿಗಳು ಶೀಘ್ರ ಕಾಮಗಾರಿ ಮುಗಿಸಲು ಕ್ರಮ ಕೈಗೊಳ್ಳಬೇಕು' ಎಂದು ರಾಜರಾಜೇಶ್ವರಿನಗರದ ಟಿ.ಇ. ಶ್ರೀನಿವಾಸ್ ಒತ್ತಾಯಿಸುತ್ತಾರೆ.

ದೂರದೃಷ್ಟಿ ಇಲ್ಲದ ಯೋಜನೆ

'ರಾಜರಾಜೇಶ್ವರಿನಗರದ ಆರ್ಚ್ ಜಂಕ್ಷನ್‌ನಲ್ಲಿ ಮುಕ್ತ ಸಂಚಾರದ ಉದ್ದೇಶ ಹೊಂದಿರುವ ಈ ಮೇಲ್ಸೇತುವೆ ಯೋಜನೆಗೆ ದೂರದೃಷ್ಟಿ ಇಲ್ಲ. ಈ ಯೋಜನೆಯಿಂದ ಜ್ಞಾನಭಾರತಿ ಜಂಕ್ಷನ್‌ನಲ್ಲಿ ವಾಹನ ದಟ್ಟಣೆ ಈಗಿರುವುದಕ್ಕಿಂತ ಮೂರುಪಟ್ಟು ಹೆಚ್ಚಾಗುತ್ತದೆ. ಇನ್ನೂ ಕಾಮಗಾರಿ ಆರಂಭವಾಗಿಲ್ಲದಿರುವುದರಿಂದ ಇದನ್ನು ಮಾರ್ಪಡಿಸಬೇಕು' ಎಂದು ಪಟ್ಟಣಗೆರೆಯ ಜಗದೀಶ್ ಅಭಿಪ್ರಾಯಪಟ್ಟರು.

ಸುದ್ದಿ 2 ನಿಮಿಷ

'ಮಂಡಳಿ, ನಿಗಮಗಳು ಸುಲಿಗೆ ಕೇಂದ್ರಗಳಾಗದಿರಲಿ'

ರಾಮನಗರ: 'ಸರ್ಕಾರದ ನಿಗಮ– ಮಂಡಳಿಗಳು ಆಯಾ ಸಮುದಾಯಗಳ ಸುಧಾರಣಾ ಕೇಂದ್ರಗಳಾಗಬೇಕೆ ಹೊರತು, ಸುಲಿಗೆ ಕೇಂದ್ರಗಳಾಗಬಾರದು. ಸಮುದಾಯಗಳನ್ನು ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಾಗೂ ಸಾಮಾಜಿಕವಾಗಿ ಮೇಲಕ್ಕೆತ್ತುವ ಉದ್ದೇಶದಿಂದ ಈ ನಿಗಮಗಳು ಸ್ಥಾಪನೆಯಾಗಿವೆ ಎಂಬುದನ್ನು ಮರೆಯಬಾರದು' ಎಂದು ಭೋವಿ ಗುರುಪೀಠದ ಪೀಠಾಧ್ಯಕ್ಷ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಅಭಿಪ್ರಾಯಪಟ್ಟರು.



'ಸಮುದಾಯಗಳ ಅನುಕೂಲಕ್ಕಾಗಿ ಸ್ಥಾಪನೆಯಾಗಿರುವ ನಿಗಮಗಳು ಹಾಗೂ ಮಂಡಳಿಗಳಲ್ಲಿ ಹಣವು ದುರುಪಯೋಗವಾಗದಂತೆ ರಾಜ್ಯ ಸರ್ಕಾರ ಕಠಿಣ ಕಾನೂನು ಜಾರಿಗೆ ತರಬೇಕು. ಇಲ್ಲದಿದ್ದರೆ, ವಾಲ್ಮೀಕಿ ನಿಗಮದಲ್ಲಾದಂತೆ ಹಣವು ದುರುಪಯೋಗವಾಗುತ್ತದೆ. ಇದರಿಂದ ಸಮುದಾಯಕ್ಕೆ ಅನ್ಯಾಯ ಮಾಡಿದಂತಾಗುತ್ತದೆ' ಎಂದು ತಿಳಿಸಿದರು.

ವೇತನ ಪರಿಷ್ಕರಣೆಗೆ ಒತ್ತಾಯ ನಾಳೆ ನೌಕರರ ಪ್ರತಿಭಟನೆ

ಬೆಂಗಳೂರು: ವೇತನ ಪರಿಷ್ಕರಣೆಗೆ ರಚಿಸಲಾಗಿದ್ದ 7ನೇ ವೇತನ ಆಯೋಗದ ಶಿಫಾರಸುಗಳ ಜಾರಿಗೆ ಆಗ್ರಹಿಸಿ ರಾಜ್ಯ ಸರ್ಕಾರಿ ನೌಕರರು ಜುಲೈ 12ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಮನವಿ ಸಲ್ಲಿಸಿ, ಅಂದು ಮಧ್ಯಾಹ್ನ 1.30ಕ್ಕೆ ವಿಧಾನಸೌಧದ ಗಾಂಧಿ ಪ್ರತಿಮೆ ಮುಂದೆ ಪ್ರತಿಭಟನೆ ನಡೆಸಲಿದ್ದಾರೆ.

ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಣೆಗೆ ರಚಿಸಿದ್ದ ನಿವೃತ್ತ ಮುಖ್ಯಕಾರ್ಯದರ್ಶಿ ಕೆ. ಸುಧಾಕರ್‌ರಾವ್ ನೇತೃತ್ವದ ಆಯೋಗ 244 ಪುಟಗಳ ವರದಿಯನ್ನು ಇದೇ ಮಾರ್ಚ್ 16ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಸಿತ್ತು. ಶಿಫಾರಸು ಮಾಡಿದ ದಿನದಿಂದಲೇ ಲೋಕಸಭಾ ಚುನಾವಣೆಯ ನೀತಿ ಸಂಹಿತೆ ಆರಂಭವಾದ ಕಾರಣ ಶಿಫಾರಸು ಜಾರಿ ಸಾಧ್ಯವಾಗಿರಲಿಲ್ಲ. ಈಗ ನೀತಿ ಸಂಹಿತೆ ಮುಗಿದು ತಿಂಗಳು ಕಳೆದರೂ ಕ್ರಮ ಕೈಗೊಂಡಿಲ್ಲ. ಶಿಫಾರಸುಗಳ ಜಾರಿಗೆ ಸರ್ಕಾರ ಮೀನಮೇಷ ಎಣಿಸುತ್ತಾ ಬಂದಿದೆ. ಈಗಲಾದರೂ ಶಿಫಾರಸುಗಳನ್ನು ಯಥಾವತ್ ಜಾರಿಗೊಳಿಸಬೇಕು ಎಂದು ಆಗ್ರಹಿಸಿ ಸರ್ಕಾರಿ ನೌಕರರ ಸಂಘ, ಸಚಿವಾಲಯ ನೌಕರರ ಸಂಘ, ವಿಧಾನಸಭೆ ಹಾಗೂ ವಿಧಾನ ಪರಿಷತ್ ಸಚಿವಾಲಯ ನೌಕರರ ಸಂಘಟನೆಗಳು ಪ್ರತಿಭಟನೆ ಹಮ್ಮಿಕೊಂಡಿವೆ.

ಹೊಸ ಪಿಂಚಣಿ ಯೋಜನೆ ರದ್ದು ಮಾಡಬೇಕು. ಹಳೇ ಪಿಂಚಣಿ ಯೋಜನೆಯನ್ನು ಮರು ಜಾರಿಗೊಳಿಸಬೇಕು. ನೌಕರರಿಗೆ ನಗದು ರಹಿತ ಚಿಕಿತ್ಸಾ ವ್ಯವಸ್ಥೆಗೆ ಆರೋಗ್ಯ ಸಂಜೀವಿನಿ ಯೋಜನೆಯನ್ನು ಜಾರಿಗೊಳಿಸಬೇಕು ಎನ್ನುವುದು ನೌಕರರ ಇತರೆ ಬೇಡಿಕೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

PUBLIC NOTICE

PUBLIC NOTICE

This is to inform the General public that our client intends to purchase vacant site bearing No. 589, khatha No. 645, property No. 640A, Pattanagere village, in the layout formed by M/s. Remco (BHEL) House Building Co-operative Society Ltd, BBMP No. 589, old khatha No. 997/716/644/640/A, BHEL Layout, Pattanagere (BDA), Ward No. 198, measuring east to west – 40 feet and north to south – 60 feet and bounded on East: Site No. 590, West: Site No. 588, North: Road, South: Site No. 616, from its owner Vasantha Jagadeesh. Any person/s asserting any kind of right, title, interest or claims of any sort towards the sale transaction may file their objections or claims with documentary proof thereof with the undersigned within (7) SEVEN days from the date of this publication, failing which our client will proceed to complete the transaction without being liable for any claims put forth thereof.

Date: 10.07.2024
Bengaluru

PRAROOP LAW
Sd/- K.R PRADEEP, ADVOCATE
31/9, NCP Tower, 1st floor, 1st main, Mount Joy Extension, Hanumanthnagar, Bengaluru -19.
E-mail: praroopIaw@gmail.com
Phone: 9886012455.

Change of Name

CHANGE OF NAME

I, **PRASAD S N**, aged 60 years and son of DR S R N MURTHY residing at #307 C/10, 18th Main, M C Layout, Vijayanagar, Bangalore-560040, have changed my name to **PRASAD S NARASIMHA** and my father's name as **S R N MURTHY** vide Affidavit dated 09-07-2024 sworn before Notary Onkarappa N R, Bangalore

CHANGE OF NAME

I, **JAYANT RAJENDRA NAYAK**, R/at Village Alliabada, PO-Karapada, PS-Chatrapur, Via/District Ganjam - 761026, Odisha, my daughter's name is recorded in some documents as **SAMAIRA NAYAK** and **HIMANSHI NAYAK**, declare that all the above names pertains to my daughter only, henceforth she shall be known as **HIMANSHI NAYAK** vide affidavit dated 29.04.2024 before Executive Magistrate, Chatrapur.

I, MAHANTESH. S. CHITTAWADAGI S/o Srishailappa. P. Chittawadagi R/a#61/2 Honnagangamma Gudimuddanna Road Kamakshipalya Bangalore- 560079 have changed my minor Daughter's Name from NAKSHATRA to NAKSHATRA MAHANTESH CHITTAWADAGI vide affidavit dated:23.5.2024 before Notary R.Basavaraja, Bengaluru.

PERSONAL

Lost

ಕಳೆದಿದೆ

[illegible]

7760699002 | 9141642020

ದಕ್ಷಿಣ ಒಳನಾಡಿನಲ್ಲಿ ಮುಂದುವರಿಕೆ

ಮಳೆ ಪ್ರಮಾಣ ಇಳಿಮುಖ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದು ವಾರದಿಂದ ಕರಾವಳಿ, ಮಳೆನಾಡಿನಲ್ಲಿ ಭಾರಿ ಪ್ರಮಾಣದಲ್ಲಿ ಸುರಿಯುತ್ತಿದ್ದ ಮಳೆ ಬುಧವಾರ ಇಳಿಮುಖವಾಗಿದೆ. ಮುಂದಿನ ಎರಡು ದಿನಗಳು ಸಾಧಾರಣ ಮಳೆ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರ್ನಾಟಕದ ದಕ್ಷಿಣ ಒಳನಾಡಿನಲ್ಲಿ ಮಳೆ ಮುಂದುವರಿಯಲಿದೆ. ಉತ್ತರ ಒಳನಾಡಿನ ಜಿಲ್ಲೆಗಳಲ್ಲಿಯೂ 30ರಿಂದ 40 ಕಿಲೋಮೀಟರ್ ವೇಗದಲ್ಲಿ ಗಾಳಿ ಬೀಸಲಿದ್ದು, ಗುಡುಗು ಸಹಿತ ಮಳೆ ಸುರಿಯಲಿದೆ. ಉತ್ತರ ಒಳನಾಡಿನ ಜಿಲ್ಲೆಗಳಾದ ಬಾಗಲಕೋಟೆ, ಗದಗ, ಹಾವೇರಿ, ಕೊಪ್ಪಳ, ವಿಜಯಪುರ, ಬೀದರ್, ಕಲಬುರಗಿ, ಯಾದಗಿರಿಯ ಜಿಲ್ಲೆಗಳ ಹಲವೆಡೆ ಮಳೆಯಾಗಲಿದೆ.

ಮಳೆ ಪ್ರಮಾಣ: ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿನಂಗಡಿಯಲ್ಲಿ 5 ಸೆಂ.ಮೀ. ಮಳೆಯಾಗಿರುವುದೇ ರಾಜ್ಯದಲ್ಲಿ 24 ಗಂಟೆಗಳಲ್ಲಿ ದಾಖಲಾದ ಅತಿಹೆಚ್ಚಿನ ಮಳೆ ಪ್ರಮಾಣವಾಗಿದೆ. ಮಂಗಳೂರು ವಿಮಾನ ನಿಲ್ದಾಣ, ಮಂಗಳೂರು, ಮಾಣಿ, ಪಣಂಬೂರು, ಧರ್ಮಸ್ಥಳ, ಬೆಳ್ತಂಗಡಿ, ಉಡುಪಿ ಜಿಲ್ಲೆಯ ಕೋಟ, ಉಡುಪಿ, ಕಾರ್ಕಳ, ಚಿಕ್ಕಮಗಳೂರು ಜಿಲ್ಲೆಯ ಕೊಟ್ಟಿಗೆಹಾರ, ಕಳಸದಲ್ಲಿ 3 ಸೆಂ.ಮೀ. ಮಳೆ ದಾಖಲಾಗಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.



ನಗರದ ಕೆ.ಆರ್‌. ರಸ್ತೆಯಲ್ಲಿ ಬಂದ ಮಳೆಯಲ್ಲಿ ಜನರು ಸಾಗುತ್ತಿರುವ ದೃಶ್ಯ –ಪ್ರಜಾವಾಣಿ ಚಿತ್ರ

ನಗರದಲ್ಲಿ ಕೆಲವೆಡೆ ಉತ್ತಮ ಮಳೆ: ನಗರದ ಕೆಲವು ಪ್ರದೇಶಗಳಲ್ಲಿ ಬುಧವಾರ ಉತ್ತಮ ಮಳೆಯಾಗಿದೆ.

ವಿದ್ಯಾಪೀಠ, ಬನಶಂಕರಿಯಲ್ಲಿ ತಲಾ 2.7 ಸೆಂ.ಮೀ, ರಾಜರಾಜೇಶ್ವರಿ ನಗರ, ಹೆಮ್ಮಿಗೆಪುರ, ಎಚ್. ಗೊಲ್ಲಹಳ್ಳಿಯಲ್ಲಿ ತಲಾ 2.5 ಸೆಂ.ಮೀ, ಕೆಂಗೇರಿ, ಉತ್ತರಹಳ್ಳಿಯಲ್ಲಿ ತಲಾ 1.75 ಸೆಂ.ಮೀ ಮಳೆಯಾಗಿದೆ.

ನಾಯಂಡಹಳ್ಳಿ, ಬಿಟಿಎಂ ಲೇಔಟ್, ಗೊಟ್ಟಿಗೆರೆ, ಬೊಮ್ಮನಹಳ್ಳಿ, ಬಿಳೇಕಹಳ್ಳಿ, ಅಂಜನಾಪುರ, ಎಚ್‌ಎಎಲ್ ವಿಮಾನ ನಿಲ್ದಾಣ, ಹಗದೂರು, ವನ್ನಾರ್ ಪೇಟೆ, ವಿಶ್ವೇಶ್ವರಪುರ, ಪಟ್ಟಾಭಿರಾಮನಗರ ಕೋರಮಂಗಲ ಸುತ್ತಮುತ್ತಲ ಪ್ರದೇಶಗಳಲ್ಲಿ ಸಾಧಾರಣ ಮಳೆಯಾಗಿದೆ.

ವಿಠ್ಠಲ ಮಲ್ಯ ರಸ್ತೆಯ ಬಳಿ ಮರ ಬಿದ್ದ ಕಾರಣ, ಸೋಮವಾರ ಮಧ್ಯಾಹ್ನ ಹಡ್ಸನ್ ವೃತ್ತದ ಸುತ್ತಮುತ್ತ ವಾಹನ ಸಂಚಾರ ನಿಧಾನಗತಿಯಲ್ಲಿತ್ತು.

ನೀಟ್–ಯುಜಿ: 3ನೇ ವಾರದಿಂದ ಕೌನ್ಸೆಲಿಂಗ್

ನವದೆಹಲಿ(ಪಿಟಿಐ): ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಸಂಬಂಧಿಸಿದಂತೆ, 2024–25ನೇ ಶೈಕ್ಷಣಿಕ ಸಾಲಿನ ಕೌನ್ಸೆಲಿಂಗ್ ಪ್ರಕ್ರಿಯೆಯನ್ನು ಜುಲೈ ಮೂರನೇ ವಾರದಿಂದ ನಾಲ್ಕು ಸುತ್ತುಗಳಲ್ಲಿ ನಡೆಸಲಾಗುವುದು ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಬುಧವಾರ ತಿಳಿಸಿದೆ.

ಕೌನ್ಸೆಲಿಂಗ್ ಪ್ರಕ್ರಿಯೆ ನಡೆಯುತ್ತಿರುವ ವೇಳೆ ಅಥವಾ ನಂತರದಲ್ಲಿ, ಯಾವುದೇ ಅಭ್ಯರ್ಥಿಯು ಪರೀಕ್ಷಾ ಅಕ್ರಮದಿಂದ ಲಾಭ ಪಡೆದಿರುವುದು ಪತ್ತೆಯಾದಲ್ಲಿ, ಅಂತಹ ಅಭ್ಯರ್ಥಿಯನ್ನು ಇಡೀ ಪ್ರಕ್ರಿಯೆಯಿಂದ ಕೈಬಿಡಲಾಗುವುದು ಎಂದೂ ಕೇಂದ್ರ ಸರ್ಕಾರ ತಿಳಿಸಿದೆ.

'ನೀಟ್–ಯುಜಿ'ಯಲ್ಲಿ ವ್ಯಾಪಕ ಅಕ್ರಮ ಅಥವಾ ಒಂದು ನಿರ್ದಿಷ್ಟ ಸಂಖ್ಯೆಯ ಅಭ್ಯರ್ಥಿಗಳಿಗೆ ಪ್ರಯೋಜನವಾಗಿರುವ ಯಾವುದೇ ಅಂಶಗಳು ಪರೀಕ್ಷಾ ಫಲಿತಾಂಶದ ದತ್ತಾಂಶಗಳ ವಿಶ್ಲೇಷಣೆಯಲ್ಲಿ ಕಂಡುಬಂದಿಲ್ಲ ಎಂದು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಕೇಂದ್ರ ತಿಳಿಸಿದೆ.

'ನೀಟ್–ಯುಜಿ 2024'ರ ಫಲಿತಾಂಶದ ವಿಶ್ಲೇಷಣೆಯನ್ನು ಐಐಟಿ–ಮದ್ರಾಸ್ ತಜ್ಞರು ನಡೆಸಿದ್ದಾರೆ ಎಂದೂ ಹೇಳಿದೆ.

ಜೋಯಾಲುಕ್ಕಾಸ್: ಶೀಘ್ರ ಶೇ 50 ರಿಯಾಯಿತಿ ಮುಕ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಭರಣಗಳ ಮಜೂರಿ ಶುಲ್ಕದ ಮೇಲೆ ಪ್ರಕಟಿಸಿರುವ ಶೇ 50ರಷ್ಟು ರಿಯಾಯಿತಿ ಸೌಲಭ್ಯವು ಜುಲೈ 14ರಂದು ಮುಕ್ತಾಯವಾಗ ಲಿದೆ ಎಂದು ದೇಶದ ಪ್ರಸಿದ್ಧ ಆಭರಣ ಬ್ರ್ಯಾಂಡ್ ಜೋಯಾಲುಕ್ಕಾಸ್‌ನ ಸಿಎಂಡಿ ಜೋಯ್ ಆಲುಕ್ಕಾಸ್ ತಿಳಿಸಿದ್ದಾರೆ.

ಈ ರಿಯಾಯಿತಿಗೆ ಗ್ರಾಹಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಈ ಕೊಡುಗೆಯ ಜೊತೆಗಿನ ಆಭರಣಗಳ ಮಾರಾಟದ ಮುಕ್ತಾಯಕ್ಕೆ ಕೆಲವೇ ದಿನಗಳು ಬಾಕಿ ಇದೆ. ಆಭರಣ ಪ್ರಿಯರು ಸಮೀಪದ ಜೋಯಾಲು ಕ್ಕಾಸ್ ಮಳಿಗೆಗೆ ಭೇಟಿ ನೀಡಿ ಇದರ ಪ್ರಯೋಜನ ಪಡೆಯಬಹುದಾಗಿದೆ ಎಂದು ತಿಳಿಸಿದ್ದಾರೆ.

ಜೂನ್ ಆರಂಭದಲ್ಲಿ ಜೋಯಾಲುಕ್ಕಾಸ್ ಈ ಕೊಡುಗೆ ಯನ್ನು ಪರಿಚಯಿಸಿತ್ತು. ಚಿನ್ನ, ವಜ್ರ, ಅಮೂಲ್ಯ ಹರಳು ಮತ್ತು ಬೆಳ್ಳಿ ಆಭರಣಗಳ ಮೇಲೆ ಈ ವಿಶೇಷ ಕೊಡುಗೆ ಪ್ರಕಟಿಸಲಾಗಿದೆ.

ಜಲಮಂಡಳಿ ಅಧ್ಯಕ್ಷರ ಫೋನ್-ಇನ್ ನಾಳೆ

ಬೆಂಗಳೂರು: ಜಲಮಂಡಳಿಯ ಅಧ್ಯಕ್ಷ ವಿ.ರಾಮ್‌ಪ್ರಸಾತ್ ಮನೋಹರ್ ಅವರು ಜುಲೈ 12ರಂದು ಬೆಳಿಗ್ಗೆ 9.30ರಿಂದ 10.30ರ ವರೆಗೆ ನೇರ ಫೋನ್-ಇನ್ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್. ಸಂಖ್ಯೆ ತಿಳಿಸಿ ದೂರು ನೀಡಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ. ದೂರವಾಣಿ ಸಂಖ್ಯೆ 080-22945119 ಮತ್ತು 080-22229639.

'ಇ.ಡಿ ದಾಳಿ ಅವಶ್ಯಕತೆ ಇರಲಿಲ್ಲ'

ಪ್ರಜಾವಾಣಿ ವಾರ್ತೆ

ತುಮಕೂರು: ವಾಲ್ಮೀಕಿ ಅಭಿವೃದ್ಧಿ ನಿಗಮದ ಬಹುಕೋಟಿ ಹಗರಣ ಸಂಬಂಧ ಮಾಜಿ ಸಚಿವ ಬಿ.ನಾಗೇಂದ್ರ ಮನೆ ಹಾಗೂ ಇತರೆಡೆಗಳಲ್ಲಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳು (ಇ.ಡಿ) ದಾಳಿ ನಡೆಸುವ ಅವಶ್ಯಕತೆ ಇರಲಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ತಿಪಟೂರು ತಾಲ್ಲೂಕು ನೊಣವಿನಕೆರೆ ಕಾಡಸಿದ್ಧೇಶ್ವರ ಮಠಕ್ಕೆ ಬುಧವಾರ ಭೇಟಿ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಈಗಾಗಲೇ ಎಸ್‌ಐಟಿ ರಚಿಸಿ, ತನಿಖೆ ನಡೆಯುತ್ತಿದೆ. ಇಂತಹ ಸಮಯದಲ್ಲಿ ಇ.ಡಿ ಅಧಿಕಾರಿಗಳು ದಾಳಿ ಮಾಡುವ ಅಗತ್ಯತೆ ಇರಲಿಲ್ಲ ಎಂದರು.

ಬಿಬಿಎಂಪಿ ಚುನಾವಣೆಗೆ ಕಾಂಗ್ರೆಸ್ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ಬಿಬಿಎಂಪಿ ಚುನಾವಣೆಗೆ ಅಗತ್ಯವಾದ ಪೂರ್ವಸಿದ್ಧತೆಗಳ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸಲು 'ಬಿಬಿಎಂಪಿ ಚುನಾವಣೆ ಪ್ರಾಥಮಿಕ ವರದಿ ಸಮಿತಿ'ಯನ್ನು ಕಾಂಗ್ರೆಸ್ ರಚಿಸಿದೆ.

'ಸಮಿತಿಯು ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಸಚಿವರು, ಶಾಸಕರು, ಮಾಜಿ ಶಾಸಕರು, ಡಿಸಿಸಿ ಅಧ್ಯಕ್ಷರು, 2023ರ ವಿಧಾನಸಭೆ ಮತ್ತು 2024ರ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಅಭ್ಯರ್ಥಿಗಳು ಇತರ ನಾಯಕರ ಜೊತೆ ಚರ್ಚಿಸಿ ಒಂದು ತಿಂಗಳ ಒಳಗೆ ವರದಿ ಸಲ್ಲಿಸಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

ಸಮಿತಿಯಲ್ಲಿ ಇರುವವರು: ಬೆಂಗಳೂರು ಪೂರ್ವ ಡಿಸಿಸಿ ಸಮಿತಿ– ಮಾಜಿ ಮೇಯರ್ ಜೆ. ಹುಚ್ಚಪ್ಪ, ಮಾಜಿ ಉಪಮೇಯರ್‌ಗಳಾದ ಲಕ್ಷ್ಮೀನಾರಾಯಣ, ಮಂಜುಳಾ ನಾಯ್ಡು, ಆಡಳಿತ ಪಕ್ಷದ ಮಾಜಿ ನಾಯಕ ಎಚ್. ಜಯರಾಮ್. ಬೆಂಗಳೂರು ಪಶ್ಚಿಮ ಡಿಸಿಸಿ– ಮಾಜಿ ಮೇಯರ್‌ಗಳಾದ ಸಂಪತ್ ರಾಜ್, ಮಮತಾಜ್ ಬೇಗಂ, ಮಾಜಿ ಆಡಳಿತ ಪಕ್ಷದ ಮಾಜಿ ನಾಯಕರಾದ ಆರ್.ಎಸ್. ಸತ್ಯನಾರಾಯಣ, ಎಂ. ಶಿವರಾಜ್. ಬೆಂಗಳೂರು ಉತ್ತರ ಡಿಸಿಸಿ– ಮಾಜಿ ಮೇಯರ್‌ಗಳಾದ ಪಿ.ಆರ್. ರಮೇಶ್, ಶಾಂತಕುಮಾರಿ, ಮಾಜಿ ಉಪಮೇಯರ್ ಎಲ್. ಶ್ರೀನಿವಾಸ್, ಮಾಜಿ ಆಡಳಿತ ಪಕ್ಷದ ನಾಯಕ ಎಂ. ಉದಯಶಂಕರ್.

ಬೆಂಗಳೂರು ದಕ್ಷಿಣ ಡಿಸಿಸಿ– ಮಾಜಿ ಮೇಯರ್‌ಗಳಾದ ಎಂ. ರಾಮಚಂದ್ರಪ್ಪ, ಜಿ. ಪದ್ಮಾವತಿ, ಆಡಳಿತ ಪಕ್ಷದ ಮಾಜಿ ನಾಯಕರಾದ ಬಿ.ಟಿ. ಶ್ರೀನಿವಾಸ್, ಅಬ್ದುಲ್ ವಾಜಿದ್, ಮಾಜಿ ಉಪ ಮೇಯರ್ ಇಂದಿರಾ. ಬೆಂಗಳೂರು ಸೆಂಟ್ರಲ್ ಡಿಸಿಸಿ – ಮಾಜಿ ಮೇಯರ್‌ಗಳಾದ ಮಂಜುನಾಥ ರೆಡ್ಡಿ, ವೆಂಕಟೇಶ್ ಮೂರ್ತಿ, ರಿಜ್ವಾನ್ ನವಾಬ್, ನಾಗರಾಜ್.

ದಲಿತ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರ ಪ್ರತಿಭಟನೆ

ಹೊರಮಾವು: ಮೂಲಸೌಕರ್ಯಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕುಡಿಯುವ ನೀರು, ರಸ್ತೆ, ಚರಂಡಿ ಮೂಲಸೌಕರ್ಯ ಒದಗಿಸುವಂತೆ ಆಗ್ರಹಿಸಿ ದಲಿತ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಹೊರಮಾವು ಅಗರ ಸರ್ಕಾರಿ ನ್ಯಾಯಬೆಲೆ ಅಂಗಡಿ ಮುಂಭಾಗದಿಂದ ಬಿಬಿಎಂಪಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಹೊರಮಾವು ವಾರ್ಡ್‌ವ್ಯಾಪ್ತಿಯಲ್ಲಿರುವ ದಲಿತ ಕಾಲೊನಿಗಳಲ್ಲಿ ಕುಡಿಯುವ ನೀರು, ರಸ್ತೆ, ಚರಂಡಿಯಂತಹ ಮೂಲ ಸೌಕರ್ಯಗಳಿಲ್ಲದೆ ಜನರು ಪರದಾಡುವಂತಾಗಿದೆ. ಇದರ ಬಗ್ಗೆ ಬಿಬಿಎಂಪಿ ಅಧಿಕಾರಿಗಳಿಗೆ ಹಲವಾರು ಬಾರಿ ಮನವಿ ಮಾಡಿದ್ದರೂ ಪ್ರಯೋಜನವಾಗಿಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

'ಅಪಾರ್ಟ್‌ಮೆಂಟ್ ಮತ್ತು ಬಡಾವಣೆಗಳಿಗೆ ಕುಡಿಯುವ ನೀರು ಸರಬರಾಜಾಗುತ್ತಿದೆ. ಆದರೆ ಅದೇ ಗ್ರಾಮಗಳಲ್ಲಿ ವಾಸಿಸುವ ದಲಿತ ಕಾಲೊನಿಗಳಿಗೆ ನೀರು ಬಿಡುತ್ತಿಲ್ಲ' ಎಂದು ದೂರಿದರು.

'ಹೊರಮಾವು ಅಗರ ಬಸ್ ನಿಲ್ದಾಣದಲ್ಲಿ ನಿರ್ಮಿಸಿರುವ ಶೌಚಾಲಯವನ್ನು ಸಾರ್ವಜನಿಕರಿಗೆ ಮುಕ್ತಗೊಳಿಸಬೇಕು. ಹೊರಮಾವು ಅಗರ ನಾಗರಕಟ್ಟೆ ಬಳಿ ನಿರ್ಮಿಸಿರುವ ಡಾ.ಬಿ.ಆರ್.ಅಂಬೇಡ್ಕರ್ ಗ್ರಂಥಾಲಯಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಬೇಕು ಮತ್ತು ಬೀದಿ ದೀಪ ಅಳವಡಿಸಬೇಕು. ಬಿಬಿಎಂಪಿ ವತಿಯಿಂದ ಮನೆ ನಿರ್ಮಿಸಿ ಕೊಡಬೇಕು' ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಬೆಂಗಳೂರು ಪೂರ್ವ ತಾಲ್ಲೂಕು ಘಟಕದ ಅಧ್ಯಕ್ಷ ನಾಗರಾಜ್, ಡಾ.ಬಿ.ಆರ್.ಅಂಬೇಡ್ಕರ್ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷ ಜ್ಯೋತಿನಗರ ಮುನಿಕೃಷ್ಣ, ಸಾಮ್ರಾಟ್ ಶೇಖರ್, ನಾರಾಯಣಸ್ವಾಮಿ, ಲಕ್ಷ್ಮೀನಾರಾಯಣ, ಶ್ವೇತಾ, ಶ್ರೀನಿವಾಸ್ ಪಾಲ್ಗೊಂಡಿದ್ದರು.



ದಲಿತ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಹೊರಮಾವು ಅಗರ ಸರ್ಕಾರಿ ನ್ಯಾಯಬೆಲೆ ಅಂಗಡಿ ಮುಂಭಾಗದಿಂದ ಹೊರಮಾವು ಬಿಬಿಎಂಪಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ನಡೆಸಿದರು

‘ಪರಿಹಾರ ಒಂದೇ ರೀತಿಯಿರಲಿ’

ಹಾವು ಕಚ್ಚಿ ಮರಣ ಪ್ರಕರಣ: ನಿಯಮ ಮಾರ್ಪಡಿಸಲು ಸಚಿವರ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾವು ಕಚ್ಚಿ ಮರಣ ಹೊಂದಿದರೆ ಕೃಷಿಕರು–ಇತರರು ಎಂದು ವಿಂಗಡಿಸದೇ ಪರಿಹಾರ ನೀಡಬೇಕು. ಅದಕ್ಕೆ ಪೂರಕವಾಗಿ ಕ್ರಿಯಾಯೋಜನೆ ರೂಪಿಸಬೇಕು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸೂಚನೆ ನೀಡಿದರು.

ಹಾವು ಕಡಿತದ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಬುಧವಾರ ಹಮ್ಮಿಕೊಂಡಿದ್ದ ರಾಜ್ಯ ಕ್ರಿಯಾ ಯೋಜನೆಯ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೃಷಿ ಕೆಲಸದಲ್ಲಿ ಭಾಗಿಯಾಗಿರುವಾಗ ಹಾವು ಕಚ್ಚಿ ಮೃತಪಟ್ಟರೆ ಕೃಷಿ ಇಲಾಖೆಯಿಂದ ₹1 ಲಕ್ಷ ಪರಿಹಾರ ನೀಡುವ ಯೋಜನೆ ಜಾರಿಯಲ್ಲಿದೆ. ಮನೆಯಲ್ಲಿ ಅಥವಾ ದಾರಿಯಲ್ಲಿ ಹಾವು ಕಚ್ಚಿ ಸಾವು ಉಂಟಾದರೆ ಯಾವುದೇ ಪರಿಹಾರವಿಲ್ಲ. ಎಲ್ಲರಿಗೂ ಪರಿಹಾರ ಸಿಗುವಂತೆ ನಿಯಮ ಮಾರ್ಪಾಡು ಮಾಡುವುದು ಅಗತ್ಯ ಎಂದು ಹೇಳಿದರು.

‘ರಾಜ್ಯದಲ್ಲಿ ಹಾವು ಕಚ್ಚಿದ ಹೆಚ್ಚಿನ ಪ್ರಕರಣಗಳು ಸರ್ಕಾರದ ಗಮನಕ್ಕೆ ಬರುತ್ತಿರಲಿಲ್ಲ. ಹಾವು ಕಚ್ಚಿ ಸಾವು ಉಂಟಾದರೂ ಕೆಲವಷ್ಟೇ ದಾಖಲಾಗುತ್ತಿದ್ದವು. ಎಲ್ಲ ಪ್ರಕರಣಗಳ ಮಾಹಿತಿ ಸಿಗಬೇಕು. ಎಷ್ಟು ಮಂದಿಗೆ ಹಾವು ಕಚ್ಚಿದೆ? ಅದರಿಂದ ಎಷ್ಟು ಮಂದಿಗೆ ಅಂಗವೈಕಲ್ಯ ಉಂಟಾಗಿದೆ? ಎಷ್ಟು ಮಂದಿ ಮೃತಪಟ್ಟಿದ್ದಾರೆ? ಯಾವ ಪ್ರದೇಶದಲ್ಲಿ ಹಾವು ಕಡಿತ ಹೆಚ್ಚಿದೆ ಎಂಬ ಖಚಿತ ಮಾಹಿತಿ ಸಿಗುವಂತಾಗಬೇಕು. ಅದಕ್ಕಾಗಿಯೇ ಹಾವು ಕಚ್ಚುವ ಪ್ರಕರಣವನ್ನು ಅಧಿಸೂಚಿತ ರೋಗವೆಂದು ಘೋಷಣೆ ಮಾಡಲಾಗಿದೆ’ ಎಂದು ವಿವರಿಸಿದರು.

ಎಲ್ಲ ಸರ್ಕಾರಿ ಮತ್ತು ಖಾಸಗಿ ಆರೋಗ್ಯ ಕೇಂದ್ರಗಳು ನೀಡಿದ ಮಾಹಿತಿ ಪ್ರಕಾರ, ಈ ವರ್ಷ ರಾಜ್ಯದಲ್ಲಿ ಹಾವು ಕಚ್ಚಿದ 5,418 ಪ್ರಕರಣಗಳು ದಾಖಲಾಗಿವೆ. 36 ಜನರು ಮೃತಪಟ್ಟಿದ್ದಾರೆ. ಎಲ್ಲ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳು, ಆಯ್ದ ಸಮುದಾಯ ಆರೋಗ್ಯ ಕೇಂದ್ರಗಳನ್ನು ಹಾವು ಕಡಿತ ಚಿಕಿತ್ಸಾ ಕೇಂದ್ರಗಳು ಎಂದು ಗುರುತಿಸಲಾಗಿದೆ. ಅಲ್ಲಿ ದಿನದ 24 ಗಂಟೆಯೂ ಚಿಕಿತ್ಸೆ ದೊರೆಯುವಂತಾಗಬೇಕು ಎಂದು ಸಲಹೆ ನೀಡಿದರು.

ಜಗತ್ತಿನಲ್ಲಿ 2,000 ಪ್ರಭೇದ ಹಾವುಗಳಿವೆ. ಭಾರತದಲ್ಲಿ 310 ಪ್ರಭೇದಗಳಷ್ಟೇ ಕಂಡು ಬಂದಿವೆ. ಅದರಲ್ಲಿ 66 ಪ್ರಭೇದಗಳು ಮಾತ್ರ ವಿಷಕಾರಿಯಾಗಿವೆ. ಯಾವ ವಿಷಕಾರಿ ಹಾವು ಕಚ್ಚಿದರೆ ಏನು ಪರಿಣಾಮ ಆಗುತ್ತದೆ ಎಂಬ ಸ್ಪಷ್ಟ ಚಿತ್ರಣ ಇರಬೇಕು ಎಂದು ತಿಳಿಸಿದರು.

‘ನಾಟಿ ವೈದ್ಯರಿಗೂ ತರಬೇತಿ ನೀಡಿ’

ಹಾವು ಕಚ್ಚಿದಾಗ ಜನರು ನಾಟಿ ವೈದ್ಯರ ಬಳಿಗೆ ಹೋಗುವುದೇ ಹೆಚ್ಚು. ಹಾಗಾಗಿ ಕ್ರಿಯಾ ಯೋಜನೆಯು ನಾಟಿ ವೈದ್ಯರನ್ನೂ ಒಳಗೊಂಡಿರಬೇಕು. ಹಾವು ಕಡಿತ ಆಗಿ ಅವರ ಬಳಿ ಬಂದಾಗ ಪ್ರಥಮ ಚಿಕಿತ್ಸೆ ನೀಡುವುದು ಹೇಗೆ? ಪ್ರಥಮ ಚಿಕಿತ್ಸೆ ನೀಡಿದ ಬಳಿಕ ಏನು ಮಾಡಬೇಕು ಎಂಬ ಬಗ್ಗೆ ಅವರಿಗೂ ತರಬೇತಿ ನೀಡಬೇಕು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.



ದಿನೇಶ್ ಗುಂಡೂರಾವ್

‘2 ಸಾವಿರ ಪವರ್‌ಮೆನ್ ನೇಮಕಕ್ಕೆ ಅಧಿಸೂಚನೆ’


ಪ್ರಜಾವಾಣಿ ವಾರ್ತೆ

ರಾಯಚೂರು: ‘ಇಂಧನ ಇಲಾಖೆಯಿಂದ 2 ಸಾವಿರ ಪವರ್ ಮೆನ್‌ಗಳ (ಲೈನ್‌ಮನ್) ನೇಮಕ ಮಾಡಲು 15 ದಿನಗಳಲ್ಲಿ ಅಧಿಸೂಚನೆ ಹೊರಡಿಸಲಾಗುವುದು’ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದರು.

‘ಪವರ್‌ಮೆನ್‌ಗಳ ಹುದ್ದೆಗೆ ರಾಜ್ಯದಾದ್ಯಂತ ಒಂದೇ ದಿನ ನೇಮಕ ಪ್ರಕ್ರಿಯೆ ನಡೆಯಲಿದ್ದು, ಪಾರದರ್ಶಕತೆಗೆ ಒತ್ತು ನೀಡಲಾಗುವುದು’ ಎಂದು ನಗರದಲ್ಲಿ ಬುಧವಾರ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಿದರು.

‘ವೈಟಿಪಿಎಸ್ ಹುದ್ದೆಗಳನ್ನು ಭರ್ತಿ ಮಾಡುವಾಗ ಸ್ಥಳೀಯರಿಗೆ ಆದ್ಯತೆ ನೀಡಬೇಕು. 371(ಜೆ) ಅನ್ವಯ ಮೀಸಲು ನೀಡಬೇಕು. ಆದರೆ, ನುರಿತ ಕೆಲಸಗಾರರು ಸಿಗುತ್ತಿಲ್ಲ ಎಂಬ ಕಾರಣಕ್ಕೆ ಸ್ಥಳೀಯರ ನೇಮಕ ಆಗುತ್ತಿಲ್ಲ ಎಂಬ ಮಾತು ಕೇಳಿಬಂದಿದೆ. ಆದ್ದರಿಂದ ಎಷ್ಟು ಜನ ಬೇಕು ಎಂದು ನಿರ್ಧರಿಸಿ, ಅವರಿಗೆ ಕೆಪಿಸಿಎಲ್‌ನಿಂದ ತರಬೇತಿ ಕೊಡಿಸಲು ಅಗತ್ಯ ಕ್ರಮ ವಹಿಸಲಾಗುವುದು’ ಎಂದರು.

‘ದಾಖಲೆ ಉತ್ಪಾದನೆ’



‘ಈ ಬಾರಿ ಆರ್‌ಟಿಪಿಎಸ್, ವೈಟಿಪಿಎಸ್, ಬಿಟಿಪಿಎಸ್ ಉಷ್ಣ ಸ್ಥಾವರಗಳಲ್ಲಿ ದಾಖಲೆ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಮಾಡಿದ್ದರಿಂದ ಬೇಸಿಗೆಯಲ್ಲಿ ವಿದ್ಯುತ್ ಸಮಸ್ಯೆಯಾಗದಂತೆ ನೋಡಿಕೊಳ್ಳಲಾಗಿದೆ’ ಎಂದು ಜಾರ್ಜ್ ಹೇಳಿದರು. ‘ಕಳೆದ ಜನವರಿಯಿಂದ ಮೇ ಅಂತ್ಯದವರೆಗೆ ಪ್ರತಿನಿತ್ಯ ಸರಾಸರಿ 2000 ಮಿಲಿಯನ್ ಯೂನಿಟ್ ವಿದ್ಯುತ್ ಉತ್ಪಾದನೆ ಮಾಡಲಾಗಿದೆ. ಏಪ್ರಿಲ್‌ನಲ್ಲಿ 2,400 ಮಿಲಿಯನ್ ಯೂನಿಟ್ ವಿದ್ಯುತ್ ಉತ್ಪಾದನೆ ಮಾಡಿದ್ದು, ದಾಖಲೆಯಾಗಿದೆ’ಎಂದರು.

ಕೇಜ್ರಿವಾಲ್‌ರಿಂದ ಲಂಚದ ಹಣ ನೇರ ಬಳಕೆ: ಇ.ಡಿ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಲಂಚದ ರೂಪದಲ್ಲಿ ಪಡೆದ ₹ 100 ಕೋಟಿಯಲ್ಲಿ ಕೆಲ ಭಾಗವನ್ನು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ನೇರವಾಗಿ ಬಳಸಿದ್ದಾರೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಆರೋಪ ಪಟ್ಟಿಯಲ್ಲಿ ತಿಳಿಸಿದೆ.

ಕೇಜ್ರಿವಾಲ್ ಅವರು ಗೋವಾದ ಐಷಾರಾಮಿ ಹೋಟೆಲ್‌ನಲ್ಲಿ ತಂಗಲು ಈ ಹಣ ಬಳಸಿದ್ದರು ಎಂದು ಆರೋಪ ಪಟ್ಟಿಯಲ್ಲಿ ಹೇಳಿದೆ.

ಅಬಕಾರಿ ನೀತಿಗೆ ಸಂಬಂಧಿಸಿದಂತೆ ದೆಹಲಿ ಸರ್ಕಾರವು ‘ಸಚಿವರ ಗುಂಪು’ ರಚಿಸಿದ್ದೇ ಒಂದು ವಂಚನೆಯಾಗಿದೆ. ಅರವಿಂದ ಕೇಜ್ರಿವಾಲ್ ಅವರೇ ಈ ಹಗರಣದ ಮುಖ್ಯ ಸಂಚುಕೋರ. ಸಚಿವರು ಹಾಗೂ ಆಮ್ ಆದ್ಮಿ ಪಕ್ಷದ ಮುಖಂಡರು ಹಾಗೂ ಇತರ ಕೆಲವೊಂದಿಗೆ ಕೈಜೋಡಿಸಿ ಈ ಅಕ್ರಮ ಎಸಗಿದ್ದಾರೆ ಎಂದು ಇ.ಡಿ ಸಲ್ಲಿಸಿರುವ 209 ಪುಟಗಳ ಆರೋಪಪಟ್ಟಿಯಲ್ಲಿ ಹೇಳಿದೆ.

ಹಣ ಅಕ್ರಮ ವರ್ಗಾವಣೆ ಕಾಯ್ದೆ (ಪಿಎಂಎಲ್‌ಎ) ಕುರಿತ ವಿಶೇಷ ನ್ಯಾಯಾಲಯವು ಪ್ರಾಸಿಕ್ಯೂಷನ್ ಮೇ 17ರಂದು ಸಲ್ಲಿಸಿರುವ ದೂರನ್ನು ಮಂಗಳವಾರ ಪರಿಗಣನೆಗೆ ತೆಗೆದುಕೊಂಡಿದ್ದು, ಕೇಜ್ರಿವಾಲ್ ಅವರನ್ನು ಜುಲೈ 12ರಂದು ನ್ಯಾಯಾಲಯಕ್ಕೆ ಹಾಜರುಪಡಿಸುವಂತೆ ವಾರಂಟ್ ಜಾರಿ ಮಾಡಿದೆ.

‘ಇಸ್ರೊ ಬೇಹುಗಾರಿಕೆ ಪ್ರಕರಣ: ಮಾಲ್ದೀವ್ಸ್ ಮಹಿಳೆ ಸಲುಗೆ ತಿರಸ್ಕರಿಸಿದ್ದೇ ಕಾರಣ’

ತಿರುವನಂತಪುರ(ಪಿಟಿಐ): ಸಲುಗೆ ಬೆಳೆಸುವ ತನ್ನ ಪ್ರಸ್ತಾವವನ್ನು ಮಾಲ್ದೀವ್ಸ್ ಮಹಿಳೆ ತಿರಸ್ಕರಿಸಿದ ನಂತರ, ಆಕೆಯನ್ನು ಅಕ್ರಮವಾಗಿ ಬಂಧನದಲ್ಲಿರಿಸಿದ ತನ್ನ ಕ್ರಮವನ್ನು ಸಮರ್ಥಿಸುವುದಕ್ಕಾಗಿ ಪೊಲೀಸ್ ಇಲಾಖೆಯ ವಿಶೇಷ ವಿಭಾಗದ ಅಧಿಕಾರಿ ಇಸ್ರೊ ಬೇಹುಗಾರಿಕೆ ಪ್ರಕರಣವನ್ನು ಸೃಷ್ಟಿಸಿದ್ದರು ಎಂದು ಸಿಬಿಐ ಆರೋಪಿಸಿದೆ.

ಇಸ್ರೊ ಬೇಹುಗಾರಿಕೆ ಪ್ರಕರಣ ಕುರಿತಂತೆ ಸಿಬಿಐ ಈ ಮಾಹಿತಿ ಇದೆ.

ಈ ಪ್ರಕರಣದಲ್ಲಿ ಇಸ್ರೊ ಮಾಜಿ ವಿಜ್ಞಾನಿ ನಂಬಿ ನಾರಾಯಣನ್ ಹಾಗೂ ಇತರ ಐವರನ್ನು ತಪ್ಪಾಗಿ ಆರೋಪಿಗಳನ್ನಾಗಿ ಮಾಡಲಾಗಿತ್ತು.

ಜೂನ್ ಕೊನೆ ವಾರದಲ್ಲಿ ಸಲ್ಲಿಸಲಾಗಿರುವ ಈ ಆರೋಪಪಟ್ಟಿ ಬುಧವಾರ ಬಹಿರಂಗಗೊಂಡಿದೆ. ‘ಆಗ, ವಿಶೇಷ ವಿಭಾಗದ ಅಧಿಕಾರಿಯಾಗಿದ್ದ ಎಸ್.ವಿಜಯನ್, ಮಾಲ್ದೀವ್ಸ್ ಪ್ರಜೆ ಮರಿಯಮ್ ರಶೀದಾ ಅವರ ದಾಖಲೆಪತ್ರಗಳನ್ನು ಕಸಿದುಕೊಂಡು, ಆಕೆ ಭಾರತ ತೊರೆಯದಂತೆ ತಡೆದಿದ್ದರು. ಇಸ್ರೊ ವಿಜ್ಞಾನಿ ಡಿ.ಶಶಿಕುಮಾರ್ ಅವರೊಂದಿಗೆ ರಶೀದಾ ಸಂಪರ್ಕದಲ್ಲಿದ್ದ ವಿಷಯವನ್ನು ವಿಜಯನ್ ಪತ್ತೆ ಹಚ್ಚಿದ್ದರು. ಇದರ ಆಧಾರದ ಮೇಲೆಯೇ ರಶೀದಾ ಹಾಗೂ ಆಕೆಯ ಸ್ನೇಹಿತರಾದ ಮಾಲ್ದೀವ್ಸ್ ಪ್ರಜೆ ಫೌಜಿಯಾ ಹಸನ್ ಮೇಲೆ ನಿಗಾ ಇಟ್ಟಿದರು’ ಎಂದೂ ಸಿಬಿಐ ತಿಳಿಸಿದೆ.

ಅವಧಿ ಮೀರಿ ದೇಶದಲ್ಲಿ ಉಳಿದ ಆರೋಪಕ್ಕೆ ಸಂಬಂಧಿಸಿ, ರಶೀದಾ ಅವರನ್ನು ಬಂಧಿಸಲಾಗಿತ್ತು. ಬಂಧನ ಅವಧಿ ಮುಗಿಯುತ್ತಿದ್ದಾಗ ವಿಜಯನ್ ಸಲ್ಲಿಸಿದ್ದ ವರದಿ ಆಧರಿಸಿ ರಶೀದಾ ಮತ್ತು ಹಸನ್ ವಿರುದ್ಧ ಗೋಪ್ಯತಾ ಕಾಯ್ದೆಯಡಿ ಪ್ರಕರಣ ದಾಖಲಿಸಿ, ತನಿಖೆಯನ್ನು ಎಸ್‌ಐಟಿಗೆ ವಹಿಸಲಾಗಿತ್ತು.

ಇದಾದ ನಂತರ, ನಂಬಿ ನಾರಾಯಣನ್ ಸೇರಿದಂತೆ ನಾಲ್ವರು ಇಸ್ರೊ ವಿಜ್ಞಾನಿಗಳನ್ನು ಎಸ್‌ಐಟಿ ಬಂಧಿಸಿತ್ತು ಎಂದು ಸಿಬಿಐ, ಆರೋಪಿಸಿದೆ.

ಸ್ಪರ್ಧಾ ವಾಣಿ



ಕರ್ನಾಟಕ ಆರ್ಥಿಕ ಸಮೀಕ್ಷೆ 2023–2024



ಯು.ಟಿ.ಆಯಿಷಾ ಫರ್ಜಾನ

ಕೆಎಎಸ್ ಪ್ರಿಲಿಮ್ಸ್ ಪರೀಕ್ಷೆಗೆ ಅಗತ್ಯವಿರುವ ವಿವರಾಣಾತ್ಮಕ ಪ್ರಶ್ನೋತ್ತರಗಳನ್ನು ನೀಡಲಾಗಿದೆ.

ಕೆಎಎಸ್ ಪ್ರಿಲಿಮ್ಸ್ ಸ್ಪೆಷಲ್

1) 2019 ರಿಂದ ಗ್ರಾಮ ಪಂಚಾಯತ್ ಗ್ರಂಥಾಲಯಗಳಿಗೆ ಯಾವ ಹೊಸ ಹೆಸರನ್ನು ನೀಡಲಾಗಿದೆ ?

(1) ಜ್ಞಾನ ಶಾಖೆ (2) ಅರಿವು ಕೇಂದ್ರ
(3) ವಿದ್ಯಾ ಮಂಟಪ (4) ಬೌದ್ಧಿಕ ಚಾವಡಿ

ಉತ್ತರ: (2)

ವಿವರಣೆ: 2019ರಿಂದ, RDPR ಇಲಾಖೆಯು ಗ್ರಾಮ ಪಂಚಾಯತ್ ಗ್ರಂಥಾಲಯಗಳನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡಿದ್ದು ಅವುಗಳನ್ನು 'ಅರಿವು ಕೇಂದ್ರ' ಎಂದು ಮರುನಾಮಕರಣ ಮಾಡಿದೆ. ಇವುಗಳಲ್ಲಿ ಒಟ್ಟು 5895 ಗ್ರಂಥಾಲಯಗಳ ಪೈಕಿ 5383 ಡಿಜಿಟಲ್ ಲೈಬ್ರರಿಗಳಾಗಿ ಮಾರ್ಪಾಡಾಗಿದ್ದು, 43.42 ಲಕ್ಷ ಮಕ್ಕಳು ನೋಂದಾಯಿಸಿಕೊಂಡಿದ್ದಾರೆ.

2) 'ಗ್ರಾಮ ಆರೋಗ್ಯ' ಅಭಿಯಾನದ ಉದ್ದೇಶವೇನು ?

(1) ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಟೆಲಿ ಆರೋಗ್ಯ ಸೇವೆಗಳನ್ನು ಒದಗಿಸಲು
(2) NREGA ಕಾರ್ಮಿಕರಲ್ಲಿ ಸಾಂಕ್ರಾಮಿಕವಲ್ಲದ ರೋಗಗಳನ್ನು ತಡೆಗಟ್ಟಲು
(3) NREGA ಕಾರ್ಮಿಕರಿಗೆ ಪೋರ್ಟಬಲ್ ವೈದ್ಯಕೀಯ ಸಾಧನಗಳನ್ನು ವಿತರಿಸಲು
(4) ಗ್ರಾಮ ಸಭಾ ಸದಸ್ಯರಿಗೆ ಆರೋಗ್ಯ ಕರ್ನಾಟಕ ಕಾರ್ಡ್‌ಗಳನ್ನು ಒದಗಿಸುವುದು

ಉತ್ತರ: (2)

ವಿವರಣೆ: NREGA ಕಾರ್ಮಿಕರಲ್ಲಿ ಸಾಂಕ್ರಾಮಿಕವಲ್ಲದ ರೋಗಗಳನ್ನು ಆರಂಭಿಕ ಹಂತದಲ್ಲಿ ತಡೆಗಟ್ಟುವ ಉದ್ದೇಶದಿಂದ 'ಗ್ರಾಮ ಆರೋಗ್ಯ' ಅಭಿಯಾನವನ್ನು ಪ್ರಾರಂಭಿಸಲಾಗಿದೆ. ಎಲ್ಲಾ 31 ಜಿಲ್ಲೆಗಳಲ್ಲಿ ಕಾರ್ಮಿಕರಿಗೆ ಆರೋಗ್ಯ ಕಿಟ್‌ಗಳನ್ನು ವಿತರಿಸಲಾಗಿದೆ ಮತ್ತು ಈ ವರ್ಷ ರಕ್ತದೊತ್ತಡ ಮತ್ತು ಮಧುಮೇಹ ಪರೀಕ್ಷೆ ಸೇರಿದಂತೆ ಸಾಂಕ್ರಾಮಿಕವಲ್ಲದ ಆರೋಗ್ಯ ತಪಾಸಣೆ ನಡೆಸಲಾಗಿದೆ.

3) ಕರ್ನಾಟಕದ ತೋಟಗಾರಿಕಾ ಇಲಾಖೆಯು ಅಭಿವೃದ್ಧಿಪಡಿಸಿದ HASIRU ಅಪ್ಲಿಕೇಶನ್‌ನ ಪ್ರಾಥಮಿಕ ಉದ್ದೇಶವೇನು ?

(1) ಹವಾಮಾನ ಸಂಬಂಧಿತ ಅಪ್ ಡೇಟ್‌ಗಳನ್ನು ಒದಗಿಸಲು
(2) ಫಲಾನುಭವಿ-ಆಧಾರಿತ ಯೋಜನೆಗಳನ್ನು ನಿರ್ವಹಿಸಲು
(3) ಬೆಳೆಗಳಿಗೆ ಮಾರುಕಟ್ಟೆ ಬೆಲೆಗಳನ್ನು ನೀಡುವುದು
(4) ರೈತರಿಗೆ ಆನ್‌ಲೈನ್ ತರಬೇತಿಯನ್ನು ಸುಲಭಗೊಳಿಸಲು

ಉತ್ತರ: (2)

ವಿವರಣೆ: ತೋಟಗಾರಿಕೆ ಇಲಾಖೆಯು ಫಲಾನುಭವಿ ಆಧಾರಿತ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ದಕ್ಷತೆಯನ್ನು ಸುಧಾರಿಸಲು 'ಹಸಿರು' ಎಂಬ ಐಟಿ ಅಪ್ಲಿಕೇಶನ್ ಅನ್ನು ಅಭಿವೃದ್ಧಿಪಡಿಸಿದೆ.

4) 2019ರ ಜನಗಣತಿಯ ಪ್ರಕಾರ ಕರ್ನಾಟಕದ ಒಟ್ಟು ಜಾನುವಾರುಸಂಖ್ಯೆ ಎಷ್ಟು ?

(1) 2.03 ಕೋಟಿ (2) 3.03 ಕೋಟಿ
(3) 4.03 ಕೋಟಿ (4) 5.03 ಕೋಟಿ

ಉತ್ತರ: (2)

5) 2019ರ ಪ್ರಾಣಿ ಜನಗಣತಿಯ ಪ್ರಕಾರ, ಕರ್ನಾಟಕದ ಕೋಳಿಗಳ ಸಂಖ್ಯೆಯು ರಾಷ್ಟ್ರೀಯ ಒಟ್ಟು ಮೊತ್ತಕ್ಕೆ ಎಷ್ಟು ಶೇಕಡಾ ಕೊಡುಗೆ ನೀಡುತ್ತದೆ ?

(1) ಶೇ 5.41 (2) ಶೇ 6.98
(3) ಶೇ 7.41 (4) ಶೇ 8.98

ಉತ್ತರ: (2)

6) ಜಾನುವಾರುಗಳ ಸಂಖ್ಯೆಗೆ ಸಂಬಂಧಿಸಿದಂತೆ, 2019 ರ ಗಣತಿಯ ಪ್ರಕಾರ ದೇಶದ ಒಟ್ಟು ಮೊತ್ತದಲ್ಲಿ ಕರ್ನಾಟಕದ ಪಾಲು ಎಷ್ಟು ?

(1) ಶೇ 4.41 (2) ಶೇ 5.41
(3) ಶೇ 6.41 (4) ಶೇ 7.41

ಉತ್ತರ: (2)

7) 2019 ರ ಜಾನುವಾರು ಗಣತಿಯ ಪ್ರಕಾರ ಕರ್ನಾಟಕದಲ್ಲಿ ಜಾನುವಾರು ಮತ್ತು ಕೋಳಿಗಳ ಒಟ್ಟುಸಂಖ್ಯೆ ಎಷ್ಟು ?

(1) 8.98 ಕೋಟಿ (2) 9.98 ಕೋಟಿ
(3) 7.98 ಕೋಟಿ (4) 6.98 ಕೋಟಿ

ಉತ್ತರ: (1)

ವಿವರಣೆ: 2019ರ ಜಾನುವಾರು ಗಣತಿಯ ಪ್ರಕಾರ, ಕರ್ನಾಟಕವು 3.03 ಕೋಟಿ ಜಾನುವಾರು ಸಂಖ್ಯೆಯನ್ನು ಹೊಂದಿದೆ ಮತ್ತು 5.95 ಕೋಟಿಗಳಷ್ಟು ಸಂಖ್ಯೆಯ ಕೋಳಿಗಳನ್ನು ಹೊಂದಿದೆ. ಇದು ಭಾರತದ ಒಟ್ಟು ಅಂಕಿಅಂಶಗಳಿಗೆ ಕ್ರಮವಾಗಿ ಶೇ 5.41 ಮತ್ತು ಶೇ6.98ರಷ್ಟು ಕೊಡುಗೆ ನೀಡುತ್ತದೆ.

8) ರಾಜ್ಯದ ಮೊದಲ ಮೇಕೆ ಹಾಲು ಯೋಜನೆಯನ್ನು ಎಲ್ಲಿ ಪ್ರಾರಂಭಿಸಲಾಗುತ್ತಿದೆ ?

(1) ಶಿರಹಟ್ಟಿ (2) ಮದಲಾಪುರ
(3) ರೋಣ (4) ದಾಬಸ್‌ಪೇಟೆ

ಉತ್ತರ: (2)

ವಿವರಣೆ: ಕೊಡಗು ಜಿಲ್ಲೆಯ ಮದಲಾಪುರದಲ್ಲಿ (ಕೂಡಿಗೆ ಉಪಕೇಂದ್ರ) ರಾಜ್ಯದಲ್ಲೇ ಪ್ರಥಮ ಬಾರಿಗೆ ಮೇಕೆ ಹಾಲು ಯೋಜನೆಗೆ ಚಾಲನೆ ನೀಡಲಾಗುತ್ತಿದೆ.

9) ಈ ಕೆಳಗಿನ GI ಟ್ಯಾಗ್ ಮಾಡಲಾದ ಉತ್ಪನ್ನಗಳನ್ನು VTPC ಸಲ್ಲಿಸಿದ ಆಯಾ ಜಿಲ್ಲೆಗಳೊಂದಿಗೆ ಹೊಂದಿಸಿ:

1. ಕಗ್ಗ ಅಕ್ಕಿ 2. ಹಸೆ ಚಿತ್ತಾರ
3. ಶಿವರಾಪಟ್ಟಣ ಶಿಲ್ಪಗಳು ಮತ್ತು ಕಲ್ಲಿನಿಂದ ತಯಾರಿಸಿದ ಉತ್ಪನ್ನಗಳು

ಎ. ಕೋಲಾರ ಬಿ. ಉತ್ತರ ಕನ್ನಡ
ಸಿ. ಶಿವಮೊಗ್ಗ ಮತ್ತು ಉತ್ತರ ಕನ್ನಡ

ಆಯ್ಕೆಗಳು:
(1) 1-ಎ, 2-ಬಿ, 3-ಸಿ (2) 1-ಬಿ, 2-ಸಿ, 3-ಎ
(3) 1-ಬಿ, 2-ಎ, 3-ಸಿ (4) 1-ಸಿ, 2-ಬಿ, 3-ಎ

ಉತ್ತರ (2)

ವಿವರಣೆ: ಪ್ರಸ್ತುತ ಕರ್ನಾಟಕವು 48 ನೋಂದಾಯಿತ ಭೌಗೋಳಿಕ ಚಿಹ್ನೆ (ಜಿಐ) ಪಡೆದ ವಸ್ತುಗಳನ್ನು ಹೊಂದಿದೆ. ಹೆಚ್ಚುವರಿಯಾಗಿ, VTPC ನಡೆಸಿದ ಅಧಿಕೃತ ಬಳಕೆದಾರರ ಡ್ರೈವ್ ಕರ್ನಾಟಕದಲ್ಲಿ GI ಉತ್ಪನ್ನಗಳಾದ್ಯಂತ ಅಧಿಕೃತ ಬಳಕೆದಾರರ ಸಂಖ್ಯೆಯನ್ನು 2,372 ಕ್ಕೆ ಹೆಚ್ಚಿಸಿದೆ.

VTPC ರಾಜ್ಯದ ಪರವಾಗಿ ಮೂರು ಹೊಸ GI ಟ್ಯಾಗ್ ಮಾಡಿದ ಉತ್ಪನ್ನಗಳಿಗೆ ಅರ್ಜಿ ಸಲ್ಲಿಸಿದೆ: ಕೃಷಿ ವಿಭಾಗದಲ್ಲಿ ಉತ್ತರ ಕನ್ನಡ ಜಿಲ್ಲೆಯ ಕಗ್ಗ ಅಕ್ಕಿ, ಮತ್ತು ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಂದ ಹಸೆ ಚಿತ್ತಾರ, ಮತ್ತು ಕೋಲಾರ ಜಿಲ್ಲೆಯ ಮಾಲೂರಿನಿಂದ ಶಿವಾರಪಟ್ಟಣ ಶಿಲ್ಪಗಳು ಮತ್ತು ಕಲ್ಲಿನಿಂದ ತಯಾರಿಸಿದ ಉತ್ಪನ್ನಗಳನ್ನು ಕರಕುಶಲ ಉತ್ಪನ್ನಗಳ ವಿಭಾಗದಲ್ಲಿ ಅರ್ಜಿ ಸಲ್ಲಿಸಲಾಗಿದೆ.

ಈ ಉತ್ಪನ್ನಗಳು ಪ್ರಸ್ತುತ ಪೂರ್ವ-ಪರೀಕ್ಷಾ ಪ್ರಕ್ರಿಯೆಯಲ್ಲಿವೆ. ಆತ್ಮ ನಿರ್ಭರ್ ಭಾರತ್, ODOP, ಮತ್ತು ಜಿಲ್ಲೆ ರಫ್ತು ಕೇಂದ್ರಗಳಂತಹ ಉಪಕ್ರಮಗಳ ಅಡಿಯಲ್ಲಿ ಪ್ರಚಾರ ನಡೆಸಲು ನಿರ್ದಿಷ್ಟ GI ಉತ್ಪನ್ನಗಳನ್ನು ಗುರುತಿಸಲಾಗಿದೆ ಮತ್ತು ಆ ಮೂಲಕ ಅವುಗಳಿಗೆ ಹೆಚ್ಚಿನ ಮಾರುಕಟ್ಟೆ ಸಾಧ್ಯತೆಗಳಿಗೆ ಬೆಂಬಲಿಸಲಾಗುತ್ತದೆ.

10) 2022-23 ರಲ್ಲಿ ದೇಶದ ಒಟ್ಟು ರಫ್ತುಗಳಲ್ಲಿ ಕರ್ನಾಟಕದ ರಫ್ತಿನ ಶೇಕಡಾವಾರು ಎಷ್ಟು ?

(1) ಶೇ18.75 (2) ಶೇ20.50
(3) ಶೇ22.10 (4) ಶೇ25.80

ಉತ್ತರ: (2)

ವಿವರಣೆ: ಕರ್ನಾಟಕವು ಸಾಫ್ಟ್‌ವೇರ್/ಸೇವಾ ರಫ್ತಿನಲ್ಲಿ ಭಾರತದಲ್ಲಿಯೇ ಅಗ್ರಸ್ಥಾನದಲ್ಲಿದೆ ಮತ್ತು ವ್ಯಾಪಾರ ರಫ್ತಿನಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಎರಡನ್ನು ಒಟ್ಟುಗೂಡಿಸಿದರೆ ಒಟ್ಟಾರೆ ರಫ್ತುಗಳಲ್ಲಿ ಇದು ಉನ್ನತ ಸ್ಥಾನವನ್ನು ಹೊಂದಿದೆ. ಕರ್ನಾಟಕ ಸರ್ಕಾರದ ಕೈಗಾರಿಕೆಗಳು ಮತ್ತು ವಾಣಿಜ್ಯ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿಶ್ವೇಶ್ವರಯ್ಯ ಟ್ರೇಡ್ ಪ್ರಮೋಷನ್ ಸೆಂಟರ್ (VTPC), ರಫ್ತು ಉತ್ತೇಜನದ ಪ್ರಮುಖ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತದೆ.

ಕೋಲ್ಕತ್ತಾದಲ್ಲಿರುವ ಡೈರೆಕ್ಟರೇಟ್ ಜನರಲ್ ಆಫ್ ಕಮರ್ಷಿಯಲ್ ಇಂಟೆಲಿಜೆನ್ಸ್ ಮತ್ತು ಸ್ಟ್ಯಾಟಿಸ್ಟಿಕ್ಸ್ (DGCIS) ನಿಂದ ಮಾಹಿತಿಯನ್ನು ಬಳಸಿಕೊಂಡು ರಫ್ತು ಡೇಟಾ ವಿಶ್ಲೇಷಣೆಯನ್ನು ನಡೆಸಲಾಗುತ್ತದೆ.

2022-23 ರ ಆರ್ಥಿಕ ವರ್ಷದಲ್ಲಿ, ಕರ್ನಾಟಕದ ಒಟ್ಟು ರಫ್ತುಗಳು 2021-22 ಕ್ಕೆ ಹೋಲಿಸಿದರೆ ಶೇ 35.31ರಷ್ಟು ಬೆಳೆದಿದ್ದು ಇದರ ಮೌಲ್ಯ ಸರಿಸುಮಾರು ₹ 12,67,655.66 ಕೋಟಿ .ಈ ಪ್ರಕಾರ ಕರ್ನಾಟಕವು ದೇಶದ ಒಟ್ಟು ರಫ್ತಿಗೆ ಶೇ 20.50 ಕೊಡುಗೆ ನೀಡುತ್ತಿದೆ. ವ್ಯಾಪಾರ ರಫ್ತುಗಳು ರಾಷ್ಟ್ರೀಯ ರಫ್ತುಗಳ ಸುಮಾರು ಶೇ6.19 ರಷ್ಟಿದ್ದರೆ, ಸಾಫ್ಟ್‌ವೇರ್/ಸೇವಾ ರಫ್ತುಗಳು 41 % ರಷ್ಟಿದೆ. ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ ಸಾಫ್ಟ್‌ವೇರ್ ಮತ್ತು ಇತರ ಸೇವಾ ವಲಯಗಳು ಕರ್ನಾಟಕದ ರಫ್ತು ಪ್ರೊಫೈಲ್‌ನಲ್ಲಿ ಪ್ರಾಬಲ್ಯ ಹೊಂದಿವೆ.

2021-22 ರಿಂದ ರಫ್ತು ವಲಯಗಳಲ್ಲಿ ಜವಳಿ ಮತ್ತು ಗಾರ್ಮೆಂಟ್ ಉತ್ಪನ್ನಗಳು, ಔಷಧೀಯ ಕ್ಷೇತ್ರ ,ಕೃಷಿ ಮತ್ತು ಆಹಾರ ಸಂಸ್ಕರಣೆ ಹಾಗೂ ಪೆಟ್ರೋಲಿಯಂ ಉತ್ಪನ್ನಗಳಲ್ಲಿ ಗಮನಾರ್ಹ ಹೆಚ್ಚಳವನ್ನು ಗಮನಿಸಲಾಗಿದೆ. ❖

ಕೆ.ಪಿ.ಗುರುಶಂಕರ್

ಪ್ರಚಲಿತ

ಕಾಡ್ಗಿಚ್ಚು ಪತ್ತೆಗೆ ಕೃತಕ ಬುದ್ಧಿಮತ್ತೆ

ಮಹಾರಾಷ್ಟ್ರದ ಪೆಂಚ್ ಹುಲಿ ಅಭಯಾರಣ್ಯದಲ್ಲಿ ಪ್ರಾಥಮಿಕ ಹಂತದಲ್ಲಿಯೇ ಕಾಡ್ಗಿಚ್ಚನ್ನು ಪತ್ತೆ ಹಚ್ಚಲು ಕೃತಕ ಬುದ್ಧಿಮತ್ತೆ ವ್ಯವಸ್ಥೆಯನ್ನು ಜೂನ್ 26ರಂದು ಅಳವಡಿಸಲಾಗಿದೆ. ಯಾವುದೇ ರೀತಿಯ ಕಾಡ್ಗಿಚ್ಚು ಉಂಟಾದರೆ ಪ್ರಾಥಮಿಕ ಹಂತದಲ್ಲಿ ಅದನ್ನು ಪತ್ತೆ ಹಚ್ಚಿ ಸೂಕ್ತ ಕ್ರಮವನ್ನು ಕೈಗೊಳ್ಳಲು ಉಪಯುಕ್ತವಾಗಿದೆ.

- Pan-tilt-Zoom ತಂತ್ರಜ್ಞಾನ ಆಧಾರಿತ ಕ್ಯಾಮೆರಾವನ್ನು ಸಮುದ್ರ ಮಟ್ಟದಿಂದ 540 ಮೀಟರ್ ಎತ್ತರದ ಪರ್ವತದಲ್ಲಿ, ಕಿರಂಗಿಸಾರ ಎನ್ನುವ ಗ್ರಾಮದ ಬಳಿ ಅಳವಡಿಸಲಾಗಿದೆ. ಈ ಕ್ಯಾಮರಾದ ವೈಶಿಷ್ಟ್ಯತೆ ಏನೆಂದರೆ 15 ಕಿಲೋ ಮೀಟರ್. ವ್ಯಾಪ್ತಿಯನ್ನು ಪರಿವೀಕ್ಷಿಸುವ ಸಾಮರ್ಥ್ಯವಿದೆ. 350 ಚದರ ಕಿಲೋಮೀಟರ್ ಅರಣ್ಯ ಪ್ರದೇಶದ ಮೇಲೆ ನಿಗಾ ವಹಿಸುವ ತಂತ್ರಜ್ಞಾನವನ್ನು ಅಳವಡಿಸಲಾಗಿದೆ.
24	ರುಕ್ಕಿಬಾಯಿ ಕೋಂ ಲೇ॥ ನಿಂಗಾನಾಯ್ಕ (1–08) ರುದ್ರೇಶ್‌ನಾಯ್ಕ ಬಿನ್ ಲೇ॥ ನಿಂಗಾನಾಯ್ಕ (ಮೇಲಿನ ಜಂಟಿ) ಮಹಾಂತೇಶ್‌ನಾಯ್ಕ ಬಿನ್ ಲೇ॥ ನಿಂಗಾನಾಯ್ಕ (ಮೇಲಿನ ಜಂಟಿ)	ರುಕ್ಕಿಬಾಯಿ ಕೋಂ ಲೇ॥ ನಿಂಗಾನಾಯ್ಕ (1–08) ರುದ್ರೇಶ್‌ನಾಯ್ಕ ಬಿನ್ ಲೇ॥ ನಿಂಗಾನಾಯ್ಕ (ಮೇಲಿನ ಜಂಟಿ) ಮಹಾಂತೇಶ್‌ನಾಯ್ಕ ಬಿನ್ ಲೇ॥ ನಿಂಗಾನಾಯ್ಕ (ಮೇಲಿನ ಜಂಟಿ)	231/*	3–00	0–06.00	0–08.08	–	ಖುಷ್ಕಿ	ಲಾ.ಸ.ನಂ 230	ಲಾ.ಸ.ನಂ 223	ಉಳಿಕೆ ಜಮೀನು	ರೈಲ್ವೆಗೆ ಭೂಸ್ವಾಧೀನ	LHS And RHS ಗೆ ಭೂಸ್ವಾಧೀನ ಮತ್ತು ರಿ.ಸ.ನಂ 231/* ರಲ್ಲಿ ಹೆಚ್ಚುವರಿ ಯಾಗಿ ಭೂಸ್ವಾಧೀನ ವಾಗುವ ಕ್ಷೇತ್ರದಲ್ಲಿ ಆರ್.ಟಿ.ಸಿ. ಯಂತೆ ಖಾತೆ ದಾರರು ಅನುಭವ ದಲ್ಲಿ ಇದ್ದು ಅದರ ವಿಸ್ತೀರ್ಣ 0ಎ–06 ಗುಂ ಮತ್ತು ಇದೆ ಸ.ನಂ. ನಲ್ಲಿ ರಿ.ಸ.ನಂ 230 ರ ಪಹಣಿ ದಾರರಾದ ಶ್ರೀ ಶೇಖರ ನಾಯ್ಕ ಬಿನ್ ತಾವರ ನಾಯ್ಕ ರವರು ಅನುಭವ ದಲ್ಲಿ ಇದ್ದು ಅದರ ವಿಸ್ತೀರ್ಣ 0ಎ–02 ಗು–8 ಆ ಪ್ರದೇಶವು ಹೆಚ್ಚುವರಿ ಭೂಸ್ವಾಧೀನ ವ್ಯಾಪ್ತಿಗೆ ಒಳ ಪಟ್ಟಿರುತ್ತದೆ.
		ಒಟ್ಟು				1–31.02	2–02.08						

11(1) ಅನುಸೂಚಿ

ಜಿಲ್ಲೆ: ದಾವಣಗೆರೆ ತಾಲ್ಲೂಕು: ದಾವಣಗೆರೆ ಹೋಬಳಿ: ಆನಗೋಡು ಗ್ರಾಮ: ಪಂಜೇನಹಳ್ಳಿ

1	ಶ್ರೀ ಕೋಟ್ರೇಶಿ ಬಿನ್ ಲೇ॥ ಟಿ.ಮೇಲಪ್ಪ	ಶ್ರೀ ಕೋಟ್ರೇಶಿ ಬಿನ್ ಲೇ॥ ಟಿ.ಮೇಲಪ್ಪ	9/5	1–08.00	–	0–00.08	–	ಖುಷ್ಕಿ	ಲಾ.ಹಿ.ನಂ 10	ಉಳಿಕೆ ಜಮೀನು	ಉಳಿಕೆ ಜಮೀನು	ಲಾ.ಸ. ನಂ 12	–
2	ಗಿರಿಜಮ್ಮ ಕೋಂ ಶೇಖರಪ್ಪ	ಗಿರಿಜಮ್ಮ ಕೋಂ ಶೇಖರಪ್ಪ	9/10	0–05.08	0–05.08	0–03.00	–	ಖುಷ್ಕಿ	ರೈಲ್ವೆಗೆ ಭೂಸ್ವಾಧೀನ	ಲಾ.ಹಿ. ನಂ 5	ಉಳಿಕೆ ಜಮೀನು	ಲಾ.ಸ. ನಂ 12	–
3	ಹುಃಖರಾಬು ಸರ್ಕಾರಿ ಹೊಂಡ	ಹುಃಖರಾಬು ಸರ್ಕಾರಿ ಹೊಂಡ	10/*	4–18.00	–	–	0–16.00	ಖುಷ್ಕಿ	ಉಳಿಕೆ ಜಮೀನು	ಉಳಿಕೆ ಜಮೀನು	ಉಳಿಕೆ ಜಮೀನು	ಉಳಿಕೆ ಜಮೀನು	ರೈಲ್ವೆಗೆ ಭೂ ಸ್ವಾಧೀನ ರಿ.ಸ.ನಂ 10/* ಆಕಾರ ಬಿದಿ ನಂತೆ 4–18 4–18 0–00 ಖರಾಬು ಇದ್ದು ಆರ್..ಟಿ.ಸಿ. ಯಂತೆ 4–18 0–00 4–18 ಇರುತ್ತದೆ. ಆಕಾರ ಬಂದ್ ಹಾಗೂ ಆರ್.ಟಿ.ಸಿ ತಾಳೆ ಇಲ್ಲ ಹಾಗೂ ಸ್ಥಳದಲ್ಲಿ 0–06 ಗುಂಟೆ ಜಾಗವನ್ನು ಅನಧೀಕೃತ ಸಾಗುವಳಿ ಮಾಡಿರುವುದು ಕಂಡು ಬಂದಿರುತ್ತದೆ ಈ ಕುರಿತು ಸ್ಥಳದಲ್ಲಿ ಸಾಗುವಳಿ ದಾರರ ಹೆಸರು ತಿಳಿದಿ ರುವುದಿಲ್ಲ.
4	ಕೆ.ಜಿ.ಜಗದೀಶ್ ಬಿನ್ ಗೋಣಿಪ್ಪ ಶಿವಣ್ಣ ಬಿನ್ ಗೋಣಿಪ್ಪ ಕೆ.ಜಿ.ಬಸವರಾಜಪ್ಪ ಬಿನ್ ಗೋಣಿಪ್ಪ ಕೆ.ಜಿ.ಜಗದೀಶ್ ಬಿನ್ ಗೋಣಿಪ್ಪ	ಕೆ.ಜಿ.ಜಗದೀಶ್ ಬಿನ್ ಗೋಣಿಪ್ಪ ಶಿವಣ್ಣ ಬಿನ್ ಗೋಣಿಪ್ಪ ಕೆ.ಜಿ.ಬಸವರಾಜಪ್ಪ ಬಿನ್ ಗೋಣಿಪ್ಪ ಕೆ.ಜಿ.ಜಗದೀಶ್ ಬಿನ್ ಗೋಣಿಪ್ಪ	12/1	8–36.00	0–09.00	0–04.00	–	ಖುಷ್ಕಿ	ಲಾ.ಹಿ. ನಂ 2	ಲಾ.ಸ. ನಂ 27	ಲಾ.ಸ. ನಂ 9	ಉಳಿಕೆ ಜಮೀನು	–
5	ಸಾವಿತ್ರಮ್ಮ ಕೋಂ ಶರಣಪ್ಪ	ಸಾವಿತ್ರಮ್ಮ ಕೋಂ ಶರಣಪ್ಪ	12/2	3–05.08	0–02.00	0–00.08	–	ಖುಷ್ಕಿ	ರೈಲ್ವೆಗೆ ಭೂಸ್ವಾಧೀನ	ಲಾ.ಹಿ. ನಂ 1	ಲಾ.ಸ. ನಂ 9	ಉಳಿಕೆ ಜಮೀನು	–
6	ಕೃಷ್ಣಪ್ಪ ಬಿನ್ ತಿಮ್ಮಪ್ಪ ಗೋವಿಂದಪ್ಪ ಬಿನ್ ತಿಮ್ಮಪ್ಪ	ಕೃಷ್ಣಪ್ಪ ಬಿನ್ ತಿಮ್ಮಪ್ಪ ಗೋವಿಂದಪ್ಪ ಬಿನ್ ತಿಮ್ಮಪ್ಪ	27/*	10–16.00	1–18.00	0–05.00	–	ಖುಷ್ಕಿ	ಲಾ.ಸ.ನಂ 12 ಉಳಿಕೆ ಜಮೀನು	ಉಳಿಕೆ ಜಮೀನು	ಲಾ.ಸ.ನಂ 9	ಉಳಿಕೆ ಜಮೀನು	–
			ಒಟ್ಟು			0–13.00	0–16.00						

11(1) ಅನುಸೂಚಿ

ಜಿಲ್ಲೆ: ದಾವಣಗೆರೆ ತಾಲ್ಲೂಕು: ದಾವಣಗೆರೆ ಹೋಬಳಿ: ಆನಗೋಡು ಗ್ರಾಮ: ಹುಣಸೇಕಟ್ಟೆ

1	ಗೋಮಾಳ ದುರುಗಪ್ಪ ಬಿನ್ ರಾಮಪ್ಪ ರತ್ನಮ್ಮ ಕೋಂ ರಾಮಪ್ಪ ಚನ್ನಪ್ಪ ಬಿನ್ ಕೆಂಗಪ್ಪ ಕೆಂಚಮ್ಮ ಕೋಂ ಚನ್ನಪ್ಪ ಮಹಾಲಿಂಗಮ್ಮ ಕೋಂ ಲೇ॥ ನಿಜಲಿಂಗಪ್ಪ ವೀಣಾ ಬಿನ್ ಲೇ॥ ನಿಜಲಿಂಗಪ್ಪ ಪ್ರಭಾಕರ ಬಿನ್ ಲೇ॥ ನಿಜಲಿಂಗಪ್ಪ ತಾರ ಬಿನ್ ಲೇ॥ ನಿಜಲಿಂಗಪ್ಪ ಸುನೀಲ್ ಬಿನ್ ಲೇ॥ ನಿಜಲಿಂಗಪ್ಪ ಜಿಲ್ಲಾ ಪೋಲೀಸ್ ಸಿಬ್ಬಂದಿಯ ವಾರ್ಷಿಕ ಗುರಿ ತರಬೇತಿ ನಡೆಸಲು ಫೈರಿಂಗ್ ರೇಂಜ್ ಉದ್ದೇಶಕ್ಕಾಗಿ ಹೆಚ್.ಆರ್.ಶಂಕ್ರಪ್ಪ ಬಿನ್ ರುದ್ರಪ್ಪ ಸ್ಮಶಾನದ ಉದ್ದೇಶಕ್ಕಾಗಿ	ಗೋಮಾಳ ದುರುಗಪ್ಪ ಬಿನ್ ರಾಮಪ್ಪ ರತ್ನಮ್ಮ ಕೋಂ ರಾಮಪ್ಪ ಚನ್ನಪ್ಪ ಬಿನ್ ಕೆಂಗಪ್ಪ ಕೆಂಚಮ್ಮ ಕೋಂ ಚನ್ನಪ್ಪ ಮಹಾಲಿಂಗಮ್ಮ ಕೋಂ ಲೇ॥ ನಿಜಲಿಂಗಪ್ಪ ವೀಣಾ ಬಿನ್ ಲೇ॥ ನಿಜಲಿಂಗಪ್ಪ ಪ್ರಭಾಕರ ಬಿನ್ ಲೇ॥ ನಿಜಲಿಂಗಪ್ಪ ತಾರ ಬಿನ್ ಲೇ॥ ನಿಜಲಿಂಗಪ್ಪ ಸುನೀಲ್ ಬಿನ್ ಲೇ॥ ನಿಜಲಿಂಗಪ್ಪ ಜಿಲ್ಲಾ ಪೋಲೀಸ್ ಸಿಬ್ಬಂದಿಯ ವಾರ್ಷಿಕ ಗುರಿ ತರಬೇತಿ ನಡೆಸಲು ಫೈರಿಂಗ್ ರೇಂಜ್ ಉದ್ದೇಶಕ್ಕಾಗಿ ಹೆಚ್.ಆರ್.ಶಂಕ್ರಪ್ಪ ಬಿನ್ ರುದ್ರಪ್ಪ ಸ್ಮಶಾನದ ಉದ್ದೇಶಕ್ಕಾಗಿ	23/*	37–04.00	6–10.00	–	0–06.00	ಖುಷ್ಕಿ	ಉಳಿಕೆ ಜಮೀನು ಲಾ.ಸ.ನಂ 24	ಉಳಿಕೆ ಜಮೀನು ಲಾ.ಸ.ನಂ 133	ರೈಲ್ವೆಗೆ ಭೂಸ್ವಾಧೀನ ಲಾ.ಸ.ನಂ 133	ಉಳಿಕೆ ಜಮೀನು	ರಿ.ಸ.ನಂ 23 ರ ಆಕಾರ ಬಂದ್ ವಿಸ್ತೀರ್ಣಕ್ಕೆ ಆರ್.ಟಿ.ಸಿ ವಿಸ್ತೀರ್ಣಕ್ಕೆ ತಾಳೆ ಇರುವುದಿಲ್ಲ
2	ಅಂಜಿನಮ್ಮ ಕೋಂ ಲೇ॥ ರಂಗಪ್ಪ ಬಸವರಾಜಪ್ಪ.ಆರ್ ಬಿನ್ ಲೇ॥ ರಂಗಪ್ಪ.ಟಿ	ಅಂಜಿನಮ್ಮ ಕೋಂ ಲೇ॥ ರಂಗಪ್ಪ ಬಸವರಾಜಪ್ಪಆರ್ ಬಿನ್ ಲೇ॥ ರಂಗಪ್ಪ.ಟಿ	26/6	6–05.00	0–05.00	0–01.08	–	ಖುಷ್ಕಿ	ಉಳಿಕೆ ಜಮೀನು	ಉಳಿಕೆ ಜಮೀನು	ಲಾ.ಸ.ನಂ 28	ಉಳಿಕೆ ಜಮೀನು	–
3	ದ್ಯಾಮಮ್ಮ ಕೋಂ ಲೇ॥ ಉಮಾಪತಿಯಪ್ಪ ವಿಜಯಕುಮಾರ್ ಬಿನ್ ಲೇ॥ ಉಮಾಪತಿಯಪ್ಪ ರವಿಕುಮಾರ್ ಬಿನ್ ಲೇ॥ ಉಮಾಪತಿಯಪ್ಪ ಶೈಲಜಾ ಬಿನ್ ಲೇ॥ ಉಮಾಪತಿಯಪ್ಪ ದ್ಯಾಮಮ್ಮ ಕೋಂ ಲೇ॥ ಉಮಾಪತಿಯಪ್ಪ ವಿಜಯಕುಮಾರ್ ಬಿನ್ ಲೇ॥ ಉಮಾಪತಿಯಪ್ಪ ರವಿಕುಮಾರ್ ಬಿನ್ ಲೇ॥ ಉಮಾಪತಿಯಪ್ಪ ಶೈಲಜಾ ಬಿನ್ ಲೇ॥ ಉಮಾಪತಿಯಪ್ಪ	ದ್ಯಾಮಮ್ಮ ಕೋಂ ಲೇ॥ ಉಮಾಪತಿಯಪ್ಪ ವಿಜಯಕುಮಾರ್ ಬಿನ್ ಲೇ॥ ಉಮಾಪತಿಯಪ್ಪ ರವಿಕುಮಾರ್ ಬಿನ್ ಲೇ॥ ಉಮಾಪತಿಯಪ್ಪ ಶೈಲಜಾ ಬಿನ್ ಲೇ॥ ಉಮಾಪತಿಯಪ್ಪ ದ್ಯಾಮಮ್ಮ ಕೋಂ ಲೇ॥ ಉಮಾಪತಿಯಪ್ಪ ವಿಜಯಕುಮಾರ್ ಬಿನ್ ಲೇ॥ ಉಮಾಪತಿಯಪ್ಪ ರವಿಕುಮಾರ್ ಬಿನ್ ಲೇ॥ ಉಮಾಪತಿಯಪ್ಪ ಶೈಲಜಾ ಬಿನ್ ಲೇ॥ ಉಮಾಪತಿಯಪ್ಪ	28/6	3–12.00	–	0–01.08	–	ಖುಷ್ಕಿ	ಲಾ.ಸ.ನಂ 124	ಉಳಿಕೆ ಜಮೀನು	ಉಳಿಕೆ ಜಮೀನು	ಲಾ.ಹಿ. ನಂ 7	–
4	ಹೆಚ್.ಕೆ.ಶೇಖರಪ್ಪ ಬಿನ್ ಈಶ್ವರಪ್ಪ ಭರ್ಮಪ್ಪ ಬಿನ್ ಬಸಪ್ಪ	ಹೆಚ್.ಕೆ.ಶೇಖರಪ್ಪ ಬಿನ್ ಈಶ್ವರಪ್ಪ ಭರ್ಮಪ್ಪ ಬಿನ್ ಬಸಪ್ಪ	28/7	14–26.00	0–07.00	0–07.00	–	ಖುಷ್ಕಿ	ಲಾ.ಸ. ನಂ 125 ಉಳಿಕೆ ಜಮೀನು	ಉಳಿಕೆ ಜಮೀನು	ಲಾ.ಹಿ. ನಂ 6	ಲಾ.ಸ. ನಂ 26	–
5	ಚಿತ್ರಮ್ಮ ಕೋಂ ಲೇ॥ ಪರಶುರಾಮಪ್ಪ ರುದ್ರಸ್ವಾಮಿ ಬಿನ್ ಲೇ॥ ಪರಶುರಾಮಪ್ಪ	ಚಿತ್ರಮ್ಮ ಕೋಂ ಲೇ॥ ಪರಶುರಾಮಪ್ಪ ರಯದ್ರಸ್ವಾಮಿ ಬಿನ್ ಲೇ॥ ಪರಶುರಾಮಪ್ಪ	130/*	4–00	–	0–12.00	–	ಖುಷ್ಕಿ	ಉಳಿಕೆ ಜಮೀನು	ಉಳಿಕೆ ಜಮೀನು	ಉಳಿಕೆ ಜಮೀನು	ರೈಲ್ವೆಗೆ ಭೂಸ್ವಾಧೀನ	–
6	ಚನ್ನಪ್ಪ ಬಿನ್ ಕೆಂಗಪ್ಪ ಕೆಂಚಮ್ಮ ಕೋಂ ಚನ್ನಪ್ಪ (ಜಂಟಿ) (23)	ಚನ್ನಪ್ಪ ಬಿನ್ ಕೆಂಗಪ್ಪ ಕೆಂಚಮ್ಮ ಕೋಂ ಚನ್ನಪ್ಪ (ಜಂಟಿ) (23)	23 (ಪೋಡಿ ಯಂತೆ 133/*)	1–35.00	–	0–03.00	–	ಖುಷ್ಕಿ	ಲಾ.ಸ.ನಂ 23 ಉಳಿಕೆ ಜಮೀನು	ಉಳಿಕೆ ಜಮೀನು	ರೈಲ್ವೆಗೆ ಭೂಸ್ವಾಧೀನ	ಲಾ.ಸ.ನಂ 23	ರಿ.ಸ.ನಂ 23 ಆರ್.ಟಿ.ಸಿ. ದಾರರ ಜಮೀನು ಆರ್.ಟಿ.ಸಿ. ಯಂತೆ 1–35 0–00 1–35 ಇದ್ದು ಆಕಾರ ಬಂದ್ ನಂತೆ ರಿ.ಸ.ನಂ 133/* 1–35 0–00 1–35 ಖುಷ್ಕಿ ವಿಸ್ತೀರ್ಣಕ್ಕೆ ದುರಸ್ತಿ ಯಾಗಿರುತ್ತದೆ.
		ಒಟ್ಟು				0–25.00	0–06.00						

11(1) ಅನುಸೂಚಿ

ಜಿಲ್ಲೆ: ದಾವಣಗೆರೆ ತಾಲ್ಲೂಕು: ದಾವಣಗೆರೆ ಹೋಬಳಿ: ಆನಗೋಡು ಗ್ರಾಮ: ನೀರ್ಥಡಿ

1	ಎನ್.ಟಿ.ಕೊಟ್ರೇಶಿ ಬಿನ್ ಎನ್.ಕೆ.ತಿಪ್ಪೇಸ್ವಾಮಿ	ಎನ್.ಟಿ.ಕೊಟ್ರೇಶಿ ಬಿನ್ ಎನ್.ಕೆ.ತಿಪ್ಪೇಸ್ವಾಮಿ	9/1	1–33.08	0–02.08	–	0–02.08	ಖುಷ್ಕಿ	ಲಾ.ಸ.ನಂ 23	ಉಳಿಕೆ ಜಮೀನು	ಲಾ.ಹಿ. ನಂ 4	ಲಾ.ಹಿ. ನಂ 2	
2	ಎನ್.ಟಿ.ಕೊಟ್ರೇಶಿ ಬಿನ್ ಎನ್.ಕೆ.ತಿಪ್ಪೇಸ್ವಾಮಿ	ಎನ್.ಟಿ.ಕೊಟ್ರೇಶಿ ಬಿನ್ ಎನ್.ಕೆ.ತಿಪ್ಪೇಸ್ವಾಮಿ	9/2	0–09.04	0–00.04	–	0–00.04	ಖುಷ್ಕಿ	ಲಾ.ಸ.ನಂ 23	ಉಳಿಕೆ ಜಮೀನು	ಲಾ.ಹಿ. ನಂ 1	ಲಾ.ಹಿ. ನಂ 3	
3	ಸುಜಾತ.ಎನ್.ಟಿ ಬಿನ್ ಲೇ॥ ಎನ್.ತಿಪ್ಪೇಸ್ವಾಮಿ ಉಮಾಶಂಕರ್.ಎನ್.ಟಿ ಬಿನ್ ಲೇ॥ ಎನ್.ತಿಪ್ಪೇಸ್ವಾಮಿ	ಸುಜಾತ.ಎನ್.ಟಿ ಬಿನ್ ಲೇ॥ ಎನ್.ತಿಪ್ಪೇಸ್ವಾಮಿ ಉಮಾಶಂಕರ್.ಎನ್.ಟಿ ಬಿನ್ ಲೇ॥ ಎನ್.ತಿಪ್ಪೇಸ್ವಾಮಿ	9/3	2–39.12	0–03.12	–	0–03.12	ಖುಷ್ಕಿ	ಲಾ.ಸ.ನಂ 23	ಉಳಿಕೆ ಜಮೀನು	ಲಾ.ಹಿ. ನಂ 2	ಲಾ.ಸ. ನಂ 8	
4	ಎನ್.ಟಿ.ಮಂಜುನಾಥ ಬಿನ್ ಎನ್.ಕೆ.ತಿಪ್ಪೇಸ್ವಾಮಿ	ಎನ್.ಟಿ.ಮಂಜುನಾಥ ಬಿನ್ ಎನ್.ಕೆ.ತಿಪ್ಪೇಸ್ವಾಮಿ	9/4	1–23	0–03.00	–	0–03.00	ಖುಷ್ಕಿ	ಉಳಿಕೆ ಜಮೀನು	ಲಾ.ಸ.ನಂ. 23	ಉಳಿಕೆ ಜಮೀನು	ಲಾ.ಹಿ. ನಂ 6	ಲಾ.ಹಿ. ನಂ 1
5	ಎನ್.ಟಿ.ಬಸವರಾಜ ಬಿನ್ ಎನ್.ಕೆ.ತಿಪ್ಪೇಸ್ವಾಮಿ	ಎನ್.ಟಿ.ಬಸವರಾಜ ಬಿನ್ ಎನ್.ಕೆ.ತಿಪ್ಪೇಸ್ವಾಮಿ	9/5	1–39.12	0–02.00	–	0–02.00	ಖುಷ್ಕಿ	ಉಳಿಕೆ ಜಮೀನು	ಉಳಿಕೆ ಜಮೀನು	ರೈಲ್ವೆಗೆ ಭೂಸ್ವಾಧೀನ	ಲಾ.ಹಿ. ನಂ 6	
6	ಎನ್.ಟಿ.ಬಸವರಾಜ ಬಿನ್ ತಿಪ್ಪೇಸ್ವಾಮಿ ಭೂ.ಪ	ಎನ್.ಟಿ.ಬಸವರಾಜ ಬಿನ್ ತಿಪ್ಪೇಸ್ವಾಮಿ ಭೂ.ಪ	9/6	0–21.00	0–01.00	–	0–01.00	ಖುಷ್ಕಿ	ಉಳಿಕೆ ಜಮೀನು	ಉಳಿಕೆ ಜಮೀನು	ಲಾ.ಹಿ. ನಂ 5	ಲಾ.ಹಿ. ನಂ 4	
7	ಎನ್.ಕೆ.ರಾಜಶೇಖರಪ್ಪ ಬಿನ್ ಕೊಟ್ರಪ್ಪ	ಎನ್.ಕೆ.ರಾಜಶೇಖರಪ್ಪ ಬಿನ್ ಕೊಟ್ರಪ್ಪ	15/1	4–00	–	0–01.08	–	ಖುಷ್ಕಿ	ಉಳಿಕೆ ಜಮೀನು	ಲಾ.ಸ.ನಂ 16	ಉಳಿಕೆ ಜಮೀನು	ಲಾ.ಸ.ನಂ 14 & ರೈಲ್ವೆಗೆ ಭೂಸ್ವಾಧೀನ	
8	ಎನ್.ಕೆ.ರಾಜಶೇಖರಪ್ಪ ಬಿನ್ ಅಂಗಡಿ ಕೊಟ್ರಪ್ಪ	ಎನ್.ಕೆ.ರಾಜಶೇಖರಪ್ಪ ಬಿನ್ ಅಂಗಡಿ ಕೊಟ್ರಪ್ಪ	16/1	3–11.00	0–05.00	0–03.00	–	ಖುಷ್ಕಿ	ಲಾ.ಸ.ನಂ 15	ಉಳಿಕೆ ಜಮೀನು	ಉಳಿಕೆ ಜಮೀನು	ಲಾ.ಹಿ.ನಂ 4	
9	ಶಾರದಮ್ಮ ಕೋಂ ವೀರಭದ್ರಪ್ಪ	ಶಾರದಮ್ಮ ಕೋಂ ವೀರಭದ್ರಪ್ಪ	16/4	3–00	0–04.00	0–03.00	–	ಖುಷ್ಕಿ	ಲಾ.ಸ. ನಂ 15	ಉಳಿಕೆ ಜಮೀನು	ಲಾ.ಹಿ. ನಂ 1	ರೈಲ್ವೆಗೆ ಭೂಸ್ವಾಧೀನ	–
10	ವೀರಭದ್ರಪ್ಪ ಬಿನ್ ಲೇ॥ ರುದ್ರಪ್ಪ ಬಳೆಗಾರ್	ವೀರಭದ್ರಪ್ಪ ಬಿನ್ ಲೇ॥ ರುದ್ರಪ್ಪ ಬಳೆಗಾರ್	16/5	3–06.00	0–06.00	0–06.00	–	ಖುಷ್ಕಿ	ಲಾ.ಸ.ನಂ 15	ಉಳಿಕೆ ಜಮೀನು	ರೈಲ್ವೆಗೆ ಭೂಸ್ವಾಧೀನ	ಲಾ.ಸ. ನಂ 14	–
11	ಮಲ್ಲಪ್ಪ ಬಿನ್ ಕೃಷ್ಣಪ್ಪ	ಮಲ್ಲಪ್ಪ ಬಿನ್ ಕೃಷ್ಣಪ್ಪ	20/2	8–35.00	0–08.00	–	0–08.00	ಖುಷ್ಕಿ	ಉಳಿಕೆ ಜಮೀನು	ಉಳಿಕೆ ಜಮೀನು	ಲಕ್ಕಮು ಕ್ಕೇನಹಳ್ಳಿ ಗ್ರಾಮ ಗಡಿ	ಲಾ.ಹಿ. ನಂ 9	–
12	ಮಲ್ಲಪ್ಪ ಬಿನ್ ಸಿದ್ದಪ್ಪ	ಮಲ್ಲಪ್ಪ ಬಿನ್ ಸಿದ್ದಪ್ಪ	20/4	9–16.00	1–16.00	–	0–26.00	ಖುಷ್ಕಿ	ಉಳಿಕೆ ಜಮೀನು	ಉಳಿಕೆ ಜಮೀನು	ಲಾ.ಹಿ. ನಂ 9	ರೈಲ್ವೆಗೆ ಭೂಸ್ವಾಧೀನ	–
13	ಅಂಗಡಿ ಲಕ್ಷ್ಮಿ ಕೋಂ ಲೇ॥ ಎನ್.ಮಹೇಶ್ ಉಲ್ಲಸ್.ಜಿ.ಎಂ ಮೈ॥ಗಾ॥ ತಾಯಿ ಅಂಗಡಿ ಲಕ್ಷ್ಮೀ ಸ್ನೇಹಾ.ಜಿ.ಎಂ ಮೈ॥ಗಾ॥ ತಾಯಿ ಅಂಗಡಿ ಲಕ್ಷ್ಮೀ ತನುಶ್ರೀ.ಜಿ.ಎಂ ಮೈ॥ಗಾ॥ ತಾಯಿ ಅಂಗಡಿ ಲಕ್ಷ್ಮೀ	ಅಂಗಡಿ ಲಕ್ಷ್ಮಿ ಕೋಂ ಲೇ॥ ಎನ್.ಮಹೇಶ್ ಉಲ್ಲಸ್.ಜಿ.ಎಂ ಮೈ॥ಗಾ॥ ತಾಯಿ ಅಂಗಡಿ ಲಕ್ಷ್ಮೀ ಸ್ನೇಹಾ.ಜಿ.ಎಂ ಮೈ॥ಗಾ॥ ತಾಯಿ ಅಂಗಡಿ ಲಕ್ಷ್ಮೀ ತನುಶ್ರೀ.ಜಿ.ಎಂ ಮೈ॥ಗಾ॥ ತಾಯಿ ಅಂಗಡಿ ಲಕ್ಷ್ಮೀ	20/9	0–32.08	0–06.00	–	0–06.00	ಖುಷ್ಕಿ	ಉಳಿಕೆ ಜಮೀನು	ಉಳಿಕೆ ಜಮೀನು	ಲಾ.ಹಿ. ನಂ 2	ಲಾ.ಹಿ. ನಂ 4	–
14	ಹೆಚ್.ಎಂ.ರೇಣುಕಮ್ಮ ಬಿನ್ ಲೇ॥ ಹೆಚ್.ಎಂ. ಮಹದೇವಯ್ಯ ಪುಷ್ಪಾವತಿ ಬಿನ್ ಲೇ॥ ಹೆಚ್.ಎಂ.ಮಹದೇವಯ್ಯ ಹೆಚ್.ಎಂ.ಶಿವಕುಮಾರಯ್ಯ ಬಿನ್ ಲೇ॥ ಹೆಚ್.ಎಂ. ಮಹದೇವಯ್ಯ ಹೆಚ್.ಎಂ.ಶಿವಶಂಕರ ಮೂರ್ತಿ ಬಿನ್ ಲೇ॥ ಹೆಚ್.ಎಂ. ಮಹದೇವಯ್ಯ	ಹೆಚ್.ಎಂ.ರೇಣುಕಮ್ಮ ಬಿನ್ ಲೇ॥ ಹೆಚ್.ಎಂ. ಮಹದೇವಯ್ಯ ಪುಷ್ಪಾವತಿ ಬಿನ್ ಲೇ॥ ಹೆಚ್.ಎಂ.ಮಹದೇವಯ್ಯ ಹೆಚ್.ಎಂ.ಶಿವಕುಮಾರಯ್ಯ ಬಿನ್ ಲೇ॥ ಹೆಚ್.ಎಂ. ಮಹದೇವಯ್ಯ ಹೆಚ್.ಎಂ.ಶಿವಶಂಕರ ಮೂರ್ತಿ ಬಿನ್ ಲೇ॥ ಹೆಚ್.ಎಂ. ಮಹದೇವಯ್ಯ	21/5	3–03.00	0–03.00	0–14.08	–	ಖುಷ್ಕಿ	ಉಳಿಕೆ ಜಮೀನು	ಉಳಿಕೆ ಜಮೀನು	ಲಾ.ಹಿ. ನಂ 15	ಲಾ.ಹಿ. ನಂ 6	

ದೇವಗೊಂಡನಹಳ್ಳಿಯಲ್ಲಿ ವೈರಲ್ ಜ್ವರ: ಕೀಲುನೋವಿನಿಂದ ಬಳಲುತ್ತಿರುವ ಜನ

ಊರನ್ನೇ ಕಾಡುತ್ತಿರುವ ಅನಾರೋಗ್ಯ

• ವಿಜಯಕುಮಾರ್ ಎಸ್.ಕೆ.

ಚಿಕ್ಕಮಗಳೂರು: ಬಾಡಿದ ಮುಖ, ಊದಿಕೊಂಡ ಕಾಲುಗಳು, ಕುಳಿತರೆ ಮೇಲೇಳಲು ಸಾಧ್ಯವಾಗದ ಸ್ಥಿತಿ, ದಿನವಿಡೀ ಜಗುಲಿ ಮೇಲೆಯೇ ಕುಳಿತುಕೊಳ್ಳುವ ಜನ, ಹಾಸಿಗೆ ಹಿಡಿದಿರುವ ಇನ್ನಷ್ಟು ಜನ... ಇದು ತಾಲ್ಲೂಕಿನ ದೇವಗೊಂಡನಹಳ್ಳಿಯ ಸ್ಥಿತಿ.

ಜಿಲ್ಲೆಯಾದ್ಯಂತ ಡೆಂಗಿ ಜ್ವರ ಜನರನ್ನು ಕಾಡುತ್ತಿದೆ. ಅದರಲ್ಲೂ ನಗರ ಪ್ರದೇಶದಲ್ಲಿ ಡೆಂಗಿ ಹೆಚ್ಚಿದ್ದರೆ, ಗ್ರಾಮೀಣ ಭಾಗದಲ್ಲಿ ವೈರಲ್ ಜ್ವರದಿಂದ ಜನ ಪರಿತಪಿಸುತ್ತಿದ್ದಾರೆ.

ದೇವಗೊಂಡನಹಳ್ಳಿಯ ಯಾವ ಮನೆಗೆ ಹೋದರೂ ಅನಾರೋಗ್ಯಕ್ಕೆ ತುತ್ತಾಗಿರುವ ಜನರಿದ್ದಾರೆ. ಕೆಲ ಮನೆಗಳಲ್ಲಿ ಇಡೀ ಕುಟುಂಬವೇ ಜ್ವರ, ಕೈಕಾಲು ನೋವು, ಕಾಲು ಊತ, ಸೊಂಟ ಮತ್ತು ಕೀಲು ನೋವುಗಳಿಂದ ಬಳಲುತ್ತಿದೆ. ಕಳೆದ ಎರಡು ತಿಂಗಳಿಂದ ಈ ಊರಿನ ಜನರಿಗೆ ಅನಾರೋಗ್ಯ ಕಾಡುತ್ತಿದೆ. ಒಂದೆಡೆ ಡೆಂಗಿ ಕಾಡುತ್ತಿದ್ದರೆ, ಮತ್ತೊಂದೆಡೆ ಚಿಕೂನ್‌ಗುನ್ಯ ರೀತಿಯ ಕಾಯಿಲೆಯಿಂದ ಜನ ತೊಂದರೆ ಅನುಭವಿಸುತ್ತಿದ್ದಾರೆ. ಸರ್ಕಾರಿ ಆಸ್ಪತ್ರೆ ಮತ್ತು ಖಾಸಗಿ ಆಸ್ಪತ್ರೆಗಳಿಗೆ ಅಲೆದು ಸುಸ್ತಾಗಿದ್ದಾರೆ.

ಲಾರ್ವಾ ಸರ್ವೆ ನಿರಂತರವಾಗಿ ನಡೆಯುತ್ತಿದೆ. ಗುರುವಾರ ನಾನೇ ಭೇಟಿ ನೀಡಿ ಪರಿಶೀಲಿಸುತ್ತೇನೆ. ಅಗತ್ಯವಿದ್ದರೆ ತಕ್ಷಣವೇ ಜ್ವರ ತಪಾಸಣೆ ಕ್ಲಿನಿಕ್ ತೆರೆಯಲಾಗುವುದು

ಡಾ.ಸೀಮಾ, ತಾಲ್ಲೂಕು ವೈದ್ಯಾಧಿಕಾರಿ

‘ಎರಡು ತಿಂಗಳಿಂದ ಮನೆಯಲ್ಲೇ ಕುಳಿತಿದ್ದೇನೆ. ಎದ್ದು ತಿರುಗಾಡಲು ಸಾಧ್ಯವಾಗುತ್ತಿಲ್ಲ. ಸ್ವಲ್ಪ ಚೇತರಿಕೆ ಎನಿಸಿದಾಗ ಬೆಂಗಳೂರಿಗೆ ಹೋಗಿ ಟ್ಯಾಕ್ಸಿ ಚಾಲನೆ ಮಾಡಿದೆ. ಮತ್ತೆ ಕೀಲುನೋವು ಜಾಸ್ತಿ ಆಯಿತು. ವಾಪಸ್ ಬಂದು ಮನೆಯಲ್ಲೇ ಕುಳಿತಿದ್ದೇನೆ’ ಎಂದು ಅನಾರೋಗ್ಯಕ್ಕೆ ಒಳಗಾಗಿರುವ ಸತೀಶ್ ಹೇಳಿದರು.

‘ನಾನೊಬ್ಬನೇ ಅಲ್ಲ, ನಮ್ಮ ಮನೆಯಲ್ಲಿ ಮತ್ತು ಊರಿನ ಎಲ್ಲಾ ಮನೆಯಲ್ಲೂ ಇದೇ ಸ್ಥಿತಿ ಇದೆ. ವೈರಲ್ ಜ್ವರ ಎಂದು ಹೇಳುವ ವೈದ್ಯರು ಮನೆಗೆ ಹೋಗಿ ವಿಶ್ರಾಂತಿ ಪಡೆಯಲು ಹೇಳುತ್ತಿದ್ದಾರೆ’ ಎಂದರು.

‘ಮಹಿಳೆಯರು, ವೃದ್ಧರು, ಯುವಕರು ಎಲ್ಲರೂ ಇದೇ ಸ್ಥಿತಿಯಲ್ಲಿದ್ದಾರೆ. ಊಟ ಸೇರುತ್ತಿಲ್ಲ, ಶೌಚಾಲಯಕ್ಕೆ ಹೋಗಿ ಕುಳಿತರೆ ಮೇಲೆ ಏಳುವುದೇ ಕಷ್ಟ. ಊಟಕ್ಕೆ ಕುಳಿತು ಮುದ್ದೆ ಮುರಿಯೋಣ ಎಂದರೆ ಅದಕ್ಕೂ ಕೈ ಬೆರಳುಗಳು ಹೊಂದುತ್ತಿಲ್ಲ. ನೋವು ಬಾಧಿಸುತ್ತಿದೆ’ ಎಂದು ಮನೆ ಜಗುಲಿಯ ಮೇಲೆ ಕುಳಿತಿದ್ದ ಲಕ್ಕಮ್ಮ ಹೇಳಿದರು.

ಗ್ರಾಮದಲ್ಲಿ 400ಕ್ಕೂ ಹೆಚ್ಚು ಕುಟುಂಬಗಳು ಇವೆ. ಯಾವ ಮನೆಯನ್ನೂ ಒಂದು ತಿಂಗಳಿಂದ ಅನಾರೋಗ್ಯ ಕಾಡದೆ ಬಿಟ್ಟಿಲ್ಲ ಎಂದು ಗ್ರಾಮದವರು ಹೇಳುತ್ತಾರೆ. ‘ಯಾರೊಬ್ಬರಿಗೂ ಡೆಂಗಿ ಅಥವಾ ಚಿಕೂನ್ ಗುನ್ಯ ದೃಢಪಟ್ಟಿಲ್ಲ. ಶೀತಗಾಳಿ ಇರುವುದರಿಂದ ವೈರಲ್ ಜ್ವರ ಎಲ್ಲರಿಗೂ ಕಾಣಿಸಿಕೊಳ್ಳುತ್ತಿದೆ. ವಿಶ್ರಾಂತಿ ಪಡೆಯಲು ಸಲಹೆ ನೀಡುತ್ತಿದ್ದೇವೆ’ ಎಂದು ಸ್ಥಳೀಯ ವೈದ್ಯರು ತಿಳಿಸಿದರು.

ಎಲ್ಲರ ಮನೆಯಲ್ಲೂ ಅನಾರೋಗ್ಯ

‘ವೈದ್ಯರು ಊರಿಗೆ ಬಂದು ಪರಿಶೀಲನೆ ನಡೆಸಿಲ್ಲ. ನಾವೇ ಕಳಸಾಪುರ, ಸಿಂದಗೆರೆ, ಚಿಕ್ಕಮಗಳೂರಿನ ಆಸ್ಪತ್ರೆಗಳಿಗೆ ಹೋಗಿ ಬರುತ್ತಿದ್ದೇವೆ’ ಎಂದು ಗ್ರಾಮಸ್ಥರು ಹೇಳಿದರು.

‘ಮನೆಯಲ್ಲಿ ಎಲ್ಲರೂ ಅನಾರೋಗ್ಯಕ್ಕೆ ತುತ್ತಾಗಿದ್ದು, ಆರೈಕೆ ಮಾಡುವವರೇ ಇಲ್ಲವಾಗಿದ್ದಾರೆ. ಕೆಲ ಅನಾರೋಗ್ಯ ಪೀಡಿತರು ನೆಂಟರ ಮನೆಗಳಿಗೂ ಹೋಗಿದ್ದಾರೆ’ ಎಂದರು. ಎಲ್ಲರ ಮನೆಯ ಸ್ಥಿತಿಯೂ ಇದೇ ಆಗಿರುವುದರಿಂದ ಒಬ್ಬರಿಗೊಬ್ಬರು ಸಹಾಯ ಮಾಡುವ ಸ್ಥಿತಿಯಲ್ಲಿ ಇಲ್ಲ. ಇಡೀ ಗ್ರಾಮ ರೋಗಗ್ರಸ್ತವಾಗಿದೆ ಎಂದು ವಿವರಿಸಿದರು.

ಲಂಚ ಪಡೆದ ಕೆಎಸ್‌ಆರ್‌ಪಿ ಇನ್‌ಸ್ಪೆಕ್ಟರ್ ಬಂಧನ

ಪ್ರಜಾವಾಣಿ ವಾರ್ತೆ

ಮುಡಿಪು (ದಕ್ಷಿಣ ಕನ್ನಡ): ತಮ್ಮ ಅಧೀನದ ಸಿಬ್ಬಂದಿಯಿಂದ ಲಂಚ ಪಡೆದ, ಕರ್ನಾಟಕ ಪೊಲೀಸ್ ವಿಶೇಷ ಮೀಸಲು ಪಡೆಯ 7ನೇ ಬೆಟಾಲಿಯನ್‌ನ ಪೊಲೀಸ್ ಇನ್‌ಸ್ಪೆಕ್ಟರ್ ಮೊಹಮ್ಮದ್ ಆರೀಸ್ ಎಂಬವರನ್ನು ಲೋಕಾಯುಕ್ತ ಪೊಲೀಸರು ಬುಧವಾರ ಬಂಧಿಸಿದ್ದಾರೆ.

‘ಅತಿಥಿ ಗೃಹದಲ್ಲಿ ಕರ್ತವ್ಯ ನಿಯೋಜಿಸಲು ₹20 ಸಾವಿರ ಹಾಗೂ ಪ್ರತಿ ತಿಂಗಳು ₹6 ಸಾವಿರ ಹಣ ನೀಡಬೇಕು ಎಂದು ಕೆಎಸ್‌ಆರ್‌ಪಿ ಕಾನ್‌ಸ್ಟೆಬಲ್ ಬಳಿ ಮೊಹಮ್ಮದ್ ಆರೀಸ್ ಬೇಡಿಕೆ ಇಟ್ಟಿದ್ದರು. ಕಾನ್‌ಸ್ಟೆಬಲ್ ಅವರಿಂದ ಇದುವರೆಗೆ ₹50 ಸಾವಿರದಷ್ಟು ಲಂಚ ಪಡೆದಿದ್ದರು. ತಂದೆ ಅನಾರೋಗ್ಯಕ್ಕೆ ಒಳಗಾಗಿದ್ದರಿಂದ ಕಾನ್‌ಸ್ಟೆಬಲ್ ಮೂರು ತಿಂಗಳಿನಿಂದ ಲಂಚ ನೀಡಿರಲಿಲ್ಲ. ಬಾಕಿ ಹಣವನ್ನು ನೀಡದಿದ್ದರೆ ಡ್ಯೂಟಿ ಬದಲಾಯಿಸುತ್ತೇನೆ ಎಂದು ಇನ್‌ಸ್ಪೆಕ್ಟರ್ ತಿಳಿಸಿದ್ದರು. ಈ ಬಗ್ಗೆ ಕಾನ್‌ಸ್ಟೆಬಲ್ ದೂರು ನೀಡಿದ್ದರು. ₹18 ಸಾವಿರ ಲಂಚದ ಹಣವನ್ನು ಮೊಹಮ್ಮದ್ ಆರೀಸ್ ಬುಧವಾರ ಪಡೆದಿದ್ದರು. ಆಗ ಅವರನ್ನು ಬಂಧಿಸಲಾಯಿತು’ ಎಂದು ಜಿಲ್ಲಾ ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಎಸ್.ಪಿ. ನಟರಾಜ್ ತಿಳಿಸಿದ್ದಾರೆ.



ಮೊಹಮ್ಮದ್ ಆರಿಸ್

ಲೋಕಾಯುಕ್ತ ಡಿವೈಎಸ್‌ಪಿ ಗಾನ ಪಿ. ಕುಮಾರ್, ಚೆಲುವರಾಜ್ ಬಿ. ಮಾರ್ಗದರ್ಶನದಲ್ಲಿ ಇನ್‌ಸ್ಪೆಕ್ಟರ್ ಅಮಾನುಲ್ಲಾ ಎ., ಸುರೇಶ್ ಕುಮಾರ್ ಪಿ., ಚಂದ್ರಶೇಖರ್ ಸಿ.ಎಲ್. ಅವರು ಸಿಬ್ಬಂದಿ ಜೊತೆ ಕಾರ್ಯಾಚರಣೆ ಕೈಗೊಂಡಿದ್ದರು.

ಶಾಸಕ ಭರತ್ ಶೆಟ್ಟಿ ವಿರುದ್ಧ ಎಫ್‌ಐಆರ್

ಮಂಗಳೂರು: ಕಾವೂರಿನಲ್ಲಿ ಸೋಮವಾರ ನಡೆದಿದ್ದ ಪ್ರತಿಭಟನೆಯಲ್ಲಿ ಪ್ರಚೋದನಕಾರಿ ಹೇಳಿಕೆ ನೀಡಿದ ಆರೋಪದಡಿ ಮಂಗಳೂರು ಉತ್ತರ ಕ್ಷೇತ್ರದ ಶಾಸಕ ಡಾ.ವೈ.ಭರತ್ ಶೆಟ್ಟಿ ವಿರುದ್ಧ ಕಾವೂರು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಪಾಲಿಕೆ ಸದಸ್ಯ ಅನಿಲ್ ಕುಮಾರ್ ನೀಡಿದ ದೂರು ಆಧರಿಸಿ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 353ರ ಅಡಿ ಡಾ.ವೈ ಭರತ್ ಶೆಟ್ಟಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ನಗರ ಪೊಲೀಸ್ ಕಮಿಷನರ್ ಅನುಪಮ್ ಅಗರ್ವಾಲ್ ತಿಳಿಸಿದ್ದಾರೆ.

‘ಹಿಂದೂಗಳ ಕುರಿತು ರಾಹುಲ್ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ’ ಎಂದು ಆರೋಪಿಸಿ ಕಾವೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಡಾ.ಭರತ್ ಶೆಟ್ಟಿ, ‘ಪಾರ್ಲಿಮೆಂಟ್ ಒಳಗೆ ಹೋಗಿ ಯಾರಾದರೂ ರಾಹುಲ್ ಕೆನ್ನೆಗೆ ಎರಡು ಬಾರಿಸಿದರೆ ಒಳ್ಳೆಯದಿತ್ತು. ಎರಡು ಕೊಟ್ಟರೆ ಸರಿಯಾಗುತ್ತಿತ್ತು’ ಎಂದಿದ್ದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಬದುಕುವ ಆಸೆ ಇದ್ದರೆ ನಿನ್ನ ಶತ್ರುಗಳ ಕಣ್ಣೆದುರಲ್ಲೇ ಬದುಕು. ಅವರು ನಿನ್ನ ಎದುರು ಸುಳಿದಾಗಲೆಲ್ಲ ನಿನ್ನಲ್ಲಿ ಬದುಕುವ ಛಲ ಎಚ್ಚೆತ್ತುಕೊಳ್ಳುತ್ತದೆ.

–ಸ್ವಾಮಿ ವಿವೇಕಾನಂದ

ಮೋದಿ–ಪುಟಿನ್ ಭೇಟಿ ಗೆಳೆತನ ಗಾಢವಾಗಿಸುವ ಯತ್ನ

ಪ್ರಧಾನಿ ನರೇಂದ್ರ ಮೋದಿ ಅವರ ರಷ್ಯಾ ಭೇಟಿಯು ಭಾರತ–ರಷ್ಯಾ ನಡುವಿನ ಬಹುಕಾಲದ ಬಾಂಧವ್ಯವನ್ನು ಹೇಳುವ ಕೆಲಸ ಮಾಡಿದೆ. ಮೊದಲನೆಯದಾಗಿ ಈ ಭೇಟಿಯು ಉಭಯ ದೇಶಗಳ ನಡುವಿನ ವಾರ್ಷಿಕ ಶೃಂಗಸಭೆಗೆ ಮತ್ತೆ ಚಾಲನೆ ನೀಡಿದೆ. ಈ ಶೃಂಗಸಭೆಯು ಎರಡೂ ದೇಶಗಳ ನಾಯಕರ ನಡುವೆ ಮಾತುಕತೆಗೆ ಒಂದು ವೇದಿಕೆ. ಮೋದಿ ಅವರು ರಷ್ಯಾಕ್ಕೆ ಈ ಹಿಂದೆ ಭೇಟಿ ನೀಡಿದ್ದು 2019ರಲ್ಲಿ. ವ್ಲಾಡಿವೊಸ್ಟೊಕ್‌ನಲ್ಲಿ ನಡೆದ ಭಾರತ–ರಷ್ಯಾ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಅವರು ಆಗ ತೆರಳಿದ್ದರು. ಅದಾದ ನಂತರ ಅವರು ರಷ್ಯಾಕ್ಕೆ ಭೇಟಿ ನೀಡಿದ್ದು ಈಗ. ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು 2021ರಲ್ಲಿ ದೆಹಲಿಗೆ ಬಂದಿದ್ದರು. ಉಕ್ರೇನ್ ವಿರುದ್ಧ ರಷ್ಯಾ ಸಾರಿದ ಸಮರ, ಅಮೆರಿಕದ ಜೊತೆ ಭಾರತದ ಸಂಬಂಧವು ಹೆಚ್ಚು ಗಾಢವಾಗುತ್ತಿರುವುದು ಮೋದಿ ಅವರು ರಷ್ಯಾಕ್ಕೆ ಭೇಟಿ ನೀಡದಂತೆ ಮಾಡಿದ್ದ ಕಾರಣಗಳ ಪೈಕಿ ಪ್ರಮುಖವಾದವು. 2022ರಲ್ಲಿ ಶಾಂಘೈ ಸಹಕಾರ ಸಂಘಟನೆಯ ಶೃಂಗಸಭೆಯ ಸಂದರ್ಭದಲ್ಲಿ ಮೋದಿ ಮತ್ತು ಪುಟಿನ್ ಸಮರ್ಕಂಡ್‌ನಲ್ಲಿ ಭೇಟಿಯಾಗಿದ್ದರು. ಆದರೆ 'ಪರಸ್ಪರ ಸಂಪರ್ಕದಲ್ಲಿ ಇರುವ' ಒಪ್ಪಂದವೊಂದನ್ನು ಹೊರತುಪಡಿಸಿದರೆ, ಆ ಭೇಟಿಯಿಂದ ಇನ್ನೇನೂ ಆಗಿರಲಿಲ್ಲ. ವಾಸ್ತವದಲ್ಲಿ ಎರಡೂ ದೇಶಗಳು ಸಂಪರ್ಕ ಕಡಿದುಕೊಂಡ ನಿದರ್ಶನವೇ ಇಲ್ಲ. ಪುಟಿನ್ ಮತ್ತು ಮೋದಿ ಅವರು ದೂರವಾಣಿ ಮೂಲಕ ಹಲವು ಬಾರಿ ಮಾತುಕತೆ ನಡೆಸಿದ್ದಾರೆ. ಉಕ್ರೇನ್–ರಷ್ಯಾ ಯುದ್ಧ ಆರಂಭವಾದ ನಂತರದಲ್ಲಿ, ರಷ್ಯಾದಿಂದ ಈ ಹಿಂದೆ ಖರೀದಿಸುತ್ತಿದ್ದ ಪ್ರಮಾಣಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾ ತೈಲವನ್ನು ಭಾರತವು ಖರೀದಿಸಿದೆ. ಇದಕ್ಕಾಗಿ ಭಾರತವು ಪಾಶ್ಚಿಮಾತ್ಯ ರಾಷ್ಟ್ರಗಳ ದಿಗ್ಬಂಧನವನ್ನೂ ಲೆಕ್ಕಿಸಲಿಲ್ಲ. ಇವೆಲ್ಲ ಇದ್ದರೂ ಅಮೆರಿಕದ ಜೊತೆಗಿನ ಭಾರತದ ಸಂಬಂಧವು ಹೆಚ್ಚು ಗಾಢವಾದ ಕಾರಣದಿಂದ, ಭಾರತ–ರಷ್ಯಾ ನಡುವಿನ ಸಂಬಂಧದಲ್ಲಿ ಅಂತರವೊಂದು ಸೃಷ್ಟಿಯಾದಂತೆ ಕಂಡಿತ್ತು.




ನರೇಂದ್ರ ಮೋದಿ ಅವರ ಈ ಭೇಟಿಯು ವ್ಲಾದಿಮಿರ್ ಪುಟಿನ್ ಅವರಿಗೆ ಶಕ್ತಿ ತುಂಬುವ ಕೆಲಸ ಮಾಡಿದೆ

ಆದರೆ, ಈ ಭಾವನೆಯನ್ನು ಹೋಗಲಾಡಿಸುವ ಉದ್ದೇಶದಿಂದ ಈಗ ಎರಡೂ ದೇಶಗಳು, 2030ರ ವೇಳೆಗೆ ದ್ವಿಪಕ್ಷೀಯ ವ್ಯಾಪಾರ ವಹಿವಾಟು 100 ಬಿಲಿಯನ್ ಡಾಲರ್‌ಗೆ (ಅಂದಾಜು ₹8.34 ಲಕ್ಷ ಕೋಟಿ) ತಲುಪಬೇಕು ಎಂಬ ಗುರಿ ಹಾಕಿಕೊಂಡಿವೆ. ಆದರೆ, ದ್ವಿಪಕ್ಷೀಯ ವ್ಯಾಪಾರ ವಹಿವಾಟು 2025ರ ವೇಳೆಗೆ 30 ಬಿಲಿಯನ್ ಡಾಲರ್‌ಗೆ (₹2.50 ಲಕ್ಷ ಕೋಟಿ) ತಲುಪಬೇಕು ಎಂದು ಎರಡೂ ದೇಶಗಳು ಹಿಂದೆ ವ್ಲಾಡಿವೊಸ್ಟೊಕ್‌ನಲ್ಲಿ ಒಪ್ಪಂದಕ್ಕೆ ಬಂದಿದ್ದವು. ಈ ಗುರಿಯನ್ನು ಈಗಾಗಲೇ ದಾಟಿ ಆಗಿದೆ. ಭಾರತವು ರಷ್ಯಾದಿಂದ ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾ ತೈಲ ಖರೀದಿಸುತ್ತಿದೆಯಾದ ಕಾರಣ, ವ್ಯಾಪಾರ ವಹಿವಾಟಿನ ಮೊತ್ತವು ಈ ವರ್ಷ 60 ಬಿಲಿಯನ್ ಡಾಲರ್ (₹5.01 ಲಕ್ಷ ಕೋಟಿ) ದಾಟಿದೆ. ಹೀಗಾಗಿ ಈಗ ನಿಗದಿ ಮಾಡಿಕೊಂಡಿರುವ ಗುರಿಯು ಬಹಳ ಸಲೀಸಾಗಿ ಸಾಧಿಸಬಹುದಾದದ್ದು ಎಂದು ಅನ್ನಿಸುತ್ತದೆ. ಒಂಬತ್ತು ಒಪ್ಪಂದಗಳಿಗೆ ಸಹಿ ಮಾಡಲಾಗಿದ್ದರೂ ಎರಡೂ ದೇಶಗಳ ನಡುವಿನ ರಕ್ಷಣಾ ಪಾಲುದಾರಿಕೆ ಹಾಗೂ ಆರ್ಥಿಕ ಪಾಲುದಾರಿಕೆಯಲ್ಲಿ ಹೊಸ ಚೈತನ್ಯ ಕಾಣಿಸದೇ ಇರುವುದು ಗಮನಾರ್ಹ. ಭಾರತವು ರಕ್ಷಣಾ ಉಪಕರಣಗಳ ಖರೀದಿಯ ವಿಚಾರದಲ್ಲಿ ರಷ್ಯಾ ಮೇಲಿನ ಅವಲಂಬನೆಯನ್ನು ತಗ್ಗಿಸುತ್ತಿರುವುದು ಎರಡೂ ದೇಶಗಳ ನಡುವಿನ ಸಂಬಂಧದಲ್ಲಿ ಒಂದು ಸಮಸ್ಯೆಯಾಗಿ ಉಳಿದಿದೆ.

ವಿಶ್ವದಲ್ಲಿ ಏಕಾಂಗಿಯಾಗಿದ್ದಾರೆಂದು ಬಿಂಬಿತವಾಗಿರುವ ಪುಟಿನ್ ಅವರ ಪಾಲಿಗೆ, ಮೋದಿ ಅವರ ಈ ಭೇಟಿಯು ದೊಡ್ಡ ಮಟ್ಟದಲ್ಲಿ ಶಕ್ತಿ ತುಂಬಿದೆ ಎಂಬುದು ನಿಜ. ಆದರೆ, ಪುಟಿನ್ ಅವರು ಚೀನಾ ಕಡೆ ಹೆಚ್ಚು ಒಲವು ತೋರುತ್ತಿರುವುದನ್ನು 'ಸಮತೋಲನ'ಕ್ಕೆ ತರಲು ಮೋದಿ ಅವರು ರಷ್ಯಾಕ್ಕೆ ಭೇಟಿ ನೀಡಿದ್ದರು ಎಂದಾದರೆ, ಆ ಉದ್ದೇಶವು ವಾಸ್ತವಕ್ಕೆ ಹತ್ತಿರವಾಗುವಂಥದ್ದಲ್ಲ. ಏಕೆಂದರೆ, ಚೀನಾ ಕಡೆಗಿನ ಒಲವನ್ನು ತಗ್ಗಿಸುವ ಅಸ್ತ್ರವು ಭಾರತದ ಕೈಯಲ್ಲಿ ಇಲ್ಲ. ಇಂದಿನ ವಿಶ್ವ ರಾಜಕಾರಣದಲ್ಲಿ ರಷ್ಯಾ ದೇಶವು ಚೀನಾಕ್ಕೆ ಹತ್ತಿರವಾಗುತ್ತಿರುವುದಕ್ಕೆ ಹಲವು ಕಾರಣಗಳಿವೆ. ಅದಕ್ಕೆ ಒಂದು ಮುಖ್ಯ ಕಾರಣ, ಪುಟಿನ್ ಅವರು ಪಾಶ್ಚಿಮಾತ್ಯ ದೇಶಗಳ ಜೊತೆ ಹೊಂದಿರುವ ಸಂಬಂಧ. ಮೋದಿ–ಪುಟಿನ್ ಭೇಟಿಗೆ ಅಮೆರಿಕ ಮತ್ತು ಉಕ್ರೇನ್ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವುದು ನಿರೀಕ್ಷಿತ. ಭಾರತದ ಪಾಲಿಗೆ ರಷ್ಯಾ ದೇಶವು ಸುಖದಲ್ಲಿಯೂ ದುಃಖದಲ್ಲಿಯೂ ಜೊತೆಗಿರುವ ಗೆಳೆಯ ಎಂದು ಮೋದಿ ಬಣ್ಣಿಸಿದ್ದಾರೆ. ಹಾಗೆಯೇ, ಉಕ್ರೇನ್‌ನ ಕೀವ್‌ನಲ್ಲಿ ಮಕ್ಕಳ ಆಸ್ಪತ್ರೆಯ ಮೇಲೆ ರಷ್ಯಾ ನಡೆಸಿದ ಬಾಂಬ್ ದಾಳಿಯನ್ನು ಮೋದಿ ಅವರು ಖಂಡಿಸಿರುವುದು ವಿಶ್ವದ ಇತರ ರಾಷ್ಟ್ರಗಳ ಮೇಲೆ ಪ್ರಭಾವ ಬೀರಿಲ್ಲ. ಬೇರೆ ದೇಶಗಳಿಂದ ಪ್ರಭಾವಿತವಾಗದೆಯೇ ಸ್ವಾಯತ್ತವಾಗಿ ತೀರ್ಮಾನಗಳನ್ನು ಕೈಗೊಳ್ಳಬೇಕು ಎಂಬ ನಿಲುವಿಗೆ ಮಿತಿಗಳು ಇವೆ ಎಂಬುದು ಭಾರತಕ್ಕೆ ಗೋಚರಿಸುತ್ತಿದೆ. ಹಗ್ಗದ ಮೇಲಿನ ನಡಿಗೆಯು ಮುಂದಿನ ದಿನಗಳಲ್ಲಿ ಇನ್ನಷ್ಟು ಸವಾಲಿನದ್ದಾಗಿರಲಿದೆ.

ದೂರದಲ್ಲಿದ್ದವರ ದೇಹಾರೋಗ್ಯ ಪತ್ತೆಗೆಂದೇ 'ಡಿಜಿಟಲ್ ಜವಳಿ'ಗಳು ರೂಪುಗೊಳ್ಳುತ್ತಿವೆ

ರೋಬಾಟ್‌ಗಳ ಆತ್ಮಹತ್ಯೆ ಪ್ರಸಂಗ



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಸುನಿತಾ ವಿಲಿಯಮ್ಸ್ 35 ದಿನಗಳಿಂದ ಬಾಹ್ಯಾಕಾಶದಲ್ಲಿ ಸುತ್ತುತ್ತಿದ್ದಾರೆ. ಅವರನ್ನು ಕೆಳಕ್ಕೆ ತರಬೇಕಿದ್ದ ನೌಕೆಯಲ್ಲಿ ಇಂಧನ ಸೋರಿಕೆ ಆಗುತ್ತಿದೆ. ಅವರೀಗ ತ್ರಿಶಂಕು ಸ್ಥಿತಿಯಲ್ಲಿದ್ದಾರೆಂದು ಮಾಧ್ಯಮಗಳಲ್ಲಿ ಕಳವಳ ವ್ಯಕ್ತವಾಗುತ್ತಿದೆ. ಹಾಗೇನೂ ಇಲ್ಲವೆಂದೂ 'ಸುನಿ' ಕ್ಷೇಮವಾಗಿದ್ದಾರೆಂದೂ ಇನ್ನೊಂದೆರಡು ತಿಂಗಳಲ್ಲಿ ಸುರಕ್ಷಿತವಾಗಿ ಭೂಮಿಗೆ ಬರಲಿದ್ದಾರೆಂದೂ ನಾಸಾ ತಿಳಿಸಿದೆ. ಭೂಮಿಯ ಮೇಲಿನ ಈ ಪರಿ ಮಹಾಮಳೆ, ಭೂಕುಸಿತ, ಚಂಡಮಾರುತ, ಶಾಖಗೋಪುರಗಳನ್ನು ನೋಡಿದರೆ ಅವರು ಭೂಮಿಗಿಂತ ಬಾಹ್ಯಾಕಾಶದಲ್ಲೇ ಕ್ಷೇಮವೆಂದು ಅಂದುಕೊಳ್ಳೋಣ.

***

'ಕ್ಷೇಮ' ಎಂಬುದು ಮಾಮೂಲು ಅರ್ಥದಲ್ಲಿ ಶರೀರಕ್ಕೆ ಸಂಬಂಧಿಸಿದ್ದು ತಾನೆ? ನಿರಂತರ ಏಕಾಂತವಾಸ. ಕೆಲಸದಲ್ಲಿ ಏಕತಾನತೆಯಿಂದ ಮನಸ್ಸು ಜಿಡ್ಡುಗಟ್ಟಿ, ಜುಗುಪ್ಸೆ ಬಂದಿದ್ದರೆ ಏನು ಮಾಡುವುದು? ದಕ್ಷಿಣ ಕೊರಿಯಾದ ಒಂದು ರೋಬಾಟ್ ಇದೇ ಕಾರಣಕ್ಕೆ 'ಆತ್ಮಹತ್ಯೆ ಮಾಡಿಕೊಂಡಿತು' ಎಂಬ ಉತ್ಪ್ರೇಕ್ಷಿತ ಸುದ್ದಿ ಈಚೆಗೆ ವೈರಲ್ ಆಗಿತ್ತು. ಅದು ಆಯತಪ್ಪಿ ಮೆಟ್ಟಿಲಿನಿಂದ ಕೆಳಕ್ಕೆ ಬಿದ್ದು ಚೂರುಚೂರಾದ ಚಿತ್ರವೂ ಪ್ರಕಟವಾಗಿತ್ತು. 'ಆತ್ಮಹತ್ಯೆ' ಎಂಬ ಪದ ಸೇರಿಸಿದ್ದರಿಂದ ನಾನಾ ಬಗೆಯ ತಮಾಷೆಯ, ಊಹಾಪೋಹದ ಟೀಕೆ ಟಿಪ್ಪಣಿಗಳೂ ಸೇರಿಕೊಂಡವು. ಅದು ಸಂಧಿವಾತದಿಂದ ಬಳಲುತ್ತಿತ್ತೇ? ಅದಕ್ಕೆ ದೃಷ್ಟಿಮಾಂದ್ಯ ಉಂಟಾಗಿತ್ತೇ? ತಲೆಸುತ್ತಿ ಬಿತ್ತೇ? ಸಣ್ಣ ಸುದ್ದಿಗೂ ಹೀಗೆ ತಲೆ, ಬಾಲ ಸೇರಿಕೊಂಡು ವಿರಾಟ್ ವಿಕಾರ ರೂಪ ತಾಳಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತವೆ.

ಸುನಿತಾ ವಿಲಿಯಮ್ಸ್ ವಿಷಯದಲ್ಲಿ ಆಗಿದ್ದು ಇಷ್ಟೆ: ಭೂಮಿಯಿಂದ 400 ಕಿ.ಮೀ. ಎತ್ತರದ ಕಕ್ಷೆಯಲ್ಲಿ 'ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ' ಇದೆ. (ಅದನ್ನು ಚಿಕ್ಕದಾಗಿ ಅಂ.ಬಾ.ನಿ. ಎಂದು ಹೇಳುವುದು ಸರಿಯಾಗಲಾರದು ಅನ್ನಿ). ಅಲ್ಲಿ ಪಾಳಿಯ ಪ್ರಕಾರ ವಿವಿಧ ದೇಶಗಳ ಗಗನಯಾನಿಗಳು ಹೋಗಿ ಕೆಲಕಾಲ ವಾಸವಾಗಿದ್ದು ಒಂದಿಷ್ಟು ಸಂಶೋಧನೆ ಮಾಡಿ ಹಿಂದಿರುಗುತ್ತಾರೆ. ಅಲ್ಲಿಗೆ ಹೋಗಿ ಬರಲೆಂದು ಹಿಂದಿದ್ದ ಸ್ಪೇಸ್ ಶಟ್ಲ್‌ಗಳನ್ನು ಕೈಬಿಟ್ಟ ನಂತರ ಅಮೆರಿಕಕ್ಕೆ ತನ್ನದೇ ಆದ ನೌಕೆ ಇರಲಿಲ್ಲ; ರಷ್ಯಾದ ಸೊಯೂಝ್ ಸರಣಿಯ ನೌಕೆಗಳನ್ನು ಅವಲಂಬಿಸಬೇಕಿತ್ತು. ಸ್ವದೇಶೀ ವಾಹನ ಬೇಕಿದ್ದರಿಂದ ಖಾಸಗಿ ಸ್ಪೇಸ್ ಎಕ್ಸ್ ಕಂಪನಿಯ 'ಕ್ರೂ ಡ್ರಾಗನ್' ಮತ್ತು ಬೋಯಿಂಗ್ ಕಂಪನಿಯ 'ಸ್ಟಾರ್‌ಲೈನರ್' ನೌಕೆಗಳು ಸಜ್ಜಾಗಿ ಬಂದವು. ಪರೀಕ್ಷಾರ್ಥವಾಗಿ ಸ್ಟಾರ್‌ಲೈನರ್ ನೌಕೆ ಸ್ವಯಂಚಾಲಿತವಾಗಿ ಒಂದೆರಡು ಬಾರಿ ಮೇಲಕ್ಕೆ ಹೋಗಿ ಬಂದಿತ್ತು. ಮಾನವಸಹಿತ ಸವಾರಿಗೆಂದು ಇದೇ ಮೊದಲ ಬಾರಿಗೆ ಸುನಿತಾ ಮತ್ತು ಬುಚ್ ವಿಲ್ಮರ್ ಜೋಡಿಯನ್ನು ಕೂರಿಸಿಕೊಂಡು ಹೋಗಿತ್ತು. ಇವರು ಈ ನೌಕೆಯನ್ನು ತಮಗಿಷ್ಟ ಬಂದಂತೆ ನಿಯಂತ್ರಿಸುತ್ತ ಅಂ.ಬಾ. ನಿಲ್ದಾಣಕ್ಕೆ ಕೊಂಡೊಯ್ದಿದ್ದಾರೆ.

ನೌಕೆ ತನ್ನ ಮಾಮೂಲು ಪಾರ್ಕಿಂಗ್ ಜಾಗಕ್ಕೆ ಕಚ್ಚಿಕೊಂಡ ನಂತರ ಇಬ್ಬರೂ ಒಳಕ್ಕೆ ಹೋಗಿ, ಅಲ್ಲಿ ಈಗಾಗಲೇ ಇದ್ದ ಐವರನ್ನು ಸೇರಿಕೊಂಡಿದ್ದಾರೆ. ಇತ್ತ ಸ್ಟಾರ್‌ಲೈನರ್ ನೌಕೆಯ ಎಂಜಿನ್ನಿನಿಂದ ಹೀಲಿಯಂ ಅನಿಲ ಮೆಲ್ಲಗೆ ಸೋರಿಕೆ ಆಗುತ್ತಿದೆ ಎಂಬುದು ನೆಲದ ಮೇಲಿದ್ದವರಿಗೆ ಗೊತ್ತಾಗಿದೆ.

ವಾಹನ ಪರೀಕ್ಷೆಗೆಂದೇ ಹೋಗಿದ್ದರಿಂದ ಇವರಿಬ್ಬರೂ ಮರುವಾರ ಹಿಂದಿರುಗಿ ಬರಬಹುದಿತ್ತು. ಇಷ್ಟಕ್ಕೂ ಅನಿಲ ಸೋರಿಕೆ ತೀವ್ರವೇನೂ ಇರಲಿಲ್ಲ. ಇದ್ದರೂ ಏನು, ಕೆಳಕ್ಕೆ ಸುತ್ತುತ್ತ ಬರುವಾಗ ಅದರ ಎಂಜಿನ್ ಹೇಗಿದ್ದರೂ ಕಳಚಿಕೊಂಡು, ಉರಿದು ಭಸ್ಮವಾಗಿ ಸಮುದ್ರಕ್ಕೆ ಬೀಳಬೇಕು. ಗಗನಯಾನಿಗಳು ಕೂತಿರುವ ಮೂತಿಯ ಭಾಗ ಪುಟ್ಟ ಜೆಟ್ ವಿಮಾನದ ಹಾಗೆ ನೆಲಕ್ಕೆ ಸುರಕ್ಷಿತವಾಗಿ ಇಳಿಯಬೇಕು. ಮುಂದಿನ ಪ್ರಯಾಣಕ್ಕೆ ಹೊಸ ಎಂಜಿನ್ ಜೋಡಣೆ ಆಗಬೇಕು.

ಆದರೆ ಸೋರಿಕೆ, ಎಲ್ಲಿ, ಹೇಗೆ, ಎಷ್ಟು ಎಂಬುದು ಗೊತ್ತಾಗಬೇಕು ತಾನೆ? ಮುಂದಿನ ಯಾನಕ್ಕೆ ಹೊಸ ಎಂಜಿನ್ ತಯಾರಾಗುವಾಗ ಈ ದೋಷಗಳು ಇರಬಾರದು. ಈಗಿನ ಎಂಜಿನ್ ಮತ್ತೆ ಇಡಿಯಾಗಿ ಕೆಳಕ್ಕೆ ಬರುವುದಿಲ್ಲವಾದ್ದರಿಂದ ಅಲ್ಲಿದ್ದಾಗಲೇ ಅದರ ಪರೀಕ್ಷೆ ಆಗಬೇಕು. ಸುನಿತಾ ತಾನೇ ಪರೀಕ್ಷೆ ಮಾಡುತ್ತೇನೆ ಎಂದಿದ್ದಾರೆ.

ಸುನಿತಾ ಹಿನ್ನೆಲೆ ಹೀಗಿದೆ: ಅಮೆರಿಕಕ್ಕೆ ಹೋಗಿ ನೆಲೆಸಿದ್ದ ಗುಜರಾತಿನ ದೀಪಕ್ ಪಾಂಡ್ಯ ಮತ್ತು ಸ್ಲೊವಾನಿಯಾ ಮೂಲದ ಉರ್ಸುಲಿನ್ ದಂಪತಿಯ ಮಗಳಾಗಿ ಅಲ್ಲೇ ಜನಿಸಿದವರು ಸುನಿತಾ (58). ಮುಂದೆ ಎಂಜಿನಿಯರಿಂಗ್ ಪದವಿ ಪಡೆದು ನೌಕಾಸೇನೆಯ ಹೆಲಿಕಾಪ್ಟರ್ ಪೈಲಟ್ ಆಗಿ, ಆ ಬಳಿಕ ಬಾಹ್ಯಾಕಾಶ ಸಂಸ್ಥೆಯನ್ನು ಸೇರಿದ್ದಾರೆ. 2006ರ ನಂತರ ಎರಡು ಬಾರಿ ಬಾಹ್ಯಾಕಾಶ ನಿಲ್ದಾಣಕ್ಕೆ ಹೋಗಿ ಬಂದಿದ್ದಾರೆ. ನಿಲ್ದಾಣದ ಹೊರಕ್ಕೆ ಶೂನ್ಯದಲ್ಲಿ ಈಜಿ ಹೋಗಿ ಎಂಜಿನ್ ಪರೀಕ್ಷೆ, ರಿಪೇರಿ, ಬಿಡಿಭಾಗಗಳ ಜೋಡಣೆ ಮಾಡಿದ್ದಾರೆ.

ಎರಡನೆಯ ಬಾರಿ ಹೋಗಿದ್ದಾಗ, ನೆಲದ ಮೇಲೆ ಬಾಸ್ಟನ್ ನಗರದಲ್ಲಿ ನಡೆಯುತ್ತಿದ್ದ ವಿಶ್ವಖ್ಯಾತಿಯ ಮ್ಯಾರಥಾನ್ ಓಟದಲ್ಲಿ ತಾವು ನಿಂತಲ್ಲೇ ಓಡುತ್ತ ಭಾಗಿಯಾಗಿ, ಮೂರು ಗಂಟೆಗಳ ಓಟವನ್ನು ಪೂರೈಸಿ ಮೆಡಲ್ ಕೂಡ ಗೆದ್ದಿದ್ದಾರೆ. ಅಂ.ಬಾ. ನಿಲ್ದಾಣದಿಂದ ಏಳು ಬಾರಿ ಹೊರಬಿದ್ದು ಒಟ್ಟು ಐವತ್ತು ಗಂಟೆಗಳ ಕಾಲ ಈಜಿದ ಮೊದಲ ಮಹಿಳೆ ಎಂಬ ದಾಖಲೆಯೂ ಇವರದ್ದಾಗಿದೆ.



ಈ ಬಾರಿ ಅಂ.ಬಾ. ನಿಲ್ದಾಣದಲ್ಲಿ ಇದ್ದವರೆಲ್ಲ ಒಂದು ಅವಘಡದಿಂದ ಪಾರಾಗಿದ್ದಾರೆ. ರಷ್ಯಾದ ಹಳೇ ಉಪಗ್ರಹವೊಂದು ಹೋಳಾಗಿ ಕೆಳಗಿನ ಕಕ್ಷೆಗೆ ಜಾರುತ್ತ ಬರತೊಡಗಿತ್ತು. ಅದರ ತುಣುಕುಗಳು ಇವರಿದ್ದ ನಿಲ್ದಾಣಕ್ಕೆ ಡಿಕ್ಕಿ ಹೊಡೆದಿದ್ದರೆ ನಿಲ್ದಾಣದ ಕೆಲವು ಭಾಗ ಸ್ಫೋಟವಾಗುವ ಸಂಭವ ಇತ್ತು. ಎಲ್ಲ ಏಳೂ ನಿವಾಸಿಗಳು ತುರ್ತಾಗಿ ಸ್ಟಾರ್‌ಲೈನರ್ ಒಳಕ್ಕೆ ಸೇರಿಕೊಳ್ಳಬೇಕೆಂದು ನೆಲದಿಂದ ಆದೇಶ ಬಂತು. ನಾಲ್ವರು ಕೂರಬಹುದಾದ ಇಕ್ಕಟ್ಟಿನಲ್ಲಿ ಅದು ಹೇಗೆ ಏಳು ಮಂದಿ ತೂರಿಕೊಂಡರೋ, ಅಂತೂ ಬಚಾವಾದರು.

ಹಾಗಿದ್ದರೆ ಮರಳಿ ಬರುವುದು ಯಾವಾಗ? ಆ ದಿನವನ್ನು ಮಾತ್ರ 'ನಾಸಾ' ಸಂಸ್ಥೆ ಇನ್ನೂ ನಿಗದಿ ಮಾಡಿಲ್ಲ. ಸ್ಟಾರ್‌ಲೈನರ್ ಇಂಧನ ಸೋರಿಕೆ ಅಂಥ ಗಂಭೀರ ವಿಷಯವೇನಲ್ಲ; ಮೇಲಾಗಿ ಅಂ.ಬಾ. ನಿಲ್ದಾಣದಲ್ಲಿ ದಾಸ್ತಾನೂ ಸಾಕಷ್ಟಿದೆ. ಚಿಂತೆಯೇನೂ ಇಲ್ಲವೆಂದು ಅದರ ವಕ್ತಾರರು ಹೇಳಿದ್ದಾರೆ. ಅಸಲೀ ವಿಷಯ ಏನೆಂದರೆ ಗಗನಯಾತ್ರಿಗಳು ಆ ನಿಲ್ದಾಣದಲ್ಲಿ ಜಾಸ್ತಿ ದಿನ ಇದ್ದಷ್ಟೂ ತಂತ್ರಜ್ಞಾನಕ್ಕೆ, ವೈದ್ಯಕೀಯಕ್ಕೆ ಮತ್ತು ಮನೋವಿಜ್ಞಾನಕ್ಕೆ ಜಾಸ್ತಿ ಲಾಭ ಆಗುತ್ತದೆ. ಬಾಹ್ಯಾಕಾಶಕ್ಕೆ ರವಾನಿಸುವ ಎಲ್ಲ ಯಂತ್ರಗಳ ಆರೋಗ್ಯ ವೀಕ್ಷಣೆಗೆಂದು ಅವುಗಳದ್ದೇ ಪ್ರತಿರೂಪಗಳನ್ನು ನೆಲದ ಮೇಲೆ ವೀಕ್ಷಣೆ ಮಾಡಲಾಗುತ್ತದೆ. ಅದೇ ರೀತಿ, ಬಾಹ್ಯಾಕಾಶದಲ್ಲಿ ವಾಸವಿದ್ದವರ ಆರೋಗ್ಯ ವೀಕ್ಷಣೆಗೆಂದು 'ಡಿಜಿಟಲ್ ಜವಳಿ'ಗಳನ್ನೂ ಇಲ್ಲಿ ಸೃಷ್ಟಿ ಮಾಡಲಾಗುತ್ತಿದೆ. ಕಕ್ಷೆಯಲ್ಲಿದ್ದವರು ದಿನಕ್ಕೆರಡು ಬಾರಿ ಅಲ್ಲಿರುವ ಸಲಕರಣೆಗಳಿಗೆ ಮೈಯೊಡ್ಡಿ ನಿಂತರೆ ಸಾಕು. ಇಡೀ ದೇಹದ ಸ್ಕ್ಯಾನಿಂಗ್ ಆಗಿ ಇಲ್ಲಿರುವ ಪ್ರತಿರೂಪದಲ್ಲಿ ಅವೆಲ್ಲ ದಾಖಲಾಗುತ್ತವೆ.

ಅಂಥ ಜ್ಞಾನ ವಿಕಾಸದ ಫಲ ಕ್ರಮೇಣ ಆಧುನಿಕ ಆಸ್ಪತ್ರೆಗಳಿಗೂ ಸಿಗುತ್ತದೆ. ಇಷ್ಟಕ್ಕೂ ಎಲ್ಲ ಬಗೆಯ ಮುಂಚೂಣಿ ತಂತ್ರಜ್ಞಾನಗಳೂ ಬಹುತೇಕ ಮಿಲಿಟರಿಯ ಅಥವಾ ಬಾಹ್ಯಾಕಾಶದ ಪೈಪೋಟಿ ಮತ್ತು ನೂಕುಬಲ ದಿಂದಾಗಿಯೇ ವಿಕಾಸವಾಗುತ್ತವೆ ತಾನೆ? ರೋಬಾಟ್‌ಗಳೇ ತಜ್ಞವೈದ್ಯರನ್ನೂ ಮೀರಿಸುವಂತೆ ಸರ್ಜರಿ ಮಾಡುವ ಹೈಟೆಕ್ ಆಸ್ಪತ್ರೆಗಳಲ್ಲಿ ಇನ್ನೇನು, ರೋಗಿಗಳ ಜವಳಿ ಬಿಂಬಗಳಿಗೇ ಟ್ರೀಟ್ಮೆಂಟ್ ಕೊಡುವ ವ್ಯವಸ್ಥೆಯೂ ಬಂದೀತು. ಹಾಗಿದ್ದರೆ ಅಲ್ಲಿನ ರೋಬಾಟ್‌ಗಳು ಮನನೊಂದು ನಿಜಕ್ಕೂ ಆತ್ಮಹತ್ಯೆಗೆ ಮುಂದಾಗುತ್ತವೆಯೇ ಎಂಬ ಸಿಲ್ಲಿ ಪ್ರಶ್ನೆಯನ್ನು ಕೇಳಬೇಡಿ.

ಸುನಿತಾ ಅವರು ಸ್ಟಾರ್‌ಲೈನರ್ ದೋಷದ ಪತ್ತೆಗೆಂದು ಬಾಹ್ಯಾಕಾಶದಲ್ಲಿ ಸದ್ಯದಲ್ಲೇ ಮತ್ತೊಮ್ಮೆ ಈಜಬಹುದು. ಇತ್ತ ಪ್ಯಾರಿಸ್‌ನಲ್ಲಿ ನಡೆಯಲಿರುವ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುವ ಫ್ರೆಂಚ್ ಈಜುಗಾರರ ತರಬೇತಿಗೆಂದೇ ವಿಶೇಷ ಡಿಜಿಟಲ್ ಜವಳಿಗಳ ಸೃಷ್ಟಿಯಾಗಿದೆ. ನೀರೊಳಗಿನ ಅವರ ಚಲನೆಯನ್ನು ಪ್ರತಿ ಸೆಕೆಂಡ್‌ಗೆ 512 (ಮಾಮೂಲು ವಿಡಿಯೊದಲ್ಲಿ 24) ಫ್ರೇಮ್‌ಗಳಲ್ಲಿ ಸೆರೆಹಿಡಿದು ಅಂಗಾಂಗಗಳ ಪ್ರತಿ ಮಿಲಿಮೀಟರನ್ನೂ ನೋಡಿ ಹುರಿಯಾಳುಗಳ ದೇಹವನ್ನು ಹುರಿಗೊಳಿಸಲಾಗುತ್ತಿದೆ. ಫಿಸಿಕ್ಸ್, ಫಿಸಿಯಾಲಜಿ ಮತ್ತು ಅನಾಟಮಿಯ ಎಲ್ಲ ಜ್ಞಾನ ಶಾಖೆಗಳನ್ನೂ ಒಂದಾಗಿಸಿ, ಡಿಜಿಟಲ್ ಪ್ರತಿರೂಪಗಳು ಸಿದ್ಧವಾಗುತ್ತಿವೆ.

ಚುರುಮುರಿ



ಹಳೆಯ ಹೊಸ ಜಿಲ್ಲೆ!

• ಗುರು ಪಿ.ಎಸ್.

'ಎಲ್ಲಿಗೆ ಹೊರಟ್ರೀ...?' ರಾಗ ಎಳೆದಳು ಹೆಂಡತಿ.

'ಒಂದೊಳ್ಳೆ ಕೆಲಸಕ್ಕೆ ಹೋಗಬೇಕಾದರೆ ಎಲ್ಲಿಗೆ ಅಂತ ಅಡ್ಡ ಬಾಯಿ ಹಾಕಿಬಿಡ್ತೀಯ, ಹೋದ ಕೆಲಸವೇ ಆಗಲ್ಲ' ಸೋಫಾ ಮೇಲೆ ಕುಳಿತೆ.

'ಅಂಥ ಯಾವ ಘನಂದಾರಿ ಕೆಲಸಕ್ಕೆ ಹೋಗ್ತಿದ್ರೋ...' ವ್ಯಂಗ್ಯವಾಗಿ ಕೇಳಿದಳು.

'ರಾಮನಗರ, ಕನಕಪುರ, ಚನ್ನಪಟ್ಟಣ, ಹಾರೋಹಳ್ಳಿ, ಮಾಗಡಿ ಕಡೆಗೆ ಒಂದ್ ರೌಂಡ್ ಹಾಕಿ, ಖಾಲಿ ಸೈಟು, ಜಮೀನು ಇದೆಯಾ ಅಂತ ನೋಡ್ಕೊಂಡ್ ಬರೋಕೆ ಹೋಗ್ತಿದ್ದೆ'.

'ರಾಮನಗರ ಜಿಲ್ಲೆಯನ್ನ ಬೆಂಗಳೂರು ದಕ್ಷಿಣ ಅಂತ ಮಾಡ್ತಾರೆ ಅನ್ನೋ ಕಾರಣಕ್ಕೆ ಅಲ್ಲಿ ಜಾಗ ಖರೀದಿ ಮಾಡೋಕೆ ಹೋಗ್ತಿದಿರಾ?' ರೂಟ್‌ಗೆ ಬಂದಳು ಪತ್ನಿ.

'ಹೌದೌದು...' ಉತ್ಸಾಹದಲ್ಲಿ ಎದ್ದೆ.

'ಬೆಂಗಳೂರು ಸುತ್ತಮುತ್ತ ಇರೋ 110 ಹಳ್ಳಿಗಳಿಗೇ ಸರಿಯಾಗಿ ಕುಡಿಯೋ ನೀರು ಸಿಗ್ತಿಲ್ಲ, ಇನ್ನು ಅಲ್ಲಿಯವರೆಗೂ ಸರಿಯಾಗಿ ಸೌಲಭ್ಯ ಕೊಡೋಕಾಗುತ್ತೇನ್ರೀ ಇವರ ಕೈಯಲ್ಲಿ...'

'ಇದೆಲ್ಲ ಹೇಳಿ ನನ್ನ ಉತ್ಸಾಹ ಕಳೀಬೇಡ ನೀನು. ಈಗಲೇ ಜಾಗ ಖರೀದಿ ಮಾಡಿಟ್ಟುಕೊಂಡರೆ ಮುಂದೆ ಕೋಟಿ ಕೋಟಿ ದುಡ್ಡು ಮಾಡ್ಕೊಬಹುದು' ಹೊರಡಲುನುವಾದೆ.

'ನೀವು ಖಾಲಿ ಕೈಯಲ್ಲಿ ಹೋಗಿ ಏನ್ ಮಾಡ್ತೀರಾ, ಬೆಳಿಗ್ಗೆಯೇ ಎದುರು ಮನೆ ಗುಜರಾತಿ ಅಂಕಲ್, ಪಕ್ಕದ್ಮನೆ ರಾಜಸ್ಥಾನಿ ಸೇಟು ಅಂಕಲ್ ಸೂಟ್‌ಕೇಸ್‌ನಲ್ಲಿ ದುಡ್ಡು ತುಂಬ್ಕೊಂಡೇ ರಾಮನಗರಕ್ಕೆ ಹೋದರು' ನಕ್ಕಳು.

'ಬೆಂಗಳೂರಲ್ಲಂತೂ ಜಾಗದ ರೇಟ್ ಕೇಳೋಹಂಗಿಲ್ಲ. ಇನ್ನು, ರಾಮನಗರವೂ ದುಬಾರಿ ಆಗಿಬಿಡುತ್ತಾ... ಇರಲಿ ಬಿಡು. ಬೆಂಗಳೂರು ದಕ್ಷಿಣ ಅನ್ನೋ ಹೆಸರಿನಿಂದ ಕೈಗಾರಿಕೆಗಳೆಲ್ಲ ಬಂದು ಜನರಿಗೆ ಕೆಲಸ ಸಿಕ್ಕರೆ ಸಾಕು' ಸಮಾಧಾನದ ದನಿಯಲ್ಲಿ ಹೇಳಿದೆ.

'ಎಲ್ಲರಿಗೂ ಒಳ್ಳೆಯದಾದರೆ ಒಳ್ಳೆಯದೇ. ಆದರೆ, ಈ ವಿಷಯ ಮುಡಾ ಹಗರಣ ಮರೆಯುವವರೆಗೂ, ಚನ್ನಪಟ್ಟಣ ಬೈ ಎಲೆಕ್ಷನ್ ಮುಗಿಯುವವರೆಗೂ ಮಾತ್ರ ಚಾಲ್ತಿಯಲ್ಲಿದ್ದರೆ ಯೂಸ್ ಇಲ್ಲ' ವ್ಯಂಗ್ಯದ ದನಿಯಲ್ಲಿ ಸತ್ಯ ಹೇಳಿದಳು ಪತ್ನಿ!

ದಿನದ ಟ್ವೀಟ್


ರಷ್ಯಾಕ್ಕೂ ಪರ್ಯಾಯ ಬೇಕು



ರಷ್ಯಾ–ಚೀನಾ ಸಂಬಂಧವು ಒಂದು ಒಕ್ಕೂಟದಂತೆ ಶಕ್ತಿ ಪಡೆದುಕೊಳ್ಳುವುದು ಭಾರತದ ಹಿತಾಸಕ್ತಿಗಳಿಗೆ ಪೂರಕವಾಗಿಲ್ಲ. ಚೀನಾ ಮೇಲಿನ ಅವಲಂಬನೆಗೆ ಪರ್ಯಾಯದ ಅಗತ್ಯವನ್ನು ರಷ್ಯಾ ಕೂಡ ಗುರುತಿಸಿದೆ.

ನಿತಿನ್ ಪೈ, ಬರಹಗಾರ

ಕಿಡಿನುಡಿ



ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದಲ್ಲಿ ಯಾರೂ ಭಾಗಿಯಾಗಿಲ್ಲ ಎಂದು ಕಾಂಗ್ರೆಸ್ ಹೇಳಿಕೊಂಡಿದೆ. ಈಗ ಜಾರಿ ನಿರ್ದೇಶನಾಲಯ ದಾಳಿ ಮಾಡಿದೆ. ಎಸ್‌ಐಟಿ ಮೂಲಕ ಎಲ್ಲರಿಗೂ ಕ್ಲೀನ್‌ಚಿಟ್ ನೀಡುವ ಪ್ರಯತ್ನ ನಡೆದಿದೆ.

ಆರ್. ಅಶೋಕ, ವಿಧಾನಸಭೆಯ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಭಾನುವಾರ, 11-7-1999

• **ಸೇನಾ ಕಾರ್ಯಾಚರಣೆ: ಪ್ರಧಾನಿ ಪ್ರಶಂಸೆ**

ನವದೆಹಲಿ, ಜುಲೈ 10– ಪಾಕಿಸ್ತಾನಿ ಅತಿಕ್ರಮಣಕಾರರನ್ನು ಹೊರಗಟ್ಟುವ ಸೇನಾ ಕಾರ್ಯಾಚರಣೆ ತಿರುವಿನ ಹಂತ ಮುಟ್ಟಿದ್ದು 'ಆಪರೇಷನ್ ವಿಜಯ್' ನಿಜವಾಗಿಯೂ ದೇಶಕ್ಕೆ ವಿಜಯವನ್ನು ತಂದುಕೊಡುತ್ತಿದೆ ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಇಂದು ಹರ್ಷ ವ್ಯಕ್ತಪಡಿಸಿದರು.

ಇಲ್ಲಿನ ಸೌತ್ ಬ್ಲಾಕ್‌ನಲ್ಲಿಯ ಸೇನಾ ಮುಖ್ಯ ಕಾರ್ಯಾಲಯದಲ್ಲಿ ಸೇನಾ ಪ್ರಮುಖರನ್ನು ಉದ್ದೇಶಿಸಿ ಮಾತನಾಡಿದ ಅವರು, ಕಾರ್ಗಿಲ್ ವಲಯದಲ್ಲಿ ಕೈಗೊಂಡಿರುವ ಭಾರತೀಯ ಸೇನೆಯ ಕಾರ್ಯವನ್ನು ಮುಕ್ತ ಕಂಠದಿಂದ ಶ್ಲಾಘಿಸಿದರು.

• **ಪಟೇಲ್–ಜಾರ್ಜ್ ರಹಸ್ಯ ಚರ್ಚೆ**

ಬೆಂಗಳೂರು, ಜುಲೈ 10– ಕೇಂದ್ರ ರಕ್ಷಣಾ ಸಚಿವ, ಸಮತಾ ಪಕ್ಷದ ಅಧ್ಯಕ್ಷ ಜಾರ್ಜ್ ಫರ್ನಾಂಡಿಸ್ ಅವರು ಇಂದು ರಾತ್ರಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದು ರಾಜಕೀಯ ವಲಯಗಳಲ್ಲಿ ತೀವ್ರ ಕುತೂಹಲ ಕೆರಳಿಸಿದೆ. ಶನಿವಾರ ರಾತ್ರಿ ದೆಹಲಿಯಿಂದ ನಗರಕ್ಕೆ ಆಗಮಿಸಿದ ಫರ್ನಾಂಡಿಸ್ ಅವರು ಮುಖ್ಯಮಂತ್ರಿಯವರ ಅಧಿಕೃತ ನಿವಾಸಕ್ಕೆ ತೆರಳಿ ಪಟೇಲ್ ಅವರೊಂದಿಗೆ ಮೊದಲ ಸುತ್ತಿನ ಚರ್ಚೆ ನಡೆಸಿದರು.

50 ವರ್ಷಗಳ ಹಿಂದೆ

ಗುರುವಾರ, 11-7-1974

• **ಸಂಪನ್ಮೂಲ ಇಲ್ಲದಿದ್ದರೆ ಹೊಸ ನೀರಾವರಿ ಯೋಜನೆಗಳು ಬೇಡ**

ನವದೆಹಲಿ, ಜುಲೈ 10– ರಾಜ್ಯಗಳ ಸಂಪನ್ಮೂಲಕ್ಕೆ ಮೀರಿದ ಹೊಸ ನೀರಾವರಿ ಯೋಜನೆಗಳನ್ನು ಕೈಗೊಳ್ಳುವುದು ಸೂಕ್ತವಲ್ಲವೆಂದು ರಾಜ್ಯಗಳಿಗೆ ಕೇಂದ್ರ ಸರ್ಕಾರ ಸ್ಪಷ್ಟವಾಗಿ ಸೂಚಿಸಿದೆ.

ಈಗಾಗಲೇ ನಿರ್ಮಾಣದ ವಿವಿಧ ಹಂತಗಳಲ್ಲಿರುವ ಮುಂದುವರಿಯುವಂಥ ಯೋಜನೆಗಳನ್ನು ಪೂರೈಸುವುದು, ನೀರಾವರಿ ಯೋಜನೆಗಳ ಅನ್ವಯಕ್ಕೆ ಸಮೀಪಿಸಿದಂತೆ ಐದನೆಯ ಯೋಜನೆಯ ಕಾರ್ಯತಂತ್ರವಾಗಿರಬೇಕೆಂಬುದು ಕೇಂದ್ರದ ಅಪೇಕ್ಷೆ.

• **ಒಂಬತ್ತು ವರ್ಷ ಕೆಡದೆ ಉಳಿದ ಸಾಧು ಶವ**

ಲಖನೌ, ಜುಲೈ 10– ಒಂಬತ್ತು ವರ್ಷಗಳ ಹಿಂದೆ ಸಮಾಧಿ ಮಾಡಲಾಗಿದ್ದ ಸಾಧುವಿನ ಶವ ಇಂದಿಗೂ ಕೆಡದೆ ಉಳಿದಿರುವ ಪ್ರಕರಣ ವರದಿಯಾಗಿದೆ. ಉತ್ತರ ಪ್ರದೇಶ ಸೀತಾಪುರ ಜಿಲ್ಲೆಯ ಮುಷೈರಾಬಾದ್ ಗ್ರಾಮದಲ್ಲಿ ಜನ ಈಗ ಹನ್ನೊಂದು ದಿನಗಳಿಂದ ಅದರ 'ದರ್ಶನ' ಪಡೆಯುತ್ತಿದ್ದಾರೆ.

ಆ ಸಾಧು ಧ್ಯಾನಮಗ್ನನಾಗಿದ್ದಾಗ ಸತ್ತ. ಪೂಜನೀಯನಾಗಿದ್ದ ಆತನ ಸಮಾಧಿ ಗ್ರಾಮದ ಸನಿಹದಲ್ಲೇ ಆಗಿತ್ತು. ಆದರೆ ಹೊಸ ಸಾರ್ದಾ ಸಹಾಯಕ್ ಯೋಜನೆಯ ನೀರಿನ ಕಾಲುವೆ ಸಮಾಧಿಯ ಮೇಲೆ ಹಾದುಹೋಗುವಂತಾಯಿತು. ಕಾಲುವೆ ಅಡ್ಡಬಂದರೂ ಸಮಾಧಿಯನ್ನು ಕದಲಿಸಬಾರದೆಂದು ಭಕ್ತಾದಿಗಳು ಅಪೇಕ್ಷೆಪಟ್ಟರು. ಅದರ ಪ್ರಕಾರ ಜೂನ್ 27ರಂದು ಅದರ ಮೇಲೆ ಹರಿಯುವಂತೆಯೇ ಕಾಲುವೆಯಲ್ಲಿ ನೀರು ಬಿಡಲಾಯಿತು. ಆದರೆ ಸಾಧುವಿನ ಶವ ತೇಲಿಬಂತು.

ಸಂಗತ

ಭೂಮಿ ತುಂಬಿದೆ, ಹೊಣೆ ಹೆಚ್ಚಿದೆ

ಭೂಮಿ ತುಂಬಿದೆ– ನಮ್ಮಿಂದ, ನಮ್ಮ ವಸ್ತುಗಳಿಂದ, ನಮ್ಮ ಬೇಡಿಕೆಗಳಿಂದ, ನಾವು ಸೃಷ್ಟಿಸುವ ತ್ಯಾಜ್ಯದಿಂದ. ಈ ಭೂಮಿಯನ್ನು ಉಳಿಸಿಕೊಳ್ಳಬೇಕು

• ಡಾ.ಕೆ.ಎಸ್. ಪವಿತ್ರ

1990ರ ಜುಲೈ 11ರಿಂದ ಪ್ರತಿವರ್ಷ ವಿಶ್ವಸಂಸ್ಥೆಯ ನೇತೃತ್ವದಲ್ಲಿ ವಿಶ್ವ ಜನಸಂಖ್ಯಾ ದಿನಾಚರಣೆ ನಡೆದುಬಂದಿದೆ. ವಿಶ್ವಸಂಸ್ಥೆಯ ಜನಸಂಖ್ಯಾ ಕ್ರಿಯಾ ಯೋಜನೆಗಾಗಿ ಹುಟ್ಟುಹಾಕಿದ ಅಂತರರಾಷ್ಟ್ರೀಯ ಜನಸಂಖ್ಯೆ ಮತ್ತು ಅಭಿವೃದ್ಧಿ ಒಕ್ಕೂಟದ 30ನೇ ವಾರ್ಷಿಕೋತ್ಸವವೂ ಈ ಬಾರಿ ಇದರ ಜೊತೆಗೂಡಿದೆ. ಈ ಕ್ರಿಯಾಯೋಜನೆಯ ಕೇಂದ್ರದಲ್ಲಿರುವುದು ಸುಸ್ಥಿರ ಅಭಿವೃದ್ಧಿ, ಜನಸಂಖ್ಯಾ ನಿಯಂತ್ರಣಕ್ಕೆ, ವಂಶಾಭಿವೃದ್ಧಿ ಹಾಗೂ ಲೈಂಗಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ಮಹಿಳೆಯರು ಹೊಂದಿರುವ ಹಕ್ಕುಗಳು ಎನ್ನುವುದು ಗಮನಾರ್ಹ ಸಂಗತಿ.

ತಾಯಂದಿರ ಮರಣ ಪ್ರಮಾಣದಲ್ಲಿ 2000ನೇ ಇಸವಿಯಿಂದೀಚೆಗೆ ಶೇಕಡ 34ರಷ್ಟು ಇಳಿಕೆಯಾಗಿದೆ. ಮಹಿಳೆಯರಿಗೆ ಹಿಂದೆಂದಿಗಿಂತ ಇಂದು ಗರ್ಭ ನಿರೋಧಕಗಳ ಬಳಕೆಯ ಅವಕಾಶ ಹೆಚ್ಚಿದೆ. ಆದರೆ ಈ ಪ್ರಗತಿ ಎಲ್ಲೆಡೆಯೂ ಸಮಾನ ಎನ್ನುವಂತಿಲ್ಲ. ಪೌಷ್ಟಿಕ ಆಹಾರದ ಕೊರತೆ, ಹಸಿವಿನ ಸಮಸ್ಯೆ ವ್ಯಾಪಕವಾಗಿಯೇ ಇವೆ. ಇವುಗಳ ಬಗೆಗಿನ ಅಂಕಿ-ಅಂಶಗಳು ಸಮರ್ಪಕವಾಗಿಲ್ಲ. ಅಂದರೆ ನಿಜ ಸ್ಥಿತಿ ಏನಿದೆ ಎಂಬುದು ನಮಗೆ ತಿಳಿಯದು. ಹಾಗಾಗಿ ಈ ಬಾರಿಯ ಜನಸಂಖ್ಯಾ ದಿನ, ದತ್ತಾಂಶವನ್ನು ಕಲೆ ಹಾಕುವುದು, ಆ ಮೂಲಕ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಸಮಸ್ಯೆಗೆ ಸೂಕ್ತವಾದ ಪರಿಹಾರವನ್ನು ರೂಪಿಸುವುದರ ಮಹತ್ವದ ಬಗ್ಗೆ ನಮ್ಮ ಗಮನ ಸೆಳೆಯುತ್ತದೆ.

ನಮಗೀಗ ಒಂದು ಭೂಮಿ ಸಾಲದು! ಈಗ ಭೂಮಿಯು 800 ಕೋಟಿ ಜನರ ಹೊಣೆ ಹೊತ್ತಿದೆ! ಭೂಮಿ ತುಂಬಿದೆ, ನಮ್ಮಿಂದ, ನಮ್ಮ ವಸ್ತುಗಳಿಂದ, ನಮ್ಮ ಬೇಡಿಕೆಗಳಿಂದ, ನಾವು ಸೃಷ್ಟಿಸುವ ತ್ಯಾಜ್ಯದಿಂದ ತುಂಬಿದೆ. ನಮಗೀಗ ಮಾನವ ಸಂಬಂಧಗಳಾಗಲೀ ನಾವಿರುವ ಭೂಮಿಯಾಗಲೀ ಆದ್ಯತೆಯ ಸಂಗತಿಗಳಾಗಿ ಉಳಿದಿಲ್ಲ; ಆರ್ಥಿಕತೆಯೊಂದೇ ಆದ್ಯತೆ!

ಮೇಧಾವಿ ವಿಜ್ಞಾನಿಗಳ ತಂಡವೊಂದು ಏನೆಂದು ಲೆಕ್ಕಹಾಕಿದೆ ಗೊತ್ತೇ? ನಮಗೀಗ ಒಂದೂವರೆ ಭೂಮಿ ಬೇಕಂತೆ! ಅಂದರೆ ನಾವು ಈಗ ಇರುವಂತೆಯೇ ಮುಂದುವರಿದೆವು ಎನ್ನಿ, ನಮಗೆ ಹೆಚ್ಚುವರಿಯಾಗಿ ಇನ್ನೂ ಅರ್ಧ ಭೂಮಿ ಬೇಕು! ಸಾಮಾನ್ಯವಾಗಿ, ವಿಜ್ಞಾನಿಗಳು ಹೀಗೆಲ್ಲ ವಿವರಿಸಿದಾಗ, ನಾವು ಮುಖ ತಿರುವುತ್ತೇವೆ. ಸ್ವಲ್ಪ ಸೂಕ್ಷ್ಮ ಮನಸ್ಸಿರುವವರು, 'ಹೋಗಲಿ, ಹೀಗಾಗುವುದು ನಾನು ಬದುಕಿರುವಾಗಲಂತೂ ಅಲ್ಲವಲ್ಲ. ಮಕ್ಕಳ ಕಾಲಕ್ಕೆ ಎಲ್ಲರಿಗೂ ಆಗುವಂಥದ್ದು ನಮಗೂ ಆಗುತ್ತದೆ' ಎಂದು ಸಮಾಧಾನಪಟ್ಟುಕೊಳ್ಳುತ್ತಾರೆ.

ಕಂಪನಿಯೊಂದು ದಿವಾಳಿಯಾಗಬಹುದಾದ ಸನ್ನಿವೇಶವನ್ನು ಊಹಿಸಿ, ಹೇಗೆ ಪ್ರತಿಕ್ರಿಯಿಸುತ್ತದೆ ಎಂಬುದನ್ನು ಯೋಚಿಸಿ ನೋಡಿ. ಅಥವಾ ಪ್ರಾಣಾಪಾಯ ತರಬಲ್ಲ ಕಾಯಿಲೆ ತನಗಿದೆ ಎಂದಾಗ ವ್ಯಕ್ತಿಯೊಬ್ಬ ತನ್ನ ಜೀವನಶೈಲಿಯಲ್ಲಿ ಹಠಾತ್ತನೆ ತಂದುಕೊಳ್ಳುವ ಬದಲಾವಣೆಗಳನ್ನು ಕಲ್ಪಿಸಿಕೊಳ್ಳಿ. ಅಂದರೆ ಭವಿಷ್ಯದ ಬಗ್ಗೆ, ಭೂಮಿಯ ಭವಿಷ್ಯಕ್ಕಿಂತ ನಮ್ಮದೇ ಭವಿಷ್ಯದ ಬಗ್ಗೆ ನಮಗೆ ಒಂದಿಷ್ಟು ಭಯ, ತಕ್ಷಣ ಕೆಲಸಕ್ಕೆ ತೊಡಗುವಂತೆ ಮಾಡುವ ಭಯ ಬೇಕೇ ಬೇಕು. ಈ ಭಯ ನಾವು ಮಾಡಬೇಕಿರುವ ಎಲ್ಲಕ್ಕೂ ವಿಸ್ತರಿಸಬೇಕು. ಜನಸಂಖ್ಯೆಯ ಹೆಚ್ಚಳದಲ್ಲಿ ಆರೋಗ್ಯದ ಪಾತ್ರ ಬಹು ಕುತೂಹಲಕರವಾದದ್ದು. ಲಿಂಗತಾರತಮ್ಯದ ಧೋರಣೆಗಳೂ ಇಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ.

ಈ ಹಿಂದೆ ಯುವಜನರಲ್ಲಿ ಗರ್ಭನಿರೋಧಕಗಳ ಬಳಕೆಯ ಬಗೆಗಿನ ಧೋರಣೆಗಳನ್ನು ಸಂಶೋಧನಾ ತಂಡವೊಂದು ಅಧ್ಯಯನ ಮಾಡಿತ್ತು. ಗರ್ಭನಿರೋಧಕಗಳ ಬಳಕೆಯ ಬಗ್ಗೆ ಇದ್ದ ಸಂಕೋಚ, ಮಾಹಿತಿ ಪಡೆಯಲು ಹಿಂಜರಿಕೆ, ಅಜ್ಞಾನ, ತಪ್ಪು ಕಲ್ಪನೆಗಳು ವಿಜ್ಞಾನದ ಪದವಿಯ ವಿದ್ಯಾರ್ಥಿಗಳಲ್ಲಿಯೂ ಇದ್ದವು. 'ಗರ್ಭ ಧರಿಸುವಿಕೆ ಹೆಣ್ಣಿನ ಹೊಣೆ, ಅಂದಮೇಲೆ ಗರ್ಭನಿರೋಧಕಗಳ ಬಳಕೆಯೂ ಆಕೆಯದೇ ಜವಾಬ್ದಾರಿ' ಎಂಬ ನಂಬಿಕೆ ಗಂಡು-ಹೆಣ್ಣು ಮಕ್ಕಳಲ್ಲಿ ಇಬ್ಬರಲ್ಲಿಯೂ ವ್ಯಾಪಕವಾಗಿ ಇತ್ತು. ಗರ್ಭನಿರೋಧಕಗಳ ಬಳಕೆ, ಗರ್ಭನಿರೋಧಕ ಶಸ್ತ್ರಚಿಕಿತ್ಸೆಯು ಲೈಂಗಿಕ ಕ್ರಿಯೆಯ ಆನಂದವನ್ನು ಕಡಿಮೆ ಮಾಡುತ್ತವೆ ಮತ್ತು ಪುರುಷನಿಗಂತೂ ಅದು ಸ್ವೀಕಾರಾರ್ಹವಲ್ಲ ಎಂಬ ತಪ್ಪು ಕಲ್ಪನೆಯನ್ನು ಅಧ್ಯಯನದಲ್ಲಿ ಪಾಲ್ಗೊಂಡ ಶೇಕಡ 80ರಷ್ಟು ಯುವಜನರು ವ್ಯಕ್ತಪಡಿಸಿದರು.



ಹ್ಯಾನ್ಸ್ ರೋಸ್‌ಲಿಂಗ್ ಎಂಬ ಜನಸಂಖ್ಯಾ ವಿಜ್ಞಾನಿ 'ಶಿಶು ಮರಣದ ಇಳಿಕೆ ಹೊಸ ಹಸಿರು' ಎನ್ನುತ್ತಾನೆ. ಮಕ್ಕಳ ಮರಣ ಪ್ರಮಾಣ ತಗ್ಗಿದರೆ ಜನಸಂಖ್ಯೆ ಹೆಚ್ಚುತ್ತದೆ; ಜನರು ಹೆಚ್ಚಿದಷ್ಟೂ ಪರಿಸರ ಹಾಳಾಗುತ್ತದೆ ಎಂದಲ್ಲವೇ ನಮಗನ್ನಿಸುವುದು? ಆದರೆ ಜನಸಂಖ್ಯೆಯ ವಿಜ್ಞಾನದ ಪ್ರಕಾರ ಇದು ಪೂರ್ತಿ ಉಲ್ಟಾ. ಮಕ್ಕಳು ಬದುಕುಳಿಯುವುದು ಬಡತನ-ಜನಸಂಖ್ಯೆ ಎರಡರ ನಿಯಂತ್ರಣಕ್ಕೂ ಬಹು ಮುಖ್ಯವಾಗುತ್ತದೆ. ಮಕ್ಕಳ ಸಾವಿಗೆ ಹೆದರುವ ಬಡ ಕುಟುಂಬಗಳು ಹೆಚ್ಚು ಮಕ್ಕಳನ್ನು ಹೊಂದುತ್ತವೆ. ಇದರಿಂದಲೇ ಜನಸಂಖ್ಯೆ ಏರುತ್ತದೆ. ಬಡತನ ಹೆಚ್ಚುತ್ತದೆ. ಮತ್ತೆ ಗರ್ಭನಿರೋಧಕಗಳ ಬಳಕೆಗೂ ಇಲ್ಲಿ ಕೊಂಡಿ ಏರ್ಪಡುತ್ತದೆ.

ಆರೋಗ್ಯವಂತ ಮಕ್ಕಳು ಆರೋಗ್ಯಕರ ಭೂಮಿಯನ್ನು ಸೃಷ್ಟಿಸಬಲ್ಲರು. ಅದರ ಅರ್ಥ ಪರಿಸರಕ್ಕಾಗಿ ಮಾತ್ರ ಮಕ್ಕಳನ್ನು ಉಳಿಸಬೇಕು ಅಂತಲ್ಲ! ಪ್ರತಿ ಮಗುವಿಗೂ ಇರುವ ಜೀವಿಸುವ ಹಕ್ಕಿಗಾಗಿ ನಾವು ಅವರನ್ನು ಉಳಿಸಬೇಕು. 800 ಕೋಟಿ ಜನಸಂಖ್ಯೆಯು ತಾನು ಮಾಡಬಹುದಾದ ಕಾರ್ಯದಿಂದಲೂ ದೊಡ್ಡದಾಗಬೇಕು. ಆರೋಗ್ಯಕರ ತನು, ಬೇಕಾದಷ್ಟೇ ಧನ, ಉದಾರ ಮನದಿಂದ ಈ ಸಂಖ್ಯೆಯು ಭವಿಷ್ಯವನ್ನು ಕಾಪಾಡಿಕೊಳ್ಳಬೇಕು.

ಲೇಖಕಿ: ಮನೋವೈದ್ಯೆ

ವಾಚಕರ ವಾಣಿ

ರಾಯಚೂರಿನಲ್ಲಿ ಬೆಳೆಗಳ ಸಮೀಕ್ಷೆ ಆಗಲಿ

ಸಕಾಲಕ್ಕೆ ಮಳೆ ಬಾರದ ಕಾರಣ ರಾಯಚೂರು ತಾಲ್ಲೂಕಿನಲ್ಲಿ ಬೆಳೆಗಳು ನಾಶವಾಗುವ ಹಂತ ತಲುಪುತ್ತಿವೆ. ಸತತ ಬರಗಾಲದಿಂದ ಬೇಸತ್ತ ರೈತರಿಗೆ ಈಗ ಮತ್ತೊಮ್ಮೆ ಸಂಕಷ್ಟ ಎದುರಾಗುವ ಎಲ್ಲ ಲಕ್ಷಣಗಳು ಕಾಣುತ್ತಿವೆ. ಈ ಬಾರಿಯೂ ಮಳೆ ಕೈಕೊಟ್ಟಿದೆ ಎಂಬುದು ಇಲ್ಲಿನ ಬಹುತೇಕ ರೈತರ ಅಳಲು. ಮುಂಗಾರು ಮಳೆ ಆರಂಭದಲ್ಲಿ ಚೆನ್ನಾಗಿ ಸುರಿಯುವ ಸೂಚನೆ ನೀಡಿದ್ದರಿಂದ ರಾಯಚೂರು ಜಿಲ್ಲೆಯಲ್ಲಿ ರೈತರು ಸಾಲ ಮಾಡಿ ತೊಗರಿ, ಹತ್ತಿ, ಸಜ್ಜೆ, ವಿವಿಧ ವಾಣಿಜ್ಯ ಬೆಳೆಗಳನ್ನು ಬೆಳೆಯಲು ಮುಂದಾಗಿದ್ದಾರೆ. ಈಗ ಮಳೆಯು ದಿನದಿನಕ್ಕೂ ಕಡಿಮೆಯಾಗುತ್ತಿದೆ, ವಿವಿಧ ಬೆಳೆಗಳ ಫಸಲು ವೃದ್ಧಿಯಾಗದೇ ಒಣಗಿ ಹೋಗುತ್ತಿವೆ. ಇಲ್ಲಿ ಈ ಬಾರಿಯೂ ಬರಗಾಲ ಎದುರಾಗುವ ಸಾಧ್ಯತೆಯಿದೆ.

ದೇವಸೂಗೂರು, ಯರಮರಸ್, ಚಿಕ್ಕಸೂಗೂರು, ಯದ್ಲಾಪುರ, ಗಂಜಳ್ಳಿ, ಕಾಡ್ಲೂರು, ಚಂದ್ರಬಂಡ, ಹೆಗ್ಗಸನಹಳ್ಳಿ, ಶಾಖವಾದಿ ಹಳ್ಳಿಗಳನ್ನು ಒಳಗೊಂಡ ಈ ಪ್ರದೇಶದಲ್ಲಿ ಬೆಳೆಗಳಿಗೆ ಬೇಕಾದಷ್ಟು ಮಳೆ ಆಗಿಲ್ಲ. ಈ ಗ್ರಾಮಗಳಿಗೆ ಕೃಷಿ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ನಾಶವಾಗುವ ಹಂತದಲ್ಲಿರುವ ಬೆಳೆಗಳ ಸಮೀಕ್ಷೆ ಮಾಡಿ, ಸರ್ಕಾರದ ಗಮನಕ್ಕೆ ತಂದು ಸೂಕ್ತ ಪರಿಹಾರ ಒದಗಿಸಬೇಕು.

ವಿಜಯಕುಮಾರ್ ಎಚ್.ಕೆ., ರಾಯಚೂರು

ಗೌತಮ್ ನೇಮಕ ಸ್ವಾಗತಾರ್ಹ

ಟಿ20 ವಿಶ್ವಕಪ್ ಚಾಂಪಿಯನ್ ಪಟ್ಟ ಅಲಂಕರಿಸಿದ ಭಾರತೀಯ ಕ್ರಿಕೆಟ್ ತಂಡದ ಕೋಚ್ ರಾಹುಲ್ ದ್ರಾವಿಡ್ ಅವರ ಅಧಿಕಾರ ಅವಧಿ ಮುಗಿದಿದ್ದು, ಅವರಿಂದ ತೆರವಾದ ಹುದ್ದೆಗೆ ಗೌತಮ್ ಗಂಭೀರ್ ಅವರನ್ನು ಆಯ್ಕೆ ಮಾಡಿರುವುದು ಸ್ವಾಗತಾರ್ಹ. ಭಾರತೀಯ ಕ್ರಿಕೆಟ್ ತಂಡದ ಆರಂಭ ಆಟಗಾರರಾಗಿದ್ದ ಗೌತಮ್ ಅವರು ಐಪಿಎಲ್ ಪಂದ್ಯಾವಳಿಯಲ್ಲಿ ತಮ್ಮ ಕೌಶಲ ಮೆರೆದಿದ್ದರು. ಅಲ್ಲದೆ ಕೋಲ್ಕತ್ತ ನೈಟ್ ರೈಡರ್ಸ್ ತಂಡ ಪ್ರಶಸ್ತಿ ಗೆಲ್ಲುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಪ್ರಸ್ತುತ ಭಾರತೀಯ ಕ್ರಿಕೆಟ್ ತಂಡಕ್ಕೆ ಮಾರ್ಗದರ್ಶನ ಮಾಡುವ ಗುರುವಿನ ಸ್ಥಾನವನ್ನು ಅವರು ಅಲಂಕರಿಸುತ್ತಿರುವುದು ಮೆಚ್ಚತಕ್ಕ ಸಂಗತಿ. ವೃತ್ತಿ ಜೀವನದುದ್ದಕ್ಕೂ ಹಲವು ಏಳುಬೀಳುಗಳನ್ನು ಕಂಡ ಅವರು ಭಾರತೀಯ ಕ್ರಿಕೆಟ್ ತಂಡವನ್ನು ಮುನ್ನಡೆಸಲು ಅರ್ಹ ವ್ಯಕ್ತಿ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ನಿಜ ಸಂಗತಿಯನ್ನು ತೋರಿಸಿದೆ

'ಜೀವನ ಇಷ್ಟೊಂದು ಅಗ್ಗ ಆಗಬಾರದು!' ಬರಹದಲ್ಲಿ ಚಂದ್ರಕಾಂತ ವಡ್ಡು ಅವರ ವಿಶ್ಲೇಷಣೆ (ಪ್ರ.ವಾ., ಜುಲೈ 10) ಇವತ್ತಿನ ನಿಜ ಸಂಗತಿಯನ್ನು ತೋರಿಸಿದೆ. ವಾಹನ ಚಾಲನೆ ಮಾಡುವಾಗ ಮೊಬೈಲ್ ಬಳಕೆ ಕೂಡ ಅಪಘಾತಕ್ಕೆ ಕಾರಣ. ಮುಂಜಾನೆ ಎದ್ದು ರಸ್ತೆಗೆ ಇಳಿದರೆ ಸಾಕು, ಎಲ್ಲರಲ್ಲಿಯೂ ಅವಸರ ಎದ್ದು ಕಾಣುತ್ತಿರುತ್ತದೆ. ಇದರ ಪರಿಣಾಮವಾಗಿ, ಸಿಗ್ನಲ್ ಜಂಪ್ ಮಾಡುವುದು, ರಸ್ತೆ ದಾಟುವ ಪಾದಚಾರಿಗಳಿಗೆ ಡಿಕ್ಕಿ ಹೊಡೆಯುವುದು ಕೂಡ ಇತ್ತೀಚೆಗೆ ಹೆಚ್ಚಾಗಿವೆ. ಖಾಸಗಿ ಜೀವನದಲ್ಲಿ ಮೋಜು-ಮಸ್ತಿ ಮಾಡುವ ಸಂದರ್ಭದಲ್ಲಿ ಸಮಯ ವ್ಯರ್ಥ ಮಾಡುತ್ತೇವೆ. ಆದರೆ ಸಿಗ್ನಲ್‌ಗಳಲ್ಲಿ ಒಂದು ನಿಮಿಷ ನಿಂತು ಮುಂದೆ ಹೋಗುವ ತಾಳ್ಮೆ ಇರುವುದಿಲ್ಲ.

ನಿಯಮಗಳನ್ನು ಉಲ್ಲಂಘಿಸುವ ವಾಹನ ಸವಾರರ ಮೇಲೆ ಕ್ಯಾಮೆರಾ ಮೂಲಕ ಕಣ್ಣಿಟ್ಟು, ಪ್ರಕರಣಗಳನ್ನು ದಾಖಲಿಸಿದರೂ ನಿಯಮಗಳನ್ನು ಗಂಭೀರವಾಗಿ ಪರಿಗಣಿಸದೆ, ಅಪಘಾತಗಳು ಹೆಚ್ಚಾಗುತ್ತಿರುವುದು ನೋವಿನ ಸಂಗತಿ.

ಮಲ್ಲಿಕಾರ್ಜುನ್ ತೇಲಿ ಗೋಠೆ, ಜಮಖಂಡಿ

ಕುಸಿತ

ಬಿಹಾರದಲ್ಲಿ
ಒಂದರ ಮೇಲೊಂದರಂತೆ
ಸೇತುವೆಗಳ ಕುಸಿತ!
ಅದೇನು ಮಹಾ?
ಮಾನವ–ಮಾನವರ ನಡುವೆ
ಮನಃ ಸೇತುವೆಗಳ ಕುಸಿತ
ಸರ್ವತ್ರ, ಸತತ!

ಸಿ.ಪಿ.ಕೆ., ಮೈಸೂರು

ಭಾರತ–ರಷ್ಯಾ: ಸಾಂಸ್ಕೃತಿಕ ಸಂಬಂಧ ಹೆಚ್ಚಲಿ

ಭಾರತ ಮತ್ತು ರಷ್ಯಾ ನಡುವಿನ ಸಂಬಂಧವು ಬಹಳ ಮಧುರವಾದ ಭಾವನೆಗಳನ್ನು ಹೊಮ್ಮಿಸುವಂಥದ್ದು. ಈಗ ಪಾಶ್ಚಿಮಾತ್ಯ ದೇಶಗಳ ಕಡೆ, ಕೊಲ್ಲಿ ರಾಷ್ಟ್ರಗಳ ಕಡೆಗೆ ಸಾಗುವ ಭಾರತೀಯರ ಸಂಖ್ಯೆ ಬಹಳ ಹೆಚ್ಚಾಗಿರಬಹುದು. ರಷ್ಯಾಕ್ಕೆ ಉದ್ಯೋಗ ಅಥವಾ ವ್ಯಾಪಾರದ ಉದ್ದೇಶದಿಂದ ಹೋಗುವ ಭಾರತೀಯರ ಸಂಖ್ಯೆಯು ಕಡಿಮೆ ಆಗಿರಬಹುದು. ಹೀಗಿದ್ದರೂ ರಷ್ಯಾ ಎಂಬ ಹೆಸರು ಕೇಳಿದಾಗ 'ನಂಬಿಕಸ್ತ' ಎನ್ನುವ ಭಾವವೊಂದು ಮನಸ್ಸಿನಲ್ಲಿ ಹಾದುಹೋಗುತ್ತದೆ. ಪ್ರಧಾನಿ ನರೇಂದ್ರ ಮೋದಿ ಅವರು ರಷ್ಯಾಕ್ಕೆ ಭೇಟಿ ನೀಡಿದಾಗ ಇದೇ ಮಾತನ್ನು ಹೇಳಿದ್ದಾರೆ.

ಭಾರತ ಮತ್ತು ರಷ್ಯಾ ನಡುವೆ ವ್ಯಾಪಾರ ವಹಿವಾಟು ಹೆಚ್ಚಾಗಬೇಕು ಎಂಬುದರ ಜೊತೆಯಲ್ಲೇ ಸಾಂಸ್ಕೃತಿಕ ಕೊಡು–ಕೊಳ್ಳುವಿಕೆ, ಜನರ ಓಡಾಟ ಹೆಚ್ಚಾಗಬೇಕು ಎಂಬ ದಿಸೆಯಲ್ಲಿಯೂ ಸರ್ಕಾರ ಕೆಲಸ ಮಾಡಬೇಕು. ಹಿಂದಿನ ಯುಎಸ್‌ಎಸ್‌ಆರ್‌ನ ಕೆಲವು ಪ್ರಕಾಶನ ಸಂಸ್ಥೆಗಳ ಪುಸ್ತಕಗಳು ಭಾರತದ ಬೇರೆ ಬೇರೆ ಭಾಷೆಗಳಲ್ಲಿ ಲಭ್ಯವಾಗುತ್ತಿದ್ದವು. ಆದರೆ ಅವು ಈಗ ಪುಸ್ತಕದ ಅಂಗಡಿಗಳಿಂದ ಮರೆಯಾಗಿವೆ. ಅವು ಮತ್ತೆ ಸಿಗುವಂತಾಗಬೇಕು. ಜನರ ನಡುವೆ ಒಡನಾಟ ಹೆಚ್ಚಾದರೆ, ದೇಶಗಳ ಮಟ್ಟದಲ್ಲಿ ಸಂಬಂಧವು ಸಹಜವಾಗಿಯೇ ಬೆಳೆಯುತ್ತದೆ.

ರಾಮಚರಣ್ ಶೆಟ್ಟಿ, ಕುಂದಾಪುರ

ಇದೊಂದು ವಿಪರ್ಯಾಸ!

ಕೃತಕ ಬುದ್ಧಿಮತ್ತೆಯ ಕ್ಯಾಮೆರಾ ಕಣ್ಣುಗಳು ಸೆರೆಹಿಡಿದ ದೃಶ್ಯಗಳನ್ನಾಧರಿಸಿ, ಸಣ್ಣಪುಟ್ಟ ಸಂಚಾರ ನಿಯಮಗಳನ್ನು ಉಲ್ಲಂಘಿಸಿದ ವಾಹನ ಸವಾರ ಅಥವಾ ಚಾಲಕರಿಂದ ಕೋಟ್ಯಂತರ ರೂಪಾಯಿ ದಂಡ ವಸೂಲು ಮಾಡಲಾಗಿದೆ ಎಂದು ಪೊಲೀಸರು ಬೀಗಿದ್ದಾರೆ. ಆದರೆ, ವಿಪರ್ಯಾಸವೆಂದರೆ ಸರ್ಕಾರದ ಸಹಸ್ರಾರು ಕೋಟಿ ರೂಪಾಯಿಗಳನ್ನು ನುಂಗಿದ ಒಬ್ಬನೇ ಒಬ್ಬ ಪುಢಾರಿಯಿಂದ ಒಂದೇ ಒಂದು ರೂಪಾಯಿಯನ್ನು ವಸೂಲು ಮಾಡಲು ಸಹಜ ಬುದ್ಧಿಮತ್ತೆಯ ಯಾವುದೇ ಪೊಲೀಸರಿಂದಲೂ ಸಾಧ್ಯವಾಗಿಲ್ಲ!

ಪಿ.ಜೆ.ರಾಘವೇಂದ್ರ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಪತಂಜಲಿ ಕಂಪನಿಯಲ್ಲಿ ಬಿರುಗಾಳಿ

ಸದಾ ಕಾಷಾಯ ಬಟ್ಟೆ ಧರಿಸುವ ರಾಮದೇವ್, ಭಾರತದ ಸಂಸ್ಕೃತಿ, ಯೋಗಾಭ್ಯಾಸ, ದೇಶೀಯ ಔಷಧ ಪದ್ಧತಿಗಳ ಪ್ರಬಲ ಪ್ರತಿಪಾದಕರು. ಅವುಗಳ ಬಗ್ಗೆ ಪ್ರಚಾರ ಮಾಡುತ್ತಲೇ ಸಾವಿರಾರು ಕೋಟಿ ರೂಪಾಯಿಯ ವರಮಾನ ತರುವ ಪತಂಜಲಿ ಕಂಪನಿಯನ್ನು ಕಟ್ಟಿ ಬೆಳೆಸಿದರು. ಅದನ್ನು ದಶದಿಕ್ಕುಗಳಿಗೆ ವಿಸ್ತರಿಸಿದರು. ಆದರೆ, ಅವರ ಪ್ರತಿಪಾದನೆಗಳ ಬಗ್ಗೆ ಅನುಮಾನಗಳು, ಅವರ ಮಾತುಗಳ ಬಗ್ಗೆ ವಿವಾದಗಳು ಹುಟ್ಟಿಕೊಂಡು, ಅವು ಕಂಪನಿಯನ್ನು ಕಟಕಟೆಯಲ್ಲಿ ನಿಲ್ಲಿಸಿವೆ; ಪತಂಜಲಿಯ ಉತ್ಪನ್ನಗಳ ಮಾರಾಟಕ್ಕೂ ಕುತ್ತು ತಂದಿವೆ

• ಬಿ.ವಿ.ಶ್ರೀನಾಥ್


ರಾಮದೇವ್

ಭಾರತದ ಸರಕು ಸೇವಾ ಮಾರುಕಟ್ಟೆಯಲ್ಲಿ ಪತಂಜಲಿ ಬ್ರ್ಯಾಂಡ್‌ನದ್ದು ಪ್ರಮುಖ ಹೆಸರು. ಆದರೆ, ಪತಂಜಲಿ ಕಂಪನಿಯು ಪದೇ ಪದೇ ಸುದ್ದಿಗೆ ಗ್ರಾಸವಾಗುತ್ತಿದೆ. ಅದಕ್ಕೆ ಕಾರಣ, ಪತಂಜಲಿಯ ಉತ್ಪನ್ನಗಳ ಗುಣಮಟ್ಟದ ಬಗ್ಗೆ ಬಂದ ಆರೋಪಗಳು ಮತ್ತು ಆ ಕಂಪನಿಯ ಎಂ.ಡಿ. ಆಚಾರ್ಯ ಬಾಲಕೃಷ್ಣ ಮತ್ತು ಯೋಗ ಗುರು ರಾಮದೇವ್ ಸುಪ್ರೀಂ ಕೋರ್ಟ್‌ನಿಂದ ತರಾಟೆಗೆ ಗುರಿಯಾಗಿರುವುದು.

ಕೋವಿಡ್ ಬಿಕ್ಕಟ್ಟಿನ ಕಾಲದಲ್ಲಿ ದೇಶ ವಿದೇಶಗಳ ಔಷಧ ತಯಾರಿಕಾ ಕಂಪನಿಗಳು ಭಾರಿ ವ್ಯಾಪಾರ ಹಾಗೂ ಲಾಭ ಮಾಡಿದ್ದವು. ಅಂಥ ಕಂಪನಿಗಳ ಪೈಕಿ ಪತಂಜಲಿಯೂ ಒಂದು. ದೇಶದಲ್ಲಿ ಕೋವಿಡ್ ಸೋಂಕು ವ್ಯಾಪಕವಾಗಿ ಹರಡುತ್ತಿದ್ದಾಗ ರಾಮದೇವ್ ತಮ್ಮ ಪತಂಜಲಿ ಕಂಪನಿಯಿಂದ ಆಯುರ್ವೇದದ ಕೊರೊನಿಲ್ ಎಂಬ ಮಾತ್ರೆಗಳನ್ನು ಪರಿಚಯಿಸಿದ್ದರು. ಸೋಂಕನ್ನು ಏಳು ದಿನದಲ್ಲಿ ನಿಯಂತ್ರಿಸುತ್ತೇವೆ ಎಂದು ರಾಮದೇವ್ ಮತ್ತು ಅವರ ಶಿಷ್ಯ ಆಚಾರ್ಯ ಬಾಲಕೃಷ್ಣ ಘೋಷಿಸಿದ್ದರು. ಸಂಸ್ಥೆಯ ಅಧೀನದಲ್ಲಿರುವ ದಿವ್ಯ ಫಾರ್ಮಸಿಯಲ್ಲಿ ಈ ಔಷಧಗಳು ತಯಾರಾಗಿವೆ, ಇವನ್ನು ಎಲ್ಲ ರೀತಿಯ ಪರೀಕ್ಷೆಗಳಿಗೆ ಒಳಪಡಿಸಲಾಗಿದೆ ಮತ್ತು ಕ್ಲಿನಿಕಲ್ ಟ್ರಯಲ್ ಕೂಡ ನಡೆದಿದೆ ಎಂದು ಪ್ರಚಾರ ಮಾಡಲಾಗಿತ್ತು.



ಹರಿದ್ವಾರದಲ್ಲಿರುವ ಪತಂಜಲಿ ಆಯುರ್ವೇದ್ ಲಿ. ಪ್ರಧಾನ ಕಚೇರಿ

ಪತಂಜಲಿಯು ಕೊರೊನಿಲ್ ಬಗ್ಗೆ ಜಾಹೀರಾತುಗಳನ್ನೂ ನೀಡಿತ್ತು. ರಾಮದೇವ್ ಮಾತನ್ನು ನಂಬಿದ ಜನ ಮಾತ್ರೆಗಳಿಗೆ ಮುಗಿಬಿದ್ದರು. ಕೊರೊನಿಲ್‌ಗೆ ಬೇಡಿಕೆ ಹೆಚ್ಚಾಗಿತ್ತು. ದಿನಕ್ಕೆ 10 ಲಕ್ಷ ಮಾತ್ರೆಗಳಿಗೆ ಬೇಡಿಕೆ ಬರುತ್ತಿದೆ ಎಂದು ರಾಮದೇವ್ ಅವರೇ ಹೇಳಿದ್ದರು. ಆದರೆ, ಬಿಕ್ಕಟ್ಟಿನ ಕಾಲದಲ್ಲಿ ಅವರ ವರ್ತನೆಗೆ ಆಕ್ಷೇಪಗಳು ಕೇಳಿಬರತೊಡಗಿದವು. ಕೊರೊನಿಲ್‌ನ ಮಾರುಕಟ್ಟೆ ತಂತ್ರಗಾರಿಕೆಗೆ ಆಕ್ಷೇಪ ವ್ಯಕ್ತಪಡಿಸಿದ್ದ ಆಯುಷ್ ಸಚಿವಾಲಯವು, ಕೊರೊನಿಲ್ ಬಗ್ಗೆ ಜಾಹೀರಾತು ನೀಡಬಾರದು; ಔಷಧದ ವಿವರಗಳನ್ನು ಸಲ್ಲಿಸಬೇಕು ಎಂದು ಪತಂಜಲಿಗೆ ನೋಟಿಸ್ ನೀಡಿತ್ತು. ಆದರೂ ಅದನ್ನು ಸಮರ್ಥಿಸಿಕೊಂಡಿದ್ದ ಪತಂಜಲಿಯು, ಔಷಧದ ಬಗ್ಗೆ ನಾವು ಯಾವುದೇ ಜಾಹೀರಾತು ನೀಡಿಲ್ಲ, ಅದರ ಪ್ರಯೋಜನಗಳ ಬಗ್ಗೆ ಜನರಿಗೆ ಮಾಹಿತಿಯನ್ನಷ್ಟೇ ನೀಡಿದ್ದೇವೆ ಎಂದಿತ್ತು.

ರಾಮದೇವ್ ಆಯುರ್ವೇದ ವೈದ್ಯ ಪದ್ಧತಿಯ ಪ್ರತಿಪಾದಕರು. ಅದನ್ನು ಸಮರ್ಥಿಸಿಕೊಳ್ಳುವ ಭರದಲ್ಲಿ ಅವರು ಆಲೋಪಥಿ ಬಗ್ಗೆ ಆಡಿದ ಮಾತು ವಿವಾದವಾಗಿ ಪರಿಣಮಿಸಿತು. ಸಂದರ್ಶನವೊಂದರಲ್ಲಿ ಮಾತನಾಡುತ್ತಾ, ಕೋವಿಡ್ 19ಕ್ಕೆ ಆಲೋಪಥಿ ಔಷಧಿ ತೆಗೆದುಕೊಂಡು ಲಕ್ಷಾಂತರ ಮಂದಿ ಸಾವನ್ನಪ್ಪಿದ್ದಾರೆ ಎಂದು ರಾಮದೇವ್ ಹೇಳಿದ್ದರು. ಜತೆಗೆ ಆಲೋಪಥಿ ಒಂದು ಮೂರ್ಖ ವಿಜ್ಞಾನ ಎಂದು ಟೀಕಿಸಿದ್ದರು. ಈ ಹೇಳಿಕೆಯು ರಾಮದೇವ್ ಅವರನ್ನು ಸುಪ್ರೀಂ ಕೋರ್ಟ್ ಕಟಕಟೆಗೆ ಬಂದು ನಿಲ್ಲುವಂತೆ ಮಾಡಿತು.

ಭಾರತೀಯ ವೈದ್ಯಕೀಯ ಸಂಘವು (ಐಎಂಎ) 2022ರಲ್ಲಿ ರಾಮದೇವ್ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿತು. ಪತಂಜಲಿ ಆಯುರ್ವೇದ ಕಂಪನಿಯು ಆಲೋಪಥಿ ವಿಚಾರದಲ್ಲಿ ತಪ್ಪುದಾರಿಗೆ ಎಳೆಯುವ ಜಾಹೀರಾತು ನೀಡಿದೆ ಎಂದು ಆಕ್ಷೇಪಿಸಿತ್ತು. ನ್ಯಾಯಾಲಯವು, ಆಲೋಪಥಿಯನ್ನು ಅವಮಾನಿಸುವ ಯಾವ ಯತ್ನವನ್ನೂ ನಡೆಸಬಾರದು ಎಂದು ರಾಮದೇವ್ ಮತ್ತು ಅವರ ಆಪ್ತ ಬಾಲಕೃಷ್ಣ ಅವರಿಗೆ ಎಚ್ಚರಿಕೆ ನೀಡಿತ್ತು. ಜತೆಗೆ ಇಬ್ಬರೂ ಬಹಿರಂಗವಾಗಿ ಕ್ಷಮೆ ಯಾಚಿಸುವಂತೆ ಮಾಡಿತ್ತು. ಇದೀಗ ಸಂಸ್ಥೆಯ 14 ಉತ್ಪನ್ನಗಳ ಮಾರಾಟಕ್ಕೆ ತಡೆ ಬಿದ್ದಿದೆ.

14 ಉತ್ಪನ್ನಗಳ ಮಾರಾಟಕ್ಕೆ ಕುತ್ತು

ಐಎಂಎ ಸಲ್ಲಿಸಿರುವ ಅರ್ಜಿಯ ವಿಚಾರಣೆಯು ಹಲವು ತಿರುವು ಪಡೆಯುತ್ತಿದೆ. ಅದು ಪತಂಜಲಿ ಪಾಲಿಗೆ ಹಲವು ವಿಧದಲ್ಲಿ ಮುಳುವಾಗುತ್ತಿದೆ. ಪತಂಜಲಿ ಆಯುರ್ವೇದ್ ಲಿಮಿಟೆಡ್ ಮತ್ತು ದಿವ್ಯ ಫಾರ್ಮಸಿಯ 14 ಉತ್ಪನ್ನಗಳ ತಯಾರಿಕೆ ಪರವಾನಗಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತುಗೊಳಿಸಲಾಗಿದೆ ಎಂದು ಉತ್ತರಾಖಂಡ ರಾಜ್ಯ ಪರವಾನಗಿ ಪ್ರಾಧಿಕಾರವು ಈ ಹಿಂದೆ ಸುಪ್ರೀಂ ಕೋರ್ಟ್‌ಗೆ ತಿಳಿಸಿತ್ತು. ಹೀಗಾಗಿ ಪತಂಜಲಿಯು 14 ಉತ್ಪನ್ನಗಳ ಮಾರಾಟವನ್ನು ಸ್ಥಗಿತಗೊಳಿಸಿದೆ.

ಈ ವಿಚಾರವನ್ನು ಸುಪ್ರೀಂ ಕೋರ್ಟ್‌ಗೆ ತಿಳಿಸಿರುವ ಕಂಪನಿಯು, ತನ್ನ ಉತ್ಪನ್ನಗಳನ್ನು ಮಾರುಕಟ್ಟೆಯಿಂದ ಹಿಂತೆಗೆದುಕೊಳ್ಳುವಂತೆ 5,606 ಫ್ರಾಂಚೈಸಿ ಸ್ಟೋರ್‌ಗಳಿಗೆ ಸೂಚನೆಗಳನ್ನು ನೀಡಲಾಗಿದೆ ಎಂದು ಮಾಹಿತಿ ನೀಡಿದೆ. ಈ 14 ಉತ್ಪನ್ನಗಳ ಜಾಹೀರಾತುಗಳನ್ನೂ ಹಿಂಪಡೆಯಲಾಗುವುದು ಎಂದಿದೆ.

ಸಾವಿರಾರು ಕೋಟಿ ವರಮಾನ

2023–24ನೇ ಆರ್ಥಿಕ ವರ್ಷದಲ್ಲಿ ಪತಂಜಲಿ ಫುಡ್ಸ್ ಲಿಮಿಟೆಡ್ (ಈ ಮೊದಲು ರುಚಿ ಸೋಯಾ ಇಂಡಸ್ಟ್ರೀಸ್ ಲಿಮಿಟೆಡ್) ತನ್ನ ಕಾರ್ಯಾಚರಣೆಗಳ ಮೂಲಕ ಒಟ್ಟು ₹31,721 ಕೋಟಿ ವರಮಾನ ಗಳಿಸಿದೆ. ಈ ಪೈಕಿ ಆಹಾರ ಮತ್ತು ಎಫ್‌ಎಂಸಿಜಿ ವಲಯದಲ್ಲಿನ ಮಾರಾಟದಿಂದ ₹9,643 ಕೋಟಿ ಗಳಿಸಿದೆ. ಇದು ಕಂಪನಿಯೇ ನೀಡಿರುವ ಮಾಹಿತಿ.

2022–23ನೇ ಆರ್ಥಿಕ ವರ್ಷದಲ್ಲಿ ಆಹಾರ ಮತ್ತು ಎಫ್‌ಎಂಸಿಜಿ ವಲಯದಲ್ಲಿನ ಕಾರ್ಯಾಚರಣೆ ವರಮಾನವು ಶೇ 19.49ರಷ್ಟಿತ್ತು. 2023–24ನೇ ಸಾಲಿನಲ್ಲಿ ಶೇ 30.06ರಷ್ಟು ಏರಿಕೆಯಾಗಿದೆ ಎಂದು ಕಂಪನಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

2023–24ನೇ ಆರ್ಥಿಕ ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ಕಂಪನಿಯ ಆದಾಯವು ₹496 ಕೋಟಿ ಆಗಿದೆ. ಪೂರ್ಣ ಆರ್ಥಿಕ ವರ್ಷದಲ್ಲಿ ₹1,518 ಕೋಟಿ ಆಗಿದೆ.

ಕಂಪನಿಯ ಬ್ರ್ಯಾಂಡ್ ಅನ್ನು ಜನಪ್ರಿಯಗೊಳಿಸಲು ಹೆಚ್ಚಿನ ಹಣವನ್ನು ವಿನಿಯೋಗಿಸುತ್ತಿದೆ. ಇದಕ್ಕಾಗಿ ಒಟ್ಟಾರೆ ವರಮಾನದಲ್ಲಿ ಶೇ 0.34ರಷ್ಟು ಹಣವನ್ನು ವೆಚ್ಚ ಮಾಡಿದೆ. ಕಬಡ್ಡಿ ಲೀಗ್– 2024, ಫಿವರ್ ಎಫ್‌ಎಂ, ಕೆಕೆಆರ್ ಐಪಿಎಲ್ 24ರ ರೇಡಿಯೊ ಪಾರ್ಟ್ನರ್‌ಶಿಪ್ ಹೊಂದಲಾಗಿತ್ತು ಎಂದು ತಿಳಿಸಿದೆ.

ಗುಣಮಟ್ಟದ ಪರೀಕ್ಷೆಯಲ್ಲಿ ಫೇಲ್, ಜೈಲು ಶಿಕ್ಷೆ

ಪತಂಜಲಿಯು ಆಯುರ್ವೇದ ಔಷಧಿಗಳು, ನೈಸರ್ಗಿಕ ಸೌಂದರ್ಯವರ್ಧಕಗಳು, ಆಹಾರ ಉತ್ಪನ್ನಗಳು ಸೇರಿ ನೂರಾರು ಉತ್ಪನ್ನಗಳನ್ನು ಮಾರಾಟ ಮಾಡುತ್ತದೆ. ವಿನಾಶದ ಹಾದಿಯಲ್ಲಿರುವ ಹಲವು ವೈದ್ಯಕೀಯ ಗಿಡಮೂಲಿಕೆಗಳನ್ನು ದಿವ್ಯಯೋಗ ಮಂದಿರ ಮತ್ತು ಪತಂಜಲಿ ಯೋಗಪೀಠದ ಮೂಲಕ ತಮ್ಮ ಜಮೀನಿನಲ್ಲೇ ಬೆಳೆಯುತ್ತೇವೆ ಎಂದು ಸಂಸ್ಥೆ ತಿಳಿಸಿದೆ. ಆದರೆ, ಪತಂಜಲಿ ಉತ್ಪನ್ನಗಳ ಗುಣಮಟ್ಟದ ಬಗ್ಗೆ ಕೆಲವು ಆರೋಪಗಳು ಕೂಡ ಇವೆ.

2017ರಲ್ಲಿ ಆರ್‌ಟಿಐ ಅಡಿ ವ್ಯಕ್ತಿಯೊಬ್ಬರು ಪಡೆದಿದ್ದ ಮಾಹಿತಿಯಲ್ಲಿ, ಕೆಲವು ಪತಂಜಲಿ ಉತ್ಪನ್ನಗಳು ಗುಣಮಟ್ಟ ಪರೀಕ್ಷೆಯಲ್ಲಿ ವಿಫಲವಾಗಿವೆ ಎನ್ನುವ ಅಂಶ ಬೆಳಕಿಗೆ ಬಂದಿತ್ತು. ದೇಶದಲ್ಲಿ ಶೇ 40ರಷ್ಟು ಆಯುರ್ವೇದ ಔಷಧಿಗಳು ಕಳಪೆಯಾಗಿದ್ದು, ಅದರಲ್ಲಿ ಪತಂಜಲಿಯ ಹಲವು ಉತ್ಪನ್ನಗಳಿವೆ ಎಂದು ಹರಿದ್ವಾರದ ಆಯುರ್ವೇದ ಮತ್ತು ಯುನಾನಿ ಪ್ರಯೋಗಾಲಯ ಮಾಹಿತಿ ನೀಡಿತ್ತು. ಪತಂಜಲಿಯ ದಿವ್ಯ ಆಮ್ಲ ರಸ ಮತ್ತು ಶಿವಲಿಂಗ ಬೀಜದಲ್ಲಿ ಬೇರೆ ಪದಾರ್ಥಗಳು ಮಿಶ್ರಣಗೊಂಡಿದ್ದು, ಅವು ಗುಣಮಟ್ಟ ಪರೀಕ್ಷೆಯಲ್ಲಿ ಪಾಸಾಗಿಲ್ಲ ಎಂದು ವರದಿ ತಿಳಿಸಿತ್ತು.

2024ರ ಮೇ ತಿಂಗಳಲ್ಲಿಯೂ ಇಂಥದ್ದೇ ಒಂದು ಪ್ರಕರಣ ವರದಿಯಾಗಿದೆ. ಪತಂಜಲಿಯ ಸೋನ್ ಪಾಪ್ಡಿ ಗುಣಮಟ್ಟ ಪರೀಕ್ಷೆಯಲ್ಲಿ ಫೇಲ್ ಆಗಿದ್ದರಿಂದ ಕಂಪನಿಯ ಮೂವರು ಸಿಬ್ಬಂದಿಗೆ ಉತ್ತರಾಖಂಡ ನ್ಯಾಯಾಲಯವು ಆರು ತಿಂಗಳ ಜೈಲು ಶಿಕ್ಷೆ ಮತ್ತು ದಂಡ ವಿಧಿಸಿದೆ.

ಸಾವಿರ ಎಕರೆಯ ಒಡೆಯರು


ಆಚಾರ್ಯ ಬಾಲಕೃಷ್ಣ

ತಮ್ಮದು ವ್ಯಾಪಾರ ಅಲ್ಲ, ಸೇವೆ ಎನ್ನುವುದು ರಾಮದೇವ್ ಅವರ ಪ್ರತಿಪಾದನೆ. ‘ನಮ್ಮ ಕಂಪನಿಗೆ ನಾನೇ ಬ್ರ್ಯಾಂಡ್ ಅಂಬಾಸಿಡರ್’ ಎನ್ನುವ ಅವರು, ಅದಕ್ಕೆ ತಾವಾಗಲಿ, ಕಂಪನಿಯ ಶೇ 90ಕ್ಕೂ ಹೆಚ್ಚು ಷೇರುಗಳ ಮಾಲೀಕರಾಗಿರುವ ಆಚಾರ್ಯ ಬಾಲಕೃಷ್ಣ ಅವರಾಗಲಿ ಒಂದು ಪೈಸೆಯನ್ನೂ ಪಡೆಯುವುದಿಲ್ಲ ಎಂದು ಹೇಳಿದ್ದರು. ತಮ್ಮ ಕಂಪನಿಯು ದೇಶದ ವಿವಿಧೆಡೆ ಒಂದು ಸಾವಿರ ಎಕರೆ ಹೊಂದಿದೆ ಎಂದು ರಾಮದೇವ್ ಅವರೇ ಹಿಂದೊಮ್ಮೆ ಹೇಳಿಕೊಂಡಿದ್ದರು.

ಭ್ರಷ್ಟಾಚಾರ, ಸ್ವದೇಶಿ ಆಂದೋಲನ ಇತ್ಯಾದಿಗಳ ಬಗ್ಗೆ ರಾಮದೇವ್ ಆಗಾಗ್ಗೆ ಉಪನ್ಯಾಸ ನೀಡುತ್ತಿರುತ್ತಾರೆ. ಆದರೆ, ತೆರಿಗೆ ಬಾಕಿ, ಭೂಮಿ ಒತ್ತುವರಿ ಮತ್ತಿತರ ಆರೋಪಗಳಿಗೆ ಸಂಬಂಧಿಸಿದಂತೆ ಪತಂಜಲಿ ಸಂಸ್ಥೆಯ ವಿರುದ್ಧ ಅನೇಕ ಪ್ರಕರಣಗಳು ದಾಖಲಾಗಿವೆ.

ಶ್ರೀಮಂತರ ಪಟ್ಟಿ ಸೇರಿದ ಬಾಲಕೃಷ್ಣ

ಕೈಯಲ್ಲಿ ದೊಡ್ಡ ಬಂಡವಾಳ ಇಲ್ಲದೆ ಕೇವಲ ತಮ್ಮ ಸಂಕಲ್ಪ ಶಕ್ತಿ ತಮ್ಮ ಇಮೇಜ್‌ನಿಂದಲೇ ಆಯುರ್ವೇದ ಸರಕು ಉತ್ಪಾದನೆಯ ದೊಡ್ಡ ಕಂಪನಿ ರೂಪಿಸಿದವರು ರಾಮದೇವ್. ಈ ಕೆಲಸದಲ್ಲಿ ಅವರಿಗೆ ಹೆಗಲೆಣೆಯಾಗಿದ್ದವರು ಆಚಾರ್ಯ ಬಾಲಕೃಷ್ಣ. ನೇಪಾಳದಲ್ಲಿ ಹುಟ್ಟಿ, ಹರಿಯಾಣದಲ್ಲಿ ಬೆಳೆದ ಬಾಲಕೃಷ್ಣ, ಪತಂಜಲಿಯ ಯಶಸ್ಸಿನ ಹಿಂದಿನ ಶಕ್ತಿ ಎನ್ನುವವರೂ ಇದ್ದಾರೆ. ದಾಖಲೆ ಪ್ರಕಾರ, ಅವರೇ ಕಂಪನಿ ಮಾಲೀಕರು. ಆದರೆ, ಜನರ ಮಟ್ಟಿಗೆ ಪತಂಜಲಿ ಎಂದರೆ ರಾಮದೇವ್. ಬಲಾಢ್ಯ ಬಹುರಾಷ್ಟ್ರೀಯ ಕಂಪನಿಗಳನ್ನೂ ಮೀರಿಸಿ ಪತಂಜಲಿಯನ್ನು ಒಂದು ಬ್ರ್ಯಾಂಡ್ ಆಗಿ ರೂಪಿಸಿದವರು ರಾಮದೇವ್.

ಇಂದು ಪತಂಜಲಿ ಹೊರತುಪಡಿಸಿದ ಆಯುರ್ವೇದ ಉತ್ಪನ್ನಗಳ ಬಗ್ಗೆ ಯೋಚನೆ ಮಾಡುವುದು ಅಸಾಧ್ಯ ಎನ್ನುವಂತಹ ಸ್ಥಿತಿ ಇದೆ. ನರೇಂದ್ರ ಮೋದಿ ಸರ್ಕಾರದಿಂದ ರಾಮದೇವ್ ಹಲವು ರೀತಿಯ ನೆರವು ಪಡೆದಿದ್ದಾರೆ ಎನ್ನುವ ಆರೋಪವೂ ಇದೆ.

ಆಚಾರ್ಯ ಬಾಲಕೃಷ್ಣ ಅವರ ವಿರುದ್ಧವೂ ಹಲವು ಆರೋಪಗಳಿವೆ. ಅವರು ದೇಶದ ಶ್ರೀಮಂತರ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ಫೋರ್ಬ್ಸ್‌ನ 13ನೇ ಶತಕೋಟ್ಯಧಿಪತಿಗಳ ಪಟ್ಟಿಯಲ್ಲಿ ಬಾಲಕೃಷ್ಣ 365ನೇ ಸ್ಥಾನ ಪಡೆದಿದ್ದರು.

ಆಧಾರ: ಪಿಟಿಐ, ಬಿಬಿಸಿ

ಸಿನಿ ಬಿಟ್ಸ್

ದುಬೈಗೆ ಹಾರಿದ ವಿದ್ಯಾರ್ಥಿ ವಿದ್ಯಾರ್ಥಿನಿಯರು!


'ವಿದ್ಯಾರ್ಥಿ ವಿದ್ಯಾರ್ಥಿನಿಯರೇ' ಕಲಾವಿದರು

ಅರುಣ್ ಅಮುಕ್ತ ನಿರ್ದೇಶನದ ‘ವಿದ್ಯಾರ್ಥಿ ವಿದ್ಯಾರ್ಥಿನಿಯರೇ’ ಚಿತ್ರ ಜುಲೈ 19ರಂದು ರಾಜ್ಯದಲ್ಲಿ ಬಿಡುಗಡೆಯಾಗುತ್ತಿದೆ. ಚಿತ್ರದ ಪ್ರೀಮಿಯರ್ ಪ್ರದರ್ಶನ ಜುಲೈ 14ರಂದು ದುಬೈನಲ್ಲಿ ನಡೆಯಲಿದೆ.

ಜುಲೈ 14ರಂದು ಕೇರಳದಲ್ಲಿ ಸಿನಿಮಾ ಬಿಡುಗಡೆಯಾಲಿದೆ ಎಂದು ಚಿತ್ರತಂಡ ಮಾಹಿತಿ ನೀಡಿದೆ. ಓಎಂಜಿ ಕಂಪನಿ ದುಬೈನಲ್ಲಿ ಈ ಚಿತ್ರದ ವಿತರಣಾ ಹಕ್ಕು ಪಡೆದುಕೊಂಡಿದೆ. ರ‍್ಯಾಪರ್ ಚಂದನ್ ಶೆಟ್ಟಿ ನಾಯಕನಾಗಿ ಈ ಚಿತ್ರದಲ್ಲಿ ನಟಿಸಿದ್ದಾರೆ. ಭ್ರಷ್ಟ ರಾಜಕಾರಣಿಯೊಬ್ಬನ ಪುತ್ರನ ಸುತ್ತ ಚಿತ್ರದ ಕಥಾಹಂದರವಿದೆ. ಇದೊಂದು ಯೂತ್ ಸಬ್ಜೆಕ್ಟ್ ಒಳಗೊಂಡ ಸಿನಿಮಾ. ಶೈಕ್ಷಣಿಕ ಪರಿಸರದ ಕ್ರೌರ್ಯದ ಮುಖವೊಂದನ್ನು ಬಯಲಾಗಿಸುವ ಪ್ರಯತ್ನವೂ ಸಿನಿಮಾದಲ್ಲಿದೆ ಎಂದಿದೆ ಚಿತ್ರತಂಡ. ವೆರೈಟಿ ಕ್ರಿಯೇಷನ್ಸ್ ಬ್ಯಾನರ್ ಅಡಿಯಲ್ಲಿ ಸುಬ್ರಮಣ್ಯ ಕುಕ್ಕೆ ಮತ್ತು ಎ.ಸಿ ಶಿವಲಿಂಗೇಗೌಡ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಅಮರ್, ಭಾವನಾ, ಮನಸ್ವಿ, ವಿವಾನ್, ಭವ್ಯ, ಸುನೀಲ್ ಪುರಾಣಿಕ್, ಅರವಿಂದ ರಾವ್, ಸಿಂಚನಾ, ಕಾಕ್ರೋಚ್ ಸುಧಿ ಮುಂತಾದವರು ತಾರಾಬಳಗದಲ್ಲಿದ್ದಾರೆ.

ಸೆಟ್ಟೇರಿದ ‘ಸಿಂಹಾಸನ’


ರೇಷ್ಮಾ

ನಾಲ್ಕು ದಶಕಗಳ ಹಿಂದೆ ‘ಸಿಂಹಾಸನ’ ಎನ್ನುವ ಚಿತ್ರವೊಂದು ತೆರೆ ಕಂಡಿತ್ತು. ಈಗ ಅದೇ ಹೆಸರಿನಲ್ಲಿ ಮತ್ತೊಂದು ಸಿನಿಮಾ ಸೆಟ್ಟೇರಿದೆ. ಕಿರುತೆರೆ, ಹಿರಿತೆರೆಯಲ್ಲಿ ಸಹಾಯಕ ನಿರ್ದೇಶಕರಾಗಿದ್ದ ಡಿ.ಆರ್.ದಯಾನಂದಸ್ವಾಮಿ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ.

ಚಾಮರಾಜನಗರ ಮೂಲದ ಚಂದ್ರು ನಾಲ್‌ರೋಡ್ ಮುನೇಶ್ವರ ಪ್ರೊಡಕ್ಷನ್ ಅಡಿಯಲ್ಲಿ ಬಂಡವಾಳ ಹೂಡಿ, ನಾಯಕನಾಗಿಯೂ ಕಾಣಿಸಿಕೊಳ್ಳುತ್ತಿದ್ದಾರೆ. ರೇಷ್ಮಾ ಚಿತ್ರದ ನಾಯಕಿ.

‘ಪೊಲಿಟಿಕಲ್ ಡ್ರಾಮಾದ ಕುರಿತಾದ ಕಥೆಯಿದೆ. ಸಾಮಾನ್ಯ ವ್ಯಕ್ತಿ ರಾಜಕೀಯ ಪ್ರವೇಶ ಮಾಡಿದರೆ ಯಾವ ರೀತಿ ಕಷ್ಟದಲ್ಲಿ ಸಿಲುಕುತ್ತಾನೆ? ಸವಾಲುಗಳನ್ನು ದಾಟಿ ಹೇಗೆ ಸಾಧನೆ ಮಾಡುತ್ತಾನೆ ಎಂಬುದನ್ನು ಚಿತ್ರದಲ್ಲಿಯೇ ನೋಡಬೇಕು. ಕಾಲ್ಪನಿಕ ಅಂಶಗಳನ್ನು ಒಳಗೊಂಡಿದ್ದರೂ ನೋಡುಗರಿಗೆ ಕನೆಕ್ಟ್ ಆಗುವಂತಹ ದೃಶ್ಯಗಳು ಇವೆ. ಐದು ಗೀತೆಗಳಿಗೆ ಅರ್ಜುನ್ ಸ್ವರಾಜ್ ಸಂಗೀತ, ರಣಧೀರ ಛಾಯಾಚಿತ್ರಗ್ರಹಣವಿದೆ’ ಎಂದರು ನಿರ್ದೇಶಕರು.

ಬೆಂಗಳೂರು, ಚನ್ನಪಟ್ಟಣ, ಮೈಸೂರು ಮೊದಲಾದೆಡೆ ಚಿತ್ರೀಕರಣ ನಡೆಸಲು ತಂಡ ಯೋಜನೆ ಹಾಕಿಕೊಂಡಿದೆ. ಪ್ರಕಾಶ್‌ಸಣ್ಣಕ್ಕಿ, ಸಂಜಯ್ ಮುಂತಾದವರು ತಾರಾಗಣದಲ್ಲಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಇತ್ತೀಚೆಗೆ ಸುರಿದ ಭಾರಿ ಮಳೆಗೆ ಅಯೋಧ್ಯೆಯ ರಾಮ ಮಂದಿರದೊಳಗೆ ನೀರು ನುಗ್ಗಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿತ್ತು. ಇದೇ ಹಿನ್ನೆಲೆಯಲ್ಲಿ ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ಒಂದು ಹರಿದಾಡುತ್ತಿದೆ. ಒಬ್ಬ ಮಹಿಳೆ ರಸ್ತೆ ಮೇಲೆ ನಡೆದುಹೋಗುವಾಗ, ದೊಡ್ಡ ಗುಂಡಿಗೆ ಬೀಳುತ್ತಾರೆ. ಸ್ಥಳೀಯರು ಅವರ ನೆರವಿಗೆ ಧಾವಿಸುತ್ತಾರೆ. ಇದು ಅಯೋಧ್ಯೆಯ ರಾಮ ಪಥ ಆಗಿದ್ದು, ಗುಜರಾತ್ ಮೂಲದ ಕಂಪನಿಯೊಂದು ಇದನ್ನು ನಿರ್ಮಿಸಿದೆ ಎಂದು ಕೆಲವರು ಪ್ರತಿಪಾದಿಸುತ್ತಿದ್ದಾರೆ. ಸಮಾಜವಾದಿ ಪಕ್ಷದ ನಾಯಕ ಐ.ಪಿ.ಸಿಂಗ್ ಇದನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದು, ‘ಗುಜರಾತ್ ಮಾದರಿ’ ಎಂದು ಉಲ್ಲೇಖಿಸಿದ್ದಾರೆ. ಆದರೆ, ಇದು ಅಯೋಧ್ಯೆಯ ರಸ್ತೆಗೆ ಸಂಬಂಧಿಸಿದ ವಿಡಿಯೊ ಎನ್ನುವುದು ಸುಳ್ಳು.



ವಿಡಿಯೊ ಅನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಇದು ಬ್ರೆಜಿಲ್‌ನ ಐಎಸ್‌ಟಿಒಇ ವೆಬ್‌ಸೈಟ್‌ನಲ್ಲಿ ಪ್ರಕಟವಾಗಿದ್ದ ಲೇಖನಕ್ಕೆ ಸಂಪರ್ಕ ನೀಡಿತು. ಅದರಲ್ಲಿ ಮರಿಯಾ ರೋಸಿಲಿನ್ ಅಲ್ಮೈದಾ ಡಿಸೋಜಾ ಅವರು ಪೋರ್ಟಲೇಜಾ ನಗರದ ರಸ್ತೆಯಲ್ಲಿ ನಡೆಯುವಾಗ ಗುಂಡಿಗೆ ಬಿದ್ದಿದ್ದರ ಬಗ್ಗೆ ಉಲ್ಲೇಖವಿತ್ತು. ಇದೇ ಸುದ್ದಿಗೆ ಸಂಬಂಧಿಸಿದಂತೆ ‘ಒಸಿಪಿ ನ್ಯೂಸ್’ ಯು ಟ್ಯೂಬ್ ಚಾನೆಲ್‌ನಲ್ಲಿ ಜೂನ್ 3, 2022ರಂದು ಸುದ್ದಿ ಪ್ರಸಾರವಾಗಿತ್ತು. ಈ ಬಗ್ಗೆ ಆಲ್ಟ್ ನ್ಯೂಸ್ ಫ್ಯಾಕ್ಟ್ ಚೆಕ್ ಮಾಡಿದೆ. ಇದು ಅಯೋಧ್ಯೆಯ ವಿಡಿಯೊ ಎಂದು ಪ್ರಚಾರ ಮಾಡುತ್ತಿರವವರ ಬಗ್ಗೆ ಕಾನೂನು ಕ್ರಮ ಜರುಗಿಸುವುದಾಗಿ ಅಯೋಧ್ಯೆಯ ಪೊಲೀಸರು ಎಚ್ಚರಿಕೆ ನೀಡಿದ್ದಾರೆ.

ಗುಂಡಣ್ಣ



ಅಭಿಮಾನದ ಅತಿರೇಕ

ನುಡಿ ಬೆಳಗು


ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಅದು 1994ರ ಫಿಫಾ ಫುಟ್‌ಬಾಲ್ ವಿಶ್ವಕಪ್ ಪಂದ್ಯಾವಳಿ. ಕೊಲಂಬಿಯಾದ ಆಟಗಾರ ಆಂಡ್ರೆ ಎಸ್ಕೊಬಾರ್ ಅಮೆರಿಕ ಸಂಯುಕ್ತ ಸಂಸ್ಥಾನದ ವಿರುದ್ಧ ನಡೆದ ಪಂದ್ಯದಲ್ಲಿ ಅಕಸ್ಮಾತ್ತಾಗಿ ತಮ್ಮದೇ ಗೋಲು ಪೆಟ್ಟಿಗೆಗೆ ಚೆಂಡನ್ನು ಒದ್ದು ಬಿಟ್ಟರು. ಗೋಲ್ ಅಮೆರಿಕಾದ ಪಾಲಾಯಿತು. 1-2 ಗೋಲುಗಳಿಂದ ಕೊಲಂಬಿಯಾ ಪಂದ್ಯದಲ್ಲಿ ಸೋಲಬೇಕಾಯಿತು.

ಕೊಲಂಬಿಯಾ ವಿಶ್ವಕಪ್ ಪಂದ್ಯಾವಳಿಯಿಂದ ಹೊರಬಿದ್ದ ಐದು ದಿನಗಳ ನಂತರ ಎಸ್ಕೊಬಾರ್ ಗುಂಡಿಗೆ ಬಲಿಯಾದರು. ಆರು ಸುತ್ತು ಗುಂಡಿಕ್ಕಿದ ಕೊಲೆಗಾರರು ಪ್ರತೀ ಬಾರಿ ಗುಂಡು ಹೊಡೆದಾಗಲೂ ಗೋಲ್ ಎಂದು ಹೇಳುತ್ತಿದ್ದರೆಂದು ವರದಿಯಾಗಿತ್ತು. 27ರ ಹರೆಯದ ಪ್ರತಿಭಾವಂತ ಆಟಗಾರರಾಗಿದ್ದ ಎಸ್ಕೊಬಾರ್ ತನ್ನ ಶಿಸ್ತಿನ ಆಟಕ್ಕಾಗಿ ಜೆಂಟ್ಲ್‌ಮ್ಯಾನ್ ಎಂದು ಕರೆಸಿಕೊಳ್ಳುತ್ತಿದ್ದರು. ಅಪಾರ ಕನಸುಗಳನ್ನು ಹೊತ್ತಿದ್ದ ಭರವಸೆಯ ಆಟಗಾರನೊಬ್ಬ ಮೂರ್ಖ ಅಭಿಮಾನಿಗಳ ಹುಚ್ಚುತನಕ್ಕೆ ಬಲಿಯಾಗಬೇಕಾಯಿತು.

ಹತ್ತೊಂಬತ್ತನೆಯ ಶತಮಾನದ ಕೊನೆಯ ದಶಕದಲ್ಲಿ ಒಲಿಂಪಿಕ್ಸ್ ಆರಂಭವಾದಾಗ ಗೆಲ್ಲುವುದಕ್ಕಿಂತ ಹೆಚ್ಚಿನ ಮಹತ್ವವನ್ನು ಭಾಗವಹಿಸುವುದಕ್ಕೆ ಕೊಡಲಾಗಿತ್ತು. ಕ್ರೀಡಾಮನೋಭಾವಕ್ಕೆ ಆದ್ಯತೆ ನೀಡಿ ಕ್ರೀಡೆಯು ಮನಸ್ಸುಗಳನ್ನು ಬೆಸೆಯಲೆಂದು ಆಶಿಸಿ ವಿಶ್ವಮಟ್ಟದ ಕ್ರೀಡಾಕೂಟಕ್ಕೆ ಮುನ್ನುಡಿ ಬರೆಯಲಾಗಿತ್ತು. ಈಗ ಸಹ ಕ್ರೀಡಾಕೂಟಗಳಲ್ಲಿ ಒಲಿಂಪಿಕ್ಸ್‌ನ ಧ್ಯೇಯಕ್ಕೇ ಮನ್ನಣೆ ನೀಡಲಾಗುತ್ತಿದೆ. ಆದರೆ ಕ್ರೀಡಾಪ್ರೇಮಿಗಳ ಅಭಿಮಾನ ಮಾತ್ರ ಉಗ್ರಸ್ವರೂಪಕ್ಕೆ ತಿರುಗುತ್ತಿದೆ.

ಕ್ರೀಡೆ ಎಂಬುದು ನಮ್ಮ ಮನರಂಜನೆಗಾಗಿ ಇರುವಂಥದ್ದು. ಮನಸ್ಸನ್ನು ಹಗುರವಾಗಿಸಲು ಕಾರಣವಾಗಬೇಕಿದ್ದ ಸಂಗತಿಯನ್ನು ಒತ್ತಡವನ್ನಾಗಿಸಿಕೊಳ್ಳುತ್ತಿರುವುದನ್ನು ದಿನೇ ದಿನೇ ನೋಡುತ್ತಿದ್ದೇವೆ. ಕ್ರೀಡೆಯ ಬಗೆಗಿನ ಮೋಹ, ಜಗಳ, ಗಲಾಟೆಗೆ ಕಾರಣವಾಗುವುದರ ಜತೆಗೆ ಬೆಟ್ಟಿಂಗ್‌ನಂತಹ ದುಶ್ಚಟಗಳಿಗೆ, ಕೊಲೆಯಂತಹ ದುಷ್ಕೃತ್ಯಗಳಿಗೆ ಕಾರಣವಾಗುತ್ತಿರುವುದು ನಿಜಕ್ಕೂ ಸಂಕಟ ತರುವ ವಿಚಾರ. ಈ ಅಭಿಮಾನ ಎನ್ನುವುದು ಅತಿಯಾದಾಗ ಅನಾಹುತಗಳು ಸಂಭವಿಸುತ್ತವೆ. ಅಮಾಯಕರು ಬಲಿಯಾಗುತ್ತಾರೆ.

ತಮ್ಮ ತಂಡ ಸೋಲುವುದನ್ನು ಸಹಿಸಲಾಗದೇ ಆಟಗಾರರ ಮೇಲೆ ಹಲ್ಲೆ ನಡೆಸುವುದು, ಮೈದಾನದೊಳಗೆ ನುಗ್ಗಿ ಆಟಕ್ಕೆ ತೊಂದರೆ ಮಾಡುವುದು, ಕೈಗೆ ಸಿಕ್ಕಿದ್ದನ್ನು ಎಸೆಯುವುದು ಹೀಗೆ ಸಹನಶೀಲ ಪ್ರೇಕ್ಷಕರ ಸಂಖ್ಯೆ ಕಡಿಮೆಯಾಗುತ್ತಲೇ ಇದೆ. ಸಣ್ಣ ಗಲಾಟೆ ವಿಪರೀತವಾಗಿ ಮೈದಾನದಲ್ಲಿ ಕಾಲ್ತುಳಿತಕ್ಕೆ ಸಿಕ್ಕಿ ಸಾಯುವವರಿಗಂತೂ ಲೆಕ್ಕವೇ ಇಲ್ಲ. ತಮ್ಮ ತಂಡ ಗೆದ್ದುದಕ್ಕೆ ಖುಷಿ ಪಡುವುದಕ್ಕಿಂತ ಎದುರಾಳಿ ತಂಡದ ಅಭಿಮಾನಿಗಳನ್ನು ಟೀಕಿಸಿ ಖುಷಿ ಪಡುವ ವಿಚಿತ್ರ ಪ್ರವೃತ್ತಿ ಸಾಮಾಜಿಕ ಜಾಲತಾಣಗಳಲ್ಲಿ ಜನಪ್ರಿಯವಾಗಿರುವುದು ವಿಷಾದನೀಯ. ಗೆದ್ದರೆ ಎದುರಾಳಿ ತಂಡದ ಆಟಗಾರರ ಬಗ್ಗೆ ಸೋತರೆ ತಮ್ಮದೇ ಆಟಗಾರರ ಬಗ್ಗೆ ಜನರು ಹಾಕುವ ಅತ್ಯಂತ ಕೀಳು ಮಟ್ಟದ ಪೋಸ್ಟ್‌ಗಳು ಅತಿರೇಕದ ಅಭಿಮಾನ ತಲುಪಿರುವ ಅಧೋಗತಿಗೆ ಸಾಕ್ಷಿ. ದಿನಗಳೆದಂತೆ ನಾವು ಭಾವನಾರಹಿತರಾಗುತ್ತಿದ್ದೇವೆ, ಸೋಲು ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವವನ್ನು ಕಳೆದುಕೊಳ್ಳುತ್ತಿದ್ದೇವೆ ಎನ್ನುವುದು ನಿಜಕ್ಕೂ ತಲೆತಗ್ಗಿಸುವ ಸಂಗತಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಜುಲೈ 11, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ಪಂಚಮಿ ಗಂ. 10-04 ನಕ್ಷತ್ರ: ಪೂರ್ವಫಲ್ಗುನಿ ಗಂ. 13-04 ಯೋಗ: ವರಿಯಾನ್ ಗಂ. 28-09 ಕರಣ: ಬಾಲವ ಗಂ. 10-04, ಮಿಥುನ ಮಾಸದ 26 ನೇ ದಿನ, ಮಳೆನಕ್ಷತ್ರ: ಪುನರ್ವಸು 2.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-14 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 04 ಮೊಹರಮ್
ದಿನ ವಿಶೇಷ : ಕುಮಾರ ಷಷ್ಠಿ, ಅದೃಷ್ಟ ಸಂಖ್ಯೆ : 3, 7

ಮೇಷ: ನಿಮ್ಮದೆ ತಪ್ಪುಗಳಿರುವಾಗ ಅದನ್ನು ಸರಿಪಡಿಸುವವರ ಮೇಲೆ ಬೇಸರ ಮಾಡಿಕೊಳ್ಳುವುದು ಸೂಕ್ತವಲ್ಲ. ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಲಾಭದ ದಿನ. ಆಸ್ತಿಗಾಗಿ ಆಸೆ ಪಡುವುದು ಸರಿಯಲ್ಲ.

ವೃಷಭ: ಆತ್ಮವಿಶ್ವಾಸ ಹೆಚ್ಚಲಿದೆ. ದೃಢ ನಿಶ್ಚಯ ಮತ್ತು ಸಾಧಿಸಲೇಬೇಕೆಂಬ ಛಲದ ಮನೋಭಾವ ಯಶಸ್ಸಿಗೆ ಕಾರಣವೆನಿಸಲಿದೆ. ಕೇಶವಿನ್ಯಾಸಗಾರರು ಇತರರರೊಂದಿಗೆ ಸ್ಪರ್ಧಿಸಬೇಕಾಗುತ್ತದೆ.

ಮಿಥುನ: ಸಾಂಸಾರಿಕವಾಗಿ ಅಥವಾ ವೈಯಕ್ತಿಕವಾಗಿ ಕೆಲವು ಮುಖ್ಯ ನಿರ್ಧಾರಗಳನ್ನು ಕೈಗೊಳ್ಳುವಿರಿ. ಎಂಜಿನಿಯರ್‌ಗಳಿಗೆ ಬಿಡುವಿಲ್ಲದ ದಿನ. ಸಾಕುಪ್ರಾಣಿಯ ಸಂಖ್ಯೆ ಹೆಚ್ಚಾಗುವುದು.

ಕರ್ಕಾಟಕ: ಅದ್ದೂರಿಯ ಮದುವೆಯಲ್ಲಿ ಮಕ್ಕಳು ಮಾಡಿದ ಖರ್ಚು–ವೆಚ್ಚಗಳು ದುಂದುವೆಚ್ಚದಂತೆ ಕಾಣುತ್ತದೆ. ಅನಿರೀಕ್ಷಿತವಾಗಿ ಅಸಮಾಧಾನಗಳೆಲ್ಲವೂ ಮಾತಿನಲ್ಲಿ ಹೊರ ಬರುವವು.

ಸಿಂಹ: ಕಣ್ಣಿನ ಆರೋಗ್ಯದ ವಿಚಾರವಾಗಿ ಕಾಳಜಿ ವಹಿಸಿದರೂ ವೈದ್ಯರ ಭೇಟಿ ನಿಯಮಿತವಾಗಿ ಮಾಡುವುದು ತಪ್ಪದು. ಕೆಲವರು ಮಾಡುವ ಅನಾಹುತವನ್ನು ನೀವು ನಿಲ್ಲಿಸದೇ ಬೇರೆಯ ಹಾದಿ ಇಲ್ಲವಾಗಿರುತ್ತದೆ.

ಕನ್ಯಾ: ಮಧ್ಯವರ್ತಿಗಳ ಅತಿ ಆಸೆಯಿಂದ ರೈತರಿಗೆ ಲಾಭವಿರುವುದಿಲ್ಲ. ಜಾಗರೂಕತೆಯಿಂದ ಹೆಜ್ಜೆ ಇಡಿ. ಮಂಗಳ ಕಾರ್ಯಗಳು ಜರಗುವಾಗ ಅಸಾಂದರ್ಭಿಕ ಮಾತುಗಳನ್ನು ಆಡದಿರಿ.

ತುಲಾ: ಸಹೋದ್ಯೋಗಿಯ ನೆರವಿನಿಂದ ಕಾರ್ಯಗಳು ಅಚ್ಚುಕಟ್ಟಾಗಿ ಮನಸ್ಸಿಗೆ ಹಿತ ಕೊಡುವ ರೀತಿಯಲ್ಲಿ ಪೂರ್ಣಗೊಳ್ಳಲಿವೆ. ತಿಳಿಯದೇ ನಿಮ್ಮಿಂದಾದ ತಪ್ಪುಗಳಿಗಾಗಿ ಜೀವನ ಪರ್ಯಂತ ಸಮಸ್ಯೆ ಪಡುವಂತಾಗುತ್ತದೆ.

ವೃಶ್ಚಿಕ: ಕೆಲವು ಸಮಸ್ಯೆಗಳನ್ನು ಹಿರಿಯರಲ್ಲಿ ಹೇಳುವುದರಿಂದಾಗಿ ಸಮಾಧಾನವಾಗುವುದು. ಇತರರ ಮೇಲಿನ ಜವಾಬ್ದಾರಿಗಳು ಹೆಚ್ಚಾದ ಕಾರಣ ಅನಾರೋಗ್ಯವನ್ನು ನಿರ್ಲಕ್ಷಿಸಬೇಕಾಗುತ್ತದೆ.

ಧನು: ಕುಟುಂಬದಲ್ಲಿ ಹಿಂದೆ ನಡೆದ ಕೆಟ್ಟ ವಿಚಾರಗಳ ಬಗ್ಗೆ ಮಾತನಾಡುವುದು ಭಿನ್ನಾಭಿಪ್ರಾಯ ಬೆಳೆಯಲು ಕಾರಣವಾಗುತ್ತದೆ. ಬರೀಯ ಮೃದು ಮಾತುಗಳಿಂದ ಸಮಸ್ಯೆ ಪರಿಹಾರವಾಗುವುದಿಲ್ಲ.

ಮಕರ: ಶಿಬಿರಗಳಲ್ಲಿ ಭಾಗವಹಿಸಿದ ಕಾರಣ ಚಟುವಟಿಕೆಯಿಂದಿರುವ ಮಕ್ಕಳು ನಿಮ್ಮ ಮನಸ್ಸಂತೋಷಕ್ಕೆ ಕಾರಣವಾಗಿರುತ್ತಾರೆ. ನ್ಯಾಯಾಲಯದ ಕಾರ್ಯ ಕಲಾಪಗಳಲ್ಲಿ ಹೊಸತನವನ್ನು ಕಂಡುಕೊಳ್ಳುವಿರಿ.

ಕುಂಭ: ಚಕ್ರವ್ಯೂಹದಲ್ಲಿ ಸಿಲುಕಿದ ನಿಮಗೆ ಅದನ್ನು ಭೇದಿಸುವ ಉಪಾಯವೂ ಮಿತ್ರರಿಂದ ಸಿಗುತ್ತದೆ. ನಿರೀಕ್ಷೆಯಲ್ಲಿರುವ ಕುಟುಂಬದ ವ್ಯಕ್ತಿಗಳು ಬಿಗುವಿನ ದಿನಚರಿಯಿಂದಾಗಿ ಬೇಸರಗೊಳ್ಳುವರು.


ಮೀನ: ಮುಕ್ತ ಭಾವನೆಯಿಂದ ನೀವಾಡಿದ ಮಾತುಗಳು ಉಳಿದವರಿಗೆ ಅಧಿಕ ಪ್ರಸಂಗದಂತೆ ತೋರುವುದರಲ್ಲಿ ಸಂಶಯವಿಲ್ಲ. ತಿಳಿವಳಿಕೆಯ ಮಾತು ಒಬ್ಬರ ಜೀವನವನ್ನು ಉದ್ಧರಿಸುತ್ತದೆ.

ಪದಬಂಧ 5738

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಕಾರಾಗೃಹ ಇಲ್ಲಿದೆ (4)
3.ತೊಡಕಾಗದ ಲುಂಗಿ! (3)
5.ಮಲಗುವಾಗ ಕಾಣಿಸಿದ ಸೇವಕ (3)
7.ಒಮ್ಮಿಂದೊಮ್ಮೆ ನರ ಮಿಡಿದು ಉಂಟಾಗುವ ನೋವು (3)
8.ನಂಬಿಕೆ ದ್ರೋಹವಿದು (5)
11.ತಲೆಗೆ ಸುತ್ತಿಕೊಳ್ಳುವ ಬಟ್ಟೆ (3)
12.ಮಗನಿಗೆ ತಿಳಿದಿರುವ ವೇದ (3)
15.ವಸ್ತುಗಳನ್ನು ಸಂಗ್ರಹಿಸುವ ಸ್ಥಳ (3)
16.ಈತ ಪರೀಕ್ಷೆ ಮಾಡುವವನು (4)

ಮೇಲಿಂದ ಕೆಳಕ್ಕೆ
1.ಸೀರೆಯ ಹೊದಿಯುವ ಭಾಗ (3)
2.ಹೀಗೆ ಜ್ಞಾಪಕ ಮಾಡಿಕೊ (2)
3.ಸಿಕ್ಕು ಇಲ್ಲಿಕಾಣುತ್ತಿದೆ (3)
4.ಚಿಲ್ಲರೆ ಹಣವಿದು (4)
6.ಲಿಖಿತ ಮೂಲಕ ಮಾಡಿಕೊಳ್ಳುವ ಅರಿಕೆ (3)
7.ಹರಾಜಿನಲ್ಲಿ ಹೆಚ್ಚಿನ ಬೆಲೆಗೆ ಸವಾಲು ಹಾಕುವುದು (5)
9.ತೋರು ಬೆರಳಿದು (3)
10.ಕೃತಿಮವಾದ ಮಂದಹಾಸ (4)
11.ಕೊಡತಕ್ಕ ಹಣ (3)
13.ಕಡಸು ಅಥವಾ ಮರಿ ಎಂದರೂ ಸರಿಯೇ (3)
14.ಸಿಟ್ಟು ಹೀಗೆ ಬಂದಿದೆ (2)



5737ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸ್ವಹಸ್ತಾಕ್ಷರ 3.ವಿಜೇತ
5.ಯಭ 7.ವಿಧಾತ
8.ಸಮಜಾಯಿಷಿ 11.ಹಗುರ
12.ನರ 14.ಯದೃಚ್ಛೆ
15.ಭೋಜನಕೂಟ

ಮೇಲಿಂದ ಕೆಳಕ್ಕೆ:
1.ಸ್ವಯಂಕೃತ 2.ಕ್ಷತ್ರಿಯ
4.ತರತಮ 6.ಭವಬಂಧನ
7.ವಿದುಷಿ 8.ಸತ್ಕಾರ
9.ಮಹನೀಯ 10.ಹುಡುಕಾಟ
13.ರಠಜ

ಸುಡೊಕು 6123

	6			7		2	9	
		2						
	8		5	2		1	6	
1		5					8	
4			2		5			1
	9						2	
		9	3				4	
7			9		8	5		2
	5			4			3	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6122 ಸುಡೊಕು

4	6	5	3	9	8	7	1	2
2	7	1	4	6	5	3	8	9
9	8	3	7	1	2	5	4	6
7	1	9	5	8	3	2	6	4
5	2	6	9	4	7	1	3	8
3	4	8	6	2	1	9	7	5
6	3	4	1	5	9	8	2	7
8	5	7	2	3	4	6	9	1
1	9	2	8	7	6	4	5	3

₹75 ಕೋಟಿ– ₹80 ಕೋಟಿ ಮೌಲ್ಯದ ಬದಲಿ ನಿವೇಶನಗಳ ಮಂಜೂರು ಮಾಡಿದ್ದ ಆಯುಕ್ತ: ಆದೇಶಕ್ಕೆ ತಡೆ

ಒಂದೇ ಕುಟುಂಬಕ್ಕೆ 98 ಸಾವಿರ ಚ.ಅಡಿ ನಿವೇಶನ

• ಆರ್. ಜಿತೇಂದ್ರ



ಮೈಸೂರು: ನ್ಯಾಯಾಲಯದ ಸ್ಪಷ್ಟ ಆದೇಶ ಇಲ್ಲದಿದ್ದರೂ, ವಿಶೇಷ ಭೂಸ್ವಾಧೀನಾಧಿಕಾರಿಯ ವರದಿ ಹಾಗೂ ಪೌತಿ ವಾರಸುದಾರರು ನೀಡಿದ ಪ್ರಮಾಣಪತ್ರವನ್ನಷ್ಟೇ ಆಧಾರವಾಗಿಟ್ಟುಕೊಂಡು, ಒಂದೇ ಕುಟುಂಬಕ್ಕೆ 98 ಸಾವಿರ ಚದರ ಅಡಿ ನಿವೇಶನಗಳನ್ನು ಬದಲಿ ನಿವೇಶನದ ರೂಪದಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ನೀಡಿದೆ.

ಮುಡಾ ಆಯುಕ್ತ ದಿನೇಶ್‌ಕುಮಾರ್ ವರ್ಗಾವಣೆಗೊಳ್ಳುವ ಎರಡು ವಾರಗಳ ಹಿಂದಷ್ಟೇ, ಅಂದರೆ, ಜೂನ್ 15ರಂದು ಈ ಕಡತಕ್ಕೆ ಸಹಿ ಹಾಕಿದ್ದಾರೆ. ವಿಜಯನಗರ ಹಾಗೂ ದಟ್ಟಗಳ್ಳಿ ಭಾಗದಲ್ಲಿ ಅವರಿಗೆ ಬದಲಿ ನಿವೇಶನಗಳನ್ನು ಮಂಜೂರು ಮಾಡಲಾಗಿತ್ತು. ಈ ನಿವೇಶನಗಳ ಮೌಲ್ಯವೇ ₹75 ಕೋಟಿ ₹80 ಕೋಟಿಯಷ್ಟಿದೆ. ಪ್ರಕರಣವು ಬೆಳಕಿಗೆ ಬರುತ್ತಲೇ ನಿವೇಶನ ಹಂಚಿಕೆಯನ್ನು ತಡೆ ಹಿಡಿಯಲಾಗಿದೆ.

ಮೈಸೂರಿನ ಗೋಕುಲಂ ಬಡಾವಣೆ ನಿರ್ಮಾಣಕ್ಕಾಗಿ ಉಗ್ರಯ್ಯ ಕುಟುಂಬವು ಮೈಸೂರಿನ ಮಾರಗೌಡನಹಳ್ಳಿ ಸರ್ವೆ ಸಂಖ್ಯೆ 57 ಹಾಗೂ 77/2 ರಲ್ಲಿ ಒಟ್ಟು 8 ಎಕರೆ 14 ಗುಂಟೆ ಜಮೀನನ್ನು ಬಿಟ್ಟುಕೊಟ್ಟಿತ್ತು. ಆದರೆ ಪರಿಹಾರ ಪಡೆದಿರಲಿಲ್ಲ. ಅದನ್ನೇ ಆಧಾರವಾಗಿಟ್ಟುಕೊಂಡು 2023ರಲ್ಲಿ ಜಮೀನಿನ ವಾರಸುದಾರರಾದ ನಾಗರಾಜು ಮುಡಾಕ್ಕೆ ಮನವಿ ಸಲ್ಲಿಸಿದ್ದರು. ಐದು ದಶಕಗಳ ಹಿಂದಿನ ಪ್ರಕರಣವನ್ನೂ 50:50 ಅನುಪಾತದ ಅಡಿ ಪರಿಗಣಿಸಿ, ಬರೋಬ್ಬರಿ 98,206 ಚ.ಅಡಿ ನಿವೇಶನಗಳನ್ನು ನಗರದ ಪ್ರತಿಷ್ಠಿತ ಬಡಾವಣೆಗಳಲ್ಲಿ ಮಂಜೂರು ಮಾಡಿದ್ದಾರೆ.

ನ್ಯಾಯಾಲಯಗಳ ಆದೇಶ ಉಲ್ಲೇಖ: 'ಪ್ರತಿ ಹಳೆ ಪ್ರಕರಣಗಳಿಗೂ ನ್ಯಾಯಾಲಯಗಳ ಕೆಲವು ಮಹತ್ವದ ಪ್ರಕರಣಗಳು ಹಾಗೂ ಅದರ ಆದೇಶಗಳನ್ನು ಉಲ್ಲೇಖ ಮಾಡಿರುವ ಮುಡಾ ಅಧಿಕಾರಿಗಳು, ಸಮರ್ಪಕ ದಾಖಲೆಗಳಿಲ್ಲದ ಪ್ರಕರಣಗಳನ್ನೂ 50:50 ಅನುಪಾತದಲ್ಲಿ ಪರಿಗಣಿಸಿರುವುದು ಅಕ್ರಮಕ್ಕೆ ಸಾಕ್ಷಿಯಾಗಿದೆ' ಎಂಬ ದೂರುಗಳು ಕೇಳಿಬಂದಿವೆ.

'ಪ್ರಭಾವಿ'ಗಳ ಕಚ್ಚಾಟದಿಂದ ಪ್ರಕರಣ ಬೆಳಕಿಗೆ

ದಶಕಗಳಷ್ಟು ಹಳೆಯದಾದ ಪ್ರಕರಣಗಳಲ್ಲಿ ಭೂಪರಿಹಾರವಾಗಿ 80-90 ಸಾವಿರ ಚದರ ಅಡಿಗಳವರೆಗೆ ನಿವೇಶನಗಳನ್ನು ಹಂಚಲಾಗಿದ್ದು, ಅದರಲ್ಲಿ ಪ್ರಭಾವಿಗಳ ಕೈವಾಡ ಕೆಲಸ ಮಾಡಿದೆ. ಪ್ರಕರಣವೊಂದರಲ್ಲಿ ಸರ್ಕಾರಿ ಆದೇಶಕ್ಕೆ ವಿರುದ್ಧವಾಗಿ ಸ್ವತಃ ಮುಡಾ ಅಧ್ಯಕ್ಷ ಕೆ. ಮರೀಗೌಡ ನಿವೇಶನ ಹಂಚಿಕೆಗೆ ಶಿಫಾರಸು ಮಾಡಿದ್ದಾರೆ.

ನಿವೇಶನಗಳನ್ನು ಕೊಡಿಸುವ ವಿಚಾರದಲ್ಲಿ ಮುಡಾನಲ್ಲಿ 'ಪ್ರಭಾವಿ'ಗಳ ಗುಂಪು ಕೆಲಸ ಮಾಡುತ್ತಿತ್ತು, ಅರ್ಜಿಗಳ ಸಲ್ಲಿಕೆಯಿಂದ ಹಿಡಿದು ನಿವೇಶನ ಮಂಜೂರಾತಿ ಆದೇಶದವರೆಗೆ ಎಲ್ಲವನ್ನೂ ಗುಂಪು ನಿರ್ವಹಿಸುತ್ತಿತ್ತು, ಅದಕ್ಕೆ ಪೂರಕವಾಗಿ ಶಿಫಾರಸು-ಒತ್ತಡ ಹೇರುವ ತಂತ್ರಗಾರಿಕೆಯನ್ನೂ ಮಾಡಲಾಗುತ್ತಿತ್ತು.

'ಪ್ರಕರಣವೊಂದರಲ್ಲಿ ಅರ್ಜಿದಾರರು ಮೊದಲು ಒಂದು ಗುಂಪನ್ನು ಸಂಪರ್ಕಿಸಿದ್ದು, ಅಲ್ಲಿ ಕೆಲಸವಾಗದೇ ಇದ್ದಾಗ ಮತ್ತೊಂದು ಗುಂಪಿನ ಮೊರೆ ಹೋಗಿ ಕದ ತಟ್ಟಿದ್ದರು. ಅದರಿಂದ ಸಿಟ್ಟಾದ ಎದುರಾಳಿ ಗುಂಪು ನಿವೇಶನ ಹಂಚಿಕೆಗೆ ತಡೆ ಒಡ್ಡಿತು. ಬಳಿಕ ಅದರ ದಾಖಲೆಗಳನ್ನೂ ಬಹಿರಂಗಗೊಳಿಸಿತು' ಎಂಬ ಮಾತುಗಳು ಕೇಳಿಬರುತ್ತಿವೆ.

ಮುಡಾದಲ್ಲಿ ಕಡತ ನಾಶ?

ಕೆಲವು ಪ್ರಮುಖ ಪ್ರಕರಣಗಳಿಗೆ ಸಂಬಂಧಿಸಿದ ಮೂಲ ದಾಖಲೆಗಳು ಮುಡಾ ಕಚೇರಿಯಿಂದ ಕಾಣೆಯಾಗಿದ್ದು, 'ಕಡತ ನಾಶ' ನಡೆದಿರುವ ಶಂಕೆ ವ್ಯಕ್ತವಾಗಿದೆ.

'ಪ್ರಕರಣ ಗಂಭೀರ ಸ್ವರೂಪ ಪಡೆದುಕೊಳ್ಳುತ್ತಲೇ ಎಚ್ಚೆತ್ತ ಮುಡಾ ಅಧಿಕಾರಿ-ಸಿಬ್ಬಂದಿ ತಂಡವೊಂದು ಅಕ್ರಮಕ್ಕೆ ಸಂಬಂಧಿಸಿದ ಮೂಲ ದಾಖಲೆಗಳನ್ನು ನಾಶಪಡಿಸಿದೆ' ಎಂಬ ಆರೋಪ ಕೇಳಿಬಂದಿದೆ.

ನೋಂದಣಿ ದಾಖಲೆ ಪುಸ್ತಕಗಳ ಕೆಲವು ಪುಟಗಳನ್ನು ಹರಿಯಲಾಗಿದೆ. ನಿವೇಶನ ಮಂಜೂರಾತಿಗೆ ಸಂಬಂಧಿಸಿ ಅಧಿಕಾರಿಗಳು ನೀಡಿದ್ದ ಋಣಾತ್ಮಕ ವರದಿಗಳೂ ಸೇರಿದಂತೆ ಪ್ರಮುಖ ದಾಖಲೆಗಳೇ ಇಲ್ಲವಾಗಿವೆ. ಆಯುಕ್ತರ ಮನೆಗೆ ಕೊಂಡೊಯ್ದಿದ್ದ ಕೆಲವು ಕಡತಗಳೂ ಹಿಂತಿರುಗಿಲ್ಲ ಎನ್ನಲಾಗಿದೆ.

ಸದ್ಯ ಲಭ್ಯ ಇರುವ ಕಡತಗಳನ್ನು ಮುಂದಿಟ್ಟುಕೊಂಡಿರುವ ಆರ್. ವೆಂಕಟಾಚಲಪತಿ ನೇತೃತ್ವದ ತನಿಖಾ ಸಮಿತಿಯು ಉಳಿದ ದಾಖಲೆಗಳಿಗಾಗಿ ಮುಡಾ ಸಿಬ್ಬಂದಿಯನ್ನು ಪ್ರಶ್ನಿಸುತ್ತಿದೆ.

ಪ್ರಕರಣದ ವಿಚಾರಣೆ ಆರಂಭಿಸುತ್ತಲೇ ತನಿಖಾ ಸಮಿತಿಯು ಮುಡಾದ ದಾಖಲೆಗಳ ಕೊಠಡಿಯನ್ನು ಸೀಜ್ ಮಾಡಿದ್ದು, ಅಲ್ಲಿ ಮುಡಾ ಸಿಬ್ಬಂದಿಗೂ ಪ್ರವೇಶ ನಿರ್ಬಂಧಿಸಿದೆ. ದಾಖಲೆಗಳ ಕೊಠಡಿಯ ಕಡತಗಳಿಗೆ ಸಂಬಂಧಿಸಿದ ರಿಜಿಸ್ಟರ್‌ಗಳನ್ನೂ ಪರಿಶೀಲಿಸಿದ್ದು, ಯಾರಿಂದ ಯಾವ ಅಧಿಕಾರಿಗೆ ಈ ಕಡತಗಳು ಹೋಗಿದ್ದವು ಎಂದು ಮಾಹಿತಿ ಪಡೆಯುತ್ತಿದೆ.



ಮೈಸೂರಿನ ಮುಡಾ ಕಚೇರಿಗೆ ಮುತ್ತಿಗೆ ಹಾಕಲು ಬಂದ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಸದಸ್ಯರನ್ನು ಪೊಲೀಸರು ಬುಧವಾರ ವಶಕ್ಕೆ ಪಡೆದರು ಪ್ರಜಾವಾಣಿ ಚಿತ್ರ

ಪ್ರತಿಭಟನಕಾರರ ಬಂಧನ

ಪ್ರಜಾವಾಣಿ ವಾರ್ತೆ

ಮೈಸೂರು: 'ಮುಡಾ ಹಗರಣದಲ್ಲಿ ಭಾಗಿಯಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಬೇಕು' ಎಂದು ಒತ್ತಾಯಿಸಿ ಮುಡಾ ಕಚೇರಿಗೆ ಮುತ್ತಿಗೆ ಹಾಕಲು ನಿರ್ಧರಿಸಿದ್ದ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಕಾರ್ಯಕರ್ತರನ್ನು ಪೊಲೀಸರು ಬುಧವಾರ ಬಂಧಿಸಿ ಬಿಡುಗಡೆ ಮಾಡಿದರು.

ಗನ್‌ಹೌಸ್ ಬಳಿ ಜಮಾಯಿಸಿದ ಕಾರ್ಯಕರ್ತರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. 'ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜಿನಾಮೆ ನೀಡಿ', 'ಮುಡಾದ 50:50 ಹಗರಣದಲ್ಲಿ ಭಾಗಿಯಾದವರಿಗೆ ಶಿಕ್ಷೆಯಾಗಲಿ' ಎಂಬ ಘೋಷಣೆಗಳುಳ್ಳ ಫಲಕಗಳನ್ನು ಪ್ರದರ್ಶಿಸಿದರು. ಪಾದಯಾತ್ರೆ ಆರಂಭಿಸುತ್ತಿದ್ದಂತೆಯೇ ಪೊಲೀಸರು ತಡೆದು ಬಂಧಿಸಿದರು.

ಇನ್ನೊಂದೆಡೆ, ಬೇರೆ ಊರುಗಳಿಂದ ಬಂದ ಪ್ರತಿಭಟನಕಾರರು ರೈಲ್ವೆ ನಿಲ್ದಾಣದ ಬಳಿ ಒಟ್ಟು ಸೇರಿ ಮುಡಾ ಕಡೆಗೆ ಧಾವಿಸಿದರು. ರೋಟರಿ ಶಾಲೆ ವೃತ್ತದಲ್ಲಿ ಪೊಲೀಸರು ತಡೆದಾಗ ಮಾತಿನ ಚಕಮಕಿ ನಡೆಯಿತು. ಬ್ಯಾರಿಕೇಡ್ ದಾಟಿ ಮುನ್ನುಗ್ಗಲು ಯತ್ನಿಸಿದವರನ್ನು ಪೊಲೀಸರು ವಶಕ್ಕೆ ಪಡೆದರು.

ಹಗರಣಗಳ ಚರ್ಚೆಗೆ ನಿಲುವಳಿ ಸೂಚನೆ: ಆರ್. ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮ, ಮುಡಾ ಹಗರಣಗಳ ಬಗ್ಗೆ ಹಾಗೂ ಡೆಂಗಿ ಕುರಿತು ಗಂಭೀರ ಚರ್ಚೆ ನಡೆಸಲು ವಿಧಾನಮಂಡಲ ಅಧಿವೇಶನದಲ್ಲಿ ನಿಲುವಳಿ ಸೂಚನೆ ಮಂಡಿಸಲಾಗುವುದು ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್.ಅಶೋಕ ತಿಳಿಸಿದರು.

ಬುಧವಾರ ಪಕ್ಷದ ನಾಯಕರ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ಮುಡಾ ಹಗರಣದಲ್ಲಿ ಮುಖ್ಯಮಂತ್ರಿ ಅವರೇ ಭಾಗಿಯಾಗಿದ್ದಾರೆ. ಇದರ ಬಗ್ಗೆ ವಿಸ್ತೃತ ಚರ್ಚೆ ಆಗಬೇಕಾಗಿರುವ ಕಾರಣ ಸದನದ ಕಲಾಪವನ್ನು ಇನ್ನೂ ಒಂದು ವಾರ ವಿಸ್ತರಣೆ ಮಾಡಬೇಕು ಎಂದು ಆಗ್ರಹಿಸಲಾಗುವುದು ಎಂದರು.

ವಿವಿಧ ಇಲಾಖೆಗಳ ಅನುದಾನ ಕಡಿತ, ₹700 ಕೋಟಿ ಹಾಲು ಪ್ರೋತ್ಸಾಹಧನ ಬಾಕಿ ಮೊದಲಾದ ಸಮಸ್ಯೆಗಳು ಕಂಡು ಬಂದಿವೆ ಎಂದರು.

'ರಾಮನಗರ ಜಿಲ್ಲೆಗೆ ಸ್ಥಳ ಮಹಿಮೆ ಇದೆ. ಈ ಹೆಸರನ್ನು ತೆಗೆಯಲು ಕಾಂಗ್ರೆಸ್ಸಿಗರಿಗೆ ಯಾವುದೇ ಹಕ್ಕು ಇಲ್ಲ. ಕರ್ನಾಟಕದಲ್ಲಿ ರಾಮ–ಕೃಷ್ಣ ಎಂದಿರುವ ಊರುಗಳ ಹೆಸರುಗಳನ್ನು ಬದಲಾಯಿಸುತ್ತಾರಾ? ಶೋಲೆ ಸಿನಿಮಾ ಚಿತ್ರೀಕರಣವಾದಾಗಲೂ ಅಲ್ಲಿ ರಾಮಗಢ ಹೆಸರನ್ನೇ ಇಟ್ಟಿದ್ದರು. ಹೆಸರು ಬದಲಿಸುವ ಬದಲು ಬೆಂಗಳೂರಿನ ಅಭಿವೃದ್ಧಿಗೆ ಹಣ ಬಿಡುಗಡೆ ಮಾಡಲಿ. ರಾಮನ ಮೇಲೆ ದ್ವೇಷ ಇದ್ದರೆ ಬೇರೆ ದಾರಿ ನೋಡಿಕೊಳ್ಳಲಿ' ಎಂದು ಹೇಳಿದರು.

'ಬಿಜೆಪಿ–ಜೆಡಿಎಸ್ ಮಧ್ಯ ಸಮನ್ವಯದ ಕೊರತೆ ಇಲ್ಲ. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರೊಂದಿಗೆ ಮಾತನಾಡಿದ್ದೇನೆ. ಇದೇ ಶುಕ್ರವಾರ ಎರಡೂ ಪಕ್ಷಗಳ ನಾಯಕರ ಸಮನ್ವಯ ಸಭೆ ನಡೆಯಲಿದೆ' ಎಂದರು.

ಯತ್ನಾಳ, ರವಿ ಹೆಸರು ಕೈಬಿಟ್ಟ ಬಿಜೆಪಿ

ರಾಜ್ಯ ಸರ್ಕಾರದ ವಿರುದ್ಧ ಹೋರಾಟ ರೂಪಿಸಲು ಬಿಜೆಪಿ ಸಿದ್ಧಪಡಿಸಿರುವ ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರ ಪಟ್ಟಿಯಲ್ಲಿ ಬಸನಗೌಡ ಪಾಟೀಲ ಯತ್ನಾಳ, ಸಿ.ಟಿ.ರವಿ ಹೆಸರು ಕೈ ಬಿಡಲಾಗಿದೆ.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಬಿ.ವೈ. ವಿಜಯೇಂದ್ರ, ಶಾಸಕರಾದ ಡಾ.ಸಿ.ಎನ್. ಅಶ್ವತ್ಥನಾರಾಯಣ, ವಿ. ಸುನೀಲ್ ಕುಮಾರ್, ಆರಗ ಜ್ಞಾನೇಂದ್ರ, ದೊಡ್ಡನಗೌಡ ಎಚ್.ಪಾಟೀಲ, ಅರವಿಂದ ಬೆಲ್ಲದ್, ವೇದವ್ಯಾಸ ಕಾಮತ್, ಭೈರತಿ ಬಸವರಾಜ್, ವಿಧಾನ ಪರಿಷತ್ ಸದಸ್ಯರಾದ ಎನ್. ರವಿಕುಮಾರ್, ಭಾರತಿ ಶೆಟ್ಟಿ, ಛಲವಾದಿ ನಾರಾಯಣಸ್ವಾಮಿ, ಡಿ.ಎಸ್. ಅರುಣ್, ಶಶಿಲ್ ನಮೋಶಿ, ಎಸ್.ವಿ. ಸಂಕನೂರು, ಕೆ.ಎಸ್. ನವೀನ್ ಒಳಗೊಂಡ ಸಮಿತಿಯನ್ನು ಬಿಜೆಪಿ ರಚಿಸಿತ್ತು.

ಇಬ್ಬರ ಹೆಸರನ್ನು ಕೈಬಿಟ್ಟಿರುವುದು ವಿವಾದ ಸ್ವರೂಪ ಪಡೆಯಲಿದೆ ಎಂದು ಎಚ್ಚೆತ್ತ ಬಿಜೆಪಿ ಕಾರ್ಯಾಲಯ ಪಟ್ಟಿ ಬಿಡುಗಡೆಯ ನಂತರ ಇಬ್ಬರಿಗೂ ಕರೆ ಮಾಡಿ, ಕಣ್ತಪ್ಪಿನಿಂದ ಆಗಿರುವುದಾಗಿ ಸಮಜಾಯಿಷಿ ನೀಡಿದೆ.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರಶ್ನೆ; ಪತ್ರಿಕಾಗೋಷ್ಠಿಯಲ್ಲಿ ದಾಖಲೆಗಳ ಪ್ರದರ್ಶನ

'ಮುಡಾ ಸ್ವಾಧೀನದಲ್ಲಿದ್ದ ಜಮೀನಿನ ಖರೀದಿ ಹೇಗೆ ಸಾಧ್ಯ'


ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಡಾಕ್ಕೆ ಸೇರಿದ್ದ 3.16 ಎಕರೆ ಜಮೀನನ್ನು 2004ರಲ್ಲಿ ಖರೀದಿಸಿದ್ದ ಮಲ್ಲಿಕಾರ್ಜುನ ಸ್ವಾಮಿ, ಅದನ್ನು ದಾನರೂಪದಲ್ಲಿ ತಮ್ಮ ತಂಗಿ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿಗೆ ನೀಡಿದ್ದಾರೆ. ಮುಡಾ ಸ್ವಾಧೀನದಲ್ಲಿದ್ದ ಜಮೀನಿನ ಖರೀದಿ ಹೇಗೆ ಸಾಧ್ಯ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರಶ್ನಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, '2009–10ರಲ್ಲಿ ದಾನ ಪತ್ರ (ಗಿಫ್ಟ್ ಡೀಡ್) ನೀಡಿದಾಗಲೂ ಪಹಣಿ (ಆರ್‌ಟಿಸಿ)ಯಲ್ಲಿ ಮುಡಾ ಹೆಸರು ಸ್ಪಷ್ಟವಾಗಿ ನಮೂದಾಗಿತ್ತು' ಎಂದು ದಾಖಲೆಗಳನ್ನೂ ಪ್ರದರ್ಶಿಸಿದರು.

'1992ರಲ್ಲಿ ಭೂಸ್ವಾಧೀನ ಆರಂಭವಾಗಿತ್ತು. ಮಲ್ಲಿಕಾರ್ಜುನ-ಸ್ವಾಮಿ ಖರೀದಿಸುವುದಕ್ಕೆ ಮುನ್ನವೇ ಜಮೀನು ಆಗಲೇ ಮುಡಾ ಸ್ವಾಧೀನಕ್ಕೆ ಬಂದಿತ್ತು. ಇವರು ದಾನಪತ್ರ ನೀಡುವ ಸಂದರ್ಭದಲ್ಲಿ ಭೂಮಿ ಕೃಷಿ ಭೂಮಿ ಆಗಿರಲಿಲ್ಲ. ಈ ವಿಚಾರವಾಗಿ ಸಿದ್ದರಾಮಯ್ಯ ರಾಜ್ಯದ ಜನರಿಗೆ ತಪ್ಪು ಮಾಹಿತಿ ನೀಡಿದ್ದಾರೆ' ಎಂದು ವಿಜಯೇಂದ್ರ ದೂರಿದರು.

ಎರಡರ ಬದಲು 14 ನಿವೇಶನ ಹಂಚಿಕೆ?: '2022ರ ಜ. 12ರಂದು ಕ್ರಯ ಪತ್ರ ಆಗಿದೆ. ಗಮನಿಸಬೇಕಾದ ಅಂಶವೆಂದರೆ ಮುಡಾ ಪ್ರೋತ್ಸಾಹದಾಯಕ ಯೋಜನೆಯ ನಿಯಮ 1991ರ ಮೇರೆಗೆ ಎಂದು ಉಲ್ಲೇಖಿಸಿ 14 ನಿವೇಶನಗಳನ್ನು ಕೊಟ್ಟಿದ್ದಾರೆ. ಇದು ಕ್ರಯ ಪತ್ರದಲ್ಲಿ ಉಲ್ಲೇಖವಾಗಿದೆ.



ಆದರೆ, 1991ರ ಕಾನೂನು ಪ್ರಕಾರ 1 ಎಕರೆ ಮೀರಿದ ಜಮೀನಿಗೆ 40x60ರ ಒಂದೇ ನಿವೇಶನ ಕೊಡಬೇಕಿತ್ತು. ಆ ಪ್ರಕಾರ ಮುಖ್ಯಮಂತ್ರಿ ಪತ್ನಿಗೆ ಎರಡು ನಿವೇಶನ ಮಾತ್ರ ಕೊಡಬೇಕಿತ್ತು. ಆದರೆ, ಎರಡರ ಬದಲಿಗೆ 14 ನಿವೇಶನಗಳನ್ನು ನೀಡಿರುವುದು ಕಾನೂನುಬಾಹಿರ' ಎಂದು ವಿಜಯೇಂದ್ರ ಅವರು ಹೇಳಿದರು.

'ತಮ್ಮ ಅವಧಿಯಲ್ಲೇ ಅವ್ಯವಹಾರ ನಡೆಸಿ, ತಾವೇ ಪರಿಹಾರ ಕೇಳಿರುವ ಮೊದಲ ಮುಖ್ಯಮಂತ್ರಿ ಇವರು. ಮೈಸೂರಿನ ಕೆಸರೆ ಗ್ರಾಮದ 3.16 ಎಕರೆ ಜಮೀನಿಗೆ ಬದಲಾಗಿ ತಮ್ಮ ಪತ್ನಿಗೆ 14 ನಿವೇಶನಗಳನ್ನು ಮಂಜೂರು ಮಾಡಿಸಿ-ಕೊಂಡಿದ್ದಾರೆ. ಆದರೆ, ಮುಖ್ಯಮಂತ್ರಿ-ಯವರು 2013ರ ಚುನಾವಣಾ ಪ್ರಮಾಣ ಪತ್ರದಲ್ಲಿ 3.16 ಎಕರೆ ಭೂಮಿಯನ್ನು ಉಲ್ಲೇಖಿಸಿಲ್ಲ. ಇದು ಚುನಾವಣಾ ನಿಯಮಗಳ ಉಲ್ಲಂಘನೆ. ಇದೆಲ್ಲವನ್ನೂ ಪರಿಶೀಲಿಸಿ ಚುನಾವಣಾ ಆಯೋಗಕ್ಕೆ ದೂರು ಕೊಡಲಾಗುವುದು' ಎಂದರು.

₹5 ಸಾವಿರ ಕೋಟಿಗೂ ಹೆಚ್ಚು ಮೌಲ್ಯದ ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿದ್ದಾರೆ. ಹಗರಣದಲ್ಲಿ ಒಳಗೊಂಡವರನ್ನು ಶಿಕ್ಷಿಸುವುದನ್ನು ತಪ್ಪಿಸಲು ಮತ್ತು ರಕ್ಷಿಸಲು ಬೈರತಿ ಸುರೇಶ್ ಮುಂದಾಗಿದ್ದಾರೆ. ಮುಡಾ ಭ್ರಷ್ಟಾಚಾರದ ಬಗ್ಗೆ ತನಿಖೆ ಮಾಡಿ ವರದಿ ಕೊಟ್ಟ ಜಿಲ್ಲಾಧಿಕಾರಿಯನ್ನೂ ತರಾತುರಿಯಲ್ಲಿ ವರ್ಗಾವಣೆ ಮಾಡಿದ್ದಾರೆ ಎಂದು ವಿಜಯೇಂದ್ರ ಆಕ್ಷೇಪಿಸಿದರು.

ಈಗಾಗಲೇ ನಡೆದ ನಿವೇಶನ ಹಂಚಿಕೆಯನ್ನು ರದ್ದು ಮಾಡಬೇಕು. ಮುಖ್ಯಮಂತ್ರಿ ಮತ್ತು ಅವರ ಪತ್ನಿ ಮೇಲೆ ಆರೋಪ ಇರುವ ಕಾರಣ ಮತ್ತೊಂದು ಎಸ್‌ಐಟಿ ಮಾಡಿ ತನಿಖೆ ನಡೆಸುವುದು ಸೂಕ್ತವಲ್ಲ. ಈ ಹಗರಣದ ತನಿಖೆಯನ್ನು ತಕ್ಷಣವೇ ಸಿಬಿಐ ಕೊಡಬೇಕು ಎಂದು ಅವರು ಆಗ್ರಹಿಸಿದರು.

ನಾಳೆ ಪ್ರತಿಭಟನೆ

ಮುಡಾ ನಿವೇಶನ ಹಗರಣವನ್ನು ವಿರೋಧಿಸಿ ಇದೇ 12 ರಂದು ಬಿಜೆಪಿ ವತಿಯಿಂದ ಮೈಸೂರಿನಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಬಿ.ವೈ. ವಿಜಯೇಂದ್ರ ಹೇಳಿದರು.

ಮುಡಾ ಹಗರಣದಲ್ಲಿ ಮುಖ್ಯಮಂತ್ರಿಯವರೇ ಕಾನೂನು ಉಲ್ಲಂಘಿಸಿ, ತಪ್ಪು ಮಾಹಿತಿ ನೀಡುವುದರ ಜತೆಗೆ ತಮ್ಮ ಕೃತ್ಯವನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ಬಡವರು, ದಲಿತರು, ಪರಿಶಿಷ್ಟ ಸಮುದಾಯಕ್ಕೆ ಮೀಸಲಿಟ್ಟ ನಿವೇಶನಗಳನ್ನು ತಮಗೆ ಬೇಕಾದಂತೆ ಹಂಚಿದ್ದಾರೆ. ಆದ್ದರಿಂದ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಅವರು ಒತ್ತಾಯಿಸಿದರು.

ನನ್ನ ಪತ್ನಿ ವಿಷಯದಲ್ಲಿ ಬಿಜೆಪಿಯಿಂದ ರಾಜಕಾರಣ: ಸಿದ್ದರಾಮಯ್ಯ



ಮೈಸೂರು: 'ಜುಲೈ 15ರಿಂದ ವಿಧಾನಮಂಡಲ ಅಧಿವೇಶನ ಆರಂಭಗೊಳ್ಳಲಿದ್ದು, ಮುಡಾ ಹಗರಣದ ಬಗ್ಗೆ ಪ್ರಸ್ತಾಪವಾದರೆ ಉತ್ತರ ಕೊಡುತ್ತೇನೆ. ಆದರೆ, ನನ್ನ ಪತ್ನಿ ವಿಷಯದಲ್ಲಿ ಬಿಜೆಪಿಯವರು ರಾಜಕೀಯ ಮಾಡುತ್ತಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ದೂರಿದರು.

ಇಲ್ಲಿನ ವಿಮಾನನಿಲ್ದಾಣದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಆ ಬಗ್ಗೆ ಎಷ್ಟು ಸಲ ಹೇಳುವುದು' ಎಂದು ಗರಂ ಆದರು.

'ಮುಡಾದಿಂದ ಶೇ 50:50 ಅನುಪಾತದಡಿ ನಿವೇಶನ ಹಂಚಿಕೆ ಮಾಡದಂತೆ 2019ರಲ್ಲೇ ಆದೇಶಿಸಲಾಗಿದೆ. ನಂತರವೂ ನಿವೇಶನ ನೀಡಿರುವ ಬಗ್ಗೆ ತನಿಖೆ ನಡೆಯುತ್ತಿದೆ. ನನ್ನ ಪತ್ನಿಗೆ ಬದಲಿ ನಿವೇಶನ ಕೊಟ್ಟಿದ್ದನ್ನು ಬಿಜೆಪಿಯವರು ವಿವಾದ ಮಾಡುತ್ತಿದ್ದಾರೆ. ಅದು ವಿವಾದದ ವಿಷಯವೇ ಅಲ್ಲ. ಎಲ್ಲವೂ ಕಾನೂನು ಬದ್ಧವಾಗಿಯೇ ನಡೆದಿದೆ' ಎಂದು ಸಮರ್ಥಿಸಿಕೊಂಡರು. 'ಈ ವಿಷಯದಲ್ಲಿ ಬಿಜೆಪಿಯವರು ರಾಜಕಾರಣಕ್ಕೋಸ್ಕರ ಪ್ರತಿಭಟಿಸುತ್ತಿದ್ದಾರೆ' ಎಂದು ದೂರಿದರು.

'ಭೂಮಿ ಕಳೆದುಕೊಂಡವರ ಪ್ರಕರಣವೇ ಬೇರೆ. ನಮ್ಮ ಜಮೀನನ್ನು ಕಾನೂನಿಗೆ ವಿರುದ್ಧವಾಗಿ ಪಡೆದುಕೊಂಡ ಪ್ರಕರಣವಿದು. ನಮ್ಮ ಜಮೀನಿಗೆ ಪರಿಹಾರ ಕೊಡಿ ಎಂದು ಪತ್ನಿ ಕೇಳಿದ್ದರು. ವಿಜಯನಗರದಲ್ಲೇ ನಿವೇಶನ ಕೊಡಿ ಎಂದು ನಾವು ಕೇಳಿಲ್ಲ. ಭೂಮಿಯನ್ನು ಅಕ್ರಮವಾಗಿ ಪಡೆದುಕೊಂಡಿರುವುದು ತಪ್ಪು ಎಂದು ಪ್ರಾಧಿಕಾರವೇ ಒಪ್ಪಿ ನಿವೇಶನ ನೀಡಿದೆ. ಅದರಲ್ಲಿ ವಿವಾದವೇನಿದೆ, ಅಕ್ರಮವೇನಿದೆ? ನಿಮ್ಮ ಜಮೀನನ್ನು ಹೀಗೆ ಪಡೆದುಕೊಂಡರೆ ಬಿಟ್ಟು ಬಿಡುತ್ತೀರಾ ಎಂದು ಕೇಳಿದರು.

'ಮುಡಾದಲ್ಲಿ ನಡೆದಿರುವ ಅಕ್ರಮದ ಕುರಿತು ಇಬ್ಬರು ಐಎಎಸ್ ಅಧಿಕಾರಿಗಳ ತಂಡದಿಂದ ತನಿಖೆ ಮಾಡಿಸುತ್ತಿದ್ದೇವೆ. ನಿವೇಶನಗಳು ಹಂಚಿಕೆ ಆಗಿರುವುದನ್ನು ಅಮಾನತಿನಲ್ಲಿಟ್ಟಿದ್ದೇವೆ. ಕಾನೂನುಬಾಹಿರ ಎಂದು ವರದಿ ಬಂದರೆ, ಸಂಬಂಧಿಸಿದವರ ವಿರುದ್ಧ ಖಂಡಿತವಾಗಿಯೂ ಕ್ರಮ ಕೈಗೊಳ್ಳುತ್ತೇವೆ' ಎಂದರು.

'ಪ್ರಕರಣವನ್ನು ಸಿಬಿಐಗೆ ಕೊಡುವ ಅಗತ್ಯವಿಲ್ಲ. ನಮ್ಮವರೇ ಸಮರ್ಥರಿ-ದ್ದಾರೆ' ಎಂದರು.

'ಮುಡಾ' ಹಗರಣಕ್ಕೆ ಬಿಜೆಪಿಯೇ ಕಾರಣ



ಹೊಸಪೇಟೆ (ವಿಜಯನಗರ): 'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆ ಹಗರಣಕ್ಕೆ ಬಿಜೆಪಿಯೇ ಕಾರಣ. ಅವರ ಕಾಲದಲ್ಲೇ ನಿವೇಶನ ಹಂಚಿಕೆಯಾಗಿದೆ' ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಆರೋಪಿಸಿದರು.

ಇಲ್ಲಿ ಬುಧವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನಿವೇಶನ ಹಂಚುವಾಗ ರಾಜ್ಯದಲ್ಲಿ ಬಿಜೆಪಿ ಸರ್ಕಾರವಿತ್ತು, 'ಮುಡಾ'ದಲ್ಲಿ ಅವರ ಪಕ್ಷದವರೇ ಅಧ್ಯಕ್ಷರಾಗಿದ್ದರು. ಈ ಹಗರಣಕ್ಕೆ ಬಿಜೆಪಿ ಸರ್ಕಾರವೇ ಹೊಣೆ' ಎಂದರು.

'ಬಿಜೆಪಿ ಅವಧಿಗೆ ಹೋಲಿಸಿದರೆ ನಮ್ಮ ಹಗರಣಗಳು ಏನೂ ಅಲ್ಲ. ಶೇ 40ರಷ್ಟು ಕಮಿಷನ್, ಎಸ್‌ಐ, ಎಂಜಿನಿಯರ್‌ಗಳ ನೇಮಕಾತಿ ಸಹಿತ ಪ್ರತಿ ನೇಮಕಾತಿಯಲ್ಲೂ ಹಗರಣ ನಡೆದಿತ್ತು. ಸ್ವಜನ ಪಕ್ಷಪಾತ ಸಹಿತ ಹಲವು ಅಕ್ರಮಗಳು ಅವರ ಅವಧಿಯಲ್ಲಿ ಆಗಿವೆ' ಎಂದರು.

'ವಾಲ್ಮೀಕಿ ನಿಗಮದಲ್ಲಿ ಅಕ್ರಮ ಕಂಡು ಬಂದ ಬಳಿಕ ತನಿಖೆಗೆ ನಾವೇ ಆದೇಶಿಸಿದ್ದೇವೆ. ತನಿಖೆ ಕೊನೆಗೊಂಡ ಬಳಿಕ ಯಾರು ತಪ್ಪು ಮಾಡಿದ್ದಾರೋ ಅವರಿಗೆ ಶಿಕ್ಷೆ ಆಗುತ್ತದೆ' ಎಂದು ಅವರು ತಿಳಿಸಿದರು.



ಕರ್ನಾಟಕ ಸಂಭ್ರಮ-50ರ ಅಂಗವಾಗಿ ರಾಜ್ಯದಾದ್ಯಂತ ಸಂಚಾರ ನಡೆಸುತ್ತಿರುವ ಕರ್ನಾಟಕ ಜ್ಯೋತಿ ರಥಯಾತ್ರೆಯು ಬುಧವಾರ ಚಿತ್ರದುರ್ಗ ನಗರ ಪ್ರವೇಶಿಸಿದಾಗ ಜಿಲ್ಲಾಡಳಿತದಿಂದ ಅದ್ದೂರಿ ಸ್ವಾಗತ ಕೋರಲಾಯಿತು. ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಪ್ರಮುಖ ರಸ್ತೆಗಳಲ್ಲಿ ಸಾಗಿದ ಮೆರವಣಿಗೆ ಗಮನ ಸೆಳೆಯಿತು ಪ್ರಜಾವಾಣಿ ಚಿತ್ರ:ವಿ.ಚಂದ್ರಪ್ಪ

ಮುಸ್ಲಿಂ ಮಹಿಳೆಯರ ವಿರುದ್ಧ ಹೇಳಿಕೆ ಆರೋಪ

ಪ್ರಭಾಕರ ಭಟ್ ವಿರುದ್ಧದ ವಿಚಾರಣೆಗೆ ತಡೆ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ಮುಸ್ಲಿಂ ಮಹಿಳೆಯರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ ಆರೋಪಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಮುಖಂಡ ಪ್ರಭಾಕರ ಭಟ್ ಕಲ್ಲಡ್ಕ ವಿರುದ್ಧ ಶ್ರೀರಂಗಪಟ್ಟಣ ಜೆಎಂಎಫ್‌ಸಿ ಕೋರ್ಟ್‌ನಲ್ಲಿರುವ ಪ್ರಕರಣದ ನ್ಯಾಯಿಕ ವಿಚಾರಣಾ ಪ್ರಕ್ರಿಯೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

'ನನ್ನ ವಿರುದ್ಧ ದಾಖಲಾಗಿರುವ ಪ್ರಕರಣವನ್ನು ರದ್ದುಪಡಿಸಬೇಕು' ಎಂದು ಕೋರಿ ಪ್ರಭಾಕರ ಭಟ್ ಕಲ್ಲಡ್ಕ (82) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ಪ್ರಭಾಕರ ಭಟ್ ಪರ ಹೈಕೋರ್ಟ್ ಹಿರಿಯ ವಕೀಲ ಎಂ. ಅರುಣ್ ಶ್ಯಾಮ್ ವಾದ ಮಂಡಿಸಿದರು.

ಪ್ರಕರಣವೇನು?: 2023ರ ಡಿಸೆಂಬರ್ 24ರ ಮಧ್ಯಾಹ್ನ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ಹಿಂದೂ ಜಾಗರಣ ವೇದಿಕೆ ಆಯೋಜಿಸಿದ್ದ ಹನುಮಮಾಲೆ ಸಂಕೀರ್ತನಾ ಯಾತ್ರೆ ಸಮಾರಂಭದಲ್ಲಿ ಮಾತನಾಡಿದ್ದ ಪ್ರಭಾಕರ ಭಟ್, 'ಮುಸ್ಲಿಂ ಮಹಿಳೆಯರಿಗೆ ಪರ್ಮನೆಂಟ್ ಗಂಡ ಇರಲಿಲ್ಲ. ಅವರಿಗೆ ದಿನಕ್ಕೊಬ್ಬ ಗಂಡ. ಪರ್ಮನೆಂಟ್ ಗಂಡನನ್ನು ಕೊಟ್ಟಿದ್ದು ಮೋದಿ ಸರ್ಕಾರ ಎಂದು ಹೇಳಿದ್ದಾರೆ. ಈ ಹೇಳಿಕೆಯು ಮಹಿಳೆಯರ ಖಾಸಗಿತನ ಹಾಗೂ ಘನತೆಗೆ ಅಡ್ಡಿ ಉಂಟು ಮಾಡಿದ ಅಪರಾಧ' ಎಂದು ಆರೋಪಿಸಿ ಸಾಮಾಜಿಕ ಕಾರ್ಯಕರ್ತೆ ನಜ್ಮಾ ನಜೀರ್ ಬಿನ್ ನಜೀರ್ ಅಹ್ಮದ್ (27) ಶ್ರೀರಂಗಪಟ್ಟಣ ಪೊಲೀಸ್ ಠಾಣೆಯಲ್ಲಿ 2023ರ ಡಿಸೆಂಬರ್ 26ರಂದು ದೂರು ನೀಡಿದ್ದರು.

ದೂರಿನ ಅನ್ವಯ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಿದ್ದ ಪೊಲೀಸರು ಶ್ರೀರಂಗಪಟ್ಟಣ ಜೆಎಂಎಫ್‌ಸಿ ವಿಚಾರಣಾ ಕೋರ್ಟ್‌ಗೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

'ಯಾವ ಆಧಾರದಲ್ಲಿ ಇ.ಡಿ ದಾಳಿ ನಡೆದಿದೆಯೋ ಗೊತ್ತಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾಜಿ ಸಚಿವ ಬಿ. ನಾಗೇಂದ್ರ ಅವರ ಮನೆ ಮೇಲೆ ಇ.ಡಿ ಅಧಿಕಾರಿಗಳು ಯಾವ ಆಧಾರದಲ್ಲಿ ದಾಳಿ ನಡೆಸಿದ್ದಾರೆಂದು ನನಗೆ ಗೊತ್ತಿಲ್ಲ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ಸಂಬಂಧ ಆಪ್ತ ಸಹಾಯಕರು ನೀಡಿದ್ದ ಹೇಳಿಕೆಗಳ ಆಧಾರದಲ್ಲಿ ನಾಗೇಂದ್ರ ಮತ್ತು ಬಸನಗೌಡ ದದ್ದಲ್ ಅವರನ್ನು ಎಸ್‌ಐಟಿ ಅಧಿಕಾರಿಗಳು ವಿಚಾರಣೆ ನಡೆಸುತ್ತಿರುವ ಮಧ್ಯೆಯೇ ಈ ದಾಳಿ ನಡೆದಿದೆ' ಎಂದರು.

'ದಾಳಿ ನಡೆಸುವ ಬಗ್ಗೆ ಇ.ಡಿ, ಸಿಬಿಐನವರು ರಾಜ್ಯ ಸರ್ಕಾರಕ್ಕೆ ಮಾಹಿತಿ ನೀಡುವುದಿಲ್ಲ. ಹೀಗಾಗಿ, ದಾಳಿಯಿಂದ ಸರ್ಕಾರಕ್ಕೆ ಮುಜುಗರ ಆಗಿದೆ ಎನ್ನುವ ಪ್ರಶ್ನೆಯೇ ಇಲ್ಲ. ಇ.ಡಿ ದಾಳಿಯ ಕಾರಣಕ್ಕೆ ವಾಲ್ಮೀಕಿ ನಿಗಮದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ನಾಗೇಂದ್ರ, ದದ್ದಲ್ ಪಾತ್ರವಿದೆ ಎಂದು ನಾವು ಊಹಿಸಲು ಆಗುವುದಿಲ್ಲ' ಎಂದರು.

ಪದ್ಮನಾಭ್ ಮತ್ತು ಪರಶುರಾಮ್ ಅವರ ಮಾತುಕತೆಯ ಆಡಿಯೊ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಹಣ ವರ್ಗಾವಣೆ ಪ್ರಕರಣದ ತನಿಖೆಯನ್ನು ಎಸ್‌ಐಟಿ ನಡೆಸುತ್ತಿದೆ. ಬ್ಯಾಂಕ್ ವಂಚನೆಗಳ ಬಗ್ಗೆ ಸಿಬಿಐ ತನಿಖೆ ನಡೆಸುತ್ತಿದೆ. ಸಾರ್ವಜನಿಕರ ಗಮನಕ್ಕೆ ಬರುವ ಮಾಹಿತಿಗಳನ್ನು ಕೂಡ ಎಸ್‌ಐಟಿಯವರು ಗಮನಿಸುತ್ತಿದ್ದಾರೆ' ಎಂದರು.

ಎಸ್‌ಎಸ್‌ಎಲ್‌ಸಿ–2 69,275 ವಿದ್ಯಾರ್ಥಿಗಳು ತೇರ್ಗಡೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆ–2ರ ಫಲಿತಾಂಶ ಬುಧವಾರ ಪ್ರಕಟವಾಗಿದ್ದು, ಶೇ 31.02 ಫಲಿತಾಂಶ ಬಂದಿದೆ.

ಪರೀಕ್ಷೆ ಬರೆದಿದ್ದ 2.23 ಲಕ್ಷ ವಿದ್ಯಾರ್ಥಿಗಳಲ್ಲಿ 69,275 ಮಂದಿ ತೇರ್ಗಡೆಯಾಗಿದ್ದಾರೆ. ಎರಡನೇ ಪರೀಕ್ಷೆಯಲ್ಲೂ ಬಾಲಕಿಯರೇ (ಶೇ 38.48) ಹೆಚ್ಚು ತೇರ್ಗಡೆಯಾಗಿದ್ದಾರೆ. 1.44 ಲಕ್ಷ ಬಾಲಕರು ಪರೀಕ್ಷೆ ಬರೆದಿದ್ದರೂ, ಉತ್ತೀರ್ಣರಾದವರು 38,820 ವಿದ್ಯಾರ್ಥಿಗಳು ಮಾತ್ರ. 79,140 ವಿದ್ಯಾರ್ಥಿನಿಯರಲ್ಲಿ 30,455 ತೇರ್ಗಡೆ-ಯಾಗಿದ್ದಾರೆ.

ಖಾಸಗಿ ಶಾಲೆಗಳಿಗೆ ಶೇ 38.21, ಅನುದಾನಿತ ಶೇ 28.71 ಹಾಗೂ ಸರ್ಕಾರಿ ಶಾಲೆಗಳಿಗೆ ಶೇ 29.43 ಫಲಿತಾಂಶ ದೊರೆತಿದೆ. ನಗರ ಪ್ರದೇಶಕ್ಕೆ ಶೇ 31.17 ಹಾಗೂ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಶೇ 30.93 ಫಲಿತಾಂಶ ಬಂದಿದೆ.

ಆ.2ರಿಂದ ಪರೀಕ್ಷೆ–3: ಎಸ್‌ಎಸ್‌ಎಲ್‌ಸಿ ಪರೀಕ್ಷೆ–3 ಆ.2ರಿಂದ 9ರವರೆಗೆ ನಡೆಯಲಿದೆ. ಹೆಸರು ನೋಂದಾಯಿಸಲು ಜುಲೈ 17 ಕೊನೆಯ ದಿನ. ಫಲಿತಾಂಶ ಪ್ರಕಟವಾದ ಕ್ಷಣದಿಂದಲೇ ಪರೀಕ್ಷೆಗೆ ಹೆಸರು ನೋಂದಾಯಿಸಿಕೊಳ್ಳಲು ಅವಕಾಶ ನೀಡಲಾಗಿದೆ.

ವಾಲ್ಮೀಕಿ ಅಭಿವೃದ್ಧಿ ನಿಗಮದ ಅಕ್ರಮ

ನಕಲಿ ಖಾತೆ: ₹5.7 ಕೋಟಿ ವಂಚನೆ

• ಆದಿತ್ಯ ಕೆ.ಎ.

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದ ಅಕ್ರಮದ ಆರೋಪಿಗಳು, ಸರ್ಕಾರಿ ಕಾಮಗಾರಿಗಳ ನಿರ್ವಹಣೆ ನಡೆಸುತ್ತಿರುವ ಇಲ್ಲಿನ 'ರಾಮ್ ಎಂಟರ್‌ಪ್ರೈಸಸ್ ಕಂಪನಿ' ಹೆಸರಿನಲ್ಲಿ ನಕಲಿ ಖಾತೆ ತೆರೆದು ₹5.7 ಕೋಟಿ ಹಣ ವರ್ಗಾವಣೆ ಮಾಡಿಕೊಂಡಿರುವುದನ್ನು-ವಿಶೇಷ ತನಿಖಾ ದಳ (ಎಸ್‌ಐಟಿ) ಪತ್ತೆ ಮಾಡಿದೆ.

ಆರೋಪಿಗಳ ಮನೆ ಹಾಗೂ ಕಚೇರಿಗಳ ಮೇಲೆ ಬುಧವಾರ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ದಾಳಿ ನಡೆಸಿದ ಬೆನ್ನಲ್ಲೇ ₹89.62 ಕೋಟಿ ಹಣ ವರ್ಗಾವಣೆ ಪ್ರಕರಣದ ತನಿಖೆಯನ್ನು ಎಸ್‌ಐಟಿ ಪೊಲೀಸರೂ ಚುರುಕುಗೊಳಿಸಿದ್ದು, ಮಹತ್ವದ ಮಾಹಿತಿ ಕಲೆಹಾಕುತ್ತಿದ್ದಾರೆ.

ಹೈದರಾಬಾದ್ ಹಾಗೂ ಬೆಂಗಳೂರಿನ ಆರಕ್ಕೂ ಹೆಚ್ಚು ಕಂಪನಿಗಳಿಗೆ ಹಣ ವರ್ಗಾವಣೆ ಆಗಿರುವುದು ತನಿಖೆಯಿಂದ ಗೊತ್ತಾಗಿದೆ.

'ಬೆಂಗಳೂರಿನ ಮಾಗಡಿ ರಸ್ತೆಯ ಮಂಜುನಾಥ್ ನಗರದ ನಿವಾಸಿ ವಿಜಯ್ ಕೃಷ್ಣ ಅವರು 2017 ರಿಂದ ರಾಮ್ ಎಂಟರ್‌ಪ್ರೈಸಸ್ ನಡೆಸುತ್ತಿದ್ದು, ಗುತ್ತಿಗೆ ಕೆಲಸ ಮಾಡುತ್ತಿದ್ದಾರೆ. ಮಾಗಡಿ ರಸ್ತೆಯ ಕೆನರಾ ಬ್ಯಾಂಕ್‌ನ ಶಾಖೆಯಲ್ಲಿ ಕಂಪನಿಯ ಖಾತೆಯಿದೆ. ಕಂಪನಿಯ ಹೆಸರು ಹಾಗೂ ವಿಳಾಸ ಬಳಸಿಕೊಂಡಿದ್ದ ಆರೋಪಿಗಳು, ಹೈದರಾಬಾದ್‌ನ ಬಂಜಾರ ಹಿಲ್ಸ್ ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ಬ್ಯಾಂಕ್‌ನಲ್ಲಿ ನಕಲಿ ಖಾತೆ ತೆರೆದಿದ್ದರು. ಫಸ್ಟ್ ಫೈನಾನ್ಸ್ ಬ್ಯಾಂಕ್‌ನಿಂದ ಕಂಪನಿ ಖಾತೆಗೆ ತಪ್ಪಾಗಿ ₹5.7 ಕೋಟಿ ಜಮೆಯಾಗಿದೆ ಎಂದು ಹೇಳಿ ಹಣವನ್ನು ವಾಪಸ್ ಮರಳಿಸುವಂತೆ ಆರೋಪಿಗಳು ಸೂಚಿಸಿದ್ದರು. ಆ ಖಾತೆಯಲ್ಲಿದ್ದ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳ-ಲಾಗಿದೆ' ಎಂದು ಎಸ್‌ಐಟಿ ಪೊಲೀಸರು ಹೇಳಿದರು.

'ಹೈದರಾಬಾದ್‌ನ ಎಫ್‌ಎಫ್‌ಸಿಸಿ-ಎಸ್‌ಎಲ್ ಅಧ್ಯಕ್ಷ, ಬಂಧಿತ ಆರೋಪಿ ಸತ್ಯನಾರಾಯಣ ಇಟಕಾರಿ ಅವರು 18 ನಕಲಿ ಖಾತೆಗಳನ್ನು ತೆರೆದಿದ್ದರು. ಆ ಪೈಕಿ ರಾಮ್ ಕಂಪನಿ ಹೆಸರಿನಲ್ಲೂ ಒಂದು ನಕಲಿ ಖಾತೆ ತೆರೆಯಲಾಗಿತ್ತು. ಯಾರದ್ದೋ ಮೊಬೈಲ್ ಸಂಖ್ಯೆ ಹಾಗೂ ವಿಳಾಸ ನೀಡಿ ನಕಲಿ ಖಾತೆ ತೆರೆದು ತಪ್ಪಾಗಿ ಹಣ ಸಂದಾಯ ಆಗಿದೆಯೆಂದು ಹೇಳಿ ವಾಪಸ್ ಪಡೆದುಕೊಳ್ಳುತ್ತಿದ್ದರು. ಹಣ ವಾಪಸ್ ನೀಡಲು ಕೆಲವರಿಗೆ ಕಮಿಷನ್ ಸಹ ನೀಡಿದ್ದರು' ಎಂದು ಪೊಲೀಸರು ಹೇಳಿದರು.

'₹3.62 ಕೋಟಿ ಪಡೆದಿದ್ದ ಪದ್ಮನಾಭ'

'ಅಕ್ರಮವಾಗಿ ನಕಲಿ ಖಾತೆಗಳಿಗೆ ವರ್ಗಾವಣೆಯಾಗಿದ್ದ ಹಣದಲ್ಲಿ ತಮ್ಮ ಪಾಲಿಗೆ ಬಂದಿದ್ದ ₹3.62 ಕೋಟಿಯನ್ನು ನಿಗಮದ ಮಾಜಿ ವ್ಯವಸ್ಥಾಪಕ ನಿರ್ದೇಶಕ ಜೆ.ಬಿ.ಪದ್ಮನಾಭ್ ತಮ್ಮ ಪುತ್ರ ಧೀರಜ್‌ನ ಸ್ನೇಹಿತ ರೇವಂತ್ ಮನೆಯಲ್ಲಿ ಇಟ್ಟಿದ್ದರು. ಅದನ್ನು ನೆಲಮಂಗಲ ತಾಲ್ಲೂಕಿನ ಗೋವಿನಹಳ್ಳಿಯ ಗ್ರಾಮದ ಮನೆಯಲ್ಲಿ ಜಪ್ತಿ ಮಾಡಲಾಗಿದೆ' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

'ಅಕ್ರಮದಿಂದ ಬಂದ ಹಣವನ್ನು ಪದ್ಮನಾಭ್, ವಿವಿಧ ಸ್ಥಳಗಳಲ್ಲಿ ಹಲವರಿಗೆ ಹಂಚಿಕೆ ಮಾಡಿರುವುದು ಗೊತ್ತಾಗಿದೆ' ಎಂದು ಮೂಲಗಳು ತಿಳಿಸಿವೆ.

ನಾಗೇಂದ್ರ, ದದ್ದಲ್‌ಗೆ ಮತ್ತೆ ನೋಟಿಸ್

ಎಸ್‌ಐಟಿ ವಿಚಾರಣೆಗೆ ಬುಧವಾರ ಗೈರಾಗಿದ್ದ ಮಾಜಿ ಸಚಿವ, ಬಳ್ಳಾರಿ ಗ್ರಾಮೀಣ ಕ್ಷೇತ್ರದ ಶಾಸಕ ಬಿ.ನಾಗೇಂದ್ರ ಹಾಗೂ ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್ ಅವರಿಗೆ ಎಸ್‌ಐಟಿ ಮತ್ತೆ ನೋಟಿಸ್ ಜಾರಿ ಮಾಡಿದೆ.

ಇ.ಡಿ ದಾಳಿ ಕಾರಣದಿಂದ ಇಬ್ಬರೂ ವಿಚಾರಣೆಗೆ ಗೈರಾಗಿದ್ದರು. ಗುರುವಾರ ಬೆಳಿಗ್ಗೆ 11ಕ್ಕೆ ಸಿಐಡಿ ಕಚೇರಿಯಲ್ಲಿ ನಡೆಯುವ ವಿಚಾರಣೆಗೆ ಬರುವಂತೆ ನೋಟಿಸ್‌ನಲ್ಲಿ ಸೂಚಿಸಲಾಗಿದೆ.

ನಾಗೇಂದ್ರ, ದದ್ದಲ್‌ಗೆ ಇ.ಡಿ ಬಲೆ

ಒಂದನೇ ಪುಟದಿಂದ...

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಯಲ್ಲಿನ ವಾಲ್ಮೀಕಿ ಅಭಿವೃದ್ಧಿ ನಿಗಮದ ಖಾತೆಯಿಂದ ಅಕ್ರಮವಾಗಿ ಹಣ ವರ್ಗಾವಣೆ ಮಾಡಿರುವ ಹಗರಣದ ಕುರಿತು ರಾಜ್ಯ ಸರ್ಕಾರ ರಚಿಸಿರುವ ವಿಶೇಷ ತನಿಖಾ ದಳ (ಎಸ್‌ಐಟಿ) ಮತ್ತು ಸಿಬಿಐ ಪ್ರತ್ಯೇಕವಾಗಿ ತನಿಖೆ ನಡೆಸುತ್ತಿವೆ. ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿರುವ ಇ.ಡಿ, ಎಸ್‌ಐಟಿ ಬಂಧಿಸಿರುವ ಆರೋಪಿಗಳಲ್ಲಿ ಕೆಲವರನ್ನು ನ್ಯಾಯಾಂಗ ಬಂಧನದ ಅವಧಿಯಲ್ಲೇ ವಿಚಾರಣೆ ನಡೆಸಿತ್ತು.

ನಾಗೇಂದ್ರ ಮತ್ತು ಬಸನಗೌಡ ದದ್ದಲ್ ಮಂಗಳವಾರ ಎಸ್‌ಐಟಿ ವಿಚಾರಣೆ ಎದುರಿಸಿದ್ದರು. ಬುಧವಾರವೂ ವಿಚಾರಣೆಗೆ ಹಾಜ-ರಾಗಬೇಕಿತ್ತು. ನಸುಕಿನ ಜಾವದಲ್ಲೇ ಅವರ ಮನೆಯ ಬಾಗಿಲು ಬಡಿದ ಇ.ಡಿ ಅಧಿಕಾರಿಗಳು, ದಿನವಿಡೀ ಶೋಧ ನಡೆಸಿದರು. ನಾಗೇಂದ್ರ ಡಾಲರ್ಸ್ ಕಾಲೊನಿಯ ಮನೆಯಲ್ಲಿದ್ದರೆ, ದದ್ದಲ್ ಶ್ರೀನಿವಾಸಪುರದ ವಿಲ್ಲಾದಲ್ಲಿದ್ದರು. ರಾತ್ರಿಯವರೆಗೂ ಇಬ್ಬರನ್ನು ಮನೆಯಲ್ಲೇ ಇರಿಸಿಕೊಂಡ ಇ.ಡಿ ಅಧಿಕಾರಿಗಳು, ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಲಕಾಲ ವಿಚಾರಣೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮನೆ ಜಪ್ತಿ

ಹಗರಣದಲ್ಲಿ ಭಾಗಿಯಾಗಿರುವ ಆರೋಪ ಎದುರಿಸುತ್ತಿರುವ ಯೂನಿಯನ್ ಬ್ಯಾಂಕ್‌ನ ಎಂ.ಜಿ. ರಸ್ತೆ ಶಾಖೆಯ ಉಪ ಮುಖ್ಯಸ್ಥೆ ದೀಪಾ ಅವರ ಬೆಂಗಳೂರಿನ ಮನೆಯನ್ನು ಸಿಬಿಐ ಅಧಿಕಾರಿಗಳು ಜಪ್ತಿ ಮಾಡಿದ್ದಾರೆ.

ನಿಗಮದ ಕಚೇರಿಯಲ್ಲೂ ಶೋಧ: ವಸಂತನಗರದಲ್ಲಿರುವ ವಾಲ್ಮೀಕಿ ಅಭಿವೃದ್ಧಿ ನಿಗಮದ ಪ್ರಧಾನ ಕಚೇರಿಯಲ್ಲೂ ಇ.ಡಿ ಅಧಿಕಾರಿಗಳು ಶೋಧ ನಡೆಸಿದರು. ಕಾರ್ಯಾಚರಣೆಯ ಮಧ್ಯೆಯೇ ನಿಗಮದ ಪ್ರಭಾರ ವ್ಯವಸ್ಥಾಪಕ ನಿರ್ದೇಶಕ ರಾಜ್‌ಕುಮಾರ್ ಅವರನ್ನು ಕಚೇರಿಗೆ ಕರೆಸಿಕೊಂಡ ತನಿಖಾ ತಂಡ, ಕೆಲವು ಕಾಲ ಅವರಿಂದ ಮಾಹಿತಿ ಸಂಗ್ರಹಿಸಿದೆ.

ಇ.ಡಿ ಅಧಿಕಾರಿಗಳ ತಂಡವೊಂದು ಯೂನಿಯನ್ ಬ್ಯಾಂಕ್‌ನ ಎಂ.ಜಿ. ರಸ್ತೆ ಶಾಖೆ ಮೇಲೂ ದಾಳಿಮಾಡಿ, ಶೋಧ ನಡೆಸಿತು. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣಕಾಸು ವಹಿವಾಟಿಗೆ ಸಂಬಂಧಿಸಿದ ಹಲವು ದಾಖಲೆಗಳನ್ನು ಬ್ಯಾಂಕ್‌ನಿಂದ ವಶಕ್ಕೆ ಪಡೆಯಲಾಗಿದೆ ಎಂದು ಮೂಲಗಳು ಹೇಳಿವೆ. ಕಾರ್ಯಾಚರಣೆ ವೇಳೆ ಭದ್ರತೆ ಒದಗಿಸಲಾಗಿತ್ತು.

ಬೇರೆ ನಿಗಮಗಳಲ್ಲೂ ಹಗರಣ: ಶೋಭಾ

ನವದೆಹಲಿ: 'ಕರ್ನಾಟಕದಲ್ಲಿ ವಾಲ್ಮೀಕಿ ನಿಗಮದ ಹಗರಣದ ಮಾದರಿಯಲ್ಲೇ ಬೇರೆ ನಿಗಮಗಳಲ್ಲೂ ಬಹುಕೋಟಿ ಹಗರಣಗಳು ನಡೆದಿವೆ' ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಬುಧವಾರ ಇಲ್ಲಿ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಬಿ.ನಾಗೇಂದ್ರ ಅವರು ಹಗರಣದಲ್ಲಿ ಸಣ್ಣ ಮೀನು. ಹಣಕಾಸು ಸಚಿವರೂ ಆಗಿರುವ ಸಿದ್ದರಾಮಯ್ಯ ಹಗರಣದಲ್ಲಿ ಭಾಗಿಯಾಗಿದ್ದಾರೆ. ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ತನಿಖೆ ಎದುರಿಸಬೇಕು' ಎಂದು ಆಗ್ರಹಿಸಿದರು.

'ಬಡವರಿಗೆ ಶಿಕ್ಷಣ ನೀಡಲು, ಮನೆ ನಿರ್ಮಾಣ ಸೇರಿ ಅಭಿವೃದ್ಧಿಗಾಗಿ ನಿಗಮದಲ್ಲಿ ಹಣ ಇಡಲಾಗಿತ್ತು. ಆದರೆ, ಇದನ್ನು ತೆಲಂಗಾಣ ಚುನಾವಣೆ ಬಳಕೆಗೆ ಮಾಡಿಕೊಂಡ ಅನುಮಾನ ಇದೆ. ಹೈದರಾಬಾದ್‌ನಲ್ಲಿರುವ ಬಾರ್, ಟೆಂಟ್ ಹೌಸ್ ಹಾಗೂ ಖಾಸಗಿ ಬ್ಯಾಂಕ್‌ಗೆ ನಿಗಮದ ಹಣ ಜಮೆಯಾಗಿದೆ. ಹಗರಣ ಮುಚ್ಚಿ ಹಾಕಲು ರಾಜ್ಯ ಸರ್ಕಾರ ಯತ್ನಿಸುತ್ತಿದೆ. ಕಡತಗಳನ್ನು ನೀಡದೆ ಸಿಬಿಐ ಹಾಗೂ ಜಾರಿ ನಿರ್ದೇಶನಾಲಯಕ್ಕೆ ರಾಜ್ಯ ಸರ್ಕಾರ ಸಹಕಾರ ನೀಡುತ್ತಿಲ್ಲ' ಎಂದು ಕಿಡಿಕಾರಿದರು.

ಘಟಪ್ರಭಾ ಬಲದಂಡೆ ಅಂಚು ಕಾಲುವೆಯಲ್ಲಿ ಸಮಸ್ಯೆ; 10 ಸಾವಿರ ಹೆಕ್ಟೇರ್ ಜಮೀನಿಗೆ ಸಿಗದ ನೀರು

ಅಧಿಕಾರಿಗಳ ನಿರ್ಲಕ್ಷ್ಯ: ರೈತರಿಂದ ಹೂಳು ತೆರವು

• ಸಂತೋಷ ಈ. ಚಿನಗುಡಿ

ಬೆಳಗಾವಿ: ಹಿಡಕಲ್ ಜಲಾಶಯದ ಘಟಪ್ರಭಾ ಬಲದಂಡೆ ಕಾಲುವೆ ದುರಸ್ತಿಯಾಗದ ಕಾರಣ 10 ಸಾವಿರ ಹೆಕ್ಟೇರ್ ಜಮೀನು ನೀರಾವರಿಯಿಂದ ವಂಚಿತವಾಗಿದೆ. ಗ್ರಾಮ ಪಂಚಾಯಿತಿ ಹಾಗೂ ನೀರಾವರಿ ಇಲಾಖೆಯ ನಿರ್ಲಕ್ಷ್ಯದಿಂದ ಬೇಸರಗೊಂಡು ರೈತರು ತಾವೇ ಕಾಲುವೆಗಿಳಿದು ದುರಸ್ತಿ ಕಾರ್ಯದಲ್ಲಿ ನಿರತರಾಗಿದ್ದಾರೆ.

ಘಟಪ್ರಭಾ ಯೋಜನಾ ವ್ಯಾಪ್ತಿಯ ಕಬ್ಬೂರ ಅಂಚು ವಿತರಣಾ ಕಾಲುವೆಯಲ್ಲಿ (ಸಿಬಿಸಿ) ಅಪಾರ ಪ್ರಮಾಣದ ಹೂಳು ತುಂಬಿದೆ. ಕೊನೆ ಅಂಚಿನ ಗ್ರಾಮಗಳಾದ ರಾಯಬಾಗ ತಾಲ್ಲೂಕಿನ ಮಂಟೂರು, ನಿಪನಾಳ, ಖಡಕಬಾವಿ, ಚಿಕ್ಕೋಡಿ ತಾಲ್ಲೂಕಿನ ಜಾಗನೂರ, ಗೋಕಾಕ ತಾಲ್ಲೂಕಿನ ದಂಡಾಪುರ, ಮಮದಾಪುರ ಹದ್ದಿಯ ರೈತರಿಗೆ ನೀರು ಸಿಗುತ್ತಿಲ್ಲ. ಕಾಲುವೆ ಇದ್ದರೂ 10 ಸಾವಿರ ಹೆಕ್ಟೇರ್ ಪ್ರದೇಶ ಒಣಭೂಮಿಯಾಗಿ ಉಳಿದಿದೆ.

ಸದ್ಯ ಕಾಲುವೆಯಲ್ಲಿ 65 ಸಾವಿರ ಕ್ಯುಸೆಕ್ ನೀರು ಹರಿಸಿದರೂ ಕೊನೆಯಂಚಿನ ಗ್ರಾಮಗಳ ಕಾಲುವೆಗೆ ನೀರೂ ತಲುಪಿಲ್ಲ. ಎಂಟು ವರ್ಷಗಳಿಂದ ರೈತರು ಸಂಕಷ್ಟದಲ್ಲಿದ್ದಾರೆ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ (ನರೇಗಾ) ದುರಸ್ತಿ ಮಾಡಬೇಕು ಎಂಬ ನಿಯಮವೂ ಪಾಲನೆ ಆಗಿಲ್ಲ. ಈ ಬಗ್ಗೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ನಿರ್ದೇಶನ ನೀಡಿದರೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಂದ (ಪಿಡಿಒ) ಸ್ಪಂದನೆ ಸಿಕ್ಕಿಲ್ಲ.

ನರೇಗಾ ಯೋಜನೆಯಡಿ ಮಂಟೂರು ಗ್ರಾಮ ಪಂಚಾಯಿತಿಯವರು ತಮ್ಮ ವ್ಯಾಪ್ತಿಯ 9 ಕಿ.ಮೀ ಉದ್ದದ ಕಾಲುವೆಯ ಹೂಳನ್ನು ₹ 24 ಲಕ್ಷ ವೆಚ್ಚದಲ್ಲಿ ತೆರವುಗೊಳಿಸಿದ್ದಾರೆ. ಆದರೆ, ಮಂಟೂರಿಗಿಂತ ಮೊದಲು ಬರುವ ಜಾಗನೂರ ಮತ್ತು ನಂತರ ಬರುವ ದಂಡಾಪುರ ಪಂಚಾಯಿತಿಯವರು ಕಾಮಗಾರಿ ಮಾಡಿಸಿಲ್ಲ. 26 ಕಿ.ಮೀನಷ್ಟು ಹೂಳು ಹಾಗೇ ಇದೆ.

'ನೀರಿನ ಸಮಸ್ಯೆ ಆಗದಿರಲಿಯೆಂದೇ ಮಂಟೂರು ಗ್ರಾಮದ ರೈತರೇ ಪಕ್ಕದ ಗ್ರಾಮಗಳ ಕಾಲುವೆಗಳಿಗೆ ಇಳಿದು ದುರಸ್ತಿ ಕಾರ್ಯದಲ್ಲಿ ತೊಡಗಿದ್ದಾರೆ. 11 ದಿನಗಳಿಂದ 50 ರೈತರು ಎರಡು ಪಾಳಿಯಲ್ಲಿ ಹೂಳು ಮತ್ತು ಗಿಡಗಂಟಿ ತೆರವು, ಟ್ರಂಚ್ ದುರಸ್ತಿ, ಬಿರುಕು ಭರ್ತಿ, ಪ್ಯಾಚ್ ಕೆಲಸ ಸಾಗಿದೆ. ಇದಕ್ಕೆ ಹಣವನ್ನೂ ರೈತರೇ ಹೊಂದಿಸಿಕೊಂಡಿದ್ದಾರೆ. ಇಷ್ಟೆಲ್ಲ ಮಾಡಿದರೂ ಅಧಿಕಾರಿಗಳಿಂದ ಸ್ಪಂದನೆ ಸಿಕ್ಕಿಲ್ಲ' ಎಂದು ರೈತ ಲಕ್ಕಪ್ಪ ಸಿದ್ದಪ್ಪ ಉಪ್ಪಾರ 'ಪ್ರಜಾವಾಣಿ'ಗೆ ತಿಳಿಸಿದರು.

'ಕಾಲುವೆ ವ್ಯಾಪ್ತಿಯಲ್ಲಿ 13 ಸೇತುವೆಗಳಿದ್ದು, ಅವುಗಳ ಪೈಕಿ 5 ಸೇತುವೆಗಳಲ್ಲಿನ ಹೂಳನ್ನು ರೈತರು ತೆರವು ಮಾಡಿದ್ದಾರೆ. ಮಳೆಗಾಲದಲ್ಲೂ ಕೆಲಸ ಮುಂದುವರೆದಿದೆ.

ಕಾಲುವೆಗೆ ಸಂಬಂಧಿಸಿದಂತೆ ಮಂಟೂರ ಪಂಚಾಯಿತಿ ಸದಸ್ಯೆ ಮಲ್ಲವ್ವ ಭೀಮಪ್ಪ ಮೇಟಿ ಅವರು ಜನತಾ ದರ್ಶನದಲ್ಲಿ ಕೇಳಿದ ಪ್ರಶ್ನೆಗೆ ಕರ್ನಾಟಕ ನೀರಾವರಿ ನಿಗಮದ ಚಿಕ್ಕೋಡಿ ಉಪವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್, '35 ವರ್ಷಗಳ ಹಿಂದೆ ನಿರ್ಮಿತ ಈ ಕಾಲುವೆ ಅಲ್ಲಲ್ಲಿ ಹಾಳಾಗಿದೆ. ರೈತರ ಮನವಿಗೆ ಸ್ಪಂದಿಸಿ ಆಧುನೀಕರಣಕ್ಕೆ ₹1 ಕೋಟಿಯ ಕ್ರಿಯಾ ಯೋಜನೆ ಸಿದ್ಧಪಡಿಸಿ ಸರ್ಕಾರಕ್ಕೆ ನೀಡಲಾಗಿದೆ. ಅನುಮತಿ ಸಿಕ್ಕ ತಕ್ಷಣ ಕಾಮಗಾರಿ ಆರಂಭಿಸಲಾಗುವುದು' ಎಂದು ಲಿಖಿತ ಉತ್ತರ ನೀಡಿದ್ದಾರೆ.



ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಮಮದಾಪುರ ಕೆ.ಕೆ. ಗ್ರಾಮದ ಹದ್ದಿಯಲ್ಲಿ ಬುಧವಾರ ಘಟಪ್ರಭಾ ಬಲದಂಡೆ ಕಾಲುವೆಯ ಹೂಳು ತೆಗೆದ ರೈತರು

> ಕಾಲುವೆ ದುರಸ್ತಿಗೆ ಅನುದಾನ ಬಂದಿಲ್ಲ. ಹೂಳು ತೆಗೆಸುವ ಕಾಮಗಾರಿಯನ್ನು ಗ್ರಾಮ ಪಂಚಾಯಿತಿಗಳು ನರೇಗಾದಡಿ ಮಾಡಿಸಲು ನೀರಾವರಿ ಸಚಿವರು ನಿರ್ದೇಶನ ನೀಡಿದ್ದಾರೆ
> **ಎಸ್.ಎಸ್.ಕರಗಾರ,** ಕಾರ್ಯಪಾಲಕ ಎಂಜಿನಿಯರ್, ಘಟಪ್ರಭಾ ಬಲದಂಡೆ ಕಾಲುವೆ ನಿರ್ಮಾಣ, ಚಿಕ್ಕೋಡಿ ವಿಭಾಗ
>
> ಅಧಿಕಾರಿಗಳ ನಿರ್ಲಕ್ಷ್ಯದಿಂದ ಕಾಲುವೆಯು ಇದ್ದೂ ಇಲ್ಲದಂತಾಗಿದೆ. ಕೃಷಿಗೆ ಅಲ್ಲದೇ ಜನ– ಜಾನುವಾರುಗಳಿಗೂ ನೀರಿನ ಕೊರತೆಯಾಗಿದೆ. ಜನತಾ ದರ್ಶನದಲ್ಲಿ ಪ್ರಶ್ನಿಸಿದರೂ ಪ್ರಯೋಜನವಾಗಿಲ್ಲ
> **ಮಲ್ಲವ್ವ ಭೀಮಪ್ಪ ಮೇಟಿ,** ಗ್ರಾಮ ಪಂಚಾಯಿತಿ ಸದಸ್ಯೆ, ಮಂಟೂರ
>
> ನರೇಗಾದಡಿ ಕಾಲುವೆ ದುರಸ್ತಿಗೆ ಕಾರ್ಮಿಕರು ಸಿಗದ ಕಾರಣ ಕೆಲಸ ಮಾಡಿಲ್ಲ. ರೈತರ ಮನವಿ ಮೇರೆಗೆ ಸದ್ಯ 20 ಕಾರ್ಮಿಕರ ತಂಡ ರಚಿಸಲಾಗಿದೆ. ಎರಡು ದಿನಗಳಲ್ಲಿ ಕೆಲಸ ಶುರು ಮಾಡಲಾಗುವುದು
> **ಎಲ್.ಬಿ.ಉಪ್ಪಾರ,** ಪಿಡಿಒ, ದಂಡಾಪುರ

'ಪ್ರೀತಿ ನಿರಾಕರಣೆ ನೇಹಾ ಕೊಲೆಗೆ ಕಾರಣ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಎರಡು ವರ್ಷದಿಂದ ಪ್ರೀತಿಸುತ್ತಿದ್ದ ನೇಹಾ ಹಿರೇಮಠ, ಮನಸ್ತಾಪದಿಂದ ದೂರವಾಗಿ, ನಿರ್ಲಕ್ಷಿಸಿದ್ದಕ್ಕೆ ಬೆಳಗಾವಿಯ ಸವದತ್ತಿಯ ಫಯಾಜ್ ಖೊಂದುನಾಯ್ಕ ಹತಾಶನಾಗಿ ಚಾಕು ಇರಿದು ಕೊಲೆ ಮಾಡಿದ್ದಾನೆ' ಎಂದು ಸಿಐಡಿ ನ್ಯಾಯಾಲಯಕ್ಕೆ ಸಲ್ಲಿಸಿದ್ದ ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಿದೆ.

ಸಿಐಡಿ ಡಿವೈಎಸ್‌ಪಿ ಮನೋಹರ ಎಚ್. ಪೈಕ್ ಅವರು ಇಲ್ಲಿನ ಒಂದನೇ ಹೆಚ್ಚುವರಿ ಸೆಷನ್ಸ್ ಮತ್ತು 3ನೇ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದ 483 ಪುಟಗಳ ದೋಷಾರೋಪ ಪಟ್ಟಿಯಲ್ಲಿ ಕೊಲೆಗೆ ಕಾರಣ ವಿವರಿಸಲಾಗಿದೆ. ತನಿಖೆ ನಡೆಸಿದ ಅಧಿಕಾರಿಗಳು ಫಯಾಜ್ ಒಬ್ಬನನ್ನೇ ಆರೋಪಿಯನ್ನಾಗಿಸಿದ್ದಾರೆ. ಪ್ರತ್ಯಕ್ಷ ಸಾಕ್ಷಿ, ಸಿಸಿಟಿವಿ ಕ್ಯಾಮೆರಾ ದೃಶ್ಯ, ಮರಣೋತ್ತರ ಶವ ಪರೀಕ್ಷೆ ನಡೆಸಿದ ವೈದ್ಯರ, ತಜ್ಞರ ಅಭಿಪ್ರಾಯ, ಸಾಕ್ಷ್ಯಾಧಾರ ಸಹಿತ ವರದಿ ಸಲ್ಲಿಸಿದ್ದಾರೆ.

ದೋಷಾರೋಪ ಪಟ್ಟಿಯಲ್ಲಿ ಏನಿದೆ?: 2020/21ರಲ್ಲಿ ನೇಹಾ ಪಿಸಿ ಜಾಬಿನ್ ಕಾಲೇಜಿನಲ್ಲಿ ಬಿಸಿಎ ಓದುತ್ತಿದ್ದಾಗ, ಫಯಾಜ್ ಸಹಪಾಠಿಯಾಗಿದ್ದ. ಸ್ನೇಹಿತರಾಗಿದ್ದ ಇವರು 2022 ರಲ್ಲಿ ಪರಸ್ಪರ ಪ್ರೀತಿಸಲು ಆರಂಭಿಸಿದ್ದರು. 2024ರ ಮಾರ್ಚ್‌ನಲ್ಲಿ ಇಬ್ಬರ ನಡುವೆ ಮನಸ್ತಾಪವಾಗಿತ್ತು. ನೇಹಾ ನಿರ್ಲಕ್ಷ್ಯ ತೋರುತ್ತಿರುವುದರಿಂದ ಹತಾಶಗೊಂಡ ಆತ, ಕೊಲೆ ಮಾಡಲು ನಿರ್ಧರಿದ. ಏಪ್ರಿಲ್ 15ರಂದು ಧಾರವಾಡದಲ್ಲಿ ಟೊಪ್ಪಿ, ಮಾಸ್ಕ್ ಮತ್ತು ಚಾಕು ಖರೀದಿಸಿದ. ಏಪ್ರಿಲ್ 18ರಂದು ಸಂಜೆ 4.40ಕ್ಕೆ ನೇಹಾ ಕಾಲೇಜಿನಿಂದ ಹೊರಬರುವ ವೇಳೆ ಅಡ್ಡಗಟ್ಟಿದ. 'ಪ್ರೀತಿಸಿ ಈಗ ಮೋಸ ಮಾಡುತ್ತೀಯಾ' ಎಂದು ಮನಸ್ಪೋ ಇಚ್ಛೆ ಚಾಕು ಇರಿದಿದ್ದಾನೆ. ನಂತರ ಅಲ್ಲಿಯೇ ಚಾಕು ಬಿಟ್ಟು ಪರಾರಿಯಾಗಿದ್ದು ತನಿಖೆಯಿಂದ ದೃಢಪಟ್ಟಿದೆ. ಕಲಂ 302, 341 ಮತ್ತು 506 ಅಡಿ ಆರೋಪಿ ಶಿಕ್ಷಾರ್ಹ ಅಪರಾಧ ಎಸಗಿದ್ದಾನೆ' ಎಂದು ಉಲ್ಲೇಖಿಸಲಾಗಿದೆ.

ದೋಷಾರೋಪ ಪಟ್ಟಿ ಸಿಕ್ಕಿಲ್ಲ: 'ದೋಷಾರೋಪ ಪಟ್ಟಿ ಇನ್ನೂ ನನಗೆ ಸಿಕ್ಕಿಲ್ಲ. ಆದರೆ, ನ್ಯಾಯಾಲಯಕ್ಕೆ ಪಟ್ಟಿ ಸಲ್ಲಿಕೆಯಾದ ನಂತರದ ಬೆಳವಣಿಗೆ ಗಮನಿಸಿದರೆ ಕೆಲ ಅನುಮಾನಗಳು ಕಾಡುತ್ತಿವೆ. ಒಬ್ಬನನ್ನೇ ಆರೋಪಿ ಮಾಡಲಾಗಿದೆ ಎಂಬ ಮಾಹಿತಿ ಇದೆ. ಪಟ್ಟಿಯಲ್ಲಿ ಯಾವ ಅಂಶಗಳನ್ನು ಸೇರಿಸಲಾಗಿದೆ? ಯಾವುದನ್ನು ಕೈಬಿಟ್ಟಿದ್ದಾರೆ ಎಂಬುದು ಗೊತ್ತಾಗಿಲ್ಲ' ಎಂದು ನೇಹಾ ತಂದೆ ನಿರಂಜನಯ್ಯ ಹಿರೇಮಠ 'ಪ್ರಜಾವಾಣಿ'ಗೆ ತಿಳಿಸಿದರು.

'ಗ್ಯಾರಂಟಿಯಿಂದ ಶ್ರಮದ ಮನೋಭಾವ ಮಾಯ'

ಹರಿಹರ: ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಿಂದಾಗಿ ಜನರಲ್ಲಿ ಶ್ರಮಪಡುವ ಮನೋಭಾವ ಮಾಯವಾಗುತ್ತಿದೆ ಎಂದು ಬಾಳೆಹೊನ್ನೂರು ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ ಅಭಿಪ್ರಾಯಪಟ್ಟರು.

ಗ್ಯಾರಂಟಿ ಯೋಜನೆಗಳು ದುರ್ಬಳಕೆ ಯಾಗುತ್ತಿವೆ. ಕೃಷಿ ಕಾರ್ಯಕ್ಕೆ ಕೂಲಿಕಾರರು ಸಿಗದೆ ರೈತರು ತೊಂದರೆ ಎದುರಿಸುವಂತಾಗಿದೆ ಎಂದು ಇಲ್ಲಿ ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

ಶ್ರಮ ಇಲ್ಲದೆ ಸಂಪತ್ತು ಬರುವುದರಿಂದ ಆಲಸ್ಯ ಉಂಟಾಗುತ್ತದೆ. ಗ್ಯಾರಂಟಿ ಬದಲು ಇದೇ ಅನುದಾನವನ್ನು ನಿರ್ಗತಿಕರು, ನಿಶ್ಯಕ್ತರನ್ನು ಸಬಲರನ್ನಾಗಿ ಮಾಡಲು ಬಳಸಿಕೊಳ್ಳಬೇಕು ಎಂದು ಅವರು ಸರ್ಕಾರಕ್ಕೆ ಸಲಹೆ ನೀಡಿದರು.

ಸರ್ಕಾರದ ಕೆಲವು ಸವಲತ್ತುಗಳು ಮೇಲ್ಜಾತಿಯ ಬಡವರಿಗೆ ತಲುಪುತ್ತಿಲ್ಲ. ಇದನ್ನು ಸರಿಪಡಿಸಬೇಕು. ಮೇಲ್ಜಾತಿಯಲ್ಲೂ ಬಹಳಷ್ಟು ಬಡವರು ಇದ್ದಾರೆ. ಎಲ್ಲಾ ವರ್ಗಗಳಲ್ಲಿ ಇರುವ ಬಡವರನ್ನು ಗಮನದಲ್ಲಿ ಇಟ್ಟುಕೊಂಡು ಕೆಲಸ ಮಾಡಬೇಕು ಎಂದರು.

ಸಮಗ್ರ ಮಕ್ಕಳ ರಕ್ಷಣಾ ನಿರ್ದೇಶನಾಲಯದ ನಿರ್ದೇಶಕ ಎಂ.ಆರ್.ರವಿ

'ಬಾಲ್ಯ ವಿವಾಹ ಮುಕ್ತ ಗ್ರಾ.ಪಂಗಳಿಗೆ ಪುರಸ್ಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪೋಕ್ಸೊ ಪ್ರಕರಣ, ಬಾಲ್ಯ ವಿವಾಹ, ಬಾಲಕಾರ್ಮಿಕ ಪದ್ಧತಿಗಳನ್ನು ಮುಕ್ತಗೊಳಿಸುವ ಗ್ರಾಮ ಪಂಚಾಯಿತಿಗಳನ್ನು ಪುರಸ್ಕರಿಸಲು ನಿರ್ಧರಿಸಲಾಗಿದೆ' ಎಂದು ಸಮಗ್ರ ಮಕ್ಕಳ ರಕ್ಷಣಾ ನಿರ್ದೇಶನಾಲಯದ ನಿರ್ದೇಶಕ ಎಂ.ಆರ್. ರವಿ ಹೇಳಿದರು.

ಕರ್ನಾಟಕ ಬಾಲ್ಯ ವಿವಾಹ ವಿರೋಧಿ ವೇದಿಕೆ ನಗರದಲ್ಲಿ ಬುಧವಾರ ಆಯೋಜಿಸಿದ್ದ 'ಬಾಲ್ಯ ವಿವಾಹಗಳನ್ನು ತಡೆಗಟ್ಟಲು ರಾಜ್ಯಮಟ್ಟದ ವಕೀಲಿ ತರಬೇತಿ' ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

'ಬಾಲ್ಯ ವಿವಾಹ ಪದ್ಧತಿ ನಿರ್ಮೂಲನೆಗಾಗಿ ಹೋರಾಡುವವರನ್ನು ಗೌರವಿಸುವ ಹಾಗೂ ದೌರ್ಜನ್ಯಕ್ಕೊಳಗಾಗುವ ಮಕ್ಕಳನ್ನು ರಕ್ಷಿಸುವ ಅಧಿಕಾರಿಗಳು, ನೌಕರರು, ಸಿಬ್ಬಂದಿಗೆ 'ಮಕ್ಕಳ ರಕ್ಷಣೆ ಪ್ರಶಸ್ತಿ' ನೀಡಲಾಗುವುದು. ರಾಜ್ಯದ ಇತಿಹಾಸದಲ್ಲೇ ಮೊದಲ ಬಾರಿಗೆ ಬಾಲ್ಯ ವಿವಾಹದಂತಹ ಮೌಢ್ಯ ಪದ್ಧತಿ ನಿರ್ಮೂಲನೆಗಾಗಿ ಇಂಥದ್ದೊಂದು ಆರೋಗ್ಯಕರ ಸ್ಪರ್ಧೆ ಏರ್ಪಡಿಸಲಾಗುತ್ತಿದೆ' ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ನೆದರ್ಲೆಂಡ್‌ನಲ್ಲಿರುವ ಟೆರ್ರೆಡೆಸ್ ಹೋಮ್ಸ್‌ನ ಭಾರತ ಮತ್ತು ನೇಪಾಳದ ರಾಷ್ಟ್ರೀಯ ನಿರ್ವಾಹಕ ಡಾ. ತಂಗಪೆರುಮಾಳ್ ಪೊನ್‌ಪಾಂಡಿ, ವಿದ್ಯಾನಿಕೇತನದ ನಿರ್ದೇಶಕ ನಾಗರಾಜ್, ಮಕ್ಕಳ ಹಕ್ಕುಗಳ ಹೋರಾಟಗಾರ ವಾಸುದೇವ ಶರ್ಮಾ ಎನ್.ವಿ. ಉಪಸ್ಥಿತರಿದ್ದರು.

ರಾಜ್ಯದ ವಿವಿಧ ಭಾಗಗಳಿಂದ ಕಾರ್ಯಾಗಾರದಲ್ಲಿ ಭಾಗವಹಿಸಿದ್ದ ಕರ್ನಾಟಕ ಬಾಲ್ಯ ವಿವಾಹ ವಿರೋಧಿ ವೇದಿಕೆಯ ಸದಸ್ಯರು, ಬಾಲ್ಯ ವಿವಾಹದಿಂದಾಗುವ ಸಮಸ್ಯೆಗಳ ಕುರಿತು ಅನುಭವ ಹಂಚಿಕೊಂಡರು. ಈ ಮೌಢ್ಯ ಪದ್ಧತಿಯ ನಿರ್ಮೂಲನೆಗಾಗಿ ಎಲ್ಲರೂ ಕೈಜೋಡಿಸುವಂತೆ ಮನವಿ ಮಾಡಿದರು.



'ಬಾಲ್ಯ ವಿವಾಹಗಳನ್ನು ತಡೆಗಟ್ಟಲು ರಾಜ್ಯಮಟ್ಟದ ವಕೀಲಿ ತರಬೇತಿ' ಉದ್ಘಾಟನಾ ಕಾರ್ಯಕ್ರಮದಲ್ಲಿ ಸಮಗ್ರ ಮಕ್ಕಳ ರಕ್ಷಣಾ ನಿರ್ದೇಶನಾಲಯದ ನಿರ್ದೇಶಕ ಎಂ.ಆರ್ ರವಿ ಅವರು ಕರ್ನಾಟಕ ಬಾಲ್ಯವಿವಾಹ ವಿರೋಧಿ ವೇದಿಕೆಯ ಸದಸ್ಯರೊಂದಿಗೆ ಮಾತುಕತೆ ನಡೆಸಿದರು. – ಪ್ರಜಾವಾಣಿ ಚಿತ್ರ

ಸಹಾಯವಾಣಿ ಪ್ರಚುರಪಡಿಸಿ

ಬಾಲ್ಯ ವಿವಾಹ ತಡೆಗಾಗಿ ಮಕ್ಕಳ ಸಹಾಯವಾಣಿ–1098 ಅನ್ನು ಅಸ್ತ್ರವಾಗಿ ಬಳಸಿಕೊಳ್ಳಬೇಕು ಎಂದು ಎಂ.ಆರ್. ರವಿ ಸಲಹೆ ನೀಡಿದರು.

'1098 ಜೊತೆಗೆ, ಇಆರ್‌ಎಸ್‌ಎಸ್ (ತುರ್ತು ಪ್ರತಿಕ್ರಿಯೆ ಬೆಂಬಲ) ವ್ಯವಸ್ಥೆಯಿರುವ 112 ಸಹಾಯವಾಣಿಯನ್ನೂ ಜೋಡಿಸಲಾಗಿದೆ. ಮಕ್ಕಳ ಮಾರಾಟ, ಬಾಲ್ಯ ವಿವಾಹ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ ದೂರುಗಳನ್ನು 1098ಕ್ಕೆ ಕರೆ ಮಾಡಿ ತಿಳಿಸಿದರೆ, ಆ ಕರೆಯನ್ನು ತುರ್ತಾಗಿ 112ಕ್ಕೆ ವರ್ಗಾಯಿಸಲಾಗುತ್ತದೆ. ಅಧಿಕಾರಿಗಳು ತ್ವರಿತವಾಗಿ ಸ್ಪಂದಿಸಲು ಸಾಧ್ಯವಾಗುತ್ತದೆ' ಎಂದರು.

ಭವಾನಿಯ ನಿರೀಕ್ಷಣಾ ಜಾಮೀನು ರದ್ದುಗೊಳಿಸಲು ಸುಪ್ರೀಂ ನಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಮತ್ತು ಅತ್ಯಾಚಾರ ಆರೋಪದ ಪ್ರಕರಣದಲ್ಲಿ ಸಂತ್ರಸ್ತೆಯೊಬ್ಬರ ಅಪಹರಣದ ಆರೋಪಕ್ಕೆ ಗುರಿಯಾಗಿರುವ ಭವಾನಿ ರೇವಣ್ಣ ಅವರ ನಿರೀಕ್ಷಣಾ ಜಾಮೀನು ರದ್ದುಪಡಿಸಲು ಸುಪ್ರೀಂ ಕೋರ್ಟ್ ಬುಧವಾರ ನಿರಾಕರಿಸಿದೆ.

ಭವಾನಿ ಅವರಿಗೆ ಹೈಕೋರ್ಟ್ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದ್ದನ್ನು ಪ್ರಶ್ನಿಸಿ ವಿಶೇಷ ತನಿಖಾ ದಳವು (ಎಸ್‌ಐಟಿ) ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಉಜ್ಜಲ್ ಭುಯಾನ್ ಅವರ ಪೀಠವು ಭವಾನಿ ಅವರಿಗೆ ನೋಟಿಸ್ ಜಾರಿ ಮಾಡಿದೆ.



ಭವಾನಿ ರೇವಣ್ಣ

ಕರ್ನಾಟಕ ಸರ್ಕಾರ ಪರ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್, 'ಸಂತ್ರಸ್ತೆಯ ಅಪಹರಣ ಮಾಡಿದ ಪ್ರಕರಣವಿದು. ಸಂತ್ರಸ್ತೆಯನ್ನು ಅಪಹರಿಸಲು ಭವಾನಿ ನಿರ್ದೇಶನ ನೀಡಿದ್ದರು. ಈ ಬಗ್ಗೆ ಸಂತ್ರಸ್ತೆ ಹೇಳಿಕೆ ನೀಡಿದ್ದಾರೆ. ಅವರು ಆರೋಪದಿಂದ ಮುಕ್ತವಾಗಿಲ್ಲ. ವಿಚಾರಣೆ ಎದುರಿಸಬೇಕು. ಅವರಿಗೆ ನಿರೀಕ್ಷಣಾ ಜಾಮೀನು ನೀಡಿರುವುದು ದುರದೃಷ್ಟಕರ' ಎಂದರು.

ಸಿಬಲ್ ಮಾತುಗಳನ್ನು ಆಲಿಸಿದ ಪೀಠವು, 'ಪ್ರತಿವಾದಿಯ ವಿರುದ್ಧದ ಪ್ರಕರಣದಲ್ಲಿ ಏನೂ ಇಲ್ಲ. ವಿಷಯವನ್ನು ರಾಜಕೀಯಗೊಳಿಸುವುದು ಬೇಡ' ಎಂದು ಮೌಖಿಕವಾಗಿ ಹೇಳಿತು.

'ಈ ರೀತಿಯ ಆರೋಪಗಳ ಸಂದರ್ಭದಲ್ಲಿ, ಮಗ ಮಾಡಿದ ಅಪರಾಧಕ್ಕೆ ಕುಮ್ಮಕ್ಕು ನೀಡುವಲ್ಲಿ ತಾಯಿಯ ಪಾತ್ರವೇನು?' ಎಂದು ಪೀಠ ಪ್ರಶ್ನಿಸಿತು.

ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಆರೋಪದ ಪ್ರಕರಣದಲ್ಲಿ ಸಂತ್ರಸ್ತೆಯನ್ನು ಅಪಹರಿಸಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಕೆ.ಆರ್.ನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

ಪ್ರಕರಣದ ಮೊದಲ ಆರೋಪಿ ಎಚ್.ಡಿ.ರೇವಣ್ಣ ಬಂಧನಕ್ಕೊಳಗಾಗಿದ್ದರು. ನಂತರ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಅವರಿಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿತ್ತು. ಪ್ರಕರಣದಲ್ಲಿ ಭವಾನಿ ಅವರ ಹೆಸರೂ ಕೇಳಿ ಬಂದ ಕಾರಣ ಭವಾನಿ ನಿರೀಕ್ಷಣಾ ಜಾಮೀನು ಕೋರಿದ್ದರು. ಇದನ್ನು ವಿಚಾರಣಾ ನ್ಯಾಯಾಲಯ ತಿರಸ್ಕರಿಸಿತ್ತು.

ಚೆಲುವನಾರಾಯಣ ಸ್ವಾಮಿಗೆ ₹75 ಲಕ್ಷದ ಚಿನ್ನ ನೀಡಿದ ವೃದ್ಧೆ

ಮೇಲುಕೋಟೆ (ಮಂಡ್ಯ ಜಿಲ್ಲೆ): ಇಲ್ಲಿನ ಚೆಲುವನಾರಾಯಣ ಸ್ವಾಮಿ ದೇವಾಲಯಕ್ಕೆ ಮೈಸೂರು ಕುವೆಂಪುನಗರದ ನಿವಾಸಿ, 70 ವರ್ಷದ ಡಾ. ಲಕ್ಷ್ಮಮ್ಮ ಅವರು ಸುಮಾರು ₹75 ಲಕ್ಷ ಮೌಲ್ಯದ ಚಿನ್ನಾಭರಣ ಕೊಡುಗೆಯಾಗಿ ನೀಡಿದ್ದಾರೆ. ಅವರು ಮೂಲತಃ ಇಲ್ಲಿಯವರೇ.

ಸ್ವಾಮಿಯ ಪರಮಭಕ್ತೆಯಾದ ಅವರು ತಮ್ಮ ನಿವಾಸದಲ್ಲಿ ಬಳಸಿದ ಚಿನ್ನ ಮತ್ತು ಬೆಳ್ಳಿಯ ಆಭರಣವನ್ನು ಎರಡು ಟ್ರಂಕ್‌ನಲ್ಲಿ ತುಂಬಿ ದೇವಾಲಯದ ಇಒ ಮಹೇಶ್ ಅವರಿಗೆ ಹಸ್ತಾಂತರ ಮಾಡಿದ್ದಾರೆ.

ಅಮರಾವತಿ ವಿಭಾಗೀಯ ಆಯುಕ್ತರ ವರದಿ

6 ತಿಂಗಳಲ್ಲಿ 557 ರೈತರ ಆತ್ಮಹತ್ಯೆ

ಅಮರಾವತಿ (ಪಿಟಿಐ): ಮಹಾರಾಷ್ಟ್ರದ ಅಮರಾವತಿ ಆಡಳಿತ ವಿಭಾಗದ ಐದು ಜಿಲ್ಲೆಗಳಲ್ಲಿ ಈ ವರ್ಷದ ಜನವರಿಯಿಂದ ಜೂನ್‌ವರೆಗೆ 557 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಅಧಿಕೃತ ವರದಿಯೊಂದು ತಿಳಿಸಿದೆ.



ಅಮರಾವತಿ ಜಿಲ್ಲೆಯಲ್ಲಿ 170 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರೆ, ಯವತ್ಮಾಲ್‌ನಲ್ಲಿ 150, ಬುಲ್ಡಾನದಲ್ಲಿ 111, ಅಕೋಲಾದಲ್ಲಿ 92 ಹಾಗೂ ವಾಶಿಮ್ ಜಿಲ್ಲೆಯಲ್ಲಿ 34 ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದು ಅಮರಾವತಿ ವಿಭಾಗೀಯ ಆಯುಕ್ತರು ಸಿದ್ಧಪಡಿಸಿರುವ ವರದಿಯಲ್ಲಿ ತಿಳಿಸಲಾಗಿದೆ.

53 ಪ್ರಕರಣಗಳಲ್ಲಿ ಮೃತರ ಕುಟುಂಬ ವರ್ಗಕ್ಕೆ ಸರ್ಕಾರ ನೆರವು ನೀಡಿದ್ದು, 284 ಪ್ರಕರಣಗಳು ತನಿಖೆಗಾಗಿ ಬಾಕಿ ಉಳಿದಿವೆ ಎಂದು ವರದಿಯು ತಿಳಿಸಿದೆ.

'ರೈತರು ಹೆಚ್ಚಿನ ಸಂಖ್ಯೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವ ರಾಜ್ಯಗಳಲ್ಲಿ ಮಹಾರಾಷ್ಟ್ರವೂ ಒಂದಾಗಿದೆ. ರಾಜ್ಯದಲ್ಲಿ ಅಮರಾವತಿ ಮೊದಲ ಸ್ಥಾನದಲ್ಲಿದೆ' ಎಂದು ಅಮರಾವತಿ ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸುತ್ತಿರುವ ಕಾಂಗ್ರೆಸ್ ನಾಯಕ ಬಲ್ವಂತ್ ವಾಂಖಡೆ ಅವರು ವರದಿಯಲ್ಲಿ ಉಲ್ಲೇಖಿಸಿರುವ ಅಂಕಿ–ಅಂಶಗಳಿಗೆ ಪ್ರತಿಕ್ರಿಯಿಸಿದ್ದಾರೆ.

'ಬೆಳೆ ನಷ್ಟ, ಮಳೆಯ ಕೊರತೆ, ಸಾಲದ ಹೊರೆ ಹಾಗೂ ಸಕಾಲಕ್ಕೆ ಸಿಗದ ಕೃಷಿ ಸಾಲ ರೈತರನ್ನು ಆತ್ಮಹತ್ಯೆಯತ್ತ ದೂಡುತ್ತಿವೆ. ಸರ್ಕಾರ ಸಂಕಷ್ಟದಲ್ಲಿರುವ ಬೇಸಾಯಗಾರರ ನೆರವಿಗೆ ಧಾವಿಸಬೇಕು. ಆದಾಯ ದ್ವಿಗುಣಗೊಳಿಸುವ ಭರವಸೆಯನ್ನು ಈಡೇರಿಸಬೇಕು' ಎಂದು ವಾಂಖಡೆ ಒತ್ತಾಯಿಸಿದ್ದಾರೆ.

'ರೈತರ ಆತ್ಮಹತ್ಯೆ ಗಂಭೀರ ಸಮಸ್ಯೆಯಾಗಿದೆ. ಕೃಷಿಕರ ಸಾವುಗಳನ್ನು ತಡೆಯಲು ಪರಿಹಾರ ಕಂಡುಕೊಳ್ಳುವ ಪ್ರಯತ್ನ ನಡೆದಿದೆ' ಎಂದು ರಾಜ್ಯ ಸರ್ಕಾರದ ವಸಂತರಾವ್ ನಾಯ್ಕ್ ಶೆಟ್ಕರಿ ಸ್ವಾವಲಂಬಿ ಮಿಷನ್‌ನ ಅಧ್ಯಕ್ಷ ನಿಲೇಶ್ ಹೆಲೊಂಡೆ ಪಾಟೀಲ್ ತಿಳಿಸಿದ್ದಾರೆ.

ಬಿಎಂಡಬ್ಲ್ಯು ಕಾರು ಅಪಘಾತ: ಪ್ರಕರಣ ಮುಚ್ಚಿ ಹಾಕಲು ಯತ್ನ: ಟೀಕೆ

ಕಾರು ಚಾಲನೆ: ಮಿಹಿರ್ ತಪ್ಪೊಪ್ಪಿಗೆ

ಮುಂಬೈ (ಪಿಟಿಐ): ಬಿಎಂಡಬ್ಲ್ಯು ಕಾರು ಅಪಘಾತ ಪ್ರಕರಣದ ಪ್ರಮುಖ ಆರೋಪಿ ಮಿಹಿರ್ ಶಾ, ಅಪಘಾತ ಸಂಭವಿಸಿದ ದಿನ ತಾನು ಕಾರು ಚಲಾಯಿಸುತ್ತಿದ್ದುದಾಗಿ ಬುಧವಾರ ನೀಡಿದ ತಪ್ಪೊಪ್ಪಿಗೆ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸದ್ಯ, ಅವರನ್ನು ನ್ಯಾಯಾಲಯವು ಜುಲೈ 16ರ ವರೆಗೆ ಪೊಲೀಸ್ ಕಸ್ಟಡಿಗೆ ಒಪ್ಪಿಸಿದೆ.

ಭಾನುವಾರ ನಸುಕಿನಲ್ಲಿ ಈ ಅಪಘಾತ ಸಂಭವಿಸಿದೆ. ಮಿಹಿರ್ ಮದ್ಯಪಾನ ಮಾಡಿ ಕಾರು ಚಲಾಯಿಸುತ್ತಿದ್ದ ಎನ್ನಲಾಗಿದ್ದು, ಕಾರು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಪರಿಣಾಮ ಹಿಂಬದಿ ಸವಾರರಾದ ಕಾವೇರಿ ನಖ್ವಾ (45) ಮೃತಪಟ್ಟಿದ್ದರು. ಅವರ ಪತಿ ಪ್ರದೀಪ್ ನಖ್ವಾ(50) ಅವರಿಗೆ ಗಾಯಗಳಾಗಿವೆ.

ಮಿಹಿರ್ ಅವರನ್ನು ಪೊಲೀಸರು ಮಂಗಳವಾರ ಬಂಧಿಸಿ, ಚೀಫ್ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಎಸ್.ಪಿ.ಭೋಸಲೆ ಅವರ ಮುಂದೆ ಹಾಜರುಪಡಿಸಿದ್ದರು.

ಮಿಹಿರ್ ವಿರುದ್ಧ ವರ್ಲಿ ಠಾಣೆ ಪೊಲೀಸರು ಭಾರತೀಯ ನ್ಯಾಯ ಸಂಹಿತೆ ಮತ್ತು ಮೋಟಾರು ವಾಹನಗಳ ಕಾಯ್ದೆಯ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಿಸಿ, ತನಿಖೆ ನಡೆಸುತ್ತಿದ್ದಾರೆ.

ಮಿಹಿರ್ ತಂದೆ, ಶಿವಸೇನಾ (ಶಿಂದೆ ಬಣ) ಮುಖಂಡ ರಾಜೇಶ್ ಶಾ ಅವರನ್ನು ಸಹ ನ್ಯಾಯಾಲಯ 15 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಕಾರು ಚಾಲಕ ಬಿದಾವತ್ ಅವರನ್ನು ಗುರುವಾರದ ವರೆಗೆ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದೆ.

ವಿಪಕ್ಷಗಳ ಟೀಕೆ: ಕಾರು ಅಪಘಾತ ಪ್ರಕರಣವನ್ನು ಮುಚ್ಚಿ ಹಾಕಲು ಸರ್ಕಾರ ಯತ್ನಿಸುತ್ತಿದೆ ಎಂದು ವಿಪಕ್ಷಗಳ ಒಕ್ಕೂಟ ಮಹಾ ವಿಕಾಸ ಅಘಾಡಿ (ಎಂವಿಎ) ಟೀಕಿಸಿದೆ.

ರಾಜೇಶ್ ಶಾ ವಜಾ

ಮುಂಬೈ (ಪಿಟಿಐ): ಬಿಎಂಡಬ್ಲ್ಯು ಕಾರು ಅಪಘಾತ ಪ್ರಕರಣದ ಪ್ರಮುಖ ಆರೋಪಿ ಮಿಹಿರ್ ಶಾ ಅವರ ತಂದೆ ರಾಜೇಶ್ ಶಾ ಅವರನ್ನು ಶಿವಸೇನಾದ ಉಪನಾಯಕ ಸ್ಥಾನದಿಂದ ವಜಾಗೊಳಿಸಲಾಗಿದೆ.

ಅಪಘಾತದ ಕುರಿತಂತೆ ಕಟು ಟೀಕೆಗಳು ವ್ಯಕ್ತವಾಗಿದ್ದರಿಂದ, ಶಿವಸೇನಾದ ಮುಖ್ಯಸ್ಥರೂ ಆಗಿರುವ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರು ಬುಧವಾರ ರಾಜೇಶ್ ಶಾ ಅವರನ್ನು ವಜಾಗೊಳಿಸಿ ಆದೇಶ ಹೊರಡಿಸಿದ್ದಾರೆ. ಆದರೆ ಪಕ್ಷದ ಸದಸ್ಯರಾಗಿ ಅವರು ಮುಂದುವರಿಯಲಿದ್ದಾರೆ.

ಮತ್ತೊಂದು ಹಿಟ್ ಆ್ಯಂಡ್ ರನ್ ಪ್ರಕರಣ

ನಾಸಿಕ್ (ಪಿಟಿಐ): ಮಹಾರಾಷ್ಟ್ರದಲ್ಲಿ ಮತ್ತೊಂದು ಹಿಟ್ ಆ್ಯಂಡ್ ರನ್ ಪ್ರಕರಣ ದಾಖಲಾಗಿದೆ. ವೇಗವಾಗಿ ಬಂದ ಕಾರೊಂದು 31 ವರ್ಷದ ಮಹಿಳೆಗೆ ಹಿಂದಿನಿಂದ ಗುದ್ದಿದ್ದು, ಅವರು ಮೃತಪಟ್ಟಿದ್ದಾರೆ.

ಮಂಗಳವಾರ ಸಂಜೆ ಅಪಘಾತ ಸಂಭವಿಸಿದ್ದು 51 ವರ್ಷದ ದೇವ್‌ಚಂದ್ ರಾಂಬಾವು ತಿದ್ಮೆ, ಕುಡಿದ ಅಮಲಿನಲ್ಲಿ ಚಾಲನೆ ಮಾಡುತ್ತಿದ್ದ. ಅಪಘಾತವಾದ ತಕ್ಷಣವೇ ದೇವ್‌ಚಂದ್ ಅವರು ಘಟನಾ ಸ್ಥಳದಿಂದ ಓಡಿ ಹೋಗಿ ಮನೆ ಸೇರಿಕೊಂಡಿದ್ದರು. ಅವರನ್ನು ಮನೆಯಿಂದಲೇ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ಖಾಸಗಿ ಕಂಪನಿಯ ಉದ್ಯೋಗಿಯಾಗಿರುವ ದೇವ್‌ಚಂದ್ ಅವರು ದ್ರುವ್‌ನಗರದ ನಿವಾಸಿ. ಕೆಲಸ ಮುಗಿಸಿ ಮನೆಗೆ ವಾಪಸ್ ಆಗುತ್ತಿದ್ದರು. ಮೃತ ಮಹಿಳೆ ಅರ್ಚನಾ ಕಿಶೋರಿ ಶಿಂದೆ ಅವರು ಹನಮಾನ್ ನಗರ ನಿವಾಸಿಯಾಗಿದ್ದು, ಸಂಜೆ 6 ಗಂಟೆಯ ವೇಳೆಗೆ ಮನೆಗೆ ತೆರಳುತ್ತಿದ್ದಾಗ ಅಪಘಾತ ಸಂಭವಿಸಿದೆ. ತಲೆಗೆ ತೀವ್ರ ಗಾಯಗಳಾಗಿದ್ದ ಅರ್ಚನಾ ಅವರನ್ನು ಹತ್ತಿರ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ, 'ಆಸ್ಪತ್ರೆಗೆ ಕರೆತರುವ ಮೊದಲೇ ಅರ್ಚನಾ ಮೃತಪಟ್ಟಿದ್ದಾರೆ' ಎಂದು ವೈದ್ಯರು ತಿಳಿಸಿದರು.

ಬಾರ್‌ನ ಅನಧಿಕೃತ ಭಾಗ ನೆಲಸಮ

ಮುಂಬೈ (ಪಿಟಿಐ): ವರ್ಲಿಯಲ್ಲಿ ಈಚೆಗೆ ಸಂಭವಿಸಿದ್ದ ಬಿಎಂಡಬ್ಲ್ಯು ಕಾರು ಅಪಘಾತ ಪ್ರಕರಣದ ಪ್ರಮುಖ ಆರೋಪಿ ಮಿಹಿರ್ ಶಾಗೆ, ನಿಯಮಾವಳಿ ಉಲ್ಲಂಘಿಸಿ ಮದ್ಯ ಸೇವಿಸಲು ಅವಕಾಶ ಮಾಡಿಕೊಟ್ಟಿದ್ದ ಬಾರ್‌ನ ಅನಧಿಕೃತ ನವೀಕರಣಗೊಂಡ ಭಾಗವನ್ನು ಬೃಹನ್‌ಮುಂಬೈ ಮಹಾನಗರ ಪಾಲಿಕೆ (ಬಿಎಂಸಿ) ಆಡಳಿತವು ಬುಧವಾರ ತೆರವುಗೊಳಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜುಹು ಉಪನಗರದಲ್ಲಿರುವ ವೈಸ್–ಗ್ಲೋಬಲ್ ತಪಸ್ ಬಾರ್ ವಿರುದ್ಧ ಕ್ರಮ ತೆಗೆದುಕೊಳ್ಳಲಾಗಿದೆ. 3,500 ಚದರಡಿ ಪ್ರದೇಶದಲ್ಲಿನ ಅನಧಿಕೃತ ನಿರ್ಮಾಣವನ್ನು ತೆರವುಗೊಳಿಸಲಾಗಿದೆ ಎಂದು ಹೇಳಿದ್ದಾರೆ.

ಉಪಚುನಾವಣೆ: ಅಮರವಾಡದಲ್ಲಿ ಶೇ 78.71ರಷ್ಟು ಮತದಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಶ್ಚಿಮ ಬಂಗಾಳ ಮತ್ತು ಉತ್ತರಾಖಂಡದ ಕೆಲವೆಡೆ ಹಿಂಸಾಚಾರ ಘಟನೆಗಳ ನಡುವೆಯೇ, ಬುಧವಾರ ಏಳು ರಾಜ್ಯಗಳ 13 ವಿಧಾನಸಭಾ ಕ್ಷೇತ್ರಗಳಿಗೆ ಉಪಚುನಾವಣೆ ನಡೆಯಿತು.

ಬುಧವಾರ ರಾತ್ರಿ 7.30ರ ವೇಳೆಗೆ ಮಧ್ಯಪ್ರದೇಶದ ಅಮರವಾಡ ವಿಧಾನಸಭೆ ಕ್ಷೇತ್ರದಲ್ಲಿ ಅತಿಹೆಚ್ಚು ಶೇ 78.71ರಷ್ಟು ಮತದಾನವಾಗಿದೆ. ಶೇ 77.73ರಷ್ಟು ಮತದಾನ ದಾಖಲಾದ ತಮಿಳುನಾಡಿನ ವಿಕ್ರವಂಡಿ ಕ್ಷೇತ್ರವು ಅತಿಹೆಚ್ಚು ಮತದಾನವಾದ ಪಟ್ಟಿಯಲ್ಲಿ 2ನೇ ಸ್ಥಾನ ಪಡೆದಿದೆ. ಉತ್ತರಾಖಂಡದ ಬದರಿನಾಥ ಕ್ಷೇತ್ರದಲ್ಲಿ ಶೇ 47.68ರಷ್ಟು ಮತದಾನವಾಗಿದ್ದು, ಇದು ಅತ್ಯಂತ ಕನಿಷ್ಠ ಮತದಾನದ ಪ್ರಮಾಣ ಎಂದು ಚುನಾವಣಾ ಆಯೋಗ ತಿಳಿಸಿದೆ.

ಪಶ್ಚಿಮ ಬಂಗಾಳದ ಬಗದಾಹ್‌ನಲ್ಲಿ ಶೇ 65.15, ರಾಣಾಘಾಟ್ ದಕ್ಷಿಣದಲ್ಲಿ ಶೇ 65.37, ರಾಯ್‌ಗಂಜ್‌ನಲ್ಲಿ ಶೇ 67.12 ಹಾಗೂ ಮಾಣಿಕ್‌ತಲದಲ್ಲಿ ಶೇ 51.39ರಷ್ಟು ಮತದಾನ ದಾಖಲಾಗಿದೆ.

ಪಶ್ಚಿಮ ಬಂಗಾಳದ ನಾಲ್ಕು ಕ್ಷೇತ್ರಗಳು, ಹಿಮಾಚಲ ಪ್ರದೇಶದ ಮೂರು, ಉತ್ತರಾಖಂಡದ ಎರಡು, ತಮಿಳುನಾಡು, ಪಂಜಾಬ್, ಮಧ್ಯಪ್ರದೇಶ ಮತ್ತು ಬಿಹಾರದಲ್ಲಿ ತಲಾ ಒಂದು ಕ್ಷೇತ್ರ ಸೇರಿ ಒಟ್ಟು 13 ಕ್ಷೇತ್ರಗಳಲ್ಲಿ ಉಪಚುನಾವಣೆ ನಡೆಯಿತು.

ಪಶ್ಚಿಮ ಬಂಗಾಳದ ಬಗದಾಹ್ ಮತ್ತು ರಾಣಾಘಾಟ್ ದಕ್ಷಿಣ ಕ್ಷೇತ್ರಗಳಲ್ಲಿ ಸಣ್ಣಪುಟ್ಟ ಹಿಂಸಾಚಾರ ಘಟನೆಗಳು ವರದಿಯಾಗಿವೆ. ಬಿಜೆಪಿ ಅಭ್ಯರ್ಥಿಗಳಾದ ಮನೋಜ್ ಕುಮಾರ್ ಬಿಸ್ವಾಸ್ (ರಾಣಾಘಾಟ್ ದಕ್ಷಿಣ) ಮತ್ತು ಬಿನಯ್ ಕುಮಾರ್ ಬಿಸ್ವಾಸ್ (ಬಗದಾಹ್) ಅವರು, ತಮಗೆ ಕೆಲವು ಮತಗಟ್ಟೆಗಳಿಗೆ ಭೇಟಿ ನೀಡಲು ಟಿಎಂಸಿ ಬಿಡಲಿಲ್ಲ ಎಂದು ದೂರಿದ್ದಾರೆ. ಆದರೆ, ಈ ಆರೋಪವನ್ನು ಟಿಎಂಸಿ ಅಲ್ಲಗಳೆದಿದೆ.

ಉತ್ತರಾಖಂಡದ ಮಂಗಲೌರ ದಲ್ಲಿರುವ ಮತಗಟ್ಟೆ ಬಳಿ ವಿವಿಧ ಪಕ್ಷಗಳ ಕಾರ್ಯಕರ್ತರ ನಡುವೆ ನಡೆದ ಗಲಾಟೆಯಲ್ಲಿ ನಾಲ್ವರು ಗಾಯಗೊಂಡಿದ್ದಾರೆ. ಈ ಹಿಂಸಾಚಾರವನ್ನು ಮಾಜಿ ಮುಖ್ಯಮಂತ್ರಿ ಹರೀಶ್ ರಾವತ್ ಸೇರಿದಂತೆ ಕಾಂಗ್ರೆಸ್ ಮುಖಂಡರು ಖಂಡಿಸಿದ್ದಾರೆ.

ಕೊಂಕಣ ರೈಲ್ವೆ ಮಾರ್ಗದಲ್ಲಿ ಹಲವು ರೈಲುಗಳ ಸಂಚಾರ ರದ್ದು

ರೈಲ್ವೆ ಸುರಂಗ ಜಲಾವೃತ: ಜನರ ಪರದಾಟ

ಪಣಜಿ (ಪಿಟಿಐ): ಭಾರಿ ಮಳೆಯ ಕಾರಣ ಗೋವಾದ ಪೆರ್ನೆಮ್ ಸುರಂಗದೊಳಗೆ ಹೆಚ್ಚು ಪ್ರಮಾಣದಲ್ಲಿ ನೀರು ನಿಂತಿದ್ದರಿಂದ ಕೊಂಕಣ ರೈಲ್ವೆ ಮಾರ್ಗದಲ್ಲಿ ರೈಲು ಸಂಚಾರ ಬುಧವಾರ ಬೆಳಿಗ್ಗೆ ಮತ್ತೊಮ್ಮೆ ಸ್ಥಗಿತವಾಗಿತ್ತು.

ಇದರ ಪರಿಣಾಮ, ಸಿಎಸ್‌ಎಂಟಿ ಮುಂಬೈನಿಂದ ಹೊರಡುವ ವಂದೇ ಭಾರತ್ ಎಕ್ಸ್‌ಪ್ರೆಸ್ ಸೇರಿದಂತೆ ಹಲವು ರೈಲುಗಳ ಸಂಚಾರ ರದ್ದಾಯಿತು. ಕೆಲ ರೈಲುಗಳಿಗೆ ಬದಲಿ ಮಾರ್ಗದಲ್ಲಿ ಸಂಚರಿಸಲು ಅವಕಾಶ ಮಾಡಿಕೊಡಲಾಯಿತು. ಇದರಿಂದ ಪ್ರಯಾಣಿಕರು ತೀವ್ರ ತೊಂದರೆ ಎದುರಿಸಿದರು.

ಮೂರು ದಿನಗಳಿಂದ ಗೋವಾದಲ್ಲಿ ಭಾರಿ ಮಳೆಯಾಗುತ್ತಿದೆ. ಬುಧವಾರ ಬೆಳಿಗ್ಗೆಯಿಂದ ಸಾಧಾರಣ ಪ್ರಮಾಣದಲ್ಲಿ ಮಳೆ ಸುರಿದಿದ್ದು, ಹವಾಮಾನ ಇಲಾಖೆಯು 'ರೆಡ್ ಅಲರ್ಟ್' ಘೋಷಿಸಿದೆ.

ಮಧುರೆ–ಪೆರ್ನೆಮ್ ವಿಭಾಗದ ನಡುವಿನ ಪೆರ್ನೆಮ್ ಸುರಂಗದೊಳಗೆ ಮಂಗಳವಾರ ಮಧ್ಯಾಹ್ನ 2.35 ಗಂಟೆಗೆ ನೀರು ಹರಿಯಲು ಪ್ರಾರಂಭಿಸಿ, ರೈಲು ಸಂಚಾರಕ್ಕೆ ಅಡಚಣೆಯಾಯಿತು. ಈ ನೀರನ್ನು ತೆರವುಗೊಳಿಸಿದ ಬಳಿಕ ರಾತ್ರಿ 10.13ಕ್ಕೆ ಸಂಚಾರ ಪುನರಾರಂಭವಾಗಿತ್ತು. ಆದರೆ ಬುಧವಾರ ನಸುಕಿನ 2.35ಕ್ಕೆ ಪುನಃ ಸುರಂಗದಲ್ಲಿ ಭಾರಿ ಪ್ರಮಾಣದಲ್ಲಿ ನೀರು ಸೇರಿತು ಎಂದು ಕೊಂಕಣ ರೈಲ್ವೆ ಕಾರ್ಪೊರೇಷನ್‌ನ ಅಧಿಕಾರಿಗಳು ತಿಳಿಸಿದ್ದಾರೆ.

ಕೆಲ ರೈಲುಗಳ ಸಂಚಾರ ಹಠಾತ್ತನೆ ರದ್ದಾಗಿದ್ದರಿಂದ ಪ್ರಯಾಣಿಕರು ತೀವ್ರ ಸಮಸ್ಯೆ ಎದುರಿಸಿದರು. ಗೋವಾ ಸಂಪರ್ಕಕ್ರಾಂತಿ ಎಕ್ಸ್‌ಪ್ರೆಸ್ ಅನ್ನು, ಅದು ಹೊರಡುವ ಎರಡು ಗಂಟೆಗಳ ಮುನ್ನ ರದ್ದುಗೊಳಿಸಲಾಯಿತು. ಹಿರಿಯ ನಾಗರಿಕರು ಸೇರಿದಂತೆ ಗುಜರಾತಿನ 200 ಪ್ರಯಾಣಿಕರ ಗುಂಪು ಈ ರೈಲಿನಲ್ಲಿ ಪ್ರಯಾಣಿಸಬೇಕಿತ್ತು. ಆದರೆ ಸಂಚಾರ ರದ್ದಾಗಿದ್ದು ಅವರ ಆತಂಕಕ್ಕೆ ಕಾರಣವಾಯಿತು.

'ನಮ್ಮ ಗುಂಪಿನಲ್ಲಿ 60 ಮಂದಿ ಹಿರಿಯ ನಾಗರಿಕರಿದ್ದಾರೆ. ರೈಲು ಸಂಚಾರ ರದ್ದಾಗಿದ್ದರಿಂದ ಏನು ಮಾಡಬೇಕು ಎಂಬುದು ತಿಳಿಯದಂತಾಗಿದೆ' ಎಂದು ಗುಂಪಿನ ಸದಸ್ಯ ಅಬ್ದುಲ್ ವಾಲೇಕರ್ ಬೇಸರ ವ್ಯಕ್ತಪಡಿಸಿದರು.

'ನಮ್ಮ ಗುಂಪು ದೊಡ್ಡದಿದ್ದು, ಗೋವಾದಲ್ಲಿ ಉಳಿಯುವುದು ಆರ್ಥಿಕ ಹೊರೆಯನ್ನು ಉಂಟು ಮಾಡುತ್ತದೆ. ಹೀಗಾಗಿ ನಮ್ಮ ಪ್ರಯಾಣಕ್ಕೆ ವ್ಯವಸ್ಥೆ ಮಾಡಿಕೊಡಿ' ಎಂದು ಮತ್ತೊಬ್ಬ ಸದಸ್ಯರು ಮನವಿ ರೈಲ್ವೆ ಅಧಿಕಾರಿಗಳಲ್ಲಿ ಮನವಿ ಮಾಡಿದರು.

'ಪೆರ್ನೆಮ್ ಸುರಂಗ ಮಾರ್ಗದಲ್ಲಿ ಸಂಚಾರ ಪುನರಾರಂಭಿಸಲು ಎಲ್ಲ ಪ್ರಯತ್ನ ನಡೆಯುತ್ತಿದೆ' ಎಂದು ಕೊಂಕಣ ರೈಲ್ವೆಯ ಉಪ ಪ್ರಧಾನ ವ್ಯವಸ್ಥಾಪಕ ಬಾಬನ್ ಘಾಟ್ಗೆ ಪ್ರತಿಕ್ರಿಯಿಸಿದ್ದಾರೆ.



ಭಾರಿ ಮಳೆಯ ಕಾರಣ ಗೋವಾದ ಪೆರ್ನೆಮ್ ಸುರಂಗದೊಳಗೆ ನುಗ್ಗಿದ್ದ ನೀರನ್ನು ಹೊರಹಾಕಲು ಸಿಬ್ಬಂದಿ ಶ್ರಮಿಸಿದರು – ಪಿಟಿಐ ಚಿತ್ರ

ಬಿಹಾರ: ಮತ್ತೊಂದು ಸೇತುವೆ ಕುಸಿತ

ಸಹರಸಾ (ಬಿಹಾರ): ಬಿಹಾರದಲ್ಲಿ ಬುಧವಾರ ಮತ್ತೊಂದು ಸೇತುವೆ ಕುಸಿದಿದೆ. ಇದರೊಂದಿಗೆ ಮೂರು ವಾರಗಳಲ್ಲಿ 13 ಸೇತುವೆಗಳು ಕುಸಿದಂತಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಬುಧವಾರ ಸಹರಸಾ ಜಿಲ್ಲೆಯ ಮಹಿಷಿ ಗ್ರಾಮದ ಸಮೀಪ ಇದ್ದ ಸೇತುವೆ ಕುಸಿದಿದೆ ಎಂದು ತಿಳಿಸಿದರು. ಘಟನೆಯಲ್ಲಿ ಯಾವುದೇ ಹಾನಿಯಾದ ಬಗ್ಗೆ ವರದಿಯಾಗಿಲ್ಲ.

'ಇದು ಸಣ್ಣ ಸೇತುವೆ. ಅಧಿಕಾರಿಗಳು ಸ್ಥಳಕ್ಕೆ ತೆರಳಿ ಘಟನೆ ಬಗ್ಗೆ ಪರಿಶೀಲಿಸಿದ್ದಾರೆ' ಎಂದು ಹೆಚ್ಚುವರಿ ಜಿಲ್ಲಾಧಿಕಾರಿ ಜ್ಯೋತಿ ಕುಮಾರ್ ಹೇಳಿದರು.

ಸೇತುವೆ ಕುಸಿತದ ಪ್ರಕರಣಗಳಿಗೆ ಸಂಬಂಧಿಸಿದಂತೆ ಬಿಹಾರ ಸರ್ಕಾರ 15 ಮಂದಿ ಇಂಜಿನಿಯರ್‌ಗಳನ್ನು ಅಮಾನತು ಮಾಡಿದೆ.

ವಿಧಾನಸಭೆ ಚುನಾವಣೆ ಹೊಸ್ತಿಲಲ್ಲಿ ಪಕ್ಷಕ್ಕೆ ಹಿನ್ನಡೆ

ಎಎಪಿ ಶಾಸಕ, ಮಾಜಿ ಸಚಿವ ಬಿಜೆಪಿಗೆ

ನವದೆಹಲಿ (ಪಿಟಿಐ): ಆಮ್ ಆದ್ಮಿ ಪಕ್ಷ (ಎಎಪಿ) ಶಾಸಕ ಕರ್ತಾರ್ ಸಿಂಗ್ ತನ್ವರ್ ಹಾಗೂ ಮಾಜಿ ಸಚಿವ ರಾಜ್ ಕುಮಾರ್ ಆನಂದ್ ಅವರು ಬುಧವಾರ ಬಿಜೆಪಿ ಸೇರಿದ್ದಾರೆ.

ರಾಜ್ ಕುಮಾರ್ ಆನಂದ್ ಅವರು ಲೋಕಸಭೆ ಚುನಾವಣೆ ವೇಳೆ ಎಎಪಿ ತೊರೆದು ಬಿಎಸ್‌ಪಿಯಿಂದ ಸ್ಪರ್ಧಿಸಿ ಪರಾಭವಗೊಂಡಿದ್ದರು. ಇದೀಗ ಅವರು ಬಿಜೆಪಿ ಸೇರಿದ್ದಾರೆ.

ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಜೈಲು ಸೇರಿದ್ದರೆ, ಇತ್ತ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಂಡಿವೆ ಎಂದು ಆರೋಪಿಸಿ ಎಎಪಿ ನಾಯಕರು ಪಕ್ಷವನ್ನು ತೊರೆದಿದ್ದಾರೆ. ಇದರಿಂದ ದೆಹಲಿ ವಿಧಾನಸಭೆ ಚುನಾವಣೆಗೆ ಕೆಲವೇ ತಿಂಗಳುಗಳು ಬಾಕಿ ಇರುವಾಗ ಎಎಪಿಗೆ ಹಿನ್ನಡೆಯಾಗಿದೆ.

ಆನಂದ್, ತನ್ವರ್ ಹಾಗೂ ಆನಂದ್ ಪತ್ನಿ, ಎಎಪಿಯ ಮಾಜಿ ಶಾಸಕಿ ವೀಣಾ ಆನಂದ್, ಎಎಪಿ ಕೌನ್ಸಿಲರ್ ಉಮೇದ್ ಸಿಂಗ್ ಫೋಗಟ್, ಹಿಮಾಚಲ ಪ್ರದೇಶದ ಪಕ್ಷದ ಉಸ್ತುವಾರಿ ರತ್ನೇಶ್ ಗುಪ್ತಾ, ಸಹ ಉಸ್ತುವಾರಿ ಸಚಿನ್ ರಾಯ್ ಅವರೆಲ್ಲರೂ ಬಿಜೆಪಿಯ ದೆಹಲಿ ಘಟಕದ ಅಧ್ಯಕ್ಷ ವೀರೇಂದ್ರ ಸಚ್‌ದೇವ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅರುಣ್ ಸಿಂಗ್ ಮತ್ತು ರಾಷ್ಟ್ರೀಯ ಮಾಧ್ಯಮ ಸಹ ಮುಖ್ಯಸ್ಥ ಡಾ. ಸಂಜಯ್ ಮಾಯುಖ್ ಅವರ ಸಮ್ಮುಖದಲ್ಲಿ ಬಿಜೆಪಿ ಸೇರಿದರು.

ಇವರನ್ನು ಪಕ್ಷಕ್ಕೆ ಸ್ವಾಗತಿಸಿದ ಸಚ್‌ದೇವ, ಜನರು ಎಎಪಿಯ ಹಗರಣಗಳು ಮತ್ತು ಭ್ರಷ್ಟಾಚಾರದಿಂದ ಬೇಸತ್ತಿದ್ದಾರೆ. ದೆಹಲಿಯಲ್ಲಿ ಅದರ ಆಡಳಿತವು ಕೊನೆಗೊಳ್ಳುತ್ತಿದೆ ಎಂದು ಕಿಡಿಕಾರಿದರು.

ಇಬ್ಬರೂ ಎಎಪಿ ನಾಯಕರು ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿ ಮತ್ತು ನಾಯಕತ್ವವನ್ನು ಶ್ಲಾಘಿಸಿದರು.

ಅಭಿವೃದ್ಧಿ ಕಾಮಗಾರಿಗಳ ಕುಂಠಿತ, ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳಿಂದಾಗಿ ದೆಹಲಿಯು 'ನರಕ'ವಾಗಿ ಮಾರ್ಪಟ್ಟಿದೆ ಎಂದು ತನ್ವರ್ ಕಿಡಿಕಾರಿದರು.

'ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ದಲಿತರ ಸಮಸ್ಯೆಗಳನ್ನು ನಿರ್ಲಕ್ಷಿಸಿದ್ದಾರೆ. ಬಿಜೆಪಿ ಸೇರುವ ನನ್ನ ಪ್ರಾಥಮಿಕ ಗುರಿಯು ಪ್ರಧಾನಿ ನರೇಂದ್ರ ಮೋದಿ ಅವರ ದೃಷ್ಟಿಯನ್ನು ನೇರವಾಗಿ ದೆಹಲಿ ಜನರೊಂದಿಗೆ ಸಂಪರ್ಕಿಸುವುದಾಗಿದೆ. ಸಚಿವನಾಗಿ ದಲಿತರ ಕಲ್ಯಾಣಕ್ಕೆ ಒತ್ತು ನೀಡಿದ್ದೇನೆ. ಕೇಜ್ರಿವಾಲ್ ಅವರ ಮುಂದೆ ಈ ಕುರಿತು ನನ್ನ ಇಚ್ಛೆಯನ್ನು ತಿಳಿಸಿದಾಗಲೆಲ್ಲ ಅವರು ಅದನ್ನು ನಿರ್ಲಕ್ಷಿಸಿದ್ದಾರೆ' ಎಂದು ಆನಂದ್ ಹೇಳಿದರು.

ಎಎಪಿ ಸರ್ಕಾರದ ಅವಧಿಯಲ್ಲಿ ಕಳೆದ 9 ವರ್ಷಗಳಿಂದ ದಲಿತರ ಕಲ್ಯಾಣಕ್ಕೆ ಮೀಸಲಿಡಲಾಗಿದ್ದ ನಿಧಿಯನ್ನು ಬೇರೆ ಉದ್ದೇಶಗಳಿಗಾಗಿ ಬಳಸಲಾಗಿದೆ. ದಲಿತರ ಕಲ್ಯಾಣದ ಹೆಸರಿನಲ್ಲಿ ಪಂಜಾಬ್‌ನಲ್ಲಿ ಆಡಳಿತಕ್ಕೆ ಬಂದಿರುವ ಎಎಪಿ ಅಲ್ಲಿಂದ 10 ಸದಸ್ಯರನ್ನು ರಾಜ್ಯಸಭೆಗೆ ಕಳುಹಿಸಿದರೂ ಒಬ್ಬ ದಲಿತನನ್ನು ನಾಮನಿರ್ದೇಶನ ಮಾಡಿಲ್ಲ. ಕೇಜ್ರಿವಾಲ್ ಮತ್ತು ಎಎಪಿಯಿಂದ ದಲಿತರ ನಂಬಿಕೆಗೆ ದ್ರೋಹವಾಗಿದೆ ಎಂದು ಆರೋಪಿಸಿದರು.

ಆದರೆ ಮೋದಿ ಸರ್ಕಾರದ ಅಭಿವೃದ್ಧಿ ಕಾರ್ಯಗಳಿಂದಾಗಿ ದೆಹಲಿಯ ಎಲ್ಲಾ 7 ಲೋಕಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದೆ ಎಂದು ಅರುಣ್ ಸಿಂಗ್ ಹೇಳಿದರು.

ಉನ್ನಾವೊ: ಪ್ರಯಾಣಿಕರು ನಿದ್ರೆಯಲ್ಲಿದ್ದಾಗ ಅಪಘಾತ • ಆಗ್ರಾ–ಲಖನೌ ಎಕ್ಸ್‌ಪ್ರೆಸ್ ವೇನಲ್ಲಿ ದುರಂತ

ಹಾಲಿನ ಟ್ಯಾಂಕರ್‌ಗೆ ಬಸ್ ಡಿಕ್ಕಿ– 18 ಸಾವು

ಉನ್ನಾವೊ (ಪಿಟಿಐ): ಡಬಲ್ ಡೆಕ್ಕರ್ ಸ್ಲೀಪರ್ ಬಸ್, ಹಾಲಿನ ಟ್ಯಾಂಕರ್‌ಗೆ ಗುದ್ದಿದ ಪರಿಣಾಮ 18 ಮಂದಿ ಮೃತಪಟ್ಟು, 19 ಮಂದಿ ಗಾಯಗೊಂಡ ಘಟನೆ ಆಗ್ರಾ–ಲಖನೌ ಎಕ್ಸ್‌ಪ್ರೆಸ್ ವೇನಲ್ಲಿ ಬುಧವಾರ ನಡೆದಿದೆ ಎಂದು ಅಧಿಕಾರಿಗಳು ತಿಳಿಸಿದರು.

ಮುಂಜಾನೆ 5 ಗಂಟೆ ಸುಮಾರಿಗೆ ಉತ್ತರ ಪ್ರದೇಶದ ಉನ್ನಾವೊ ಜಿಲ್ಲೆಯ ಜೋಜಿಕೋಟ ಗ್ರಾಮದ ಸಮೀಪ ಈ ದುರಂತ ನಡೆದಿದೆ.

ಜಿಲ್ಲಾ ಮ್ಯಾಜಿಸ್ಟ್ರೇಟ್ ಗೌರಂಗ್ ರಾಠಿ ಅವರು, 'ಬಿಹಾರದ ಮೋತಿಹಾರಿಯಿಂದ ದೆಹಲಿಯತ್ತ ತೆರಳುತ್ತಿದ್ದ ಬಸ್, ಹಾಲಿನ ಟ್ಯಾಂಕರ್‌ಗೆ ಹಿಂದಿನಿಂದ ಗುದ್ದಿದ ಪರಿಣಾಮ ಮೇಲ್ನೋಟಕ್ಕೆ ಕಾಣುತ್ತಿದೆ. ಘಟನೆಗೆ ಸಂಬಂಧಿಸಿದಂತೆ ತನಿಖೆ ಪ್ರಗತಿಯಲ್ಲಿದೆ' ಎಂದು ಹೇಳಿದರು.

'ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ತಿಳಿಸಿದರು.

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಎಸ್.ಬಿ. ಶಿರಾಡ್ಕರ್ ಅವರು, 'ಮೃತರಲ್ಲಿ 14 ಮಂದಿ ಪುರುಷರು, ಮೂವರು ಮಹಿಳೆಯರು ಮತ್ತು ಒಂದು ಮಗು ಸೇರಿದೆ' ಎಂದು ತಿಳಿಸಿದರು.

'ವೇಗವಾಗಿ ಬಂದ ಬಸ್ ಗುದ್ದಿದ ರಭಸಕ್ಕೆ ಬಸ್ ಮತ್ತು ಟ್ಯಾಂಕರ್ ಎರಡೂ ಮಗುಚಿ ಬಿದ್ದಿವೆ. ಅಪಘಾತದಲ್ಲಿ ಚಾಲಕರಿಬ್ಬರೂ ಮೃತಪಟ್ಟಿದ್ದಾರೆ' ಎಂದು ಅಧಿಕಾರಿಯೊಬ್ಬರು ಹೇಳಿದರು.

ಮೃತರ ಪೈಕಿ 14 ಮಂದಿಯ ಗುರುತನ್ನು ಪೊಲೀಸರು ಪತ್ತೆ ಮಾಡಿದ್ದಾರೆ. ಇವರಲ್ಲಿ ಬಹುತೇಕರು ಶಿವಗಢದ ನಿವಾಸಿಗಳು. ಅಪಘಾತದಿಂದ ಬಸ್ ಮತ್ತು ಟ್ಯಾಂಕರ್‌ನ ಬಹುತೇಕ ಭಾಗ ನಜ್ಜುಗುಜ್ಜಾಗಿದೆ.

'ನಿದ್ದೆಯಲ್ಲಿದ್ದಾಗ ದುರಂತ': ಅಪಘಾತದಲ್ಲಿ ಗಾಯಗೊಂಡಿರುವ ಪ್ರಯಾಣಿಕ ಮೊಹಮ್ಮದ್ ಶಮೀಮ್, 'ನಾನು ನಿದ್ರಿಸುತ್ತಿದ್ದೆ, ಏನಾಯಿತು ಎಂದು ತಿಳಿಯಲಿಲ್ಲ' ಎಂದು ಹೇಳಿದರು. ಮತ್ತೊಬ್ಬ ಪ್ರಯಾಣಿಕ ದಿಲ್‌ಶಾದ್, 'ಕುಟುಂಬದ ಎಂಟು ಮಂದಿ ಪ್ರಯಾಣಿಸುತ್ತಿದ್ದೆವು. ಆರು ಜನರ ಹಣೆಬರಹ ಏನಾಗಿದೆ ಗೊತ್ತಿಲ್ಲ' ಎಂದು ದುಃಖ ವ್ಯಕ್ತಪಡಿಸಿದರು.



ಅಪಘಾತದಿಂದಾಗಿ ಬಸ್ ನಜ್ಜುಗುಜ್ಜಾಗಿದೆ —ಪಿಟಿಐ ಚಿತ್ರ

ಸರ್ಕಾರಕ್ಕೆ ಚಾಟಿ ಬೀಸಿದ ಅಖಿಲೇಶ್ ಯಾದವ್

ಘಟನೆ ಬೆನ್ನಲ್ಲೇ ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಬಿಜೆಪಿ ನೇತೃತ್ವದ ಸರ್ಕಾರಕ್ಕೆ ಸರಣಿ ಪ್ರಶ್ನೆಗಳನ್ನು ಕೇಳಿದ್ದಾರೆ.

'ಹೆದ್ದಾರಿ ಪೊಲೀಸರು ಎಲ್ಲಿ? ಆಗಾಗ ಗಸ್ತು ತಿರುಗುವುದಿಲ್ಲವೇ? ಆಂಬುಲೆನ್ಸ್ ನೆರವು ಒದಗಿಸಲು ಎಷ್ಟು ಸಮಯ ಬೇಕಾಯಿತು' ಎಂದು ಪ್ರಶ್ನಿಸಿದ್ದಾರೆ. 'ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ನಿತ್ಯವೂ ಕೋಟಿಗಟ್ಟಲೆ ಹಣ ಸಂಗ್ರಹಿಸಲಾಗುತ್ತದೆ. ಈ ಹಣ ಎಲ್ಲಿ ಹೋಗುತ್ತದೆ' ಎಂದು ಕೇಳಿದ್ದಾರೆ.

ಅಗತ್ಯ ನೆರವು ನೀಡಿ– ಖರ್ಗೆ: ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಅಪಘಾತದಲ್ಲಿ ಮೃತಪಟ್ಟವರಿಗೆ ಸಂತಾಪ ಸೂಚಿಸಿದ್ದಾರೆ.

ಸಂತ್ರಸ್ತ ಕುಟುಂಬಗಳಿಗೆ ಅಗತ್ಯ ನೆರವು ನೀಡುವಂತೆ ಸರ್ಕಾರ ಮತ್ತು ವಿರೋಧ ಪಕ್ಷಗಳ ಒಕ್ಕೂಟ 'ಇಂಡಿಯಾ' ಕಾರ್ಯಕರ್ತರಿಗೆ 'ಎಕ್ಸ್'ನಲ್ಲಿ ಕರೆ ನೀಡಿದ್ದಾರೆ.

ಮೃತರ ಕುಟುಂಬಸ್ಥರಿಗೆ ಪರಿಹಾರ

ರಾಷ್ಟ್ರಪತಿ ದ್ರೌಪದಿ ಮುರ್ಮು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಘಟನೆ ಬಗ್ಗೆ ದುಃಖ ವ್ಯಕ್ತಪಡಿಸಿದ್ದಾರೆ. ಪ್ರಧಾನಿ ಮೋದಿ ಮೃತರ ಕುಟುಂಬಸ್ಥರಿಗೆ ತಲಾ ₹2 ಲಕ್ಷ ಹಾಗೂ ಗಾಯಾಳುಗಳಿಗೆ ತಲಾ ₹50,000 ಪರಿಹಾರ ಘೋಷಿಸಿದ್ದಾರೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು, 'ಉನ್ನಾವೊ ಜಿಲ್ಲೆಯಲ್ಲಿ ನಡೆದ ಅಪಘಾತದಲ್ಲಿ ಕೆಲವರು ಪ್ರಾಣ ಕಳೆದುಕೊಂಡಿರುವುದು ತಿಳಿದು ತೀವ್ರ ದುಃಖವಾಗಿದೆ. ಘಟನಾ ಸ್ಥಳಕ್ಕೆ ತೆರಳಿ ಅಗತ್ಯ ನೆರವು ಒದಗಿಸುವಂತೆ ಜಿಲ್ಲಾಡಳಿತಕ್ಕೆ ಸೂಚನೆ ನೀಡಿದ್ದೇನೆ. ಗಾಯಾಳುಗಳು ಶೀಘ್ರ ಗುಣಮುಖರಾಗಲಿ ಎಂದು ಪ್ರಾರ್ಥಿಸುತ್ತೇನೆ' ಎಂದು 'ಎಕ್ಸ್'ನಲ್ಲಿ ಹೇಳಿದ್ದಾರೆ.

ಸುದ್ದಿ 2 ನಿಮಿಷ

ಕುಲಪತಿಗಳೇ ಕಾನೂನು ವೆಚ್ಚ ಭರಿಸಬೇಕು: ಕೇರಳ ರಾಜ್ಯಪಾಲ

ತಿರುವನಂತಪುರ (ಪಿಟಿಐ): ವಿಶ್ವವಿದ್ಯಾಲಯಗಳ ಕುಲಾಧಿಪತಿಯೂ ಆಗಿರುವ ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರು, ತಮ್ಮ ಆದೇಶದ ವಿರುದ್ಧ ದಾವೆ ಹೂಡುವ ವಿಶ್ವವಿದ್ಯಾಲಯಗಳ ಕುಲಪತಿಗಳು ಮತ್ತು ಇತರ ಅಧಿಕಾರಿಗಳು ತಾವೇ ಕಾನೂನು ಹೋರಾಟದ ವೆಚ್ಚವನ್ನು ಭರಿಸಬೇಕು ಎಂದು ನಿರ್ದೇಶನ ನೀಡಿದ್ದಾರೆ.

ಕಣ್ಣೂರು, ಕ್ಯಾಲಿಕಟ್ ವಿಶ್ವವಿದ್ಯಾಲಯ ಸೇರಿದಂತೆ ಇತರ ವಿಶ್ವವಿದ್ಯಾಲಯಗಳಿಗೆ ರಾಜ್ಯಪಾಲರು ಹೊರಡಿಸಿರುವ ನಿರ್ದೇಶನದಲ್ಲಿ, ಅಂತಹ ಪ್ರಕರಣಗಳಲ್ಲಿನ ಕಾನೂನು ವೆಚ್ಚಗಳಿಗೆ ವಿ.ವಿಗಳು ಹಣವನ್ನು ಮಂಜೂರು ಮಾಡುವುದು ಸಮರ್ಥನೀಯವಲ್ಲ ಮತ್ತು ಅದು ವಿ.ವಿ ನಿಧಿಯ ದುರ್ಬಳಕೆ ಆಗುತ್ತದೆ ಎಂದು ಉಲ್ಲೇಖಿಸಿದ್ದಾರೆ.

ವಿಶ್ವವಿದ್ಯಾಲಯಗಳ ಅಧಿಕಾರಿಗಳು ತಮ್ಮ ವೈಯಕ್ತಿಕ ಹಿತಾಸಕ್ತಿಗಳ ರಕ್ಷಣೆ ಮತ್ತು ಅದನ್ನು ಉತ್ತೇಜಿಸಲು ಯತ್ನಿಸುತ್ತಿದ್ದಾರೆ. ಹೀಗಾಗಿ ಕುಲಪತಿಗಳು ಮತ್ತು ಇತರ ಅಧಿಕಾರಿಗಳಿಗೆ ಕಾನೂನು ವೆಚ್ಚವನ್ನು ಭರಿಸಲು ವಿಶ್ವವಿದ್ಯಾಲಯ ಯಾವುದೇ ಕ್ರಮ ತೆಗೆದುಕೊಳ್ಳಬಾರದು ಎಂದು ಅವರು ಸೂಚಿಸಿದ್ದಾರೆ.

ಒಂದು ವೇಳೆ ಅಂತಹ ಯಾವುದೇ ಪಾವತಿಗಳನ್ನು ಈಗಾಗಲೇ ಮಾಡಿದ್ದರೆ, ಆ ಮೊತ್ತವನ್ನು ಸಂಬಂಧಿಸಿದ ಅಧಿಕಾರಿಯಿಂದ ತಕ್ಷಣವೇ ವಸೂಲಿ ಮಾಡಲಾಗುತ್ತದೆ ಎಂದು ಖಾನ್ ಅವರು ಜುಲೈ 9ರಂದು ವಿಶ್ವವಿದ್ಯಾಲಯಗಳಿಗೆ ನಿರ್ದೇಶಿಸಿದ್ದಾರೆ. ಅಲ್ಲದೆ ಈ ಸಂಬಂಧ ಸ್ಥಿತಿಗತಿ ವರದಿ ಸಲ್ಲಿಸುವಂತೆಯೂ ವಿ.ವಿಗಳಿಗೆ ಅವರು ಸೂಚಿಸಿದ್ದಾರೆ.



ಮಣಿಪುರದ 4 ಜಿಲ್ಲೆಗಳು ಸ್ತಬ್ಧ

ಇಂಫಾಲ್ (ಚುರ್‌ಚಾಂದ್‌ಪುರ)ಪಿಟಿಐ: ಕುಕಿ ಸಮುದಾಯಕ್ಕೆ ಸೇರಿದ ನಾಲ್ವರನ್ನು ಬಂಧಿಸಿರುವುದನ್ನು ಖಂಡಿಸಿ ಬುಧವಾರ 12 ಗಂಟೆ ನಡೆದ ಬಂದ್‌ನಿಂದಾಗಿ ಮಣಿಪುರದ ನಾಲ್ಕು ಜಿಲ್ಲೆಗಳಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿತ್ತು.

'ಚುರ್‌ಚಾಂದ್‌ಪುರ, ಕಾಂಗ್ಪೋಕ್ಪಿ, ಫೆರ್ಝಾವಾಲ್ ಮತ್ತು ತೆಂಗ್‌ನೌಪಲ್ ಜಿಲ್ಲೆಗಳಲ್ಲಿ ಮಾರುಕಟ್ಟೆಗಳು, ಶಿಕ್ಷಣ ಸಂಸ್ಥೆಗಳು ಮತ್ತು ಬ್ಯಾಂಕ್‌ಗಳು ಬಾಗಿಲು ತೆರೆಯಲಿಲ್ಲ. ಸರ್ಕಾರಿ ಕಚೇರಿಗಳಲ್ಲೂ ಕಡಿಮೆ ಹಾಜರಾತಿ ಇತ್ತು' ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಚುರ್‌ಚಾಂದ್‌ಪುರ, ಕಾಂಗ್ಪೋಕ್ಪಿಗಳಲ್ಲಿ ಬಿಗಿ ಬಂದೋಬಸ್ತ್ ನಡೆಸಲಾಗಿದ್ದು, ಯಾವುದೇ ಅಹಿತಕರ ಘಟನೆಗಳು ನಡೆದಿಲ್ಲ.

ಭದ್ರತೆಯ ದೃಷ್ಟಿಯಿಂದ ಜಿರಿಬಾಮ್‌ನ ಇಬ್ಬರನ್ನು ಮತ್ತು ಕಾಂಗ್ಪೋಕ್ಪಿಯ ಮೂವರನ್ನು ಪೊಲೀಸರು ಬಂಧಿಸಿದ್ದರು. ಈ ಬಗ್ಗೆ ಕುಕಿ ಸಮುದಾಯ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

ಕಳೆದ ವರ್ಷ ಮೇ ತಿಂಗಳಿನಿಂದ ಮಣಿಪುರದಲ್ಲಿ ನಡೆದ ಜನಾಂಗೀಯ ಹಿಂಸಾಚಾರದಿಂದ 200ಕ್ಕೂ ಅಧಿಕ ಜನ ಮೃತಪಟ್ಟಿದ್ದು, ಸಾವಿರಾರು ಜನ ನಿರಾಶ್ರಿತರಾಗಿದ್ದಾರೆ.

ಪಿಒಕೆ: ಕಂದಕಕ್ಕೆ ಉರುಳಿದ ಜೀಪ್ 14 ಮಂದಿ ಸಾವು

ಮುಜಾಫ್ಫರಾಬಾದ್ (ಎಪಿ): ಪಾಕ್ ಆಕ್ರಮಿತ ಕಾಶ್ಮೀರದ ಗುಡ್ಡಗಾಡು ರಸ್ತೆಯಿಂದ ಜೀಪ್ ಉರುಳಿ ಕಂದಕಕ್ಕೆ ಬಿದ್ದಿದ್ದು, ದುರಂತದಲ್ಲಿ 14 ಮಂದಿ ಮೃತಪಟ್ಟು, ಇಬ್ಬರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದರು.

ನೀಲಂ ಕಣಿವೆಯಲ್ಲಿ ಬುಧವಾರ ಘಟನೆ ನಡೆದಿದೆ ಎಂದು ಸರ್ಕಾರಿ ಅಧಿಕಾರಿ ನದೀಮ್ ಜಂಜುವಾ ಹೇಳಿದರು.

'ರಕ್ಷಣಾ ಪಡೆಯು ಮೃತದೇಹಗಳನ್ನು ಹೊರತಂದಿದೆ. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಅಪಘಾತಕ್ಕೆ ಕಾರಣ ಏನೆಂದು ಇನ್ನಷ್ಟೆ ಪತ್ತೆ ಮಾಡಬೇಕಿದೆ' ಎಂದು ಹೇಳಿದರು.

'ಗೃಹಿಣಿಯರಿಗೆ ಆರ್ಥಿಕ ಭದ್ರತೆ ಅಗತ್ಯ'

ಪ್ರಜಾವಾಣಿ ವಾರ್ತೆ



ನ್ಯಾ. ನಾಗರತ್ನ

ನವದೆಹಲಿ: 'ಭಾರತದಲ್ಲಿ ವಿವಾಹಿತ ಮಹಿಳೆಯರ ಆರ್ಥಿಕ ಸಬಲೀಕರಣ ಮತ್ತು ಅವರಿಗೆ ಆರ್ಥಿಕ ಸ್ಥಿರತೆಯನ್ನು ಒದಗಿಸುವ ಅಗತ್ಯವಿದೆ' ಎಂದು ಸುಪ್ರೀಂ ಕೋರ್ಟ್ ಬುಧವಾರ ಒತ್ತಿಹೇಳಿದೆ.

ವಿಚ್ಛೇದನ ಪಡೆದ ಮುಸ್ಲಿಂ ಮಹಿಳೆಯರಿಗೆ ಕಾನೂನು ಪ್ರಕಾರ ಜೀವನಾಂಶ ನೀಡುವ ಕುರಿತ ಪ್ರಕರಣದ ತೀರ್ಪಿನಲ್ಲಿ ಕೋರ್ಟ್ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ.

ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅವರು ತಮ್ಮ ತೀರ್ಪಿನಲ್ಲಿ, 'ಕುಟುಂಬದ ಅರ್ಥವ್ಯವಸ್ಥೆ ಉತ್ತಮಪಡಿಸಲು ಹಾಗೂ ದೇಶದ ಆರ್ಥಿಕತೆಗೆ ದುಡಿಯುತ್ತಿರುವ ಗೃಹಿಣಿಯರ ಸೇವೆ ಮತ್ತು ತ್ಯಾಗವನ್ನು ಗುರುತಿಸಲು ಬದಲಾವಣೆಯ ತುರ್ತು ಅಗತ್ಯವಿದೆ' ಎಂದು ಪ್ರತಿಪಾದಿಸಿದರು.

ಸ್ವತಂತ್ರವಾದ ಆದಾಯದ ಮೂಲವಿಲ್ಲದ ಹಾಗೂ ಹಣಕಾಸು ಪಡೆಯುವ ಸಹಜ ಅವಕಾಶವಿಲ್ಲದ, ಮುಖ್ಯವಾಗಿ ವೈಯಕ್ತಿಕವಾದ ಖರ್ಚು, ವೆಚ್ಚವನ್ನೂ ನಿಭಾಯಿಸಲು ಆಗದ ಗೃಹಿಣಿಯರ ದುರ್ಬಲ ಸ್ಥಿತಿಯನ್ನು ಅವರು ಉಲ್ಲೇಖಿಸಿದರು.

ಸ್ವತಂತ್ರ ಆದಾಯವಿಲ್ಲದ ಪತ್ನಿಯನ್ನು ಆರ್ಥಿಕವಾಗಿ ಸಬಲೀಕರಣಗೊಳಿಸಬೇಕು ಎಂಬ ವಾಸ್ತವ ಕುರಿತ ಪ್ರಜ್ಞಾವಂತಿಕೆಯನ್ನು ಭಾರತದ ವಿವಾಹಿತ ಪುರುಷರೂ ಹೊಂದಬೇಕು. ಆರ್ಥಿಕ ಸಬಲೀಕರಣ ಗೃಹಿಣಿಯರಿಗೆ ಭದ್ರತೆ ನೀಡಲಿದೆ ಎಂದು ಹೇಳಿದರು.

ಜಂಟಿ ಬ್ಯಾಂಕ್ ಖಾತೆ ಹೊಂದುವುದು ಅಥವಾ ಜಂಟಿಯಾಗಿ ಎಟಿಎಂ ಕಾರ್ಡ್‌ಗಳ ನಿರ್ವಹಣೆ ಮೂಲಕ ಈಗಾಗಲೇ ಇಂಥ ಪ್ರಜ್ಞಾವಂತಿಕೆ ಪ್ರದರ್ಶಿಸುತ್ತಿರುವ ಜವಾಬ್ದಾರಿಯುತ ವಿವಾಹಿತ ಪುರುಷರ ನಡೆ ಗೌರವಿಸುವುದು ಅಗತ್ಯ ಎಂದು ಅವರು ಉಲ್ಲೇಖಿಸಿದರು.

'ಆರ್ಥಿಕ ಭದ್ರತೆ' ಮತ್ತು 'ವಾಸ್ತವ್ಯದ ಭದ್ರತೆ' ಎರಡೂ ಭಾರತೀಯ ಮಹಿಳೆಯರಿಗೆ ರಕ್ಷಣೆಯ ಭಾವ ನೀಡಲಿವೆ. ಗೃಹಿಣಿ ಎಂದು ಗುರುತಿಸುವ ಮಹಿಳೆಯನ್ನು ನಿಜವಾದ ಅರ್ಥದಲ್ಲಿ ಸಬಲೀಕರಣಗೊಳಿಸಲಿದೆ. ಭಾರತೀಯ ಸಮಾಜದ ಮೂಲ ಘಟಕವಾದ ಕುಟುಂಬಗಳಿಗೆ ಇಂಥ ಮಹಿಳೆಯರೇ ಬೆನ್ನೆಲುಬು. ಇದನ್ನು ಸದೃಢಗೊಳಿಸುವುದು ಅಗತ್ಯ ಎಂದರು.

ಭಾವನಾತ್ಮಕವಾದ ಸಂಬಂಧವಿರುವ, ಸ್ಥಿರತೆ ಹೊಂದಿರುವ ಕುಟುಂಬಗಳು ಈ ಸಮಾಜಕ್ಕೂ ಸ್ಥಿರತೆಯನ್ನು ಒದಗಿಸಲಿವೆ. ಇಂಥ ಕುಟುಂಬಗಳಲ್ಲೇ ಜೀವನದ ಅಮೂಲ್ಯ ಮೌಲ್ಯಗಳನ್ನು ಕಲಿಸಲಾಗುತ್ತದೆ ಮತ್ತು ಬೆಳೆಸಲಾಗುತ್ತದೆ ಎಂದೂ ತೀರ್ಪಿನಲ್ಲಿ ಪ್ರಸ್ತಾಪಿಸಿದ್ದಾರೆ.

ಪ್ರಕರಣದ ಹಿನ್ನೆಲೆ

ನವದೆಹಲಿ: ಶಾ ಬಾನು ಪ್ರಕರಣದಲ್ಲಿ 1985ರಲ್ಲಿ ಈ ಸಂಬಂಧ ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್, ವಿಚ್ಛೇದಿತ ಮುಸ್ಲಿಂ ಮಹಿಳೆಗೆ ಜೀವನಾಂಶ ಪಡೆಯಲು ಅವಕಾಶ ನೀಡಿತ್ತು. ಈ ತೀರ್ಪಿನ ವಿರುದ್ಧ ಸಂಪ್ರದಾಯವಾದಿ ಮುಸ್ಲಿಂ ಸಂಘಟನೆಗಳು ಪ್ರತಿಭಟನೆ ನಡೆಸಿದ್ದವು. ಆಗ ಅಧಿಕಾರದಲ್ಲಿ ಇದ್ದ ಕಾಂಗ್ರೆಸ್ ಸರ್ಕಾರ ಈ ತೀರ್ಪನ್ನು ಮೀರಿ ಕಾಯ್ದೆಯನ್ನು ರೂಪಿಸಿತ್ತು.

ಏಪ್ರಿಲ್ 1978: ಪತಿ ಮೊಹಮ್ಮದ್ ಅಹ್ಮದ್ ಖಾನ್ ಅವರಿಂದ ಮಾಸಿಕ ₹500 ಜೀವನಾಂಶ ಕೋರಿ ಇಂದೋರ್ ಕೋರ್ಟ್‌ನಲ್ಲಿ ಶಾ ಬಾನು ಅವರಿಂದ ಮೊಕದ್ದಮೆ.

ನವೆಂಬರ್ 1978: ತಲಾಖ್ ಹಿಂಪಡೆದಿದ್ದ ಖಾನ್, ಶಾ ಬಾನು ನನ್ನ ಪತ್ನಿ. ಇಸ್ಲಾಮಿಕ್ ಕಾಯ್ದೆ ಪ್ರಕಾರ, ಆಕೆಗೆ ಜೀವನಾಂಶ ಕೊಡಲು ಅವಕಾಶವಿಲ್ಲ ಎಂದು ಹೇಳಿಕೆ.

ಆಗಸ್ಟ್ 1979: ಶಾ ಬಾನು ಅವರಿಗೆ ಮಾಸಿಕ ₹25 ಜೀವನಾಂಶ ನೀಡಲು ಸ್ಥಳೀಯ ಕೋರ್ಟ್ ಆದೇಶ.

ಜುಲೈ 1980: ಜೀವನಾಂಶದ ಮೊತ್ತವನ್ನು ಮಾಸಿಕ ₹179.20ಕ್ಕೆ ಏರಿಸಿದ ಮಧ್ಯಪ್ರದೇಶ ಹೈಕೋರ್ಟ್. ಶಾ ಬಾನು ಹೊಣೆಗಾರಿಕೆ ನನ್ನ ಮೇಲಿಲ್ಲ ಎಂದು ಸುಪ್ರೀಂ ಮೆಟ್ಟಿಲೇರಿದ ಖಾನ್.

ಏಪ್ರಿಲ್ 1985: ಶಾ ಬಾನು ಪರವಾಗಿ ಸುಪ್ರೀಂ ಕೋರ್ಟ್ ಆದೇಶ.

1986: ಸುಪ್ರೀಂ ಕೋರ್ಟ್ ತೀರ್ಪು ಮೀರಿ ಸಂಸತ್ತಿನಲ್ಲಿ ಮುಸ್ಲಿಂ ಮಹಿಳೆ (ವಿಚ್ಛೇದನ ವೇಳೆ ಹಕ್ಕುಗಳ ರಕ್ಷಣೆ) ಕಾಯ್ದೆಯ ಅಂಗೀಕಾರ. ಕಾಯ್ದೆಯ ಪ್ರಕಾರ, ವಿಚ್ಛೇದಿತ ಮಹಿಳೆಯು ಕೇವಲ ಇದ್ದತ್ ಅವಧಿಯಲ್ಲಿ ಮಾತ್ರ (ವೈಯಕ್ತಿಕ ಕಾಯ್ದೆಯಂತೆ ವಿಚ್ಛೇದನವಾದ ನಂತರದ 90 ದಿನ) ಜೀವನಾಂಶಕ್ಕೆ ಹಕ್ಕುದಾರಳು.

2001: 1986ರ ಕಾಯ್ದೆಯು ವಿಚ್ಛೇದನ ಪಡೆದ ಮುಸ್ಲಿಂ ಮಹಿಳೆಯರ ಜಾತ್ಯತೀತ ಹಕ್ಕುಗಳ (ಸಿಆರ್‌ಪಿಸಿ ಸೆಕ್ಷನ್ 125ರ ಅನ್ವಯ) ರಕ್ಷಣೆಗೆ ವಿರುದ್ಧವಾಗಿದೆ ಎಂದು ಸುಪ್ರೀಂ ಕೋರ್ಟ್ ಅಭಿಮತ.

2001: ವಿಚ್ಛೇದನ ಪಡೆದ ಮುಸ್ಲಿಂ ಮಹಿಳೆಯರಿಗೂ ಸಿಆರ್‌ಪಿಸಿ ಸೆಕ್ಷನ್ 125ರ ಅನ್ವಯ ಹಕ್ಕುಗಳಿವೆ ಎಂದ ಸುಪ್ರೀಂ ಕೋರ್ಟ್.

2014: 1986 ಕಾಯ್ದೆ ಸೆಕ್ಷನ್ 5ರ ಅನ್ವಯ ತನ್ನ ಆಯ್ಕೆಯನ್ನು ವಿಚ್ಛೇದನ ಪಡೆದ ಮುಸ್ಲಿಂ ಮಹಿಳೆಯ ಪ್ರತಿಪಾದಿಸದಿದ್ದರೂ, ಸೆಕ್ಷನ್ 125 ಅನ್ವಯ ಹಕ್ಕುಗಳಿಗೆ ಆಕೆಗೆ ಅರ್ಹಳು ಎಂದು ಹೇಳಿದ ಸುಪ್ರೀಂ ಕೋರ್ಟ್.

2024: ಮುಸ್ಲಿಂ ಮಹಿಳೆಯು ಮುಸ್ಲಿಂ ವೈಯಕ್ತಿಕ ಕಾನೂನಿನ ಪ್ರಕಾರವೇ ಮದುವೆಯಾಗಿ ಮತ್ತು ವಿಚ್ಛೇದನ ಪಡೆದಿದ್ದರೂ, ಸಿಆರ್‌ಪಿಸಿ ಸೆಕ್ಷನ್ 125 ಮತ್ತು 1986ರ ಕಾಯ್ದೆಯ ನಿಯಮಗಳು ಅನ್ವಯವಾಗಲಿವೆ ಎಂದು ಸುಪ್ರೀಂ ಕೋರ್ಟ್ ತೀರ್ಪು.

'ವಿಚ್ಛೇದಿತ ಮುಸ್ಲಿಂ ಮಹಿಳೆಯರೂ ಜೀವನಾಂಶಕ್ಕೆ ಅರ್ಹರು'

ಒಂದನೇ ಪುಟದಿಂದ...

ಸೆಕ್ಷನ್ 125 ವಿವಾಹಿತ ಮಹಿಳೆಯರ ಜೀವನಾಂಶದ ಹಕ್ಕುಗಳನ್ನು ಪ್ರತಿಪಾದಿಸುತ್ತದೆ. ಪೀಠದಲ್ಲಿದ್ದ ಇಬ್ಬರು ನ್ಯಾಯಮೂರ್ತಿಗಳು ಈ ಕುರಿತು ಪ್ರತ್ಯೇಕವಾದ ಆದರೆ, ಸಹಮತದ ತೀರ್ಪು ನೀಡಿದರು.

ಮುಸ್ಲಿಮರಿಗೆ ವೈಯಕ್ತಿಕ ಕಾನೂನು ಇರುವ ಕಾರಣ ಸಿಆರ್‌ಪಿಸಿ ಸೆಕ್ಷನ್ 125 ಅನ್ವಯವಾಗದು ಎಂಬ ವಾದವನ್ನು ಪೀಠ ಸ್ಪಷ್ಟವಾಗಿ ತಳ್ಳಿಹಾಕಿತು.

ವಿಶೇಷ ವಿವಾಹ ಕಾಯ್ದೆಯಡಿ ಮದುವೆಯಾದ, ವಿಚ್ಛೇದನಗೊಂಡ ಎಲ್ಲ ಮುಸ್ಲಿಂ ಮಹಿಳೆಯರಿಗೆ ನಿಯಮ ಅನ್ವಯವಾಗಲಿದೆ. ಜೊತೆಗೆ ವಿಶೇಷ ವಿವಾಹ ಕಾಯ್ದೆಯಡಿ ಲಭ್ಯವಿರುವ ಪರಿಹಾರಗಳಿಗೂ ಅವರು ಹಕ್ಕುದಾರರಾಗಿದ್ದಾರೆ ಎಂದು ಪೀಠವು ಹೇಳಿತು.

ತೆಲಂಗಾಣದ ಕೌಟುಂಬಿಕ ನ್ಯಾಯಾಲಯವೊಂದರ ಆದೇಶವನ್ನು ಮೊಹಮ್ಮದ್ ಅಬ್ದುಲ್ ಸಮದ್ ಎಂಬವರು ತೆಲಂಗಾಣ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ತೆಲಂಗಾಣ ಹೈಕೋರ್ಟ್ ಈ ವಿಷಯದಲ್ಲಿ ಮಧ್ಯಪ್ರವೇಶಿಸಲು ನಿರಾಕರಿಸಿತ್ತು. ಇದನ್ನು ಪ್ರಶ್ನಿಸಿ ಅವರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

'ವಿಚ್ಛೇದಿತ ಮುಸ್ಲಿಂ ಮಹಿಳೆಯರು ಸಿಆರ್‌ಪಿಸಿ ಸೆಕ್ಷನ್ 125ರ ಅನ್ವಯ ಜೀವನಾಂಶಕ್ಕೆ ಅರ್ಹರಲ್ಲ. ಅವರಿಗೆ 1986 ಕಾಯ್ದೆಯ ನಿಯಮಗಳು ಅನ್ವಯವಾಗಬೇಕು' ಎಂಬುದು ಅರ್ಜಿದಾರರ ವಾದವಾಗಿತ್ತು. ಶಾ ಬಾನು ಪ್ರಕರಣ ತೀರ್ಪಿನ ಬಳಿಕ ಈ 1986ರ ಕಾಯ್ದೆ ರೂಪಿಸಲಾಗಿತ್ತು.

ಸಂವಿಧಾನಕ್ಕಿದ್ದ ಭೀತಿ ತಪ್ಪಿತು –ಬಿಜೆಪಿ

ಒಂದನೇ ಪುಟದಿಂದ...

'ರಾಜೀವ್‌ಗಾಂಧಿ ನೇತೃತ್ವದ ಸರ್ಕಾರವು ಈ ಹಿಂದೆ ಸುಪ್ರೀಂ ಕೋರ್ಟ್‌ನ ತೀರ್ಪು ಮೀರಿ ರೂಪಿಸಿದ್ದ ಕಾಯ್ದೆಯು ಸಂವಿಧಾನಕ್ಕೆ ಧಕ್ಕೆ ತರುವಂತಹದ್ದಾಗಿತ್ತು' ಎಂದು ಬಿಜೆಪಿ ವಕ್ತಾರ ಸುಧಾಂಶು ತ್ರಿವೇದಿ ಆರೋಪಿಸಿದರು. ರಾಜ್ಯಸಭೆ ಸದಸ್ಯರೂ ಆಗಿರುವ ತ್ರಿವೇದಿ, 'ಕಾಂಗ್ರೆಸ್ ಸರ್ಕಾರ ಕಾಯ್ದೆಯಲ್ಲಿ ಶರಿಯಾಗೆ ಹೆಚ್ಚು ಮಹತ್ವ ನೀಡಿದ್ದರಿಂದ ಕಾಯ್ದೆಯಿಂದ ಸಂವಿಧಾನದ ಹಿರಿಮೆಗೆ ಧಕ್ಕೆ ಉಂಟಾಗಿತ್ತು. ಆ ಹಿರಿಮೆಯನ್ನು ಮರುಸ್ಥಾಪಿಸುವ ಕೆಲಸ ಈ ತೀರ್ಪಿನಿಂದ ಆಗಿದೆ' ಎಂದರು.

ಅರ್ಜಿದಾರರ ಪರ ಹಿರಿಯ ವಕೀಲ ವಾಸಿಮ್ ಖಾದ್ರಿ ವಾದ ಮಂಡಿಸಿದ್ದರು. ಪ್ರಕರಣದ ವಿಚಾರಣೆಗೆ ನೆರವಾಗಲು ಕೋರ್ಟ್ ಗೌರವ್ ಅಗರವಾಲ್ ಅವರನ್ನು ನ್ಯಾಯಾಲಯದ ಸಹಾಯಕರನ್ನಾಗಿ ನೇಮಕ ಮಾಡಿತ್ತು. ಫೆ.19ರಂದು ವಾದವನ್ನು ಆಲಿಸಿದ್ದ ಪೀಠ ತನ್ನ ಆದೇಶವನ್ನು ಕಾಯ್ದಿರಿಸಿತ್ತು.

ಸಿಆರ್‌ಪಿಸಿ ಸೆಕ್ಷನ್ 125ಕ್ಕೆ ಹೋಲಿಸಿದರೆ 1986ರ ಕಾಯ್ದೆಯಲ್ಲಿಯೇ ಮುಸ್ಲಿಂ ಮಹಿಳೆಯರಿಗೆ ಹೆಚ್ಚಿನ ಅನುಕೂಲಗಳಿವೆ ಎಂದು ಖಾದ್ರಿ ಅವರು ವಾದವನ್ನು ಮಂಡಿಸಿದ್ದರು.

ಸಿಬಿಐ ತನಿಖೆ ಪ್ರಶ್ನಿಸಿದ್ದ ಅರ್ಜಿ ಸ್ವೀಕಾರ

ನವದೆಹಲಿ(ಪಿಟಿಐ): ಒಪ್ಪಿಗೆ ಹಿಂಪಡೆದಿದ್ದರೂ ಸಿಬಿಐ ವಿವಿಧ ಪ್ರಕರಣಗಳ ತನಿಖೆಯನ್ನು ಮುಂದುವರಿಸುತ್ತಿದೆ ಎಂದು ಆರೋಪಿಸಿ ಪಶ್ಚಿಮ ಬಂಗಾಳ ಸರ್ಕಾರವು, ಕೇಂದ್ರ ಸರ್ಕಾರದ ವಿರುದ್ಧ ಸಲ್ಲಿಸಿದ ಮೊಕದ್ದಮೆಯನ್ನು ಸುಪ್ರೀಂ ಕೋರ್ಟ್ ಬುಧವಾರ ವಿಚಾರಣೆಗೆ ಯೋಗ್ಯವೆಂದು ಪರಿಗಣಿಸಿದೆ.


ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಸಂದೀಪ್ ಮೆಹ್ತಾ ಅವರಿದ್ದ ಪೀಠವು, ಈ ಮೊಕದ್ದಮೆಯ ವಿಚಾರಣೆ ಅರ್ಹತೆ ಬಗ್ಗೆ ಕೇಂದ್ರ ಸರ್ಕಾರವು ಎತ್ತಿದ್ದ ಪ್ರಾಥಮಿಕ ಆಕ್ಷೇಪಣೆಗಳನ್ನು ತಿರಸ್ಕರಿಸಿತು. ಕಾನೂನಿನ ಪ್ರಕಾರ ಸಿಬಿಐ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತದೆ ಎನ್ನುವುದನ್ನು ಪೀಠ ಒತ್ತಿಹೇಳಿತು.

'ಈ ಮೊಕದ್ದಮೆಯು ತನ್ನದೇ ಆದ ಅರ್ಹತೆಯ ಮೇಲೆ ಕಾನೂನಿನ ಪ್ರಕಾರ ಮುಂದುವರಿಯುತ್ತದೆ' ಎಂದೂ ನ್ಯಾಯಮೂರ್ತಿ ಗವಾಯಿ ಅವರು ಆದೇಶದ ಪ್ರಮುಖಾಂಶಗಳನ್ನು ಪ್ರಕಟಿಸುವಾಗ ಹೇಳಿದರು.

ಪೀಠವು ಈ ಅರ್ಜಿಯ ಮುಂದಿನ ವಿಚಾರಣೆಯನ್ನು ಆಗಸ್ಟ್ 13ಕ್ಕೆ ನಿಗದಿಪಡಿಸಿದೆ.

ಅದಾನಿ ಸಮೂಹಕ್ಕೆ ನೀಡಿದ್ದ ಭೂಮಿ ಮರಳಿ ಪಡೆಯಲು ಆದೇಶಿಸಿದ್ದ ಹೈಕೋರ್ಟ್

ಭೂಮಿ ವಾಪಸ್: ಹೈಕೋರ್ಟ್ ಆದೇಶಕ್ಕೆ ತಡೆ



ನವದೆಹಲಿ (ಪಿಟಿಐ): ಗುಜರಾತ್‌ನ ಮುಂದ್ರಾ ಬಂದರು ಬಳಿ ಅದಾನಿ ಸಮೂಹಕ್ಕೆ ನೀಡಿದ್ದ 266 ಎಕರೆ ಗೋಮಾಳವನ್ನು ಮರಳಿ ಪಡೆಯಬೇಕು ಎಂದು ರಾಜ್ಯ ಸರ್ಕಾರಕ್ಕೆ ಸೂಚಿಸಿದ್ದ ಗುಜರಾತ್ ಹೈಕೋರ್ಟ್‌ನ ಆದೇಶಕ್ಕೆ ಸುಪ್ರೀಂ ಕೋರ್ಟ್ ಬುಧವಾರ ತಡೆ ನೀಡಿದೆ.

'ಗುಜರಾತ್ ಹೈಕೋರ್ಟ್ ನೀಡಿರುವ ಆದೇಶವು ಸೂಕ್ತವಾಗಿಲ್ಲ. ನಮಗೆ ಅನ್ಯಾಯವಾಗಿದೆ. ನ್ಯಾಯದಾನ ಮಾಡಬೇಕು ಎನ್ನುವುದಾದರೆ ಆ ಆದೇಶಕ್ಕೆ ತಡೆ ನೀಡಬೇಕು' ಎಂದು ಅದಾನಿ ಪೋರ್ಟ್ಸ್ ಆ್ಯಂಡ್ ಸ್ಪೆಷಲ್ ಎಕನಾಮಿಕ್ ಜೋನ್ ಲಿ. (ಎಪಿಎಸ್ಇಜೆಡ್) ಕಂಪನಿಯು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತ್ತು. ಈ ಮನವಿಯನ್ನು ಪುರಸ್ಕರಿಸಿ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಕೆ.ವಿ. ವಿಶ್ವನಾಥ ಅವರು, ಹೈಕೋರ್ಟ್ ಆದೇಶಕ್ಕೆ ತಡೆ ನೀಡಿದ್ದಾರೆ.

ಕಛ್ ಜಿಲ್ಲೆಯ ನಾವಿನಲ್ ಗ್ರಾಮದ ಜನರು, ಗೋಮಾಳವನ್ನು ಅದಾನಿ ಸಮೂಹಕ್ಕೆ ನೀಡಿದ್ದರ ವಿರುದ್ಧ ಗುಜರಾತ್ ಹೈಕೋರ್ಟ್‌ನಲ್ಲಿ ಪಿಐಎಲ್ ಸಲ್ಲಿಸಿದ್ದರು. 2005ರಲ್ಲಿ ಈ ಗ್ರಾಮದ 231 ಎಕರೆ ಗೋಮಾಳವನ್ನು ಸರ್ಕಾರವು ಅದಾನಿ ಸಮೂಹಕ್ಕೆ ನೀಡಿತ್ತು. ಆ ಗ್ರಾಮದಲ್ಲಿ ಒಟ್ಟು 276 ಎಕರೆ ಗೋಮಾಳ ಇತ್ತು. ಅದಾನಿ ಸಮೂಹಕ್ಕೆ 231 ಎಕರೆ ನೀಡಿದ್ದರಿಂದ, ಗ್ರಾಮಸ್ಥರಿಗೆ ಈಗ 45 ಎಕರೆ ಗೋಮಾಳ ಅಷ್ಟೇ ಉಳಿದಂತಾಗಿದೆ.

ಗ್ರಾಮದಿಂದ ಏಳು ಕೀ.ಮೀ ದೂರದ ಪ್ರದೇಶದಲ್ಲಿ ಗೋಮಾಳ ನೀಡುವುದಾಗಿ ಸರ್ಕಾರ 2015ರಲ್ಲಿ ಹೇಳಿತ್ತು. ಆದರೆ, ಸರ್ಕಾರದ ಈ ಕ್ರಮವನ್ನು ಗ್ರಾಮಸ್ಥರು ವಿರೋಧಿಸಿದ್ದರು.

ಸಲಿಂಗ ವಿವಾಹ: ವಿಚಾರಣೆಯಿಂದ ಹಿಂದೆಸರಿದ ನ್ಯಾಯಮೂರ್ತಿ ಖನ್ನಾ

ಸಲಿಂಗ ವಿವಾಹಕ್ಕೆ ಕಾನೂನಿನ ಮಾನ್ಯತೆ ನೀಡಲು ನಿರಾಕರಿಸಿರುವ ತೀರ್ಪನ್ನು ಮರುಪರಿಶೀಲಿಸುವಂತೆ ಕೋರಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆಯಿಂದ ಸುಪ್ರೀಂ ಕೋರ್ಟ್‌ನ ಹಿರಿಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು ಹಿಂದೆಸರಿದಿದ್ದಾರೆ. ಈ ಕಾರಣದಿಂದಾಗಿ ಮರುಪರಿಶೀಲನೆ ಅರ್ಜಿಗಳ ಪರಿಶೀಲನೆಯನ್ನು ಸುಪ್ರೀಂ ಕೋರ್ಟ್ ಬುಧವಾರ ಮುಂದೂಡಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರನ್ನು ಒಳಗೊಂಡ ಐವರು ನ್ಯಾಯಮೂರ್ತಿಗಳ ಪೀಠವು ಮರುಪರಿಶೀಲನಾ ಅರ್ಜಿಗಳ ಪರಿಶೀಲನೆಯನ್ನು ಬುಧವಾರ ಕೈಗೊಳ್ಳಬೇಕಿತ್ತು. ಖನ್ನಾ ಅವರು ವಿಚಾರಣೆಯಿಂದ ಹಿಂದೆಸರಿದ ಕಾರಣ, ಸಿಜೆಐ ಚಂದ್ರಚೂಡ್ ಅವರು ಈಗ ಮತ್ತೊಮ್ಮೆ ಐವರು ನ್ಯಾಯಮೂರ್ತಿಗಳ ಪೀಠವನ್ನು ರಚಿಸಬೇಕಾಗಿದೆ.

'ವೈಯಕ್ತಿಕ ಕಾರಣಗಳಿಂದ ನ್ಯಾಯಮೂರ್ತಿ ಖನ್ನಾ ಅವರು ವಿಚಾರಣೆಯಿಂದ ಹಿಂದೆ ಸರಿದಿದ್ದಾರೆ' ಎಂದು ಮೂಲಗಳು ಹೇಳಿವೆ. ಮರುಪರಿಶೀಲನೆ ಅರ್ಜಿಗಳ ವಿಚಾರಣೆಗಾಗಿ ರಚಿಸಲಾಗಿದ್ದ ಐವರು ನ್ಯಾಯಮೂರ್ತಿಗಳ ಪೀಠದಲ್ಲಿ, ಸಿಜೆಐ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ, ಹಿಮಾ ಕೊಹ್ಲಿ, ಬಿ.ವಿ. ನಾಗರತ್ನಾ ಹಾಗೂ ಪಿ.ಎಸ್. ನರಸಿಂಹ ಅವರು ಇದ್ದರು.

ಪಶ್ಚಿಮ ಬಂಗಾಳ: ರಾಜ್ಯಪಾಲರ ಅರ್ಜಿ ಸೋಮವಾರ ವಿಚಾರಣೆ

ಕೋಲ್ಕತ್ತ (ಪಿಟಿಐ): 'ರಾಜಭವನಕ್ಕೆ ತೆರಳಲು ಭಯವಾಗುತ್ತದೆ ಎಂದು ಮಹಿಳೆಯೊಬ್ಬರು ನನ್ನ ಬಳಿ ಹೇಳಿಕೊಂಡಿದ್ದಾರೆ' ಎಂದಿದ್ದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು, ಈ ವಿಷಯವಾಗಿ ಬೇರೆ ಯಾವ ಹೇಳಿಕೆಯನ್ನೂ ನೀಡಬಾರದು ಎಂದು ಆದೇಶಿಸಬೇಕು' ಎಂದು ರಾಜ್ಯಪಾಲ ಸಿ.ವಿ. ಆನಂದ್ ಬೋಸ್ ಅವರು ಕಲ್ಕತ್ತಾ ಹೈಕೋರ್ಟ್‌ನಲ್ಲಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಸೋಮವಾರ ನಡೆಸುವುದಾಗಿ ಕೋರ್ಟ್ ಹೇಳಿದೆ.

ಮಮತಾ ಅವರ ಹೇಳಿಕೆ ಸಂಬಂಧ ಜೂನ್ 28ರಂದು ರಾಜ್ಯಪಾಲ ಬೋಸ್ ಅವರು, ಮಮತಾ ಹಾಗೂ ಟಿಎಂಸಿಯ ಇತರ ನಾಯಕರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡಿದ್ದಾರೆ. ಈ ಅರ್ಜಿಗೆ ಸಂಬಂಧಿಸಿ ಮಧ್ಯಂತರ ಆದೇಶ ನೀಡಬೇಕು ಎಂದು ಈಗ ರಾಜ್ಯಪಾಲರು ನ್ಯಾಯಾಲಯವನ್ನು ಕೋರಿದ್ದಾರೆ.



ಉಗ್ರರ ದಾಳಿಯಲ್ಲಿ ಹುತಾತ್ಮರಾದ ಯೋಧ ಹವಾಲ್ದಾರ್ ಕಮಲ್ ಸಿಂಗ್ ಅವರ ಪಾರ್ಥಿವ ಶರೀರವನ್ನು ಸೇನೆಯ ಸಿಬ್ಬಂದಿ ಉತ್ತರಾಖಂಡದ ಪೌರಿ ಗಢವಾಲ್ ಜಿಲ್ಲೆಯಲ್ಲಿರುವ ಅವರ ನಿವಾಸಕ್ಕೆ ಬುಧವಾರ ತಂದರು —ಪಿಟಿಐ ಚಿತ್ರ

ಕಠುವಾ ಹೊಂಚುದಾಳಿ 50 ಮಂದಿ ವಶಕ್ಕೆ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕಠುವಾ ಜಿಲ್ಲೆಯಲ್ಲಿ ಭಯೋತ್ಪಾದಕರು ನಡೆಸಿದ ಹೊಂಚು ದಾಳಿಯಲ್ಲಿ ಐವರು ಯೋಧರು ಹುತಾತ್ಮರಾದ ಪ್ರಕರಣ ಸಂಬಂಧ 50 ಜನರನ್ನು ಭದ್ರತಾ ಪಡೆಗಳು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿವೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಕಾಡಿನಲ್ಲಿ ಅವಿತಿದ್ದಾರೆಂದು ನಂಬಲಾದ ಭಯೋತ್ಪಾದಕರನ್ನು ಹತ್ತಿಕ್ಕಲು ಸೇನೆ ಮತ್ತು ಪೊಲೀಸರು ಕಾರ್ಯಾಚರಣೆ ನಡೆಸುತ್ತಿದ್ದಾರೆ. ಕಠುವಾ, ಉಧಮ್‌ಪುರ ಮತ್ತು ಭದೆರ್ವಾಹ್ ಸೇರಿ ನಾಲ್ಕು ಜಿಲ್ಲೆಗಳಾದ್ಯಂತ ದಟ್ಟ ಅರಣ್ಯಗಳಲ್ಲಿ ಭಾರಿ ಮಳೆಯ ನಡುವೆಯೂ ಕಾರ್ಯಾಚರಣೆ ಮುಂದುವರಿದಿದೆ ಎಂದು ತಿಳಿಸಿದ್ದಾರೆ.

ಕಠುವಾದಲ್ಲಿ ಹೊಂಚುದಾಳಿ ನಡೆದ ಮರುದಿನ ಮಂಗಳವಾರ ಸಂಜೆ ಭಯೋತ್ಪಾದಕರು ಮತ್ತು ಭದ್ರತಾ ಪಡೆಗಳ ನಡುವೆ ಗುಂಡಿನ ಚಕಮಕಿ ನಡೆದ ದೋಡಾ ಜಿಲ್ಲೆಯ ಎತ್ತರದ ಪ್ರದೇಶಗಳಲ್ಲೂ ಭದ್ರತಾ ಪಡೆಗಳು ಶೋಧ ಕಾರ್ಯಾಚರಣೆ ನಡೆಸುತ್ತಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉಧಮ್‌ಪುರ, ಸಾಂಬಾ, ರಜೌರಿ ಮತ್ತು ಪೂಂಚ್ ಜಿಲ್ಲೆಗಳ ವಿವಿಧ ಭಾಗಗಳಲ್ಲಿನ ದಟ್ಟ ಅರಣ್ಯಗಳಲ್ಲಿ ಸೇನೆ ಮತ್ತು ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ. ಬುಧವಾರ ಬೆಳಿಗ್ಗೆ ಸಾಂಬಾದ ಲಾಲಾ ಚಾಕ್ ಪ್ರದೇಶ, ರಜೌರಿಯ ಮಂಜಕೋಟೆ ಮತ್ತು ಪೂಂಛ್‌ನ ಸುರನ್‌ಕೋಟೆ ಪ್ರದೇಶದಲ್ಲೂ ಶೋಧ ಪ್ರಾರಂಭಿಸಲಾಗಿದೆ ಎಂದು ಅವರು ಹೇಳಿದರು.

ಹತ್ತು ತಿಂಗಳಿಂದ ಹಿಮದಲ್ಲಿ ಸಿಲುಕಿದ್ದ 3 ಸೈನಿಕರ ಶವ ಪತ್ತೆ

ನವದೆಹಲಿ (ಪಿಟಿಐ): ಲಡಾಕ್‌ನಲ್ಲಿ ಪರ್ವತಾರೋಹಣದ ಸಂದರ್ಭ ಕಳೆದ ಅಕ್ಟೋಬರ್‌ನಲ್ಲಿ ಸಂಭವಿಸಿದ ಹಿಮಪಾತದಲ್ಲಿ ಸಿಲುಕಿ ಸಮಾಧಿಯಾಗಿದ್ದ ಮೂವರ ಮೃತದೇಹಗಳನ್ನು ಹೊರ ತೆಗೆಯಲಾಗಿದೆ ಎಂದು ಸೇನಾ ಮೂಲಗಳು ತಿಳಿಸಿವೆ.

ಹಿಮಾಲಯದ 18,300 ಅಡಿ ಎತ್ತರದ ಶಿಖರದಲ್ಲಿ ಸಂಭವಿಸಿದ ಹಿಮಪಾತದಲ್ಲಿ ಲ್ಯಾನ್ಸ್ ನಾಯಕ್ ಸ್ಟಾನ್‌ಝಿನ್ ಟಾರ್ಗೈಸ್, ಹವಾಲ್ದಾರ್ ರೋಹಿತ್ ಕುಮಾರ್, ಹವಾಲ್ದಾರ್ ಠಾಕೂರ್ ಬಹದ್ದೂರ್ ಅಲೆ ಹಾಗೂ ನಾಯಕ್ ಗೌತಮ್ ರಾಜವಂಶಿ ಅವರು ಸಿಲುಕಿದ್ದರು. ಟಾರ್ಗೈಸ್ ಅವರ ಮೃತದೇಹ ಮಾತ್ರ ಆಗ ಪತ್ತೆಯಾಗಿತ್ತು.

'ಗುಲ್ಮಾರ್ಗ್ ಮೂಲದ ಹೈ ಆಲ್ಟಿಟ್ಯೂಡ್ ವಾರ್‌ಫೇರ್ ಸ್ಕೂಲ್‌ನ 38 ಜನರ ತಂಡವು 2023ರ ಅ. 1ರಂದು ಮೌಂಟ್ ಕುನ್ ಏರಲು ಆರಂಭಿಸಿದ್ದರು. ಅ. 8ರಂದು ದುರಂತ ಘಟಿಸಿತ್ತು'.

'ಆಪರೇಷನ್ ಆರ್‌ಟಿಜಿಯನ್ನು (ರೋಹಿತ್, ಠಾಕೂರ್, ಗೌತಮ್) ಜೂನ್ 18ರಿಂದ ಆರಂಭಿಸಲಾಗಿತ್ತು. ಜುಲೈ 7 ಹಾಗೂ 8ರಂದು, ಯೋಧರ ಶವಗಳು ಹಿಮದಡಿ ಸಿಕ್ಕಿವೆ' ಎಂದು ಸೇನೆ ಮಾಹಿತಿ ನೀಡಿದೆ.


ಮಾರುಕಟ್ಟೆ ಧಾರಣೆ (₹ಗಳಲ್ಲಿ)

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	1450-1550
ನಡುಗೋಲು	1600-1700
ರಾಶಿ	1750-1800
ರಾಶಿ ಉತ್ತಮ	1900-1950
ಹೆರಕಿದ್ದು	2400-2500
ಹಸಿರು ಸಾಧಾರಣ	2100-2200
ಹಸಿರು ಉತ್ತಮ	2400-2500
ಹಸಿರು ಅತಿ ಉತ್ತಮ	2700-2800
ಕಾಳು ಮೆಣಸು	640
(ಅಡಿಕೆ)	
ಬಂಟ್ವಾಳ	
ಕೋಕ	18000-28500
ಹೊಸತು	28500-38500
ಹಳತು	38500-46500
ಕುಮಟ	
ಚಿಪ್ಪು	26019-28599
ಕೋಕ	14069-24029
ಫ್ಯಾಕ್ಟರಿ	10169-21029
ಹಳೆಚಾಲಿ	36019-37239
ಹೊಸಚಾಲಿ	32999-35519
ಶಿವಮೊಗ್ಗ	
ಬೆಟ್ಟೆ	21829-54200
ಗೊರಬಲು	16109-34599
ರಾಶಿ	20179-51909
ಸರಕು	58100-69009
ಸಿದ್ದಾಪುರ	
ಬಿಳಿಗೋಟು	25899-28599
ಚಾಲಿ	32689-35399
ಕೋಕ	24299-29099
ಕೆಂಪುಗೋಟು	26900-26900
ರಾಶಿ	46899-46899
ತಟ್ಟಬೆಟ್ಟೆ	43899-43899
ಶಿರಸಿ	
ಬೆಟ್ಟೆ	32199-45699
ಬಿಳಿಗೋಟು	21309-30414
ಚಾಲಿ	33099-37161
ಕೆಂಪುಗೋಟು	12305-25000
ರಾಶಿ	45699-48809

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16,500	16,100	-	249.95 ಸೆಂಟ್ಸ್
ಎಸಿ	9,660	355 on OT	-	
ಆರ್‌ಪಿ	18,500	16,500	-	ಲಂಡನ್
ಆರ್‌ಸಿ	10,140	400 on OT	-	4,634 ಡಾಲರ್ಸ್

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,433
ಇಂದಿನ ಅಂತ್ಯ	24,324
▼	108
ದಿನದ ಕನಿಷ್ಠ	24,141

ವಿನಿಮಯ ದರ

$ ಡಾಲರ್	83.52
£ ಪೌಂಡ್	107.00
€ ಯುರೊ	90.39
¥ ಯೆನ್ (100ಕ್ಕೆ)	52

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹565
12 ಕ್ಕೆ	₹76
ಮೈಸೂರು	
100ಕ್ಕೆ	₹570

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1520 (1530)
ಸೋಯಾ (ರಿಫೈನ್ಡ್)	₹965 (965)
ಸೂರ್ಯಕಾಂತಿ (ರಿಫೈನ್ಡ್)	₹965 (965)
ಪಾಮೋಲಿನ್	₹903 (906)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹305-473
ದ್ವಿತಳಿ (ಬಿ.ವಿ)	₹282-599

ಉದ್ದು ಸಗಟು ಬೆಲೆ ಇಳಿಕೆ



ನವದೆಹಲಿ (ಪಿಟಿಐ): ದೇಶದಲ್ಲಿ ಪ್ರಸಕ್ತ ಮುಂಗಾರು ಹಂಗಾಮಿನಡಿ ಹೆಚ್ಚಿನ ಪ್ರದೇಶದಲ್ಲಿ ಉದ್ದು ಬಿತ್ತನೆಯಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಕಳೆದ ವರ್ಷದ ಮುಂಗಾರು ಋತುವಿನಲ್ಲಿ 3.67 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಉದ್ದು ಬಿತ್ತನೆಯಾಗಿತ್ತು. ಜುಲೈ 5ರ ವರೆಗೆ 5.37 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಪೂರ್ಣಗೊಂಡಿದೆ ಎಂದು ತಿಳಿಸಿದೆ.

ಗ್ರಾಹಕ ವ್ಯವಹಾರಗಳ ಸಚಿವಾಲಯದ ನಿರಂತರ ಪ್ರಯತ್ನ ದಿಂದಾಗಿ ನವದೆಹಲಿ ಮತ್ತು ಇಂದೋರ್‌ನ ಸಗಟು ಮಾರುಕಟ್ಟೆಯಲ್ಲಿ ಉದ್ದು ಬೆಲೆ ಇಳಿಕೆಯ ಹಾದಿ ಹಿಡಿದಿದೆ. ಆಮದು ಪ್ರಮಾಣದಲ್ಲಿಯೂ ಇಳಿಕೆಯಾಗುತ್ತಿದೆ ಎಂದು ತಿಳಿಸಿದೆ.

ಸದ್ಯ ಉದ್ದು ಸಗಟು ಮಾರಾಟ ಬೆಲೆಯು ಇಂದೋರ್‌ನಲ್ಲಿ ಶೇ 3.12ರಷ್ಟು ಮತ್ತು ನವದೆಹಲಿಯಲ್ಲಿ ಶೇ 1.08ರಷ್ಟು ಇಳಿಕೆಯಾಗಿದೆ.

ಮಧ್ಯಪ್ರದೇಶ, ಆಂಧ್ರಪ್ರದೇಶ, ಉತ್ತರಪ್ರದೇಶ, ರಾಜಸ್ಥಾನ, ತಮಿಳುನಾಡು ಮತ್ತು ಮಹಾರಾಷ್ಟ್ರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಉದ್ದು ಬೆಳೆಯಲಾಗುತ್ತದೆ.

ಸರ್ಕಾರದ ಏಜೆನ್ಸಿಗಳಾದ ನಾಫೆಡ್ ಮತ್ತು ಎನ್‌ಸಿಸಿಎಫ್‌ನಿಂದ ಬೆಂಬಲ ಬೆಲೆಯಡಿ ಉದ್ದು ಖರೀದಿಸಲಾಗುತ್ತಿದ್ದು, ಸಂಗ್ರಹಣೆ ಪ್ರಕ್ರಿಯೆ ಆರಂಭಗೊಂಡಿದೆ. ಮಧ್ಯಪ್ರದೇಶದಲ್ಲಿ 8,487, ಮಹಾರಾಷ್ಟ್ರ 2,037, ತಮಿಳುನಾಡು 1,611 ಮತ್ತು ಉತ್ತರಪ್ರದೇಶದಲ್ಲಿ 1,633 ರೈತರು ಹೆಸರು ನೋಂದಾಯಿಸಿದ್ದಾರೆ.

ಜಪಾನ್, ಕೊರಿಯಾ ಭೇಟಿ ಫಲಪ್ರದ: ಸಚಿವ ಎಂ.ಬಿ. ಪಾಟೀಲ

₹6,450 ಕೋಟಿ ಹೂಡಿಕೆ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಪಾನ್ ಹಾಗೂ ದಕ್ಷಿಣ ಕೊರಿಯಾ ಕಂಪನಿಗಳಿಂದ ಕರ್ನಾಟಕಕ್ಕೆ ₹6,450 ಕೋಟಿ ಹೂಡಿಕೆ ಹರಿದುಬರಲಿದೆ. ಇದರಿಂದ ಒಂದು ಸಾವಿರ ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆಯಿದೆ.

‘ಕರ್ನಾಟಕದ ಉನ್ನತ ಮಟ್ಟದ ನಿಯೋಗ ಈ ಎರಡೂ ದೇಶಗಳಿಗೆ ಎರಡು ವಾರ (ಜೂನ್ 24–ಜುಲೈ 5) ನೀಡಿದ ಭೇಟಿಯ ಫಲವಾಗಿ ದೊಡ್ಡ ಪ್ರಮಾಣದ ಹೂಡಿಕೆ ಸೆಳೆಯುವಲ್ಲಿ ಯಶ ಕಂಡಿದ್ದೇವೆ’ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

‘ಎರಡೂ ದೇಶಗಳ 35ಕ್ಕೂ ಹೆಚ್ಚು ಪ್ರಮುಖ ಬಹುರಾಷ್ಟ್ರೀಯ ಕಂಪನಿಗಳ ಮುಖ್ಯಸ್ಥರನ್ನು ಭೇಟಿ ಮಾಡಿ ಮಾತುಕತೆ ನಡೆಸಲಾಯಿತು. ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗಾಗಿ (ಎಸ್‌ಎಂಇ) ಬಂಡವಾಳ ಹೂಡಿಕೆಯ ರೋಡ್ ಶೋ ಆಯೋಜಿಸಲಾಗಿತ್ತು’ ಎಂದರು.

ತಯಾರಿಕಾ ವಲಯಕ್ಕೆ ರಾಜ್ಯದಲ್ಲಿರುವ ಅನುಕೂಲಕರ ವಾತಾವರಣ, ಮೂಲ ಸೌಲಭ್ಯ ಕುರಿತು ಅಲ್ಲಿನ ಕಂಪನಿಗಳಿಗೆ ಮನವರಿಕೆ ಮಾಡಿಕೊಡಲಾಗಿದೆ. ‘ಇನ್ವೆಸ್ಟ್ ಕರ್ನಾಟಕ–2025’ರಲ್ಲಿ ಭಾಗವಹಿಸಲು 200ಕ್ಕೂ ಹೆಚ್ಚು ಕಂಪನಿಗಳಿಗೆ ಆಹ್ವಾನ ನೀಡಲಾಗಿದೆ’ ಎಂದರು.



ರಾಜ್ಯದ ಕೈಗಾರಿಕಾ ವಲಯದ ಅಭಿವೃದ್ಧಿಗೆ ಕೇಂದ್ರದ ನೆರವು ಕೋರಲಾಗುವುದು. ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಲಾಗುವುದು

ಎಂ.ಬಿ. ಪಾಟೀಲ, ಬೃಹತ್ ಕೈಗಾರಿಕಾ ಸಚಿವ

ಒಸಾಕಾ ಗ್ಯಾಸ್ ಕಂಪನಿ ಮುಂದಿನ 5 ವರ್ಷಗಳಲ್ಲಿ ಅನಿಲ ವಿತರಣಾ ಮೂಲ ಸೌಲಭ್ಯ ವಿಸ್ತರಿಸಲು ₹5 ಸಾವಿರ ಕೋಟಿ, ಕೊರಿಯಾದ ಡಿಎನ್ ಸೆಲ್ಯೂಷನ್ಸ್ ಕೈಗಾರಿಕಾ ಯಂತ್ರೋಪಕರಣಗಳು ಮತ್ತು ಸ್ವಯಂಚಾಲಿತ ವ್ಯವಸ್ಥೆಗಳ ತಯಾರಿಕಾ ಘಟಕ ಸ್ಥಾಪಿಸಲು ₹1 ಸಾವಿರ ಕೋಟಿ ಹೂಡಿಕೆ ಮಾಡಲಿದೆ ಎಂದು ತಿಳಿಸಿದರು.

ವಾಹನ ಬಿಡಿಭಾಗಗಳನ್ನು ಪೂರೈಸುವ ಜಪಾನಿನ ಅವೊಯಮಾ ಸೈಸಕುಶೊ ಕಂಪನಿಯು ತುಮಕೂರು ಬಳಿಯ ಜಪಾನ್ ಕೈಗಾರಿಕಾ ಟೌನ್‌ಶಿಪ್‌ನಲ್ಲಿ ತಯಾರಿಕಾ ಘಟಕ ಸ್ಥಾಪಿಸಲು ₹210 ಕೋಟಿ, ಡೈಕಿ ಆ್ಯಕ್ಸಿಸ್ ಹೈವಿಷನ್ ಮತ್ತು ಇಎಂಎನ್‌ಐ ಕಂಪನಿಯು, ಬ್ಯಾಟರಿ ಸೆಲ್‌ಗಳ ಸಂಗ್ರಹ ಮತ್ತು ಪರೀಕ್ಷಾ ಕೇಂದ್ರ ಹಾಗೂ ಪರಿಸರ ಸಂರಕ್ಷಣೆ ಸಲಕರಣೆ ತಯಾರಿಸುವ ಘಟಕ ಸ್ಥಾಪಿಸಲು ₹210 ಕೋಟಿ ಹೂಡಿಕೆ ಮಾಡಲಿವೆ ಎಂದರು.

ವಾಹನ ತಯಾರಿಕೆ, ಎಲೆಕ್ಟ್ರಾನಿಕ್ಸ್, ಇಂಧನ ಪರಿಹಾರ ವಲಯಗಳಲ್ಲಿ ₹25 ಸಾವಿರ ಕೋಟಿ ಮೊತ್ತದ ಬಂಡವಾಳ ಹೂಡಿಕೆಯ ಸಾಧ್ಯತೆಗಳನ್ನು ರಾಜ್ಯದ ನಿಯೋಗ ಗುರುತಿಸಿದೆ ಎಂದು ವಿವರಿಸಿದರು.

‘ಹೊಸೂರು ಬಳಿ ವಿಮಾನ ನಿಲ್ದಾಣ: ಕರ್ನಾಟಕಕ್ಕೆ ತೊಂದರೆಯಿಲ್ಲ’

ಕರ್ನಾಟಕ ಹೊಸ ವಿಮಾನ ನಿಲ್ದಾಣದ ಪ್ರಸ್ತಾವ ಘೋಷಣೆ ಮಾಡಿದ ನಂತರ ತಮಿಳುನಾಡು ಸಹ ಹೊಸೂರು ಬಳಿ ನೂತನ ವಿಮಾನ ನಿಲ್ದಾಣ ಆರಂಭಿಸುವುದಾಗಿ ಹೇಳಿದೆ. ಹೊಸೂರು ಬಳಿ ನಿಲ್ದಾಣವಾದರೆ ಕರ್ನಾಟಕಕ್ಕೆ ಯಾವ ತೊಂದರೆಯೂ ಇಲ್ಲ ಎಂದು ಸಚಿವ ಎಂ.ಬಿ. ಪಾಟೀಲ ಹೇಳಿದರು.

ವಾರ್ಷಿಕವಾಗಿ 10 ಕೋಟಿ ಪ್ರಯಾಣಿಕರನ್ನು ನಿರ್ವಹಿಸುವ ಮತ್ತೊಂದು ವಿಮಾನ ನಿಲ್ದಾಣ ಬೆಂಗಳೂರು ನಗರಕ್ಕೆ ಅಗತ್ಯವಿದ್ದು, 5 ಸಾವಿರ ಎಕರೆ ಜಮೀನು ಬೇಕಿದೆ. ಕನಕಪುರ ರಸ್ತೆ, ಮೈಸೂರು ರಸ್ತೆ, ಮಾಗಡಿ, ದೊಡ್ಡಬಳ್ಳಾಪುರ, ದಾಬಸ್‌ಪೇಟೆ, ತುಮಕೂರು ಬಳಿ ಸ್ಥಳ ಗುರುತಿಸಲಾಗುತ್ತಿದೆ ಎಂದರು.

ಈಗಿರುವ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು ದೆಹಲಿ ಮತ್ತು ಮುಂಬೈ ನಂತರದ ಅತಿ ದಟ್ಟಣೆಯ ಮೂರನೇ ನಿಲ್ದಾಣವಾಗಿದೆ. ವರ್ಷಕ್ಕೆ 5.2 ಕೋಟಿ ಪ್ರಯಾಣಿಕರನ್ನು ನಿರ್ವಹಿಸುತ್ತಿದೆ. ಎರಡು ರನ್ ವೇ ಇದ್ದು, ಅಲ್ಲಿ ವಿಸ್ತರಣೆ ಸಾಧ್ಯವಿಲ್ಲ ಎಂದರು.

ನಾನವಳಲ್ಲ, ಅವನು

ಐಆರ್‌ಎಸ್ ಅಧಿಕಾರಿ ಮನವಿಗೆ ಅಸ್ತು

ನವದೆಹಲಿ (ಪಿಟಿಐ): ಗಂಡಾಗಿ ಲಿಂಗ ಪರಿವರ್ತನೆಯಾಗಿರುವ ಭಾರತೀಯ ಕಂದಾಯ ಸೇವೆಯ (ಐಆರ್‌ಎಸ್) ಹಿರಿಯ ಮಹಿಳಾ ಅಧಿಕಾರಿ ಎಂ. ಅನುಸೂಯ ಅವರಿಗೆ, ಸರ್ಕಾರಿ ದಾಖಲೆಗಳಲ್ಲಿ ತನ್ನ ಇಚ್ಛೆಯಂತೆ ಲಿಂಗ ಮತ್ತು ಹೆಸರು ನಮೂದಿಸಿಕೊಳ್ಳಲು ಕೇಂದ್ರ ಹಣಕಾಸು ಸಚಿವಾಲಯವು ಒಪ್ಪಿಗೆ ನೀಡಿದೆ.

ಭಾರತೀಯ ನಾಗರಿಕ ಸೇವೆಯ ಇತಿಹಾಸದಲ್ಲಿಯೇ ಜರುಗಿದ ಮೊದಲ ಪ್ರಕರಣ ಇದಾಗಿದೆ.

ಅನುಸೂಯ ಅವರು, 2013ನೇ ಬ್ಯಾಚ್‌ನ ಐಆರ್‌ಎಸ್ (ಕಸ್ಟಮ್ಸ್ ಮತ್ತು ಪರೋಕ್ಷ ತೆರಿಗೆಗಳು) ಅಧಿಕಾರಿಯಾಗಿದ್ದಾರೆ. ಸದ್ಯ ಅವರು ಹೈದರಾಬಾದ್‌ನ ಮುಖ್ಯ ಆಯುಕ್ತರ ಕಚೇರಿಯ ಕಸ್ಟಮ್ಸ್, ಅಬಕಾರಿ ಮತ್ತು ಸೇವಾ ತೆರಿಗೆ ಮೇಲ್ಮನವಿ ನ್ಯಾಯಮಂಡಳಿಯಲ್ಲಿ (ಸಿಇಎಸ್‌ಟಿಎಟಿ) ಜಂಟಿ ಆಯುಕ್ತರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

‘ದಾಖಲೆಗಳಲ್ಲಿ ನನ್ನ ಹೆಸರನ್ನು ಎಂ. ಅನುಕತಿರ್ ಸೂರ್ಯ ಆಗಿ ಬದಲಾವಣೆ ಮಾಡಿಕೊಳ್ಳಬೇಕು ಮತ್ತು ಮಹಿಳಾ ಕಾಲಂನಲ್ಲಿ ಪುರುಷನೆಂದು ನಮೂದಿಸಬೇಕು’ ಎಂದು ಮನವಿ ಸಲ್ಲಿಸಿದ್ದರು.

‘ಅನುಸೂಯ ಅವರು ಸಲ್ಲಿಸಿದ್ದ ಮನವಿಯನ್ನು ಪುರಸ್ಕರಿಸಲಾಗಿದೆ. ಇನ್ನು ಮುಂದೆ ಸರ್ಕಾರದ ದಾಖಲೆಗಳಲ್ಲಿ ಅವರ ಹೆಸರನ್ನು ಅಧಿಕೃತವಾಗಿ ಅನುಕತಿರ್ ಸೂರ್ಯ ಎಂಬುದಾಗಿ ನಮೂದಿಸ ಬಹುದಾಗಿದೆ’ ಎಂದು ಮಂಗಳವಾರ ಹೊರಡಿಸಿರುವ ಆದೇಶದಲ್ಲಿ ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ಸ್‌ನ ಕೇಂದ್ರೀಯ ಮಂಡಳಿ (ಸಿಬಿಐಸಿ) ತಿಳಿಸಿದೆ.

ಸೂರ್ಯ ಅವರು 2013ರ ಡಿಸೆಂಬರ್‌ನಿಂದ ಚೆನ್ನೈನಲ್ಲಿ ಸಹಾಯಕ ಆಯುಕ್ತರಾಗಿ ವೃತ್ತಿ ಆರಂಭಿಸಿದರು. 2018ರಲ್ಲಿ ಡೆಪ್ಯುಟಿ ಆಯುಕ್ತರಾಗಿ ಬಡ್ತಿ ಹೊಂದಿದರು. ಕಳೆದ ವರ್ಷ ಅವರು ಹೈದರಾಬಾದ್‌ಗೆ ವರ್ಗಾವಣೆ ಆಗಿದ್ದಾರೆ.

2010ರಲ್ಲಿ ಮದ್ರಾಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯಿಂದ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ವಿಷಯದಲ್ಲಿ ಅವರು ಪದವಿ ಪಡೆದಿದ್ದಾರೆ.

2023ರಲ್ಲಿ ಭೋಪಾಲ್‌ನ ನ್ಯಾಷನಲ್ ಲಾ ಇನ್‌ಸ್ಟಿಟ್ಯೂಟ್ ಯುನಿವರ್ಸಿಟಿ ಯಿಂದ ಸೈಬರ್ ಕಾನೂನು ಮತ್ತು ಸೈಬರ್ ವಿಧಿವಿಜ್ಞಾನ ವಿಷಯದಲ್ಲಿ ಡಿಪ್ಲೊಮಾ ಕೋರ್ಸ್ ಪೂರ್ಣಗೊಳಿಸಿದ್ದಾರೆ.

ಸೆನ್ಸೆಕ್ಸ್ 426, ನಿಫ್ಟಿ 108 ಅಂಶ ಇಳಿಕೆ

ಷೇರುಪೇಟೆ: ಕರಡಿ ಕುಣಿತ



ಮುಂಬೈ/ ನವದೆಹಲಿ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಬುಧವಾರ ಗೂಳಿ ಓಟಕ್ಕೆ ತಡೆ ಬಿದ್ದಿದ್ದು, ಕರಡಿ ಕುಣಿತ ಜೋರಾಯಿತು.

ಆರಂಭಿಕ ವಹಿವಾಟಿನಲ್ಲಿ ಏರಿಕೆ ಕಂಡಿದ್ದ ಸೂಚ್ಯಂಕಗಳು ಹೂಡಿಕೆದಾರರು ಲಾಭ ಗಳಿಕೆಗೆ ಮುಂದಾಗಿದ್ದರಿಂದ ಇಳಿಕೆಯ ಹಾದಿ ಹಿಡಿದವು. ಇದರಿಂದ ಲೋಹ, ಆಟೊ ಮತ್ತು ಐ.ಟಿ ಷೇರುಗಳು ನಷ್ಟ ಕಂಡಿವೆ.

ಜಾಗತಿಕ ಮಟ್ಟದಲ್ಲಿ ಆರ್ಥಿಕತೆ ಬೆಳವಣಿಗೆಯು ಮಂದಗತಿಯಲ್ಲಿದೆ. ಇದು ಸರಕುಗಳ ಮಾರಾಟದ ಮೇಲೆ ಪರಿಣಾಮ ಬೀರಿದೆ. ಮತ್ತೊಂದೆಡೆ ಅಮೆರಿಕದ ಫೆಡರಲ್ ರಿಸರ್ವ್‌ನ ಬಡ್ಡಿ ದರ ಕಡಿತದ ಬಗ್ಗೆ ಅನಿಶ್ಚಿತತೆ ತಲೆದೋರಿದೆ. ಹಾಗಾಗಿ, ಸೂಚ್ಯಂಕಗಳು ಇಳಿಕೆ ಕಂಡಿವೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮುಂಬೈ ಷೇರು ಪೇಟೆ ಸೂಚ್ಯಂಕ ಸೆನ್ಸೆಕ್ಸ್ 426 ಅಂಶ ಇಳಿಕೆಯಾಗಿ 79,924ಕ್ಕೆ ಸ್ಥಿರಗೊಂಡಿತು. ದಿನದ ವಹಿವಾಟಿನ ವೇಳೆ 915 ಅಂಶ ಕುಸಿತ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 108 ಅಂಶ ಕಡಿಮೆಯಾಗಿ 24,324ಕ್ಕೆ ಅಂತ್ಯಗೊಂಡಿತು. ವಹಿವಾಟಿನ ವೇಳೆ 291 ಅಂಶ ಕುಸಿದಿತ್ತು.

ಟಾಟಾ ಸ್ಟೀಲ್, ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್, ಎಚ್‌ಸಿಎಲ್ ಟೆಕ್ನಾಲಜೀಸ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಜೆಎಸ್‌ಡಬ್ಲ್ಯು ಸ್ಟೀಲ್, ಟಾಟಾ ಮೋಟರ್ಸ್ ಮತ್ತು ಕೋಟಕ್ ಮಹೀಂದ್ರ ಬ್ಯಾಂಕ್‌ನ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಏಷ್ಯನ್ ಪೇಂಟ್ಸ್, ಎನ್‌ಟಿಪಿಸಿ, ಪವರ್ ಗ್ರಿಡ್, ಅದಾನಿ ಪೋರ್ಟ್ಸ್ ಮತ್ತು ಭಾರ್ತಿ ಏರ್‌ಟೆಲ್‌ನ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಬಿಎಸ್‌ಇ ಸ್ಮಾಲ್‌ಕ್ಯಾಪ್ ಸೂಚ್ಯಂಕ ಶೇ 0.69 ಮತ್ತು ಮಿಡ್‌ಕ್ಯಾಪ್ ಸೂಚ್ಯಂಕ ಶೇ 0.19ರಷ್ಟು ಇಳಿದಿದೆ. ಬ್ರೆಂಟ್ ಕಚ್ಚಾ ತೈಲವು ಶೇ 0.24ರಷ್ಟು ಏರಿಕೆಯಾಗಿದ್ದು, ಪ್ರತಿ ಬ್ಯಾರೆಲ್‌ಗೆ 84.66 (₹7,086) ಡಾಲರ್‌ಗೆ ಮುಟ್ಟಿದೆ.

ಮಹೀಂದ್ರ ಷೇರಿನ ಮೌಲ್ಯ ಭಾರಿ ಇಳಿಕೆ

ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು ತನ್ನ ಎಸ್‌ಯುವಿ ಮಾದರಿಯ ಕಾರುಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಹೆಚ್ಚಿಸಲು ದರ ಕಡಿತ ಮಾಡಿದ್ದರಿಂದ ಕಂಪನಿಯ ಷೇರಿನ ಮೌಲ್ಯದಲ್ಲಿ ಶೇ 7ರಷ್ಟು ಇಳಿಕೆಯಾಗಿದೆ.

ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಪ್ರತಿ ಷೇರಿನ ಬೆಲೆ ಕ್ರಮವಾಗಿ ₹2,732 ಮತ್ತು ₹2,729ಕ್ಕೆ ಇಳಿದಿದೆ.

ಒಂದೇ ದಿನ ಕಂಪನಿಯ ಮಾರುಕಟ್ಟೆ ಮೌಲ್ಯವು ₹24,087 ಕೋಟಿ ಕರಗಿದೆ. ಒಟ್ಟು ಎಂ–ಕ್ಯಾಪ್ ₹3.39 ಲಕ್ಷ ಕೋಟಿ ಆಗಿದೆ.

ಟ್ರೇಡ್‌ಮಾರ್ಕ್ ನಿಯಮ ಉಲ್ಲಂಘಿಸಿದ ಪತಂಜಲಿ

ಮುಂಬೈ (ಪಿಟಿಐ): ಟ್ರೇಡ್‌ಮಾರ್ಕ್ ನಿಯಮ ಉಲ್ಲಂಘಿಸಿದ ಆರೋಪದ ಮೇರೆಗೆ ನ್ಯಾಯಾಲಯದಲ್ಲಿ ₹50 ಲಕ್ಷ ಮೊತ್ತವನ್ನು ಠೇವಣಿ ಇಡುವಂತೆ ಪತಂಜಲಿ ಆಯುರ್ವೇದ್ ಲಿಮಿಟೆಡ್‌ಗೆ, ಬಾಂಬೆ ಹೈಕೋರ್ಟ್ ಸೂಚಿಸಿದೆ.

ಪತಂಜಲಿ ಕಂಪನಿಯು ಕರ್ಪೂರ ಉತ್ಪನ್ನಗಳ ಮಾರಾಟಕ್ಕೆ ನಮ್ಮ ಕಂಪನಿಯ ಟ್ರೇಡ್‌ಮಾರ್ಕ್ ಅನ್ನು ದುರ್ಬಳಕೆ ಮಾಡಿಕೊಂಡಿದೆ ಎಂದು ಆರೋಪಿಸಿ ಮಂಗಳಂ ಆರ್ಗಾನಿಕ್ಸ್ ಕಂಪನಿಯು ಹೈಕೋರ್ಟ್‌ನ ಮೆಟ್ಟಿಲೇರಿತ್ತು. ಈ ಪ್ರಕರಣದ ವಿಚಾರಣೆ ನಡೆಸಿದ್ದ ಹೈಕೋರ್ಟ್, 2023ರ ಆಗಸ್ಟ್ 30ರಂದು ನೀಡಿದ್ದ ಮಧ್ಯಂತರ ಆದೇಶದಲ್ಲಿ ತಡೆಯಾಜ್ಞೆ ನೀಡಿತ್ತು.

ಆದರೆ, ಈ ಆದೇಶ ಉಲ್ಲಂಘಿಸಿರುವ ಪತಂಜಲಿಯು ಉತ್ಪನ್ನಗಳನ್ನು ಮಾರಾಟ ಮಾಡಿದೆ ಎಂದು ಮಂಗಳಂ ಕಂಪನಿಯು ದೂರಿತ್ತು.

ಜುಲೈ 8ರಂದು ಈ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಆರ್.ಐ. ಚಾಗ್ಲಾ ನೇತೃತ್ವದ ಏಕಸದಸ್ಯ ಪೀಠವು, ‘ಟ್ರೇಡ್‌ಮಾರ್ಕ್ ಉಲ್ಲಂಘಿಸಿರುವ ಬಗ್ಗೆ ಜೂನ್‌ನಲ್ಲಿ ಪತಂಜಲಿ ಕಂಪನಿಯು ನ್ಯಾಯಾಲಯಕ್ಕೆ ಪ್ರಮಾಣ ಪತ್ರ ಸಲ್ಲಿಸಿದೆ. ಆದರೂ, ಮತ್ತೆ ಕೋರ್ಟ್‌ನ ಆದೇಶವನ್ನು ಉಲ್ಲಂಘಿಸಿದೆ. ಇದನ್ನು ಸಹಿಸಲು ಸಾಧ್ಯವಿಲ್ಲ’ ಎಂದು ಎಚ್ಚರಿಕೆ ನೀಡಿದೆ.

ಬಳಿಕ ಜುಲೈ 19ಕ್ಕೆ ವಿಚಾರಣೆಯನ್ನು ಮುಂದೂಡಿತು.

₹49.57 ಲಕ್ಷ ಮೌಲ್ಯದ ಉತ್ಪನ್ನ ಮಾರಾಟ: ತಡೆಯಾಜ್ಞೆ ಬಳಿಕವೂ ₹49.57 ಲಕ್ಷ ಮೌಲ್ಯದ ಉತ್ಪನ್ನಗಳನ್ನು ಮಾರಾಟ ಮಾಡಿರುವುದಾಗಿ ಪತಂಜಲಿ ಕಂಪನಿಯ ನಿರ್ದೇಶಕ ರಜನೀಶ್ ಮಿಶ್ರಾ ಅವರು, ಜೂನ್‌ನಲ್ಲಿ ಸಲ್ಲಿಸಿದ್ದ ಪ್ರಮಾಣ ಪತ್ರದಲ್ಲಿ ತಿಳಿಸಿದ್ದರು.

ಬೇಷರತ್ತಾಗಿ ಕ್ಷಮೆಯಾಚಿಸಿದ್ದ ಅವರು, ನ್ಯಾಯಾಲಯದ ಆದೇಶಕ್ಕೆ ಬದ್ಧವಾಗಿ ಇರುವುದಾಗಿ ಹೇಳಿದ್ದರು.

ಮುಂಬೈ ಧಾರಣೆ

ಶೇಂಗಾ 10-07-2024	
ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10700-10800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1530 (1540)
ಒಂದು ವಾರದ ಡೆಲಿವರಿ	1525 (1535)
ಸೋಯಾ ಕಚ್ಚಾ	912 (917)
ಪಾಮ್ ವಾರದ ಡೆಲಿವರಿ	901 (904)
ಸೂರ್ಯಕಾಂತಿ ಎಣ್ಣೆ ಕಚ್ಚಾ	915 (920)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10ಗ್ರಾಂ	₹72,350 (72,150)
ಬೆಳ್ಳಿ ಕೆ.ಜಿ	₹91,700 (91,900)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹203
ಆರ್‌ಎಸ್‌ಎಸ್-5	₹195.50
ಗುಡ್ ಲಾಟ್	₹182.50

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹9400-9400
ತಿಪಟೂರು	₹8800-9500
ತುರುವೇಕೆರೆ	₹9300-9300

ಟಾಟಾ, ಮಹೀಂದ್ರ ಎಸ್‌ಯುವಿ ಬೆಲೆ ಕಡಿತ

ನವದೆಹಲಿ (ಪಿಟಿಐ): ಟಾಟಾ ಮೋಟರ್ಸ್ ಮತ್ತು ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯು ತನ್ನ ಎಸ್‌ಯುವಿ ಕಾರುಗಳ ದರವನ್ನು ಕಡಿತಗೊಳಿಸಿವೆ.

ಮಾರುಕಟ್ಟೆಯಲ್ಲಿ ಈ ಮಾದರಿಯ ಕಾರುಗಳಿಗೆ ಬೇಡಿಕೆ ಹೆಚ್ಚಿಸಲು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಹೇಳಿವೆ.

ಟಾಟಾ ಮೋಟರ್ಸ್‌ನ ಹ್ಯಾರಿಯರ್ ಮತ್ತು ಸಫಾರಿ ಕಾರಿನ ಪರಿಷ್ಕೃತ ಆರಂಭಿಕ ಬೆಲೆಯು ಕ್ರಮವಾಗಿ ₹14.99 ಲಕ್ಷ ಮತ್ತು ₹15.49 ಲಕ್ಷ ಆಗಿದೆ. ಇತರೆ ಪ್ರಮುಖ ಎಸ್‌ಯುವಿ ಕಾರುಗಳನ್ನು ಖರೀದಿಸುವ ಗ್ರಾಹಕರಿಗೆ ₹1.4 ಲಕ್ಷದವರೆಗೆ ಪ್ರಯೋಜನ ದೊರೆಯಲಿದೆ. ವಿದ್ಯುತ್‌ಚಾಲಿತ ನೆಕ್ಸಾನ್‌ಗೆ ₹1.3 ಲಕ್ಷ ಮತ್ತು ಪಂಚ್ ಕಾರಿಗೆ ₹30 ಸಾವಿರವರೆಗೆ ರಿಯಾಯಿತಿ ಸೌಲಭ್ಯ ದೊರೆಯಲಿದೆ ಎಂದು ಟಾಟಾ ಪ್ಯಾಸೆಂಜರ್‌ನ ಎಲೆಕ್ಟ್ರಿಕ್ ಮೊಬಿಲಿಟಿಯ ಮುಖ್ಯ ವಾಣಿಜ್ಯ ಅಧಿಕಾರಿ ವಿವೇಕ್ ಶ್ರೀವತ್ಸ ತಿಳಿಸಿದ್ದಾರೆ.

ಮಹೀಂದ್ರ ಆ್ಯಂಡ್ ಮಹೀಂದ್ರದ ಎಕ್ಸ್‌ಯುವಿ700 ಕಾರಿನ ಎಎಕ್ಸ್7 ಶ್ರೇಣಿಗೆ ₹19.49 ಲಕ್ಷ ಆರಂಭಿಕ ಬೆಲೆ ನಿಗದಿಪಡಿಸಲಾಗಿದೆ. ಈ ಕಾರಿನ ಬೆಲೆಯು ₹2 ಲಕ್ಷದಷ್ಟು ಕಡಿತಗೊಂಡಿದೆ.

ಜಾಗ್ವಾರ್ ಮಾರಾಟ ಹೆಚ್ಚಳ: ಜಾಗ್ವಾರ್ ಲ್ಯಾಂಡ್ ರೋವರ್ ಇಂಡಿಯಾದ ವಾಹನಗಳ ಚಿಲ್ಲರೆ ಮಾರಾಟವು ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ (ಏಪ್ರಿಲ್–ಜೂನ್) ಶೇ 31ರಷ್ಟು ಏರಿಕೆಯಾಗಿದೆ. ಒಟ್ಟು 1,371 ವಾಹನಗಳು ಮಾರಾಟವಾಗಿವೆ ಎಂದು ಕಂಪನಿ ತಿಳಿಸಿದೆ.

₹6,481 ಕೋಟಿ ಡಿವಿಡೆಂಡ್ ಪಾವತಿ

ನವದೆಹಲಿ (ಪಿಟಿಐ): 2023–24ನೇ ಆರ್ಥಿಕ ವರ್ಷದಲ್ಲಿ ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್ ಸೇರಿ ನಾಲ್ಕು ಬ್ಯಾಂಕ್‌ಗಳಿಂದ ಕೇಂದ್ರ ಸರ್ಕಾರಕ್ಕೆ ₹6,481 ಕೋಟಿ ಡಿವಿಡೆಂಡ್ ಪಾವತಿಸಲಾಗಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಬ್ಯಾಂಕ್‌ಗಳ ಮುಖ್ಯಸ್ಥರು ಚೆಕ್ ಸಲ್ಲಿಸಿದ್ದಾರೆ.

ಬ್ಯಾಂಕ್ ಆಫ್ ಬರೋಡಾ ₹2,514 ಕೋಟಿ, ಕೆನರಾ ಬ್ಯಾಂಕ್ ₹1,838 ಕೋಟಿ, ಇಂಡಿಯನ್ ಬ್ಯಾಂಕ್ ₹1,193 ಕೋಟಿ, ಬ್ಯಾಂಕ್ ಆಫ್ ಇಂಡಿಯಾ ₹935 ಕೋಟಿ ಡಿವಿಡೆಂಡ್ ಪಾವತಿಸಿದೆ. ಎಕ್ಸಿಮ್ ಬ್ಯಾಂಕ್ ₹252 ಕೋಟಿ ಡಿವಿಡೆಂಡ್ ಪಾವತಿ ಮಾಡಿದೆ.

ಯುದ್ಧಭೂಮಿಯಲ್ಲಿ ಪರಿಹಾರ ಸಿಗದು: ಪ್ರಧಾನಿ ಮೋದಿ

ವಿಯೆನ್ನಾ (ಪಿಟಿಐ): ಆಸ್ಟ್ರೀಯಾ ಪ್ರವಾಸದ ಮೊದಲ ದಿನವಾದ ಬುಧವಾರ ಪ್ರಧಾನಿ ನರೇಂದ್ರ ಮೋದಿ ಅವರು ಆಸ್ಟ್ರೀಯಾ ಗಣರಾಜ್ಯದ ಚಾನ್ಸೆಲರ್ ಕಾರ್ಲ್ ನೆಹಮ್ಮೆರ್ ಮತ್ತು ಅಧ್ಯಕ್ಷ ಅಲೆಕ್ಸಾಂಡರ್ ವ್ಯಾನ್ ಡೆರ್ ಬೆಲ್ಲೆನ್ ಅವರನ್ನು ಭೇಟಿಯಾಗಿದ್ದು, ಪ್ರಚಲಿತ ವಿದ್ಯಮಾನ ಕುರಿತು ಚರ್ಚಿಸಿದರು.

ಉಕ್ರೇನ್ ಬಿಕ್ಕಟ್ಟು ಸೇರಿದಂತೆ ಜಗತ್ತನ್ನು ಪ್ರಸ್ತುತ ಬಾಧಿಸುತ್ತಿರುವ ವಿವಿಧ ವಿಷಯಗಳ ಕುರಿತು ಚರ್ಚಿಸಿದ್ದು, ‘ಇದು, ಯುದ್ಧದ ಕಾಲವಲ್ಲ’ ಎಂಬುದನ್ನು ಮತ್ತೆ ಪ್ರತಿಪಾದಿಸಿದರು.

ಮಾಸ್ಕೊ ಪ್ರವಾಸದ ಬಳಿಕ ಮೋದಿ ಆಸ್ಟ್ರೀಯಾ ಪ್ರವಾಸವನ್ನು ಕೈಗೊಂಡಿದ್ದು, 40 ವರ್ಷದ ಬಳಿಕ ಇಲ್ಲಿಗೆ ಭೇಟಿ ನೀಡಿದ ಭಾರತದ ಪ್ರಧಾನಿ ಎಂಬ ಹಿರಿಮೆಗೂ ಪಾತ್ರರಾದರು.

‘ಭಾರತ ಮತ್ತು ಆಸ್ಟ್ರೀಯಾ ಬಾಂಧವ್ಯವನ್ನು ಇನ್ನಷ್ಟು ಬಲಪಡಿಸಲು ಹೊಸ ಸಾಧ್ಯತೆಗಳನ್ನು ಗುರುತಿಸಲಾಗಿದೆ. ಮುಂದಿನ ದಶಕದಲ್ಲಿ ಸಾಗಬೇಕಾದ ದಾರಿ ಕುರಿತು ನೀಲನಕ್ಷೆ ಸಿದ್ಧಪಡಿಸುತ್ತಿದೆ’ ಎಂದು ಮೋದಿ ಮತ್ತು ನೆಹಮ್ಮೆರ್ ಜಂಟಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಉಕ್ರೇನ್ ಬಿಕ್ಕಟ್ಟು ಸೇರಿ ಹಲವು ವಿಷಯಗಳನ್ನು ವಿಸ್ತೃತವಾಗಿ ನಾವು ಚರ್ಚಿಸಿದ್ದೇವೆ. ಇದು, ಯುದ್ಧದ ಕಾಲವಲ್ಲ ಎಂಬುದು ನನ್ನ ದೃಢ ನಿಲುವು’ ಎಂದು ಮೋದಿ ಹೇಳಿದರು.

ಯುದ್ಧಭೂಮಿಯಲ್ಲಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲಾಗದು. ಭಾರತ ಮತ್ತು ಆಸ್ಟ್ರೀಯಾ ಎಂದಿಗೂ ಮಾತುಕತೆ ಮತ್ತು ರಾಜತಾಂತ್ರಿಕತೆಗೆ ಒತ್ತು ನೀಡಲಿವೆ. ಈ ದೃಷ್ಟಿಯಿಂದ ಯಾವುದೇ ರೀತಿಯ ಬೆಂಬಲ ನೀಡಲೂ ಸಿದ್ಧ ಎಂದು ಹೇಳಿದರು.

ಭಯೋತ್ಪಾದನೆ ಕೃತ್ಯಗಳನ್ನು ಉಭಯ ರಾಷ್ಟ್ರಗಳು ಖಂಡಿಸಲಿವೆ. ಯಾವುದೇ ಸ್ವರೂಪದಲ್ಲಿ ಭಯೋತ್ಪಾದನೆಯನ್ನು ಒಪ್ಪಲಾಗದು. ಇದು ಸಮರ್ಥನೀಯವೂ ಅಲ್ಲ ಎಂದು ಮೋದಿ ಹೇಳಿದರು.

ಆಸ್ಟ್ರೀಯಾಗೆ ತಮ್ಮ ಭೇಟಿಯು ಐತಿಹಾಸಿಕವಾಗಿದೆ. 40 ವರ್ಷಗಳಲ್ಲಿ ಭಾರತದ ಯಾವುದೇ ಪ್ರಧಾನಿ ಇಲ್ಲಿಗೆ ಭೇಟಿ ನೀಡಿರಲಿಲ್ಲ ಎಂದರು.

‘ವಿಶ್ವಸಂಸ್ಥೆ ಸೇರಿದಂತೆ ಇತರೆ ಅಂತರ ರಾಷ್ಟ್ರೀಯ ಸಂಸ್ಥೆಗಳನ್ನು ಸಮಕಾಲೀನ ಹಾಗೂ ಪರಿಣಾಮಕಾರಿ ಆಗಿರುವಂತೆ ಸುಧಾರಣೆಗೆ ಒಳಪಡಿಸಲು ನಾವು ಒಪ್ಪಿದ್ದೇವೆ’ ಎಂದು ಹೇಳಿದರು.

ಅಧ್ಯಕ್ಷರ ಜೊತೆಗಿನ ಭೇಟಿ ಕುರಿತು ‘ಎಕ್ಸ್’ನಲ್ಲಿ ಸಂದೇಶ ಹಂಚಿಕೊಂಡಿರುವ ಮೋದಿ ಅವರು, ‘ಬೆಲ್ಲೆನ್ ಅವರ ಜೊತೆಗೆ ಉತ್ತಮ ಸಂವಾದ ನಡೆಯಿತು. ಭಾರತ –ಆಸ್ಟ್ರೀಯಾ ಸಹಕಾರ ವೃದ್ಧಿ ಕುರಿತು ವಿಸ್ತೃತವಾಗಿ ಚರ್ಚಿಸಿದೆವು’ ಎಂದು ತಿಳಿಸಿದರು.



ಆಸ್ಟ್ರೀಯಾ ಪ್ರವಾಸ ಕೈಗೊಂಡಿರುವ ಪ್ರಧಾನಿ ಮೋದಿ ಅವರೊಂದಿಗೆ ಬುಧವಾರ ವಿಯೆನ್ನಾದಲ್ಲಿ ಆಸ್ಟ್ರೀಯಾದ ಚಾನ್ಸೆಲರ್ ಕಾರ್ಲ್ ನೆಹಮ್ಮೆರ್ ಸೆಲ್ಫಿ ತೆಗೆದುಕೊಂಡರು –ಎಎಫ್‌ಪಿ ಚಿತ್ರ

ಶಾಂತಿ ಸ್ಥಾಪನೆ: ಭಾರತದ ಪಾತ್ರ ಹಿರಿದು

‘ಭಾರತ ಪ್ರಭಾವಿ ಮತ್ತು ವಿಶ್ವಾಸಾರ್ಹ ದೇಶವಾಗಿದೆ. ರಷ್ಯಾ–ಉಕ್ರೇನ್ ಶಾಂತಿ ಪ್ರಕ್ರಿಯೆಯಲ್ಲಿ ಅದರ ಪಾತ್ರ ಮಹತ್ವದ್ದಾಗಿದೆ’ ಎಂದು ಆಸ್ಟ್ರೀಯಾದ ಚಾನ್ಸೆಲರ್ ಕಾರ್ಲ್ ನೆಹಮ್ಮೆರ್ ಹೇಳಿದರು.

ಔಪಚಾರಿಕ ಮಾತುಕತೆ ಬಳಿಕ ಪ್ರಧಾನಿ ಮೋದಿ ಅವರೊಂದಿಗೆ ನಡೆಸಿದ ಜಂಟಿ ಸುದ್ದಿಗೋಷ್ಠಿಯಲ್ಲಿ ನೆಹಮ್ಮೆರ್ ಈ ಮಾತು ಹೇಳಿದರು.

‘ಶಾಂತಿ ಸ್ಥಾಪನೆಯಲ್ಲಿ ರಷ್ಯಾದ ಉದ್ದೇಶ ಕುರಿತಂತೆ ಪ್ರಧಾನಿ ಅವರ ವಿಶ್ಲೇಷಣೆ ತಿಳಿಯುವುದು ನನಗೆ ಮುಖ್ಯವಾಗಿತ್ತು. ಉಕ್ರೇನ್ ವಿಷಯದ ಜೊತೆಗೆ ಮಧ್ಯಪ್ರಾಚ್ಯ ದೇಶಗಳ ಪ್ರಚಲಿತ ವಿದ್ಯಮಾನ ಕುರಿತು ಪ್ರಮುಖವಾಗಿ ಚರ್ಚಿಸಿದೆವು’ ಎಂದು ತಿಳಿಸಿದರು.

‘ಭಾರತದೊಡನೆ ಬಾಂಧವ್ಯ ಅಬಾಧಿತ’

ವಾಷಿಂಗ್ಟನ್ (ಪಿಟಿಐ): ರಷ್ಯಾದೊಡನೆ ಭಾರತವು ಬಾಂಧವ್ಯ ಇಟ್ಟುಕೊಂಡಿದ್ದರೂ, ಆ ದೇಶದ ಜೊತೆಗಿನ ಕಾರ್ಯತಂತ್ರ ಪಾಲುದಾರಿಕೆ ಮುಂದುವರಿಯಲಿದೆ ಎಂದು ಅಮೆರಿಕ ಹೇಳಿದೆ.

ಪ್ರಧಾನಿ ನರೇಂದ್ರ ಮೋದಿ ಅವರ ರಷ್ಯಾ ಪ್ರವಾಸ, ಭಾರತ–ರಷ್ಯಾ ಶೃಂಗಸಭೆಯ ಪ್ರಗತಿ ಎಲ್ಲವನ್ನೂ ಪಶ್ಚಿಮ ರಾಷ್ಟ್ರಗಳು ಉಕ್ರೇನ್ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಸೂಕ್ಷ್ಮವಾಗಿ ಗಮನಿಸುತ್ತಿವೆ. ಪ್ರಧಾನಿ ಮೋದಿ ಅವರ ಪ್ರವಾಸ ಕುರಿತು ಪ್ರತಿಕ್ರಿಯಿಸಿರುವ ಅಮೆರಿಕದ ರಕ್ಷಣಾ ಇಲಾಖೆಯ ವಕ್ತಾರರು, ಭಾರತ–ರಷ್ಯಾ ನಡುವೆ ದೀರ್ಘಕಾಲದ ಬಾಂಧವ್ಯವಿದೆ. ಹಾಗಿದ್ದೂ ಅಮೆರಿಕದ ದೃಷ್ಟಿಕೋನದಿಂದ ಭಾರತ ಎಂದಿಗೂ ಕಾರ್ಯತಂತ್ರ ಪಾಲುದಾರ ರಾಷ್ಟ್ರವಾಗಿ ಮುಂದುವರಿಯಲಿದೆ’ ಎಂದರು.

‘ಭಾರತ ಮತ್ತು ರಷ್ಯಾ ನಡುವಣ ಭೇಟಿಯನ್ನು ಇಡೀ ಜಗತ್ತು ಗಮನಿಸುತ್ತಿದೆ’ ಎಂದು ಪೆಂಟಗನ್‌ನ ಪತ್ರಿಕಾ ಕಾರ್ಯದರ್ಶಿ ಮೇಜರ್ ಜನರಲ್ ಪ್ಯಾಟ್ ರೈಡರ್ ಹೇಳಿದರು.

ಗಾಜಾ ತೊರೆಯಿರಿ: ಪ್ಯಾಲೆಸ್ಟೀನಿಯರಿಗೆ ಇಸ್ರೇಲ್ ಸೇನೆ ತಾಕೀತು

ಜೆರುಸಲೇಂ (ಎ.ಪಿ): ಎಲ್ಲ ಪ್ಯಾಲೆಸ್ಟೀನಿಯನ್ನರು ಗಾಜಾ ನಗರವನ್ನು ಕೂಡಲೇ ತೊರೆಯಬೇಕು ಎಂದು ಇಸ್ರೇಲ್ ಸೇನೆಯು ಆದೇಶಿಸಿದೆ.

ನಗರದ ವಿವಿಧೆಡೆ ಮತ್ತೆ ಗುಂಪುಗೂಡುತ್ತಿರುವ ಹಮಾಸ್ ಬಂಡುಕೋರರನ್ನು ಗುರಿಯಾಗಿಸಿ ಕಾರ್ಯಾಚರಣೆಯನ್ನು ಆರಂಭಿಸಲಾಗುವುದು ಎಂದು ಸೇನೆಯು ಹೇಳಿದೆ.

ಇಸ್ರೇಲ್ ಸೇನೆ ಸದ್ಯ ಗಾಜಾ ನಗರವನ್ನು ಸುತ್ತುವರಿದಿದೆ. ದಾಳಿ ಹಿನ್ನೆಲೆಯಲ್ಲಿ ಸಾವಿರಾರು ಪ್ಯಾಲೆಸ್ಟೀನಿಯರು ಈಗಾಗಲೇ ಗಾಜಾ ಪಟ್ಟಿ ತೊರೆದಿದ್ದಾರೆ. ಆರಂಭದಲ್ಲಿ ದಾಳಿ ನಡೆಸಿದ್ದ ಸ್ಥಳದಲ್ಲಿ ಹಮಾಸ್ ಬಂಡುಕೋರರು ಮತ್ತೆ ಗುಂಪು ಸೇರುತ್ತಿದ್ದಾರೆ ಎಂಬ ಹಿನ್ನೆಲೆಯಲ್ಲಿ ಈ ಎಚ್ಚರಿಕೆ ನೀಡಿದೆ.

ಹಮಾಸ್ ಬಂಡುಕೋರರು ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ದಾಳಿ ನಡೆಸಿದ್ದು, 250 ಜನರನ್ನು ಅಪಹರಿಸಿ ಒತ್ತೆ ಇರಿಸಿಕೊಂಡಿತ್ತು. ದಾಳಿಯಲ್ಲಿ ಸುಮಾರು 1,200 ಜನರು ಸತ್ತಿದ್ದರು. ಪ್ರತಿಯಾಗಿ ಇಸ್ರೇಲ್ ಸೇನೆ ತೀವ್ರ ವಾಯುದಾಳಿ ಆರಂಭಿಸಿತ್ತು. ಪರಿಣಾಮ, ಇದುವರೆಗೆ ಗಾಜಾದಲ್ಲಿ 38,000 ಜನರು ಸತ್ತಿದ್ದಾರೆ.

20 ಪ್ಯಾಲೆಸ್ಟೀನಿಯನ್ನರ ಸಾವು: ಗಾಜಾದ ಮಧ್ಯ ಭಾಗದಲ್ಲಿ ಬುಧವಾರ ಮುಂಜಾನೆ ವೈಮಾನಿಕ ದಾಳಿ ನಡೆಸಿದ ಇಸ್ರೇಲಿ ಪಡೆಗಳು ಆರು ಮಕ್ಕಳು, ಮೂವರು ಮಹಿಳೆಯರು ಸೇರಿದಂತೆ 20 ಪ್ಯಾಲೆಸ್ಟೀನಿಯನ್ನರನ್ನು ಕೊಂದಿವೆ. ಇದರಲ್ಲಿ ಕೆಲವರು, ಇಸ್ರೇಲಿ ಸೇನೆ ಘೋಷಿಸಿದ್ದ ‘ಸುರಕ್ಷಿತಾ ವಲಯ’ದಲ್ಲಿ ಇದ್ದವರಾಗಿದ್ದಾರೆ ಎಂದು ಆಸ್ಪತ್ರೆಯ ಅಧಿಕಾರಿಗಳು ತಿಳಿಸಿದ್ದಾರೆ.

ಡೀರ್ ಅಲ್-ಬಲಾಹ್ ಮತ್ತು ಸಮೀಪದ ನಿರಾಶ್ರಿತರ ಶಿಬಿರಗಳ ಮೇಲೆ ಈ ದಾಳಿಗಳನ್ನು ನಡೆಸಲಾಗಿದೆ. ಕದನ ವಿರಾಮ ಮತ್ತು ಒತ್ತೆಯಾಳುಗಳ ಬಿಡುಗಡೆಗೆ ಸಂಬಂಧಿಸಿದಂತೆ ಕತಾರ್‌ನ ರಾಜಧಾನಿ ದೋಹಾದಲ್ಲಿ ಅಮೆರಿಕ, ಈಜಿಪ್ಟ್, ಕತಾರ್‌ನ ಮಧ್ಯವರ್ತಿಗಳು ಮತ್ತು ಇಸ್ರೇಲ್ ಅಧಿಕಾರಿಗಳು ಮಾತುಕತೆ ನಡೆಸುತ್ತಿದ್ದ ಬೆನ್ನಲ್ಲೇ ಈ ವೈಮಾನಿಕ ದಾಳಿಗಳು ನಡೆದಿವೆ.

ಸಂಕ್ಷಿಪ್ತ ಸುದ್ದಿ

ಗಡಿ ಸಮಸ್ಯೆ ಬಗೆಹರಿಸಲು ಸಿದ್ಧ: ಚೀನಾ ಸಚಿವ

ಬೀಜಿಂಗ್(ಪಿಟಿಐ): ಗಡಿ ವಿಚಾರವಾಗಿ ಉಭಯ ದೇಶಗಳ ನಡುವೆ ಉಲ್ಬಣಗೊಂಡಿರುವ ಸಮಸ್ಯೆಗಳನ್ನು ಸೂಕ್ತವಾಗಿ ಬಗೆಹರಿಸುವ ನಿಟ್ಟಿನಲ್ಲಿ ಭಾರತದೊಂದಿಗೆ ಸಹಕರಿಸಲು ಸಿದ್ಧವಿರುವುದಾಗಿ ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಹೇಳಿದ್ದಾರೆ.

ಅಜಿತ್ ಡೋಭಾಲ್ ಅವರು ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿ ಮರುನೇಮಕವಾದ ಹಿನ್ನೆಲೆಯಲ್ಲಿ ವಾಂಗ್ ಅವರು ಶುಭಕೋರಲು ಮಂಗಳವಾರ ಕಳುಹಿಸಿದ್ದ ಸಂದೇಶದಲ್ಲಿ ಈ ವಿಚಾರ ತಿಳಿಸಿದ್ದಾರೆ. ವಾಂಗ್ ಅವರು ಚೀನಾದ ವಿದೇಶಾಂಗ ಸಚಿವರಷ್ಟೇ ಅಲ್ಲದೆ ಭಾರತ–ಚೀನಾ ಗಡಿ ಬಿಕ್ಕಟ್ಟಿಗೆ ಸಂಬಂಧಿಸಿದಂತೆ ಚೀನಾದ ವಿಶೇಷ ಪ್ರತಿನಿಧಿಯೂ ಆಗಿದ್ದಾರೆ.

‘ಗಡಿ ವಿಚಾರವಾಗಿ ಎರಡೂ ದೇಶಗಳು ಒಮ್ಮತಕ್ಕೆ ಬರಬೇಕಿದೆ. ಗಡಿಯಲ್ಲಿ ಉದ್ಭವವಾಗಿರುವ ಬಿಕ್ಕಟ್ಟು ಬಗೆಹರಿಸಿಕೊಳ್ಳಲು ನಾವು ಭಾರತದೊಂದಿಗೆ ಸಹಕರಿಸಲು ಸಿದ್ಧವಿದ್ದೇವೆ. ಈ ಮೂಲಕ ಗಡಿಯಲ್ಲಿ ಶಾಂತಿ ಸ್ಥಾಪನೆ ಮಾಡಬೇಕಿದೆ’ ಎಂದು ವಾಂಗ್ ಅವರು ಡೋಭಾಲ್ ಅವರಿಗೆ ತಿಳಿಸಿರುವುದಾಗಿ ಚೀನಾ ಮಾಧ್ಯಮಗಳು ವರದಿ ಮಾಡಿವೆ.

‘ರಷ್ಯಾ ಸೇನೆಗೆ ಭಾರತೀಯರ ಅಗತ್ಯವಿಲ್ಲ’

ನವದೆಹಲಿ (ಪಿಟಿಐ): ‘ರಷ್ಯಾ ಸೇನೆಗೆ ಭಾರತೀಯರ ಅಗತ್ಯವೇನೂ ಇಲ್ಲ. ಯಾವುದೇ ಅಧಿಕೃತ ಪ್ರಕಟಣೆ ನೀಡಿ, ಅವರನ್ನು ನೇಮಕ ಮಾಡಿಕೊಂಡಿಲ್ಲ’ ಎಂದು ರಷ್ಯಾ ಕಾನ್ಸುಲೇಟ್ ಕಚೇರಿ ಮುಖ್ಯಸ್ಥ ರೋಮನ್ ಬಬುಷ್ಕಿನ್ ಪ್ರತಿಕ್ರಿಯಿಸಿದ್ದಾರೆ. ಹಣ ಗಳಿಕೆಯ ವಾಣಿಜ್ಯ ಉದ್ದೇಶದಿಂದ ಕೆಲವರು ಸೇನೆಯಲ್ಲಿ ಕೆಲಸಕ್ಕೆ ಸೇರಿದ್ದಾರಷ್ಟೆ. ಅಂತಹವರ ಸಂಖ್ಯೆ ಕೂಡ ಅತಿ ಕಡಿಮೆಯಾಗಿದೆ. ಇಲ್ಲಿನ ಸೇನೆಯಲ್ಲಿರುವ ಭಾರತ ಮೂಲದವರ ಕುರಿತು ಭಾರತೀಯರಿಗೆ ಇರುವ ಅಭಿಪ್ರಾಯವೇ ನಮಗೂ ಇದೆ ಎಂದಿದ್ದಾರೆ.

ಮೂರನೇ ಟಿ20 ಪಂದ್ಯ: ಭಾರತಕ್ಕೆ 2–1 ಮುನ್ನಡೆ • ಗಿಲ್ ಅರ್ಧಶತಕ • ಸುಂದರ್‌ಗೆ 3 ವಿಕೆಟ್

ಆಲ್‌ರೌಂಡ್ ಆಟಕ್ಕೆ ಒಲಿದ ಜಯ

ಹರಾರೆ (ಪಿಟಿಐ): ನಾಯಕ ಶುಭಮನ್ ಗಿಲ್ ಮತ್ತು ಋತುರಾಜ್ ಗಾಯಕವಾಡ ಅವರು ಗುಣಮಟ್ಟದ ಇನಿಂಗ್ಸ್ ಆಡಿದರು. ನಂತರ ಬೌಲರ್‌ಗಳ ಸಾಂಘಿಕ ಪ್ರಯತ್ನದ ಬಲದಿಂದ ಭಾರತ ತಂಡ ಬುಧವಾರ ನಡೆದ ಮೂರನೇ ಟಿ20 ಪಂದ್ಯದಲ್ಲಿ ಜಿಂಬಾಬ್ವೆ ತಂಡವನ್ನು 23 ರನ್‌ಗಳಿಂದ ಸೋಲಿಸಿತು.

ಟಾಸ್ ಗೆದ್ದು ಬ್ಯಾಟ್ ಮಾಡಿದ ಭಾರತ ತಂಡವು ಗಿಲ್ (66, 49 ಎಸೆತ), ಯಶಸ್ವಿ ಜೈಸ್ವಾಲ್ (36, 27ಎ) ಮತ್ತು ಗಾಯಕವಾಡ (49, 28ಎ) ಅವರ ಉಪಯುಕ್ತ ಆಟದ ನೆರವಿನಿಂದ 4 ವಿಕೆಟ್‌ಗೆ 182 ರನ್‌ಗಳ ಉತ್ತಮ ಮೊತ್ತ ಗಳಿಸಿತು. ಆರಂಭದಿಂದಲೇ ವಿಕೆಟ್‌ಗಳನ್ನು ಕಳೆದುಕೊಂಡ ಜಿಂಬಾಬ್ವೆ ಯಾವ ಹಂತದಲ್ಲೂ ಗುರಿ ಸಾಧಿಸುವಂತೆ ಕಾಣಲಿಲ್ಲ. ಡಿಯಾನ್ ಮೈರ್ಸ್ (ಅಜೇಯ 65, 49 ಎ, 4x7, 6x1) ಮಾತ್ರ ಪ್ರತಿರೋಧ ಪ್ರದರ್ಶಿಸಿದರು. ತಂಡ 6 ವಿಕೆಟ್‌ಗೆ 159 ರನ್ ಗಳಿಸಿ ಓವರುಗಳನ್ನು ಪೂರೈಸಿತು.

ಆಫ್ ಸ್ಪಿನ್ನರ್ ವಾಷಿಂಗ್ಟನ್ ಸುಂದರ್ ಮೂರು ವಿಕೆಟ್ ಪಡೆದರೆ, ಆವೇಶ್ ಖಾನ್ ಎರಡು ವಿಕೆಟ್ ಗಳಿಸಿದರು.

ಐದು ಪಂದ್ಯಗಳ ಸರಣಿಯಲ್ಲಿ ಭಾರತ 2–1 ಮುನ್ನಡೆ ಪಡೆದಿದೆ. ನಾಲ್ಕನೇ ಪಂದ್ಯ ಶನಿವಾರ ನಡೆಯಲಿದೆ.

ಆವೇಶ್ ಖಾನ್ ಮಾಡಿದ ಎರಡನೇ ಓವರ್‌ನಲ್ಲಿ ಆರಂಭ ಆಟಗಾರ ವೆಸ್ಲಿ ಮಧೆವೆರೆ ವಿಕೆಟ್ ಕಳೆದುಕೊಂಡ ಆತಿಥೇಯ ತಂಡ ಬಳಿಕ ನಿಯಮಿತವಾಗಿ ವಿಕೆಟ್‌ಗಳನ್ನು ಕಳೆದು ಕೊಂಡಿತು. ಮೈರ್ಸ್ ಮತ್ತು ಕ್ಲೈವ್ ಮದಂಡೆ (36, 26ಎ) ಅವರು ಆರನೇ ವಿಕೆಟ್‌ಗೆ 57 ಎಸೆತಗಳಲ್ಲಿ 77ರನ್ ಸೇರಿಸಿದ್ದರಿಂದ ಜಿಂಬಾಬ್ವೆ ಸೋಲಿನ ಅಂತರ ಗಣನೀಯವಾಗಿ ಕಡಿಮೆಯಾಯಿತು.

ಈ ಪಂದ್ಯಕ್ಕೆ, ಗಿಲ್ ನೇತೃತ್ವದ ತಂಡದಲ್ಲಿ ವಿಶ್ವಕಪ್ ವಿಜೇತ ತಂಡದ ಜೈಸ್ವಾಲ್, ಸಂಜು ಸ್ಯಾಮ್ಸನ್ ಮತ್ತು ಶಿವಂ ದುಬೆ ಅವರು ಸೇರ್ಪಡೆಗೊಂಡರು. ಸಂಜು ಐದನೇ ಕ್ರಮಾಂಕದಲ್ಲಿ ಆಡಿ ಅಜೇಯ 12 ರನ್ ಗಳಿಸಿದರು.

ಜೈಸ್ವಾಲ್ ಆರಂಭ ಆಟಗಾರನಾಗಿ ಬಿರುಸಿನ ಆಟಕ್ಕಿಳಿದರು. ಆಫ್ ಸ್ಪಿನ್ನರ್ ಬ್ರಿಯಾನ್ ಬೆನೆಟ್ ಮಾಡಿದ ಮೊದಲ ಓವರ್‌ನಲ್ಲೇ ಎರಡು ಬೌಂಡರಿ ಜೊತೆ, ಡೀಪ್ ಮಿಡ್‌ವಿಕೆಟ್‌ಗೆ ಸಿಕ್ಸರ್ ಎತ್ತಿದರು. ಗಿಲ್ ಕೂಡ ಹಿಂದೆಬೀಳಲಿಲ್ಲ. ರಿಚರ್ಡ್ ಗರಾವಾ ಬೌಲಿಂಗ್‌ನಲ್ಲಿ ಫೈನ್‌ಲೆಗ್‌ಗೆ ಸಿಕ್ಸರ್ ಬಾರಿಸಿದರು.

ಮೊತ್ತ 67 ಆಗಿದ್ದಾಗ ಜೈಸ್ವಾಲ್ ನಿರ್ಗಮಿಸಿದರು. ಜಿಂಬಾಬ್ವೆ ನಾಯಕ ಸಿಕಂದರ್ ರಝಾ ಈ ಜೊತೆಯಾಟ ಮುರಿದರು. ಹಿಂದಿನ ಪಂದ್ಯದಲ್ಲಿ ಶತಕ ಬಾರಿಸಿದ್ದ ಅಭಿಷೇಕ್ ವರ್ಮಾ (10) ಹೆಚ್ಚು ಹೊತ್ತು ನಿಲ್ಲಲಿಲ್ಲ. ಗಿಲ್ (4x7, 6x3) ಮತ್ತು ಗಾಯಕವಾಡ ಮೂರನೇ ವಿಕೆಟ್‌ಗೆ 48 ಎಸೆತಗಳಲ್ಲಿ 72 ರನ್ ಜೊತೆಯಾಟವಾಡಿ ತಂಡದ ಮೊತ್ತ ಹೆಚ್ಚುವಂತೆ ನೋಡಿಕೊಂಡರು. ಗಾಯಕವಾಡ ಆಟದಲ್ಲಿ ಮೂರು ಸಿಕ್ಸರ್, ನಾಲ್ಕು ಬೌಂಡರಿಗಳಿದ್ದವು.

ಸ್ಕೋರುಗಳು: ಭಾರತ: 20 ಓವರುಗಳಲ್ಲಿ 4 ವಿಕೆಟ್‌ಗೆ 182 (ಯಶಸ್ವಿ ಜೈಸ್ವಾಲ್ 36, ಶುಭಮನ್ ಗಿಲ್ 66, ಋತುರಾಜ್ ಗಾಯಕವಾಡ 49, ಸಂಜು ಸ್ಯಾಮ್ಸನ್ ಔಟಾಗದೆ 12; ಬ್ಲೆಸ್ಸಿಂಗ್ ಮುಝರಬಾನಿ 25ಕ್ಕೆ2, ಸಿಕಂದರ್ ರಝಾ 24ಕ್ಕೆ2); **ಜಿಂಬಾಬ್ವೆ:** 20 ಓವರುಗಳಲ್ಲಿ 6 ವಿಕೆಟ್‌ಗೆ 159 (ಡಿಯಾನ್ ಮೈರ್ಸ್ ಔಟಾಗದೆ 65, ಕ್ಲೈವ್ ಮದಂಡೆ 37, ವೆಲಿಂಗ್ಟನ್ ಮಸಕದ್ಜ ಔಟಾಗದೆ 18; ಆವೇಶ್ ಖಾನ್ 39ಕ್ಕೆ2, ವಾಷಿಂಗ್ಟನ್ ಸುಂದರ್ 15ಕ್ಕೆ3). **ಪಂದ್ಯದ ಆಟಗಾರ:** ವಾಷಿಂಗ್ಟನ್ ಸುಂದರ್.
ಫಲಿತಾಂಶ: ಭಾರತ ತಂಡಕ್ಕೆ 23 ರನ್‌ಗಳ ಜಯ


ಭಾರತ ತಂಡದ ಶುಭಮನ್ ಗಿಲ್ ಮತ್ತು ಋತುರಾಜ್ ಗಾಯಕವಾಡ –ಎಪಿ/ ಪಿಟಿಐ ಚಿತ್ರ

ಸೆಮಿಫೈನಲ್‌ಗೆ ರಿಬಾಕಿನಾ ಲಗ್ಗೆ

ವಿಂಬಲ್ಡನ್ ಟೆನಿಸ್: ಬಾರ್ಬೊರಾ ಕ್ರೇಜಿಕೋವಾ ಮುನ್ನಡೆ

ಲಂಡನ್ (ಎಪಿ): ಪ್ರಮುಖ ಆಟಗಾರ್ತಿಯರು ಹೊರಬಿದ್ದಿರುವ ಕಾರಣ ಎಲೆನಾ ರಿಬಾಕಿನಾ ಈಗ ಮಹಿಳಾ ಸಿಂಗಲ್ಸ್ ಪ್ರಶಸ್ತಿಗೆ ಫೇವರೀಟ್ ಎನಿಸಿದ್ದಾರೆ. ಅದನ್ನು ಸಮರ್ಥಿಸುವಂತೆ ಆಡಿದ ರಿಬಾಕಿನಾ 6–3 6–2 ರಲ್ಲಿ ನೇರ ಸೆಟ್‌ಗಳಿಂದ ಉಕ್ರೇನ್‌ನ ಎಲಿನಾ ಸ್ವಿಟೋಲಿನಾ ಅವರನ್ನು ಬುಧವಾರ ಸೋಲಿಸಿ ವಿಂಬಲ್ಡನ್ ಚಾಂಪಿಯನ್ ಷಿಪ್ಸ್‌ನಲ್ಲಿ ಸೆಮಿಫೈನಲ್ ತಲುಪಿದರು.

‘ನನ್ನ ಬಳಿ ಆಕ್ರಮಣಕಾರಿ ಶೈಲಿಯ ಆಟವಿದೆ. ಭರ್ಜರಿ ಸರ್ವ್‌ಗಳಿವೆ. ಇದು ನನ್ನ ಪಾಲಿಗೆ ಅನುಕೂಲಕರ ಅಂಶ’ ಎಂದು 25 ವರ್ಷ ವಯಸ್ಸಿನ ಕಜಕಸ್ತಾನದ ಆಟಗಾರ್ತಿ ಅಂಕಣದಲ್ಲೇ ನಡೆದ ಸಂದರ್ಶನದಲ್ಲಿ ಹೇಳಿದರು.

ನಾಲ್ಕನೇ ಶ್ರೇಯಾಂಕದ ರಿಬಾಕಿನಾ, ಕಣದಲ್ಲಿ ಉಳಿದಿರುವ ಅತಿ ಹೆಚ್ಚಿನ ಶ್ರೇಯಾಂಕದ ಆಟಗಾರ್ತಿಯಾಗಿದ್ದಾರೆ. ಆಲ್ ಇಂಗ್ಲೆಂಡ್ ಕ್ಲಬ್‌ನಲ್ಲಿ ಅವರ ಗೆಲುವಿನ ದಾಖಲೆ 19–2.

ರಿಬಾಕಿನಾ ಅವರ ಮುಂದಿನ ಎದುರಾಳಿ, 31ನೇ ಶ್ರೇಯಾಂಕದ ಬಾರ್ಬೊರಾ ಕ್ರೇಜಿಕೋವಾ. ಇನ್ನೊಂದು ಕ್ವಾರ್ಟರ್ ಫೈನಲ್‌ನಲ್ಲಿ ಕ್ರೇಜಿಕೋವಾ 6–4, 7–6 (4) ರಿಂದ 13ನೇ ಶ್ರೇಯಾಂಕದ ಯೆಲೆನಾ ಒಸ್ಟಪೆಂಕೊ ಅವರ ಸವಾಲನ್ನು ಬದಿಗೊತ್ತಿದರು.

ಇಬ್ಬರೂ– ಕ್ರೇಜಿಕೋವಾ ಮತ್ತು ಒಸ್ಟಪೆಂಕೊ– ಫ್ರೆಂಚ್ ಓಪನ್ ಮಾಜಿ ಚಾಂಪಿಯನ್ನರಾಗಿದ್ದಾರೆ. ಝೆಕ್ ರಿಪಬ್ಲಿಕ್‌ನ ಕ್ರೇಜಿಕೋವಾ 2021ರಲ್ಲಿ ಮತ್ತು ಲಾತ್ವಿಯಾದ ಒಸ್ಟಪೆಂಕೊ 2017ರಲ್ಲಿ ರೋಲಂಡ್ ಗ್ಯಾರೋಸ್‌ನಲ್ಲಿ ಚಾಂಪಿಯನ್ನರಾಗಿದ್ದರು.

ಕ್ವಾರ್ಟರ್ ಫೈನಲ್‌ವರೆಗೆ ಒಂದೂ ಸೆಟ್ ಕಳೆದುಕೊಳ್ಳದ ಒಸ್ಟಪೆಂಕೊ, ಎರಡನೇ ಸೆಟ್ ವೇಳೆ ಸಹನೆ ಕಳೆದುಕೊಂಡು ಸ್ಥಳದಿಂದ ಹೊರಡುವಂತೆ ಕೋಚ್‌ಗೆ ಸೂಚಿಸಿದ್ದರು.

ಉಕ್ರೇನ್‌ನ ರಾಜಧಾನಿ ಕೀವ್‌ನ ಮಕ್ಕಳ ಆಸ್ಪತ್ರೆ ಮೇಲೆ ರಷ್ಯಾದ ಕ್ಷಿಪಣಿ ದಾಳಿಯಲ್ಲಿ ಸಂತ್ರಸ್ತರಿಗೆ ಸಂತಾಪ ಸೂಚಿಸಿ ಹಿಂದಿನ ಪಂದ್ಯ ದಲ್ಲಿ ಸ್ವಿಟೋಲಿನಾ ಕಪ್ಪು ರಿಬ್ಬನ್ ಧರಿಸಿದ್ದರು. ಬುಧವಾರ ಅದು ಕಾಣಲಿಲ್ಲ.



ಎಲಿನಾ ಸ್ವಿಟೋಲಿನಾ ಅವರನ್ನು ಸೋಲಿಸಿ ಸೆಮಿಫೈನಲ್ ತಲುಪಿದ ಎಲೆನಾ ರಿಬಾಕಿನಾ ಪಂದ್ಯ ಮುಗಿದ ನಂತರ ಪ್ರೇಕ್ಷಕರತ್ತ ಕೈಬೀಸಿದರು –ಎಪಿ/ಪಿಟಿಐ ಚಿತ್ರ

ಆಡದೇ ಸೆಮಿ ತಲುಪಿದ ಜೊಕೊವಿಚ್!



ಲಂಡನ್ (ಎಎಫ್‌ಪಿ): ನೊವಾಕ್ ಜೊಕೊವಿಚ್ 13ನೇ ಸಲ ವಿಂಬಲ್ಡನ್ ಪುರುಷರ ಸಿಂಗಲ್ಸ್ ಸೆಮಿಫೈನಲ್ ತಲುಪಿ ರೋಜರ್ ಫೆಡರರ್ ಹೆಸರಿನಲ್ಲಿರುವ ದಾಖಲೆ ಸರಿಗಟ್ಟಿದರು. ಆದರೆ ಇದಕ್ಕಾಗಿ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಚೆಂಡನ್ನು ಒಮ್ಮೆಯೂ ಹೊಡೆಯಲಿಲ್ಲ.

ಅವರ ಎದುರಾಳಿ, 9ನೇ ಶ್ರೇಯಾಂಕದ ಅಲೆಕ್ಸ್ ಡಿ ಮಿನೋರ್ ಗಾಯದಿಂದ ಹಿಂದೆ ಸರಿದಿರುವುದಾಗಿ ಬುಧವಾರ ಪ್ರಕಟಿಸಿದರು. ಹೀಗಾಗಿ ಸರ್ಬಿಯಾದ ಆಟಗಾರ ಬೆವರು ಹರಿಸುವ ಪ್ರಮೇಯ ಬರಲಿಲ್ಲ.

ಪೃಷ್ಠದ ನೋವಿನಿಂದಾಗಿ ಟೂರ್ನಿಯಿಂದ ಹಿಂದೆ ಸರಿಯುವುದಾಗಿ 25 ವರ್ಷ ವಯಸ್ಸಿನ ಡಿ ಮಿನೋರ್ ಮಧ್ಯಾಹ್ನದ ವೇಳೆಗೆ ತಿಳಿಸಿದರು.

37 ವರ್ಷ ವಯಸ್ಸಿನ ಜೊಕೊವಿಚ್ ಅವರು ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ 49ನೇ ಸಲ ಸೆಮಿಫೈನಲ್ ತಲುಪಿದಂತಾಗಿದೆ. ಅವರು ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ದಾಖಲೆಯ 25ನೇ ಸಿಂಗಲ್ಸ್ ಪ್ರಶಸ್ತಿಯ ವಿಶ್ವಾಸದಲ್ಲಿದ್ದಾರೆ.

ಮುಸೆಟ್ಟಿ ಸೆಮಿಗೆ: ಮತ್ತೊಂದು ಕ್ವಾರ್ಟರ್ ಫೈನಲ್‌ನಲ್ಲಿ ಇಟಲಿಯ ಲೊರೆಂಝೊ ಮುಸೆಟ್ಟಿ ಅವರು ಅಮೆರಿಕದ ಟೇಲರ್ ಫ್ರಿಟ್ಜ್ ಅವರನ್ನು ಮಣಿಸಿ, ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದರು.

25ನೇ ಶ್ರೇಯಾಂಕದ ಮುಸೆಟ್ಟಿ ಅವರು 3-6, 7-6(5), 6-2, 3-6, 6-1 ರಿಂದ ಐದು ಸೆಟ್‌ಗಳ ಹೋರಾಟದಲ್ಲಿ 13ನೇ ಶ್ರೇಯಾಂಕದ ಟೇಲರ್ ಅವರನ್ನು ಹಿಮ್ಮೆಟ್ಟಿಸಿದರು. 22 ವರ್ಷ ವಯಸ್ಸಿನ ಅವರು ಸೆಮಿಫೈನಲ್‌ನಲ್ಲಿ ಜೊಕೊವಿಚ್ ಅವರನ್ನು ಎದುರಿಸಲಿದ್ದಾರೆ.

ಗೋಲು ಗಳಿಸಿದ ಅತಿ ಕಿರಿಯ ಆಟಗಾರ ಯಮಾಲ್

ಸ್ಪೇನ್ ಫೈನಲ್‌ಗೆ: ಫ್ರಾನ್ಸ್‌ಗೆ ನಿರಾಸೆ

ಯುರೋ ಕಪ್ 2024 ಜರ್ಮನಿ

ಮ್ಯೂನಿಚ್ (ಎಪಿ): ಸ್ಪೇನ್ ತಂಡ ಮಂಗಳವಾರ ರಾತ್ರಿ ನಡೆದ ಸೆಮಿಫೈನಲ್ ಪಂದ್ಯದಲ್ಲಿ 2–1 ಗೋಲುಗಳಿಂದ ಫ್ರಾನ್ಸ್ ತಂಡವನ್ನು ಸೋಲಿಸಿ ಯುರೊ 2024 ಫುಟ್‌ಬಾಲ್ ಟೂರ್ನಿಯ ಫೈನಲ್ ತಲುಪಿತು. 16 ವರ್ಷದ ಲಮೀನ್ ಯಮಾಲ್ ಅವರು ಈ ಟೂರ್ನಿಯ ಇತಿಹಾಸದಲ್ಲಿ ಗೋಲು ಗಳಿಸಿದ ಅತಿ ಕಿರಿಯ ಆಟಗಾರ ಎಂಬ ಹಿರಿಮೆಗೆ ಪಾತ್ರರಾದರು.

ಫ್ರಾನ್ಸ್ ಈ ಟೂರ್ನಿಯಲ್ಲಿ ಪ್ರಶಸ್ತಿಗೆ ನೆಚ್ಚಿನ ತಂಡಗಳಲ್ಲಿ ಒಂದಾಗಿತ್ತು. ಆ ತಂಡವನ್ನು ಸೋಲಿಸುವ ಮೂಲಕ ತಮ್ಮ ತಂಡ ಇನ್ನೂ ಸುಧಾರಿತ ಆಟವಾಡಬಹುದೆಂದು ಸ್ಪೇನ್ ಕೋಚ್ ಲೂಯಿಸ್ ಡಿ ಲಾ ಫುಂಟೆ ಅವರು ಫೈನಲ್ ಎದುರಾಳಿಗೆ (ಇಂಗ್ಲೆಂಡ್ ಅಥವಾ ನೆದರ್ಲೆಂಡ್) ಎಚ್ಚರಿಕೆ ನೀಡಿದ್ದಾರೆ.

ಮೊದಲ ಪಂದ್ಯದಲ್ಲಿ ಮುಖಕ್ಕೆ ಗಾಯಗಳಾದ ಕಾರಣ ಮಾಸ್ಕ್ ಧರಿಸಿ ಆಡುತ್ತಿದ್ದ ಕೀಲಿಯನ್ ಎಂಬಾಪೆ ಈ ಪಂದ್ಯದಲ್ಲಿ ಮಾಸ್ಕ್ ಧರಿಸಿರಲಿಲ್ಲ. 9ನೇ ನಿಮಿಷ ಅವರ ಕ್ರಾಸ್‌ನಲ್ಲಿ ರಾಂಡಾಲ್ ಕೊಲೊ ಮುಯಾನಿ ಚೆಂಡನ್ನು ಗೋಲಿನೊಳಕ್ಕೆ ಹೆಡ್ ಮಾಡಿ ಫ್ರಾನ್ಸ್‌ಗೆ ಮುನ್ನಡೆ ಒದಗಿಸಿದ್ದರು. ಆದರೆ 21ನೇ ನಿಮಿಷ ಯಮಾಲ್ ಅವರ ಗೋಲಿನಿಂದ ಸ್ಕೋರ್ ಸಮನಾಯಿತು.

ನಾಲ್ಕು ನಿಮಿಷಗಳ ನಂತರ ಸ್ಪೇನ್ ಮುನ್ನಡೆ ಪಡೆಯಿತು. ದಾನಿ ಒಲ್ಮೊ ಗಳಿಸಿದ ಗೋಲು ಇದಕ್ಕೆ ಕಾರಣವಾಯಿತು. ವಿರಾಮದ ನಂತರ ಫ್ರಾನ್ಸ್ ಸ್ವಲ್ಪ ಮೇಲುಗೈ ಪಡೆದಿದ್ದರೂ ಗೋಲು ಗಳಿಸಲಾಗಲಿಲ್ಲ.

‘ಆರಂಭದಲ್ಲೇ ಗೋಲುಬಿಟ್ಟುಕೊಟ್ಟ ಕಾರಣ ನಾವು ಸ್ವಲ್ಪ ಕಷ್ಟದಲ್ಲಿದ್ದೆವು. ಚೆಂಡು ದೊರೆತ ತಕ್ಷಣ ಗೋಲು ಗಳಿಸಲು ಅವಕಾಶ ಸಿಕ್ಕಿತು. ಸಂತಸವಾಗಿದೆ’ ಎಂದು ಯಮಾಲ್ ಹೇಳಿದರು. ಅವರು ಶನಿವಾರ 17ನೇ ವರ್ಷದ ಹುಟ್ಟುಹಬ್ಬ ಆಚರಿಸಲಿದ್ದಾರೆ.

ಸ್ಪೇನ್ ನಾಲ್ಕನೇ ಬಾರಿ ಯುರೋಪಿಯನ್ ಚಾಂಪಿಯನ್‌ಷಿಪ್ ಪ್ರಶಸ್ತಿಯ ನಿರೀಕ್ಷೆಯಲ್ಲಿದೆ. ಬರ್ಲಿನ್‌ನಲ್ಲಿ ಭಾನುವಾರ ನಡೆಯುವ ಫೈನಲ್‌ನಲ್ಲಿ ಈ ತಂಡ, ಇಂಗ್ಲೆಂಡ್–ನೆದರ್ಲೆಂಡ್ಸ್ ಸೆಮಿಫೈನಲ್ ಪಂದ್ಯದ ವಿಜೇತರನ್ನು ಎದುರಿಸಲಿದೆ

ಸ್ಪೇನ್ ಈ ಬಾರಿಯ ಟೂರ್ನಿಯಲ್ಲಿ ಉತ್ತಮ ಪ್ರದರ್ಶನ ನೀಡಿದ್ದು, ಎಲ್ಲ ಪಂದ್ಯಗಳನ್ನು ಗೆದ್ದ ಏಕೈಕ ತಂಡವೆನಿಸಿದೆ. 13 ಗೋಲುಗಳನ್ನು ಗಳಿಸಿದೆ. 1984ರಲ್ಲಿ ಫ್ರಾನ್ಸ್ ಸ್ಥಾಪಿಸಿದ್ದ ಸರ್ವಾಧಿಕ ಗೋಲುಗಳ ದಾಖಲೆ ಸರಿಗಟ್ಟಲು ಇನ್ನೊಂದು ಗೋಲಿನ ಅಗತ್ಯವಿದೆ.


ಗೋಲು ಗಳಿಸಿದ ಸಂಭ್ರಮದಲ್ಲಿ ಸ್ಪೇನ್‌ನ ಹದಿಹರೆಯದ ಆಟಗಾರ ಲಮೀನ್ ಯಮಾಲ್ –ಎಎಫ್‌ಪಿ ಚಿತ್ರ

ಕೊಪಾ: ಫೈನಲ್‌ಗೆ ಆರ್ಜೆಂಟೀನಾ

ಈಸ್ಟ್ ರುದರ್‌ಫೋರ್ಡ್ (ಅಮೆರಿಕ), (ಎಪಿ): ಲಯೊನೆಲ್ ಮೆಸ್ಸಿ ಹಾಲಿ ಕೊಪಾ ಅಮೆರಿಕ ಕೂಟದಲ್ಲಿ ಮೊದಲ ಹಾಗೂ ಅಂತರರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ ತಮ್ಮ 109ನೇ ಗೋಲು ಗಳಿಸಿದರು. ಅವರ ನೇತೃತ್ವದ ಆರ್ಜೆಂಟೀನಾ ತಂಡ, ಮಂಗಳವಾರ ರಾತ್ರಿ ನಡೆದ ಪಂದ್ಯದಲ್ಲಿ 2–0 ಗೋಲುಗಳಿಂದ ಕೆನಡಾ ತಂಡವನ್ನು ಸೋಲಿಸಿ ಫೈನಲ್ ಪ್ರವೇಶ ಮಾಡಿತು.

ಈ ಗೆಲುವು ಆರ್ಜೆಂಟೀನಾದ ಸ್ವಾತಂತ್ರ್ಯ ದಿನಾಚರಣೆಯಂದೇ ದಾಖಲಾಯಿತು. ಕಳೆದ ಎಂಟು ಆವೃತ್ತಿಗಳಲ್ಲಿ ಆರ್ಜೆಂಟೀನಾ ಆರನೇ ಬಾರಿ ಫೈನಲ್ ತಲುಪಿದಂತಾಗಿದೆ. ಫೈನಲ್ ಭಾನುವಾರ ನಡೆಯಲಿದೆ.

ಜೂಲಿಯನ್ ಅಲ್ವಾರೆಝ್ 22ನೇ ನಿಮಿಷ ಆರ್ಜೆಂಟೀನಾಕ್ಕೆ ಮುನ್ನಡೆ ಒದಗಿಸಿದರು.

51ನೇ ನಿಮಿಷ ಎನ್ಜೊ ಫೆರ್ನಾಂಡೀಸ್ ಅವರ ಗೋಲಿನ ಪ್ರಯತ್ನದಲ್ಲಿ ಚೆಂಡು ಎದುರಾಳಿ ಗೋಲ್ ಕೀಪರ್ ಮುಖಕ್ಕೆ ಬಡಿದು ಹಿಂದಕ್ಕೆ ಬಂದಿತು. ಆ ಅವಕಾಶವನ್ನು ಸದುಪಯೋಗಪಡಿಸಿದ ಮೆಸ್ಸಿ ಚೆಂಡನ್ನು ಗೋಲಿನೊಳಕ್ಕೆ ನಿರ್ದೇಶಿಸಿದರು. ಆರ್ಜೆಂಟೀನಾಕ್ಕೆ ತಮ್ಮ ಕೊನೆಯ 25 ಪಂದ್ಯಗಳಲ್ಲಿ ಅವರು ಗಳಿಸಿದ 28ನೇ ಗೋಲು ಇದು.

ಅಂತರರಾಷ್ಟ್ರೀಯ ಮಟ್ಟದಲ್ಲಿ ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊ ಮಾತ್ರ 130 ಗೋಲುಗಳೊಂದಿಗೆ, ಮೆಸ್ಸಿ ಅವರಿಗಿಂತ ಮುಂದೆ ಇದ್ದಾರೆ.



ಗೋಲು ಗಳಿಸಿದ ಆರ್ಜೆಂಟೀನಾದ ತಾರೆ ಲಯೊನೆಲ್ ಮೆಸ್ಸಿ ಅವರನ್ನು ತಂಡದ ಸಹ ಆಟಗಾರರು ಅಭಿನಂದಿಸಿದರು –ಎಪಿ/ಪಿಟಿಐ ಚಿತ್ರ

ಈಜು: ಸಮರ್ಥ್ ಮತ್ತೊಂದು ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮರ್ಥ್ ಗೌಡ ಬಿ.ಎಸ್. ಇಲ್ಲಿ ನಡೆಯುತ್ತಿರುವ ಎನ್‌ಆರ್‌ಜೆ ರಾಜ್ಯ ಸಬ್ ಜೂನಿಯರ್ ಮತ್ತು ಜೂನಿಯರ್ ಈಜು ಚಾಂಪಿಯನ್‌ಷಿಪ್‌ನ ಐದನೇ ದಿನವಾದ ಬುಧವಾರ ಬಾಲಕರ (1ಎ) 50 ಮೀಟರ್ ಬ್ಯಾಕ್ ಸ್ಟ್ರೋಕ್ ಸ್ಪರ್ಧೆಯಲ್ಲಿ ಕೂಟ ದಾಖಲೆ ನಿರ್ಮಿಸಿದರು.

ಆತಿಥೇಯ ಬಸವನಗುಡಿ ಈಜು ಕೇಂದ್ರದ ಸಮರ್ಥ್ ಅವರು 28.41 ಸೆಕೆಂಡ್‌ನಲ್ಲಿ ಗುರಿ ತಲುಪಿ ಚಿನ್ನ ಗೆದ್ದರು. ಆಡ್ರಿಯನ್ ನೀಲ್ ಸೆರಾವೊ (30.51 ಸೆ) ಮತ್ತು ಅರ್ನವ್ ಜಿ. ರಾವ್ (31.89 ಸೆ) ಕ್ರಮವಾಗಿ ನಂತರದ ಸ್ಥಾನ ಪಡೆದರು. ಸಮರ್ಥ್ ಮಂಗಳವಾರ ಬಾಲಕರ (2ಎ) 100 ಮೀಟರ್ ಬ್ಯಾಕ್‌ಸ್ಟ್ರೋಕ್‌ನಲ್ಲೂ ದಾಖಲೆ ನಿರ್ಮಿಸಿದ್ದರು.

ಬಾಲಕಿಯರ ವಿಭಾಗದಲ್ಲಿ ನೆಟ್ಟಕಲ್ಲಪ್ಪ ಈಜು ಕೇಂದ್ರದ ಸ್ಪರ್ಧಿಗಳು ಮೂರು ಚಿನ್ನದ ಪದಕಗಳನ್ನು ಗೆದ್ದು ಮಿಂಚಿದರು. ವೈಷ್ಣವಿ ಜಿ. (2ಎ; 200 ಮೀ. ಬಟರ್‌ಫ್ಲೈ), ಶಾರಿಕಾ ರಾಘವೇಂದ್ರ (2ಬಿ; 50ಮೀ. ಬ್ರೆಸ್ಟ್‌ಸ್ಟ್ರೋಕ್) ಮತ್ತು ಇಂಚರಾ ಎಚ್.ಆರ್. (2ಸಿ; 50ಮೀ. ಬ್ರೆಸ್ಟ್ ಸ್ಟ್ರೋಕ್) ಅವರು ಚಿನ್ನ ಗೆದ್ದರು.


ಫಲಿತಾಂಶ: ಬಾಲಕರು: 2ಎ; 200 ಮೀ. ಮೆಡ್ಲೆ: ರಕ್ಷಣ್ ಪಿ. (ಎಸಿಇ, 2 ನಿ.28.72ಸೆ). 200 ಮೀ. ಬಟರ್‌ಫ್ಲೈ: ಧ್ರುಪದ್ ರಾಮಕೃಷ್ಣ (ಬಿಎಸಿ, 2 ನಿ. 22.76 ಸೆ). 50 ಮೀ. ಬ್ರೆಸ್ಟ್ ಸ್ಟ್ರೋಕ್: ಯಶ್ ಎಚ್. ಪಾಲ್ (ಬಿಎಸಿ, 33.69ಸೆ). 50 ಮೀ. ಬ್ಯಾಕ್ ಸ್ಟ್ರೋಕ್: ಸಮರ್ಥ್ ಗೌಡ ಬಿ.ಎಸ್. (ಬಿಎಸಿ, 28.41ಸೆ). 100 ಮೀ. ಫ್ರೀಸ್ಟೈಲ್: ಅಕ್ಷಜ್ ಠಾಕುರಿಯಾ (ಡಾಲ್ಫಿನ್ ಅಕ್ವಾಟಿಕ್ಸ್, 55.41 ಸೆ). 2ಬಿ: 200ಮೀ ಮೆಡ್ಲೆ: ಆರವ್ ಜೆ. (ಬಿಎಸಿ 2 ನಿ. 28.67ಸೆ). 200ಮೀ ಬಟರ್ ಫ್ಲೈ: ಸುಬ್ರಹ್ಮಣ್ಯ ಜೀವಾಂಶ್ ಎಂ. (ಡಾಲ್ಫಿನ್, 2 ನಿ. 19.39 ಸೆ)–1. ಸಹಿಷ್ಣು ರಾಘವೇಂದ್ರ ರಾವ್ (ಎನ್‌ಎಸಿ, 2 ನಿ.39.06 ಸೆ)– 3. 50ಮೀ ಬ್ರೆಸ್ಟ್ ಸ್ಟ್ರೋಕ್: ರೆಯಾನ್ಶ್ ಕಂಠಿ ವೈ (ಬಿಎಸಿ, 36.67ಸೆ)– 1. ಕೋವಿಧ್ ಫಣಿ ತೋಟ (ಎನ್‌ಎಸಿ, 37.98 ಸೆ)–3.

50 ಮೀ. ಬ್ಯಾಕ್ ಸ್ಟ್ರೋಕ್: ಅದ್ವೈತ ವಿ.ಎಂ. (ಬಿಎಸಿ, 30.43ಸೆ). 100 ಮೀ. ಫ್ರೀಸ್ಟೈಲ್: ಗರಪತಿ ಭಾರದ್ವಾಜ್ (ಗೋಲ್ಡನ್, 1 ನಿ.00.44 ಸೆ). 2ಸಿ: 200 ಮೀ ಮೆಡ್ಲೆ: ಅದ್ವೈತ್ ದಲ್ವಿ (ಎಸ್‌ಸಿಬಿ, 2 ನಿ.39.78 ಸೆ). 200ಮೀ. ಬಟರ್‌ಫ್ಲೈ: ವೇದಾಂತ್ ಮಿಸಾಲೆ (ಎಸ್‌ಸಿಬಿ, 2 ನಿ.31.98 ಸೆ). 50 ಮೀ. ಬ್ರೆಸ್ಟ್ ಸ್ಟ್ರೋಕ್: ಚೇತನ್ ನಾಗರಾಜ ಗಣಪ (ಎನ್‌ಎಸಿ, 37.71ಸೆ). 50ಮೀ. ಬ್ಯಾಕ್ ಸ್ಟ್ರೋಕ್: ಕ್ರಿಶ್ ಎಸ್. (ಬಿಎಸಿ, 32.96ಸೆ). 100ಮೀ ಫ್ರೀಸ್ಟೈಲ್: ರೋನಿತ್ ಅರುಣ್‌ಕುಮಾರ್ (ಬಿಎಸ್‌ಎ, 1 ನಿ.03.77ಸೆ).

ಬಾಲಕಿಯರು: 2ಎ: 200 ಮೀ. ಮೆಡ್ಲೆ: ತಿಸ್ಯಾ ಸೋನಾರ್ (ಮತ್ಸ್ಯ, 2 ನಿ.35.62ಸೆ). 200 ಮೀ. ಬಟರ್‌ಫ್ಲೈ: ವೈಷ್ಣವಿ ಜಿ. (ಎನ್‌ಎಸಿ, 2 ನಿ.58.27 ಸೆ). 50 ಮೀ. ಬ್ರೆಸ್ಟ್ ಸ್ಟ್ರೋಕ್: ಅನ್ಯಾ ಎ. ಚಕ್ರವರ್ತಿ (ಡಾಲ್ಫಿನ್, 36.64 ಸೆ). 50 ಮೀ. ಬ್ಯಾಕ್ ಸ್ಟ್ರೋಕ್: ನೈಶಾ (ಬಿಎಸಿ, 31.58 ಸೆ). 100 ಮೀ. ಫ್ರೀಸ್ಟೈಲ್: ತಿಸ್ಯಾ ಸೋನಾರ್ (ಮತ್ಸ್ಯ, 1 ನಿ.01.40 ಸೆ). 2ಬಿ: 200 ಮೀ. ಮೆಡ್ಲೆ: ತ್ರಿಶಾ ಸಿಂಧು (ಜಿಎಸ್‌ಸಿ, 2 ನಿ.38.79 ಸೆ). 200ಮೀ ಬಟರ್‌ಫ್ಲೈ: ಶೆಲಿನ್ ಸುನಿಲ್ (ಡಾಲ್ಫಿನ್, 2 ನಿ.37.67ಸೆ). 50ಮೀ. ಬ್ರೆಸ್ಟ್ ಸ್ಟ್ರೋಕ್: ಶಾರಿಕಾ ರಾಘವೇಂದ್ರ (ಎನ್‌ಎಸಿ, 38.83ಸೆ). 50 ಮೀ. ಬ್ಯಾಕ್ ಸ್ಟ್ರೋಕ್: ಆದ್ಯಾ ನಾಯರ್ (ಡಾಲ್ಫಿನ್, 33.77ಸೆ). 100 ಮೀ. ಫ್ರೀಸ್ಟೈಲ್: ತ್ರಿಶಾ ಸಿಂಧು (ಜಿಎಸ್‌ಸಿ, 1 ನಿ.04.30 ಸೆ). 2ಸಿ: 200 ಮೀ. ಮೆಡ್ಲೆ: ಧೃತಿ ಕರಿಬಸವೇಶ್ವರ (ಎಸಿಇ, 2 ನಿ.43.74 ಸೆ). 200 ಮೀ ಬಟರ್‌ಫ್ಲೈ: ರಿಶ್ಮಿಖಾ ಆರ್ (ಬಿಎಸಿ, 2 ನಿ. 51.32 ಸೆ). 50 ಮೀ. ಬ್ರೆಸ್ಟ್ ಸ್ಟ್ರೋಕ್: ಇಂಚರಾ ಎಚ್.ಆರ್ (ಎನ್‌ಎಸಿ, 39.88ಸೆ). 50 ಮೀ. ಬ್ಯಾಕ್‌ಸ್ಟ್ರೋಕ್: ಔನಾ ಪಿ. ಆಳ್ವ (ಬಿಎಸ್‌ಎ, 35.41ಸೆ). 100 ಮೀ. ಫ್ರೀಸ್ಟೈಲ್: ದಿಶಾ ಹೊಂಡಿ (ಎಬಿಬಿಎಎ, 1 ನಿ.06.68ಸೆ).


ಡಾಲ್ಫಿನ್ ಅಕ್ವಾಟಿಕ್ಸ್‌ನ ಅಕ್ಷಜ್ ಠಾಕುರಿಯಾ

₹2.5 ಕೋಟಿ ಹೆಚ್ಚುವರಿ ಮೊತ್ತ ಪಡೆಯಲು ನಿರಾಕರಿಸಿದ ದ್ರಾವಿಡ್



ನವದೆಹಲಿ (ಪಿಟಿಐ): ವೆಸ್ಟ್ ಇಂಡೀಸ್‌ನಲ್ಲಿ ಟಿ20 ವಿಶ್ವಕಪ್ ಗೆದ್ದ ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಆಗಿದ್ದ ರಾಹುಲ್ ದ್ರಾವಿಡ್ ಅವರು ಬಿಸಿಸಿಐ ತಮಗೆ ಕೊಡಮಾಡಿದ ಬಹುಮಾನದ ಹಣದಲ್ಲಿ ₹2.5 ಕೋಟಿ ಹೆಚ್ಚುವರಿ ಬೋನಸ್ ಮೊತ್ತವನ್ನು ಪಡೆಯಲು ನಿರಾಕರಿಸಿದ್ದಾರೆ. ಬೆಂಗಳೂರಿನ ಕ್ರಿಕೆಟ್ ದಿಗ್ಗಜನ ಈ ನಡೆಗೆ ಮೆಚ್ಚುಗೆ ವ್ಯಕ್ತವಾಗಿದೆ.

ತಂಡದ ಗೆಲುವಿಗೆ ಮಾರ್ಗ ದರ್ಶನ ಮಾಡಿದ ದ್ರಾವಿಡ್ ಅವರಿಗೆ ಬಿಸಿಸಿಐ ₹2.5 ಕೋಟಿ ಜೊತೆಗೆ ಬೋನಸ್ ಆಗಿ ಹೆಚ್ಚುವರಿ ₹2.5 ಕೋಟಿ ನೀಡಲು ಮುಂದಾಗಿತ್ತು. ಆದರೆ ಇತರ ನೆರವು ಸಿಬ್ಬಂದಿಗೆ ನೀಡುವಷ್ಟೇ ಸಮಾನ ಮೊತ್ತವನ್ನು (₹2.5 ಕೋಟಿ) ತಮಗೂ ನೀಡಿದರೆ ಸಂತಸವಾಗುತ್ತದೆ ಎಂದು ದ್ರಾವಿಡ್ ಹೇಳಿ ವಿನಮ್ರತೆ ಮೆರೆದಿದ್ದಾರೆ.

ಆಟಗಾರರಿಗೆ ತಲಾ ಐದು ಕೋಟಿ ಮತ್ತು ತಂಡದ ನೆರವು ಸಿಬ್ಬಂದಿಗೆ ₹2.5 ಕೋಟಿ ನೀಡಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಬಯಸಿತ್ತು. ತಂಡದಲ್ಲಿದ್ದ ಆಟಗಾರರಿಗೆ ಸಮನಾಗಿ ಹೆಡ್ ಕೋಚ್ ದ್ರಾವಿಡ್ ಅವರಿಗೂ ₹5 ಕೋಟಿ ನೀಡುವುದಾಗಿ ಪ್ರಕಟಿಸಿತ್ತು.

ದ್ರಾವಿಡ್ ಕೋಚಿಂಗ್ ಒಪ್ಪಂದದ ಅವಧಿ ಕಳೆದ ವರ್ಷದ ನವೆಂಬರ್‌ನಲ್ಲಿ ಏಕದಿನ ವಿಶ್ವಕಪ್ ಟೂರ್ನಿಯೊಡನೆ ಕೊನೆಗೊಂಡಿತ್ತು. ಆದರೆ ರೋಹಿತ್ ಶರ್ಮಾ ಮನವೊಲಿಕೆ ಮತ್ತು ಬಿಸಿಸಿಐ ಮನವಿ ಮೇರೆಗೆ ಅವಧಿ ವಿಸ್ತರಣೆಗೆ ಒಪ್ಪಿದ್ದರು. ಹೀಗಾಗಿ ಟಿ20 ವಿಶ್ವಕಪ್‌ವರೆಗೆ ಅವರ ಒಪ್ಪಂದ ಮುಂದುವರಿದಿತ್ತು.

ಮಂಗಳವಾರವಷ್ಟೇ ಗೌತಮ್ ಗಂಭೀರ್ ಅವರನ್ನು ಭಾರತ ತಂಡದ ಮುಖ್ಯ ಕೋಚ್ ಆಗಿ ಬಿಸಿಸಿಐ ನೇಮಕ ಮಾಡಿತ್ತು

ರಾಹುಲ್ ದ್ರಾವಿಡ್ ಬಗ್ಗೆ ಭಾವುಕ ಸಂದೇಶ ಹಂಚಿಕೊಂಡ ರೋಹಿತ್

ನವದೆಹಲಿ (ಪಿಟಿಐ): ಟಿ20 ವಿಶ್ವಕಪ್ ಗೆದ್ದ ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಅವರು, ಮುಖ್ಯ ಕೋಚ್ ಸ್ಥಾನದಿಂದ ಈಚೆಗೆ ನಿರ್ಗಮಿಸಿದ ರಾಹುಲ್ ದ್ರಾವಿಡ್ ಅವರಿಗೆ ಭಾವನಾತ್ಮಕ ಬೀಳ್ಕೊಡುಗೆ ಸಂದೇಶ ಪೋಸ್ಟ್ ಮಾಡಿದ್ದಾರೆ.

ದ್ರಾವಿಡ್ ಅವರ ಅಧಿಕಾರಾವಧಿ ವೆಸ್ಟ್‌ಇಂಡೀಸ್‌ನಲ್ಲಿ ನಡೆದ ಟಿ20 ವಿಶ್ವಕಪ್ ಟೂರ್ನಿಯ ಫೈನಲ್ ಪಂದ್ಯಕ್ಕೆ ಕೊನೆಗೊಂಡಿತ್ತು. ಅದರ ಬೆನ್ನಲ್ಲೇ ರೋಹಿತ್ ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ರಾಹುಲ್ ದ್ರಾವಿಡ್ ಜೊತೆಗಿನ ಫೋಟೊಗಳನ್ನು ಹಂಚಿಕೊಂಡು, ಸಂದೇಶವನ್ನು ಬರೆದಿದ್ದಾರೆ.

‘ಆತ್ಮೀಯ ರಾಹುಲ್ ಭಾಯ್, ನಿಮ್ಮ ಬಗ್ಗೆ ಭಾವನೆಗಳನ್ನು ವ್ಯಕ್ತಡಿಸಲು ಸರಿಯಾದ ಪದಗಳನ್ನು ಹುಡುಕಲು ಪ್ರಯತ್ನಿಸುತ್ತಿದ್ದೇನೆ. ಆದರೆ ನಾನು ಇದನ್ನು ಮಾಡಲು ಸಾಧ್ಯವಾಗುತ್ತದೆ ಎಂದು ನನಗೆ ಖಚಿತವಿಲ್ಲ. ಇನ್ನೂ ಪ್ರಯತ್ನಿಸುತ್ತಿದ್ದೇನೆ’ ಎಂದು ಹೇಳಿದ್ದಾರೆ.

‘ನೀವು ಕ್ರಿಕೆಟ್‌ನ ಮೇರು ವ್ಯಕ್ತಿತ್ವ. ನಿಮ್ಮ ಎಲ್ಲ ಸಾಧನೆಗಳನ್ನು ಬದಿಗಿಟ್ಟು ಕೋಚ್ ಆಗಿ ನಮ್ಮ ಹಂತಕ್ಕೆ ಇಳಿದು ನಮಗೆ ಮಾರ್ಗದರ್ಶನ ನೀಡಿದ್ದೀರಿ ಎಂದಷ್ಟೇ ಹೇಳಬಲ್ಲೆ. ಅದು ಈ ಆಟಕ್ಕೆ ನೀವು ನೀಡುವ ಕೊಡುಗೆ, ಗೌರವ ಮತ್ತು ಪ್ರೀತಿಯಾಗಿದೆ’ ಎಂದು ಕೊಂಡಾಡಿದ್ದಾರೆ.

‘ನನ್ನ ಪತ್ನಿ (ರಿತಿಕಾ) ನಿಮ್ಮನ್ನು ನನ್ನ ಕೆಲಸದ ಸಂಗಾತಿ ಎಂದು ಕಾಲೆಳೆಯುತ್ತಾರೆ. ನಿಮ್ಮನ್ನು ನನ್ನ ಜೊತೆ ಆ ರೀತಿ ಕರೆಯುವುದು ನನ್ನ ಅದೃಷ್ಟವಾಗಿದೆ’ ಎಂದು ಹೇಳಿದ್ದಾರೆ.

ತಮ್ಮ ಆಯ್ಕೆಯ ನೆರವು ಸಿಬ್ಬಂದಿ ಪಡೆಯುವತ್ತ ಗಂಭೀರ್ ಗಮನ



ನವದೆಹಲಿ (ಪಿಟಿಐ): ಭಾರತ ತಂಡದ ಮುಖ್ಯ ಕೋಚ್ ಆಗಿ ನೇಮಕಗೊಂಡಿರುವ ಗೌತಮ್ ಗಂಭೀರ್, ಮುಂದಿನ ಮೂರು ವರ್ಷಗಳ ಅಧಿಕಾರಾವಧಿಯ ಸವಾಲುಗಳಿಗೆ ಸಜ್ಜಾಗಲು ತಮ್ಮ ಆಯ್ಕೆಯ ನೆರವು ಸಿಬ್ಬಂದಿಯನ್ನು ಪಡೆಯುವತ್ತ ಗಮನ ಹರಿಸುತ್ತಿದ್ದಾರೆ.

ಗಂಭೀರ್ ಅವರು ಮುಖ್ಯ ಕೋಚ್ ಆಗಿ ಮಂಗಳವಾರ ನೇಮಕಗೊಂಡಿದ್ದಾರೆ. ಆದರೆ, ಗಂಭೀರ್ ಅವರ ವೇತನ ಶ್ರೇಣಿ ಒಪ್ಪಂದ ಇನ್ನೂ ಅಂತಿಮವಾಗಿಲ್ಲ. ಆದರೂ ಹಿಂದಿನ ಕೋಚ್‌ಗಳಾದ ರಾಹುಲ್ ದ್ರಾವಿಡ್ ಮತ್ತು ರವಿಶಾಸ್ತ್ರಿ ಅವರ ವೇತನ ಶ್ರೇಣಿಯನ್ನೇ ಪಡೆಯುವ ನಿರೀಕ್ಷೆಯಿದೆ ಎಂದು ತಿಳಿದುಬಂದಿದೆ.

ಗಂಭೀರ್ ಅವರಿಗೆ ತಮ್ಮದೇ ನೆರವು ಸಿಬ್ಬಂದಿಯ ತಂಡವನ್ನು ಕಟ್ಟಲು ಅವಕಾಶ ನೀಡುವ ಸಾಧ್ಯತೆ ಹೆಚ್ಚಿದೆ.

ಈ ಕುರಿತು ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ ಕೋಚ್ ವಿ.ವಿ.ಎಸ್. ಲಕ್ಷ್ಮಣ್ ಜೊತೆ ನಿಕಟವಾಗಿ ಸಮನ್ವಯ ಸಾಧಿಸಲಿದ್ದಾರೆ. ಲಕ್ಷ್ಮಣ್, ಪ್ರಸ್ತುತ ಭಾರತ ಯುವ ತಂಡದೊಂದಿಗೆ ಜಿಂಬಾಬ್ವೆ ಪ್ರವಾಸದಲ್ಲಿದ್ದಾರೆ. ಅವರು ವಾಪಸಾದ ಬಳಿಕ ಗಂಭೀರ್, ಆಯ್ಕೆ ಸಮಿತಿ ಅಧ್ಯಕ್ಷ ಅಜಿತ್ ಅಗರ್ಕರ್, ತಂಡದ ಇಬ್ಬರು ನಾಯಕರಾದ ರೋಹಿತ್ ಶರ್ಮಾ ಮತ್ತು ಹಾರ್ದಿಕ್ ಪಾಂಡ್ಯ ಅವರೊಂದಿಗೆ ಚರ್ಚೆ ನಡೆಸುತ್ತಾರೆ ಎಂದು ನಿರೀಕ್ಷಿಸಲಾಗಿದೆ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಈ ಮಧ್ಯೆ ಬೌಲಿಂಗ್ ಕೋಚ್ ಹುದ್ದೆಗೆ ಮಾಜಿ ಕ್ರಿಕೆಟಿಗರಾದ ಲಕ್ಷ್ಮಿಪತಿ ಬಾಲಾಜಿ ಮತ್ತು ಜಹೀರ್ ಖಾನ್ ಅವರ ಹೆಸರು ಮುಂಚೂಣಿಗೆ ಬಂದಿವೆ. ಕರ್ನಾಟಕದ ಆರ್. ವಿನಯಕುಮಾರ್ ಹೆಸರು ಚಾಲ್ತಿಯಲ್ಲಿದ್ದು, ಇದು ಗಂಭೀರ್ ಅವರ ಆಯ್ಕೆ ಎನ್ನಲಾಗಿದೆ.

ಬಿಟಿಸಿ: ರೇಸ್ ಚಟುವಟಿಕೆ ಪುನರಾರಂಭ

ಬೆಂಗಳೂರು: ಬೆಂಗಳೂರು ಟರ್ಫ್ ಕ್ಲಬ್‌ನ ಹಿಂದಿನ ವ್ಯವಸ್ಥಾಪಕ ಸಮಿತಿಯ ಸದಸ್ಯರ ರಾಜೀನಾಮೆಯ ನಂತರ ರಾಜ್ಯ ಸರ್ಕಾರವು ಪರವಾನಗಿ ನವೀಕರಿಸುವ ಸಾಧ್ಯತೆ ಹೆಚ್ಚಿದೆ. ಹೀಗಾಗಿ, ಮೂರು ತಿಂಗಳ ನಂತರ ಬಿಟಿಸಿಯಲ್ಲಿ ಈ ವಾರಾಂತ್ಯಕ್ಕೆ ರೇಸ್ ಚಟುವಟಿಕೆಗಳು ಪುನರಾರಂಭವಾಗಲಿವೆ ಎಂದು ಮೂಲಗಳು ಖಚಿತಪಡಿಸಿವೆ.

ಹಿಂದಿನ ಅಧ್ಯಕ್ಷ ಅರವಿಂದ್ ರಾಘವನ್ ಮತ್ತು ಸಮಿತಿಯ ಇತರ ಸದಸ್ಯರು ರಾಜೀನಾಮೆ ನೀಡಿದ ನಂತರ ಉದಯ್ ಕೆ. ಈಶ್ವರನ್ ಸೋಮವಾರ ಕ್ಲಬ್‌ನ ಹಂಗಾಮಿ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.

ಕೆಲವು ತಿಂಗಳಿಂದ ರಾಜ್ಯ ಸರ್ಕಾರದ ವಿರುದ್ಧ ವಾಗ್ವಾದಕ್ಕೆ ಇಳಿದಿದ್ದ ರಾಘವನ್ ಮತ್ತವರ ತಂಡ ಅಧಿಕಾರದಿಂದ ಕೆಳಗಿಳಿದಿರುವುದರಿಂದ ಪರವಾನಗಿ ಪಡೆಯುವ ಹಾದಿ ಸುಗಮಗೊಂಡಿದೆ.

‘ರೇಸ್ ಅನ್ನು ಪ್ರಾರಂಭಿಸಲು ಅಗತ್ಯವಿರುವ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಂಡಿದ್ದೇವೆ. ಸರ್ಕಾರದಿಂದ ಪರವಾನಗಿಯ ಭರವಸೆಯೂ ದೊರೆತಿದೆ’ ಎಂದು ಈಶ್ವರನ್ ತಿಳಿಸಿದ್ದಾರೆ.

‘ನಾವು ಶನಿವಾರದಿಂದಲೇ ರೇಸ್‌ಗಳನ್ನು ನಡೆಸಲು ಯೋಜಿಸಿದ್ದೇವೆ. ಈ ಬೇಸಿಗೆಯಲ್ಲಿ ನಾವು ಸಾಕಷ್ಟು ಸಮಯವನ್ನು ಕಳೆದುಕೊಂಡಿದ್ದೇವೆ. ಇನ್ನೂ ಹೆಚ್ಚಿನ ಸಮಯವನ್ನು ವ್ಯರ್ಥ ಮಾಡಲು ಬಯಸುವುದಿಲ್ಲ’ ಎಂದು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ರ‍್ಯಾಂಕಿಂಗ್: 2ನೇ ಸ್ಥಾನಕ್ಕೆ ಸೂರ್ಯ



ದುಬೈ (ಪಿಟಿಐ): ಭಾರತದ ಸ್ಟಾರ್ ಬ್ಯಾಟರ್ ಸೂರ್ಯಕುಮಾರ್ ಯಾದವ್ ಐಸಿಸಿ ಟಿ20 ರ‍್ಯಾಂಕಿಂಗ್ ನಲ್ಲಿ ಬ್ಯಾಟರ್‌ಗಳ ವಿಭಾಗದಲ್ಲಿ ಎರಡನೇ ಸ್ಥಾನ ಉಳಿಸಿಕೊಂಡಿದ್ದಾರೆ. ಭಾರತದ ಇನ್ನೊಬ್ಬ ಆಟಗಾರ ಋತುರಾಜ್ ಗಾಯಕವಾಡ ಅವರು ಮೊದಲ ಬಾರಿ ಅಗ್ರ 10ರೊಳಗೆ ಸ್ಥಾನ ಪಡೆದಿದ್ದಾರೆ.

ಆಸ್ಟ್ರೇಲಿಯಾದ ಟ್ರಾವಿಸ್ ಹೆಡ್ ಅಗ್ರಸ್ಥಾನದಲ್ಲಿದ್ದಾರೆ. ಹೆಡ್ 844 ಪಾಯಿಂಟ್ಸ್ ಸಂಗ್ರಹಿಸಿದ್ದರೆ, ಸೂರ್ಯಕುಮಾರ್ 821 ಪಾಯಿಂಟ್ಸ್ ಹೊಂದಿದ್ದಾರೆ. ಇಂಗ್ಲೆಂಡ್‌ನ ಫಿಲ್ ಸಾಲ್ಟ್ (797), ಪಾಕಿಸ್ತಾನ ತಂಡದ ನಾಯಕ ಬಾಬರ್ ಆಜಂ (755), ಮೊಹಮ್ಮದ್ ರಿಜ್ವಾನ್ (746) ಕ್ರಮವಾಗಿ ಮೂರರಿಂದ ಐದವರೆಗಿನ ಸ್ಥಾನದಲ್ಲಿದ್ದಾರೆ. ಇಂಗ್ಲೆಂಡ್‌ನ ಜೋಸ್ ಬಟ್ಲರ್ (716) ಆರನೇ ಸ್ಥಾನ ಗಳಿಸಿದ್ದಾರೆ.

ಜಿಂಬಾಬ್ವೆ ವಿರುದ್ಧ ಹಾಲಿ ಟಿ20 ಸರಣಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ಋತುರಾಜ್ ಗಾಯಕವಾಡ ಅವರು 13 ಸ್ಥಾನಗಳಷ್ಟು ಬಡ್ತಿ ಪಡೆದು ಏಳನೇ ಸ್ಥಾನದಲ್ಲಿದ್ದಾರೆ.

ಅಕ್ಷರ್‌ಗೆ ಹಿಂಬಡ್ತಿ: ಎಡಗೈ ಸ್ಪಿನ್ನರ್ ಅಕ್ಷರ್ ಪಟೇಲ್ ಬೌಲರ್‌ಗಳ ವಿಭಾಗ ದಲ್ಲಿ ಹಿಂಬಡ್ತಿ ಪಡೆದರೂ ‘ಟಾಪ್ ಟೆನ್’ನಲ್ಲಿ ಉಳಿದುಕೊಂಡಿರುವ ಭಾರತದ ಏಕೈಕ ಬೌಲರ್ ಎನಿಸಿದ್ದಾರೆ. ಅವರು ಎರಡು ಸ್ಥಾನ ಕೆಳಗಿಳಿದು ಒಂಬತ್ತನೇ ಸ್ಥಾನದಲ್ಲಿದ್ದಾರೆ.

ಕೇಂದ್ರಿಯ ಗುತ್ತಿಗೆ ವ್ಯಾಪ್ತಿಗೆ ರಚಿನ್



ಆಕ್ಲೆಂಡ್ (ಪಿಟಿಐ): ನ್ಯೂಜಿಲೆಂಡ್‌ನ ಆಲ್‌ರೌಂಡರ್, ಭಾರತ ಮೂಲದ ರಚಿನ್ ರವೀಂದ್ರ ಮೊದಲ ಬಾರಿ ನ್ಯೂಜಿಲೆಂಡ್ ಕ್ರಿಕೆಟ್‌ನ (ಎನ್‌ಝೆಡ್‌ಸಿ) ಕೇಂದ್ರೀಯ ಗುತ್ತಿಗೆ ಪಡೆದಿದ್ದಾರೆ.

ಮೂಲತಃ ಬೆಂಗಳೂರಿನವರಾದ 24 ವರ್ಷ ವಯಸ್ಸಿನ ರವೀಂದ್ರ ಕಳೆದ ವರ್ಷ ಭಾರತದಲ್ಲಿ ನಡೆದಿದ್ದ ಏಕದಿನ ವಿಶ್ವಕಪ್‌ನಲ್ಲಿ 578 ರನ್ ಗಳಿಸಿ ಗಮನ ಸೆಳೆದಿದ್ದರು. ಅತಿ ಹೆಚ್ಚು ರನ್ ಗಳಿಸಿದ್ದ ಆಟಗಾರರಲ್ಲಿ ನಾಲ್ಕನೇ ಸ್ಥಾನ ಪಡೆದಿದ್ದರು. ಐಪಿಎಲ್ ಹರಾಜಿನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ₹1.8 ಕೋಟಿ ಮೊತ್ತಕ್ಕೆ ಅವರನ್ನು ತನ್ನ ಪಾಲು ಮಾಡಿಕೊಂಡಿತ್ತು. ಐಸಿಸಿ 2023ರ ಉದಯೋನ್ಮುಖ ಆಟಗಾರ ಗೌರವಕ್ಕೂ ಅವರು ಪಾತ್ರರಾಗಿದ್ದರು. ಸರ್ ರಿಚರ್ಡ್ ಹ್ಯಾಡ್ಲಿ ಪದಕ ಪಡೆದ ಅತಿ ಕಿರಿಯ ಆಟಗಾರನೆಂಬ ಶ್ರೇಯವೂ ಅವರದಾಗಿತ್ತು.

ಟೆನಿಸ್: ನಗಾಲ್‌ಗೆ ನಿರಾಸೆ

ನವದೆಹಲಿ (ಪಿಟಿಐ): ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಸುಮಿತ್ ನಗಾಲ್ ಅವರು ಬ್ರಾನ್ಸ್‌ವೇಗ್ ಚಾಲೆಂಜರ್ ಟೆನಿಸ್ ಟೂರ್ನಿಯಲ್ಲಿ ನಿರಾಸೆ ಅನುಭವಿಸಿದರು.

ಬುಧವಾರ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಎರಡನೇ ಶ್ರೇಯಾಂಕದ ನಗಾಲ್ 4–6, 5–7ರಿಂದ ಆರ್ಜೆಂಟೀನಾದ ಪೆಡ್ರೊ ಕ್ಯಾಚಿನ್ ವಿರುದ್ಧ ಪರಾಭವಗೊಂಡರು.